ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ ೧೪೭ || ಬೆಂಗಳೂರು, ಗುರುವಾರ, ಮೇ ೨೪, ೨೦೧೨ (ಜ್ಯೇಷ್ಠ ೩, ಶಕ ವರ್ಷ ೧೯೩೪) || ಸಂಚಿಕೆ ೨೧

ವಿಷಯಸೂಚಿ

ವಿಶೇಷ ರಾಜ್ಯಪತ್ರಗಳು

ದಿನಾಂಕ 24-05-2012

ವಿಶೇಷ ರಾಜ್ಯಪತ್ರ ಸಂಖ್ಯೆ	ಪ್ರಕಟಣೆ ದಿನಾಂಕ	ಅಧಿಸೂಚನೆ ಸಂಖ್ಯೆ ಮತ್ತು ದಿನಾಂಕ
322	02-05-2012	ಸಂಖ್ಯೆ: ಸಿಐ 79 ಎಸ್‌ಪಿಕ್ಯೂ 2007, ಬೆಂಗಳೂರು, ದಿನಾಂಕ: 30.04.2012
323	03-05-2012	ಸಂಖ್ಯೆ: ಪಿಎಸ್‌ಸಿ 28 ಆರ್‌ಟಿಬಿ 2011, ಬೆಂಗಳೂರು, ದಿನಾಂಕ: 26.04.2012
324	03-05-2012	ಸಂಖ್ಯೆ: ಸಿಐ 159 ಎಸ್‌ಪಿಕ್ಯೂ 2012, ಬೆಂಗಳೂರು, ದಿನಾಂಕ: 2.5.2012
325	03-05-2012	ಸಂಖ್ಯೆ: ಸಿಐ 188 ಎಸ್‌ಪಿಕ್ಯೂ 2012, ಬೆಂಗಳೂರು, ದಿನಾಂಕ: 2.5.2012
326	03-05-2012	ಸಂಖ್ಯೆ: ಸಂವ್ಯಶಾಇ 31 ಶಾಸನ 2012, ಬೆಂಗಳೂರು, ದಿನಾಂಕ: 3.5.2012
327	03-05-2012	ಸಂಖ್ಯೆ: ಗ್ರಾಅಪ 38 ಪಬಿವ 2012, ಬೆಂಗಳೂರು, ದಿನಾಂಕ: 3.5.2012
328	04-05-2012	ಸಂಖ್ಯೆ: ಸಿಐ 554 ಎಸ್‌ಪಿಕ್ಯೂ 2011, ಬೆಂಗಳೂರು, ದಿನಾಂಕ: 3.5.2012
329	04-05-2012	ಸಂಖ್ಯೆ: ಸಿಐ 204 ಎಸ್‌ಪಿಕ್ಯೂ 2012, ಬೆಂಗಳೂರು, ದಿನಾಂಕ: 3.5.2012
330	04-05-2012	ಸಂಖ್ಯೆ: ಇ1(3) ಆದರ್ಶ/ಪ್ರೌಶಾಶಿನೇ 01/2012-13, ಬೆಂಗಳೂರು, ದಿನಾಂಕ: 3ನೇ ಮೇ, 2012
331	07-05-2012	ಸಂಖ್ಯೆ:ಪಂಅಪ್ರಾ ನಯೋಸ ಎಂ.ಐ.ಎಸ್.-1752/10-11/MIS-434/743/2012-13, ಬೆಂಗಳೂರು, ದಿನಾಂಕ:07.05.2012
332	07-05-2012	ಸಂಖ್ಯೆ: ಸಿಐ 192 ಎಸ್‌ಪಿಕ್ಯೂ 2012, ಬೆಂಗಳೂರು, ದಿನಾಂಕ: 4.5.2012
333	07-05-2012	ಸಂಖ್ಯೆ: ಸಿಐ 222 ಎಸ್‌ಪಿಕ್ಯೂ 2012, ಬೆಂಗಳೂರು, ದಿನಾಂಕ: 5.5.2012
334	07-05-2012	ಸಂಖ್ಯೆ: ಸಿಐ 432 ಎಸ್‌ಪಿಕ್ಯೂ 2011, ಬೆಂಗಳೂರು, ದಿನಾಂಕ: 7.5.2012
335	07-05-2012	ಸಂಖ್ಯೆ: ಸಿಆಸುಇ 13 ಇಕಾಅ 2012, ಬೆಂಗಳೂರು, ದಿನಾಂಕ: 05-05-2012
336	09-05-2012	ಸಂಖ್ಯೆ: ಸಿಐ 191 ಎಸ್‌ಪಿಕ್ಯೂ 2012, ಬೆಂಗಳೂರು, ದಿನಾಂಕ: 8.5.2012
337	09-05-2012	ಸಂಖ್ಯೆ: ಸಿಐ 191 ಎಸ್‌ಪಿಕ್ಯೂ 2012, ಬೆಂಗಳೂರು, ದಿನಾಂಕ: 8.5.2012
338	09-05-2012	No. ED 27 MAHITI 2012, Bangalore, dated: 8th May, 2012
339	09-05-2012	No. ED 27 MAHITI 2012, Bangalore, Dated: 8th May, 2012
340	09-05-2012	No. HD 122 PPE 2012, Bangalore, Dated: 09.05.2012
341	10-05-2012	ಸಂಖ್ಯೆ: ಸಿಐ 223 ಎಸ್‌ಪಿಕ್ಯೂ 2012, ಬೆಂಗಳೂರು, ದಿನಾಂಕ: 8.5.2012
342	10-05-2012	ಸಂಖ್ಯೆ: ಸಿಐ 531 ಎಸ್‌ಪಿಕ್ಯೂ 2009, ಬೆಂಗಳೂರು, ದಿನಾಂಕ: 8.5.2012
343	10-05-2012	ಸಂಖ್ಯೆ: ಸಿಐ 482 ಎಸ್‌ಪಿಕ್ಯೂ 2011, ಬೆಂಗಳೂರು, ದಿನಾಂಕ: 8.5.2012

344	10-05-2012	ಸಂಖ್ಯೆ: ಸಿಐ 345 ಎಸ್‌ಪಿಕ್ಯೂ 2010, ಬೆಂಗಳೂರು, ದಿನಾಂಕ: 8.5.2012
345	14-05-2012	**No. DPAL 06 SAMVYAVI 2012, Bangalore, Dated : 14.5.2012**
346	14-05-2012	ಸಂಖ್ಯೆ: ಕವಿಪ:ಶಾರಶಾ:1261:ಸರಾ:2012, ಬೆಂಗಳೂರು, ದಿನಾಂಕ: 14ನೇ ಮೇ, 2012
347	14-05-2012	ಸಂಖ್ಯೆ: ಇ1(ಎ)/ಆಡಳಿತ/ಪ್ರೌಶಾಶಿ/ಆಯ್ಕೆ/01/2012-13, ಬೆಂಗಳೂರು, ದಿನಾಂಕ: 11ನೇ ಮೇ 2012
348	16-05-2012	**No. DPAR 07 CHUVIPA 2012, BANGALORE, DATED: 16-05-2012**
349	16-05-2012	ಸಂಖ್ಯೆ: ಡಿಪಿಎನ್/ಸಸಅ/ಆರ್.ಸಿ/01/2011-2012, ಬೆಂಗಳೂರು, ದಿನಾಂಕ: 16/05/2012
350	16-05-2012	ಸಂಖ್ಯೆ. ಲೋಇ 53 ಇಎಪಿ 2012, ಬೆಂಗಳೂರು, ದಿನಾಂಕ: 16-05-2012
351	16-05-2012	ಸಂಖ್ಯೆ. ಲೋಇ 54 ಇಎಪಿ 2012, ಬೆಂಗಳೂರು, ದಿನಾಂಕ: 16-05-2012
352	18-05-2012	**No. CI 18 MMN 2012, Bangalore, Dated: 17-05-2012**

ಕರ್ನಾಟಕ ರಾಜ್ಯಪತ್ರವನ್ನು ಅಂತರಜಾಲದಲ್ಲಿ ವೀಕ್ಷಿಸಬಹುದು.

http//www.gazette.kar.nic.in

೨೦೧೨-೨೦೧೩ನೇ ಇಸವಿಯ ಕರ್ನಾಟಕ ರಾಜ್ಯಪತ್ರದ ಪರಿಷ್ಕೃತ ಚಂದಾ ದರ

ಕ್ರಮ ಸಂಖ್ಯೆ	ರಾಜ್ಯಪತ್ರದ ಭಾಗಗಳು		ಪ್ರತಿ ಒಂದಕ್ಕೆ ರೂ. ಪೈ.	ವಾರ್ಷಿಕ ಚಂದಾ ದರ ರೂ. ಪೈ.
1.	ಭಾಗ – 1	....	32-00	1321-00
2.	ಭಾಗ – 2	....	6-00	266-00
3.	ಭಾಗ – 3	....	38-00	1556-00
4.	ಭಾಗ – 4	....	3-00	147-00
5.	ಭಾಗ – 4ಎ	....	19-00	794-00
6.	ಭಾಗ – 5	....	18-00	748-00
7.	ಭಾಗ – 6	(ಬೆಂಗಳೂರು)	11-00	454-00
8.	ಭಾಗ – 6ಎ	(ಮೈಸೂರು)	41-00	1596-00
9.	ಭಾಗ – 6ಬಿ	(ಧಾರವಾಡ)	86-00	3375-00
10.	ಭಾಗ – 6ಸಿ	(ಗುಲ್ಬರ್ಗ)...	58-00	2317-00
11.	ಸಂಪೂರ್ಣ ಕರ್ನಾಟಕ ರಾಜ್ಯಪತ್ರ ಕ್ರ.ಸಂ. 1 ರಿಂದ 7 (ಭಾಗ–1 ರಿಂದ 6) ವಿಶೇಷ ರಾಜ್ಯಪತ್ರವನ್ನು ಹೊರತುಪಡಿಸಿ	....	127-00	5286-00
12.	ವಿಶೇಷ ರಾಜ್ಯಪತ್ರಗಳನ್ನು ಸಂಬಂಧಪಟ್ಟ ಇಲಾಖೆಗಳಿಂದ ಪಡೆಯಿರಿ ಮತ್ತು ಸರ್ಕಾರಿ ಪುಸ್ತಕ ಮಳಿಗೆಗಳಲ್ಲಿ ಮಾರಾಟಕ್ಕೆ ಲಭ್ಯವಿರುತ್ತವೆ,			

೨೦೧೨-೨೦೧೩ನೇ ಇಸವಿಯ ಕರ್ನಾಟಕ ರಾಜ್ಯಪತ್ರದ ಪ್ರಕಟಣೆ ದರ

ಕ್ರಮ ಸಂಖ್ಯೆ	ಪ್ರಕಟಣೆ ದರಗಳು		ಮೊತ್ತ ರೂ. ಪೈ.
1.	ಸ್ಥಳೀಯ / ಸ್ಥಾನಿಕ ಸಂಸ್ಥೆ ಮತ್ತು ಸರ್ಕಾರದ ಇಲಾಖೆ ಎ–4 ಅಳತೆಯ ಪ್ರತಿ ಪುಟಕ್ಕೆ	...	653-00
	ಪ್ರತಿ ಸಾಲನ್ನು ಎ–4 ಅಳತೆಯಲ್ಲಿ 10 ಪಾಯಿಂಟ್‌ಗಳಿಗೆ ಇಳಿಸಲಾಗಿದೆ	...	16-00
2.	ಖಾಸಗಿ ಸಂಸ್ಥೆ ಮತ್ತು ವಾಣಿಜ್ಯಕ್ಕೆ ಸಂಬಂಧಿಸಿದಂತೆ ಪ್ರಕಟಣೆ (ಕೆಪಿಟಿಸಿಎಲ್, ಬಿ.ಡಬ್ಲ್ಯೂ.ಎಸ್.ಎಸ್.ಬಿ, ಬಿ.ಡಿ.ಎ, ಕೆ.ಜಿ.ಐ.ಡಿ. ಗೃಹ ಮಂಡಳಿ ಹಾಗೂ ಕಂಪನಿಗಳು ಮತ್ತು ಖಾಸಗಿ ಪ್ರಕಟಣೆ, ಸಾರ್ವಜನಿಕ ಸಂಸ್ಥೆಗಳು, ಕಾನೂನು ಸ್ಟ್ಯಾಟುಟರಿ ನಿಯಮಾವಳಿ, ನ್ಯಾಯಾಂಗ ಅಧಿಸೂಚನೆ, ಸರ್ಕಾರದ ಸಾಮ್ಯಕ್ಕೆ ಒಳಪಟ್ಟಿರುವ ಇಲಾಖೆಗಳು, ಬ್ಯಾಂಕಿಗೆ ಸಂಬಂಧಿಸಿದ ಪ್ರಕಟಣೆಗಳು ಹಾಗೂ ಸಾರಿಗೆ ಸಂಸ್ಥೆಗಳು) ಇತ್ಯಾದಿ ಪ್ರತಿ ಪುಟಕ್ಕೆ	...	980-00
	ಪ್ರತಿ ಸಾಲನ್ನು ಎ4 ಅಳತೆಯಲ್ಲಿ 10 ಪಾಯಿಂಟ್‌ಗಳಿಗೆ ಇಳಿಸಲಾಗಿದೆ	...	24-00
3.	ಅರ್ಧ ಪುಟಕ್ಕೆ ಅಥವಾ ಕಾಲು ಪುಟಕ್ಕೆ ಬರುವ ವಿಷಯ	...	ಪುಟಕ್ಕೆ ದರ ನಿಗಧಿ ಕ್ರಮ ಸಂಖ್ಯೆ 1 ಮತ್ತು 2
4.	ಕಾಲು ಪುಟಕ್ಕಿಂತ ಕಡಿಮೆ ಇರುವ ವಿಷಯಕ್ಕೆ	...	ಕ್ರಮ ಸಂಖ್ಯೆ 1 ಮತ್ತು 2ರಲ್ಲಿ ನಮೂದಿಸಿರುವಂತೆ ಪ್ರತಿ ಸಾಲಿಗೆ ದರ ನಿಗದಿಪಡಿಸಿರುವುದು
5.	ಹೆಚ್ಚಾಗಿ ಬೇಕಾಗಿರುವ ಪ್ರತಿ ಹಾಳೆಯ ಬೆಲೆ (ಮುದ್ರಿಸಿರುವ ಹಾಳೆಯ ಅಳತೆಯನ್ನು ನಿರೂಪಿಸಿ)	...	1-00

ಸೂಚನೆ :– 1. ಚಂದಾ ಹಣದ / ಪ್ರಕಟಣಾ ವೆಚ್ಚದ ಮೊತ್ತವನ್ನು **"0058 ಲೇಖನ ಸಾಮಗ್ರಿ ಮತ್ತು ಮುದ್ರಣ (1) ರಾಜ್ಯಪತ್ರ ಮತ್ತು ಇತರ ಪ್ರಕಟಣಾ ವೆಚ್ಚಗಳು"** ಖಜಾನೆಗೆ ಸಲ್ಲಿಸಿ, ಮೂಲ ಚಲನನ್ನು ಮುಂದಿನ ಕ್ರಮಕ್ಕಾಗಿ ಈ ಕಛೇರಿಗೆ ಕಳುಹಿಸಬೇಕು.

2. ಭಾಗ VI–ಎ, VI–ಬಿ, VI–ಸಿ ಗಳನ್ನು ಅನುಕ್ರಮವಾಗಿ ಮೈಸೂರು, ಧಾರವಾಡ ಮತ್ತು ಗುಲ್ಬರ್ಗಾದ ಶಾಖಾ ಮುದ್ರಣಾಲಯಗಳಿಂದ ಪಡೆಯಬಹುದು.

3. ಕರ್ನಾಟಕ ರಾಜ್ಯಪತ್ರಕ್ಕಾಗಿ ಈ ಕೆಳಕಂಡ ವಿಳಾಸದಲ್ಲಿ ಪತ್ರ ವ್ಯವಹರಿಸತಕ್ಕದ್ದು.

ಸಂಕಲನಾಧಿಕಾರಿಗಳು,
ಕರ್ನಾಟಕ ರಾಜ್ಯಪತ್ರ,
ಸರ್ಕಾರಿ ಹೊರವಲಯ ಮುದ್ರಣಾಲಯ,
ಪೀಣ್ಯ ಕೈಗಾರಿಕಾ ಪ್ರದೇಶ, ಬೆಂಗಳೂರು–58

WPP-47

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ ೧೪೭	ಬೆಂಗಳೂರು, ಗುರುವಾರ, ಮೇ ೨೪, ೨೦೧೨ (ಜ್ಯೇಷ್ಠ ೩, ಶಕ ವರ್ಷ ೧೯೩೪)	ಸಂಚಿಕೆ ೨೧

ಭಾಗ – ೧

ರಾಜ್ಯ ಸರ್ಕಾರದ ಮುಖ್ಯ ಆದೇಶಗಳು ಹಾಗೂ ಸುತ್ತೋಲೆ ಮುಂತಾದ ಎಲ್ಲಾ ಇಲಾಖೆಗಳಿಗೂ ಸಂಬಂಧಿಸಿದ ಆದೇಶಗಳು

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ

ವಿಷಯ :- ರೈತ ಮಹಿಳೆಯರಿಗೆ ಉಂಟಾಗುವ ಗರ್ಭಕೋಶ ಕಾಯಿಲೆಗಳಿಗೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ವ್ಯಾಪ್ತಿಯಡಿ ಬರುವ (ವೈದ್ಯಕೀಯ ಶಿಕ್ಷಣ ಇಲಾಖೆ ಸೇರಿದಂತೆ) ಸರ್ಕಾರಿ ಆಸ್ಪತ್ರೆ / ಕೇಂದ್ರಗಳಲ್ಲಿ ಉಚಿತ ಚಿಕಿತ್ಸೆ ನೀಡುವ ಬಗ್ಗೆ.

ಓದಲಾಗಿದೆ :-

1) ಮಾನ್ಯ ಮುಖ್ಯ ಮಂತ್ರಿಯವರು 2011-12 ನೇ ಸಾಲಿನ ಕೃಷಿ ಆಯವ್ಯಯ ಭಾಷಣದ ಕಂಡಿಕೆ 89 ರಲ್ಲಿ ಮಾಡಿರುವ ಘೋಷಣೆ.
2) ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು ರವರ ಪತ್ರ ಸಂಖ್ಯೆ: ಪಿ.ಎಲ್.ಎನ್ (1)23/ 2011-12 ದಿನಾಂಕ: 27-02-2012.
3) ಅಪರ ಮುಖ್ಯ ಕಾರ್ಯದರ್ಶಿ ಮತ್ತು ಅಭಿವೃದ್ಧಿ ಆಯುಕ್ತರ ಅಧ್ಯಕ್ಷತೆಯಲ್ಲಿ ದಿನಾಂಕ: 20-3-2012 ರಂದು ನಡೆದ ಅಧಿಕಾರಯುಕ್ತ ಸಮಿತಿ ಸಭೆಯಲ್ಲಿ ತೆಗೆದುಕೊಂಡ ತೀರ್ಮಾನ.

ಪ್ರಸ್ತಾವನೆ:

ಮಾನ್ಯ ಮುಖ್ಯ ಮಂತ್ರಿಯವರು ಮೇಲೆ (1) ರಲ್ಲಿ ಓದಲಾದ 2011-12 ನೇ ಸಾಲಿನ ಕೃಷಿ ಆಯವ್ಯಯ ಭಾಷಣದ ಕಂಡಿಕೆ 89 ರಲ್ಲಿ ರೈತ ಮಹಿಳೆಯರಿಗೆ ಉಂಟಾಗುವ ಗರ್ಭಕೋಶ ಕಾಯಿಲೆಗಳಿಗೆ ಚಿಕಿತ್ಸೆ ವೆಚ್ಚವನ್ನು ಸರ್ಕಾರವು ಭರಿಸುವುದಾಗಿ ಘೋಷಿಸಿದ್ದಾರೆ.

ಮೇಲೆ (2) ರಲ್ಲಿ ಓದಲಾದ ಪತ್ರ ದಿನಾಂಕ: 27-2-2012 ರಂದು ಆಯುಕ್ತರು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು ರವರು ಈ ಬಗ್ಗೆ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಿದ್ದಾರೆ. ರಾಜ್ಯದ ಒಟ್ಟಾರೆ ಜನಸಂಖ್ಯೆಯು 6.11 ಕೋಟಿಗಳಾಗಿದ್ದು, ಅದರಲ್ಲಿ 3.76 ಕೋಟಿ ಜನರು ಗ್ರಾಮಾಂತರ ಪ್ರದೇಶಗಳಲ್ಲಿ ಹಾಗು 2.35 ಕೋಟಿ ಜನರು ನಗರ ಪ್ರದೇಶಗಳಲ್ಲಿ ವಾಸಿಸುತ್ತಿದ್ದಾರೆ. ಅದೇ ರೀತಿ ಗ್ರಾಮಾಂತರ ಪ್ರದೇಶಗಳಲ್ಲಿ 18.54 ಲಕ್ಷ ಮಹಿಳೆಯರು ಹಾಗು ನಗರ ಪ್ರದೇಶದಲ್ಲಿ 1.15 ಕೋಟಿ ಮಹಿಳೆಯರು ವಾಸಿಸುತ್ತಿದ್ದಾರೆ. ಕೃಷಿ ಇಲಾಖೆಯ ಅಂದಾಜಿನಂತೆ ರಾಜ್ಯದಲ್ಲಿ ಸುಮಾರು 75 ಲಕ್ಷ ರೈತ ಕುಟುಂಬಗಳಿವೆ. ಗರ್ಭಕೋಶಕ್ಕೆ ಸಂಬಂಧಿಸಿದ ಕಾಯಿಲೆಗಳನ್ನು ಎರಡು ವಿಭಾಗಗಲ್ಲಿ ಅಂದರೆ, (1) ವೈದ್ಯಕೀಯ ಪ್ರಕರಣಗಳು ಹಾಗು (2) ಶಸ್ತ್ರ ಚಿಕಿತ್ಸೆ ಪ್ರಕರಣಗಳೆಂದು ವಿಭಜಿಸಲಾಗಿದೆ. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ವ್ಯಾಪ್ತಿಯಡಿ ಬರುವ ಎಲ್ಲಾ ಸರ್ಕಾರಿ ಆಸ್ಪತ್ರೆ / ಕೇಂದ್ರಗಳಲ್ಲಿ ಉಚಿತ ವೈದ್ಯಕೀಯ ಪರೀಕ್ಷೆ ಹಾಗು ಔಷಧಿಗಳನ್ನು ಒದಗಿಸಲಾಗುತ್ತಿದೆ. ಗರ್ಭಕೋಶ ಕಾಯಿಲೆಗಳ ಶಸ್ತ್ರ ಚಿಕಿತ್ಸೆಗೆ ಸಂಬಂಧಿಸಿದಂತೆ

ಪ್ರಾಥಮಿಕ ಆರೋಗ್ಯ ಕೇಂದ್ರದ ಮಟ್ಟದಲ್ಲಿ ಸಣ್ಣ ಪ್ರಮಾಣದ ಶಸ್ತ್ರ ಚಿಕಿತ್ಸೆಗಳನ್ನು (Cauterisation, D&C) ಹೊರತುಪಡಿಸಿ ಬೇರೆ ಚಿಕಿತ್ಸೆಗಳನ್ನು ಕೈಗೊಳ್ಳಲಾಗುತ್ತಿಲ್ಲ. ಶಸ್ತ್ರ ಚಿಕಿತ್ಸೆಗೆ ಬೇಕಾಗುವ ಮಧ್ಯಮ ಹಾಗು ಗಂಭೀರ ತರಹದ ರೋಗಗಳಿಗೆ ಯಶಸ್ವಿನಿ ಯೋಜನೆ, ವಾಜಪೇಯಿ ಆರೋಗ್ಯಶ್ರೀ ಯೋಜನೆ, ರಾಷ್ಟ್ರೀಯ ಸ್ವಾಸ್ಥ ಭೀಮಾ ಯೋಜನೆಗಳಲ್ಲಿ ಚಿಕಿತ್ಸೆಗಳನ್ನು ಒದಗಿಸಲಾಗುತ್ತಿದೆ. ಅಲ್ಲದೆ, ಸಮುದಾಯ ಆರೋಗ್ಯ ಕೇಂದ್ರಗಳು, ತಾಲ್ಲೂಕು ಮತ್ತು ಜಿಲ್ಲಾ ಆಸ್ಪತ್ರೆಗಳು ಹಾಗು ಇಲಾಖೆಯ ವ್ಯಾಪ್ತಿಯಡಿ ಬರುವ ಇತರೇ ಪ್ರಮುಖ ಆಸ್ಪತ್ರೆಗಳಲ್ಲಿ ಶಸ್ತ್ರ ಚಿಕಿತ್ಸಾ ಸೇವೆಗಳನ್ನು ಒದಗಿಸಲಾಗುತ್ತಿದ್ದು, ಬಡತನ ರೇಖೆಗಿಂತ ಕೆಳಗಿರುವವರಿಗೆ ಉಚಿತ ಸೇವೆಗಳನ್ನು ಒದಗಿಸಲಾಗುತ್ತಿದೆ. ಸದರಿ ವಿವರಗಳನ್ನು ಆಯುಕ್ತರು ನೀಡುತ್ತಾ, ಮೇಲೆ ತಿಳಿಸಿದ ಆಯವ್ಯಯ ಭಾಷಣದಲ್ಲಿ ಘೋಷಿಸಿರುವುದನ್ನು ಜಾರಿಗೊಳಿಸುವ ಕುರಿತಂತೆ ಸರ್ಕಾರದ ಸೂಕ್ತ ಆದೇಶವನ್ನು ನೀಡಲು ಕೋರಿದ್ದಾರೆ.

ಈ ಪ್ರಸ್ತಾವನೆ ಬಗ್ಗೆ ಕೂಲಂಕಷವಾಗಿ ಸರ್ಕಾರವು ಪರಿಶೀಲಿಸಿದೆ. ವಿವಿಧ ಕಾಯಿಲೆಗಳಿಗೆ ಚಿಕಿತ್ಸೆಯನ್ನು ನೀಡುವುದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಚಾಲ್ತಿಯಲ್ಲಿರುವ ಯೋಜನೆಯಾಗಿದೆ. ಇಲಾಖೆಯ ವ್ಯಾಪ್ತಿಯಡಿ ಬರುವ ಸರ್ಕಾರಿ ಆಸ್ಪತ್ರೆ / ಕೇಂದ್ರಗಳಲ್ಲಿ ಬಿ.ಪಿ.ಎಲ್. ರೋಗಿಗಳಿಗೆ ಸಂಬಂಧಿಸಿದಂತೆ ಈಗಾಗಲೇ ಉಚಿತವಾಗಿ ಚಿಕಿತ್ಸೆಯನ್ನು ನೀಡಲಾಗುತ್ತಿದೆ. ಆದರೆ, ಎ.ಪಿ.ಎಲ್. ರೋಗಿಗಳಿಗೆ ಸಂಬಂಧಿಸಿದಂತೆ, ಸರ್ಕಾರವು ಕೆಲವು ದರದ ಶುಲ್ಕವನ್ನು ನಿಗದಿಪಡಿಸಿದೆ. ವಸೂಲಾಗುತ್ತಿರುವ ಸದರಿ ಶುಲ್ಕವನ್ನು ಸಂಬಂಧಪಟ್ಟ ಆಸ್ಪತ್ರೆಯ ಆರೋಗ್ಯ ರಕ್ಷಾ ಸಮಿತಿ ಲೆಕ್ಕಕ್ಕೆ ಜಮೆ ಮಾಡಿ, ಸದರಿ ಸಂಪನ್ಮೂಲವನ್ನು ಆಸ್ಪತ್ರೆಯ ಒಟ್ಟಾರೆ ಅಭಿವೃದ್ಧಿ ಕಾರ್ಯ ಚಟುವಟಿಕೆಗಳಿಗೆ ನಿಗದಿಪಡಿಸಿರುವ ಮಾನದಂಡಗಳ ಪ್ರಕಾರ ಉಪಯೋಗಿಸಲ್ಪಡುತ್ತಿದೆ. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ವ್ಯಾಪ್ತಿಯಡಿ ಬರುವ ಸರ್ಕಾರಿ ಆಸ್ಪತ್ರೆ / ಕೇಂದ್ರಗಳಲ್ಲಿ ಎ.ಪಿ.ಎಲ್ ರೈತರ ಮಹಿಳೆಯರಿಗೆ ಸಹ ಗರ್ಭಕೋಶ ಕಾಯಿಲೆಗಳಿಗೆ ಸಂಬಂಧಿಸಿದಂತೆ ಉಚಿತವಾಗಿ ಚಿಕಿತ್ಸೆಯನ್ನು ನೀಡಲು ಸದರಿ ರೋಗಿಗಳಿಂದ ನಿಗದಿತ ಶುಲ್ಕವನ್ನು ವಸೂಲು ಮಾಡುವುದರಿಂದ ವಿನಾಯಿತಿ ನೀಡಬೇಕಾಗುತ್ತದೆ. ಈ ಪ್ರಸ್ತಾವನೆಯು ಚಾಲ್ತಿಯಲ್ಲಿರುವ ಯೋಜನೆಯಡಿ ಹೆಚ್ಚುವರಿ ಕಾಂಪೋನೆಂಟ್ ಆಗುವ ಕಾರಣ, ಮೇಲೆ (3) ರಲ್ಲಿ ಓದಲಾದ ಅಧಿಕಾರಯುಕ್ತ ಸಮಿತಿಯ ಮುಂದೆ ವಿಷಯವನ್ನು ಮಂಡಿಸಲಾಗಿತ್ತು. ಸದರಿ ಸಭೆಯಲ್ಲಿ ಈ ಪ್ರಸ್ತಾವನೆ ಬಗ್ಗೆ ಕೂಲಂಕಷವಾಗಿ ಚರ್ಚಿಸಿದ ನಂತರ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ವ್ಯಾಪ್ತಿಯಡಿ ಬರುವ (ವೈದ್ಯಕೀಯ ಶಿಕ್ಷಣ ಇಲಾಖೆ ಸೇರಿದಂತೆ) ಸರ್ಕಾರಿ ಆಸ್ಪತ್ರೆ / ಕೇಂದ್ರಗಳಲ್ಲಿ ಎಲ್ಲಾ ಮಹಿಳೆಯರಿಗೆ ಗರ್ಭಕೋಶದ ಕಾಯಿಲೆಗಳಿಗೆ ಚಿಕಿತ್ಸೆಯನ್ನು (ಬಡತನ ರೇಖೆಗಿಂತ ಮೇಲ್ಪಟ್ಟ ಮಹಿಳೆಯರೂ ಸೇರಿದಂತೆ) ಉಚಿತವಾಗಿ ನೀಡಲು ನಿರ್ಧರಿಸಲಾಯಿತು. ಮುಂದುವರೆದು, ಈ ಸಂಬಂಧ ಬಡತನ ರೇಖೆಗಿಂತ ಮೇಲ್ಪಟ್ಟ ಮಹಿಳೆಯರು ಪ್ರಸ್ತುತ ಪಾವತಿಸುತ್ತಿರುವ ಶುಲ್ಕದಿಂದ ವಿನಾಯಿತಿ ನೀಡಲು ಸಹ ತೀರ್ಮಾನಿಸಲಾಯಿತು. ವೈದ್ಯಕೀಯ ಶಿಕ್ಷಣ ಇಲಾಖೆಯ ವ್ಯಾಪ್ತಿಯಡಿ ಬರುವ ಸರ್ಕಾರಿ ಅಸ್ಪತ್ರೆಗಳಲ್ಲಿ ಮಹಿಳೆಯರ ಗರ್ಭಕೋಶದ ಕಾಯಿಲೆಗಳಿಗೆ ಸಂಬಂಧಿಸಿದಂತೆ ಈ ರೀತಿ ಉಚಿತ ಚಿಕಿತ್ಸೆ ನೀಡುವುದರ ಪರಿಣಾಮವಾಗಿ ಸದರಿ ಆಸ್ಪತ್ರೆಗಳು ವಸೂಲು ಮಾಡುತ್ತಿದ್ದ ಶುಲ್ಕದ ಮೊತ್ತವನ್ನು ವೈದ್ಯಕೀಯ ಶಿಕ್ಷಣ ಇಲಾಖೆ ಆಸ್ಪತ್ರೆಗಳ ಆರೋಗ್ಯ ರಕ್ಷಾ ಸಮಿತಿಗಳಿಗೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯು ಮರುಪಾವತಿ ಮಾಡಲು ಕ್ರಮ ಕೈಗೊಳ್ಳಬೇಕೆಂದು ಸಹ ತೀರ್ಮಾನಿಸಲಾಯಿತು.

ಆದುದರಿಂದ ಈ ಆದೇಶ.

ಸರ್ಕಾರದ ಆದೇಶ ಸಂಖ್ಯೆ: ಆಕುಕ 118 ಸಿಜಿಎಂ 2012 ಬೆಂಗಳೂರು, ದಿನಾಂಕ: 20-3-2012.

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ವ್ಯಾಪ್ತಿಯಡಿ ಬರುವ (ವೈದ್ಯಕೀಯ ಶಿಕ್ಷಣ ಇಲಾಖೆ ಸೇರಿದಂತೆ) ಎಲ್ಲಾ ಸರ್ಕಾರಿ ಆಸ್ಪತ್ರೆ / ಕೇಂದ್ರಗಳಲ್ಲಿ ಮಹಿಳೆಯರ ಗರ್ಭಕೋಶದ ಕಾಯಿಲೆಗಳಿಗೆ ಚಿಕಿತ್ಸೆಯನ್ನು ಉಚಿತವಾಗಿ ನೀಡಲು ಸರ್ಕಾರದ ಮಂಜೂರಾತಿಯನ್ನು ನೀಡಲಾಗಿದೆ. ಈ ಸಂಬಂಧ ಬಡತನ ರೇಖೆಗಿಂತ ಮೇಲ್ಪಟ್ಟ ಮಹಿಳೆಯರು ಪ್ರಸ್ತುತ ಪಾವತಿಸುತ್ತಿರುವ ಶುಲ್ಕದಿಂದ ವಿನಾಯಿತಿ ನೀಡಲು ಸಹ ಸರ್ಕಾರದ ಮಂಜೂರಾತಿ ನೀಡಲಾಗಿದೆ. ತತ್ಸಂಬಂಧ ಬಡತನ ರೇಖೆಗಿಂತ ಮೇಲ್ಪಟ್ಟ ರೋಗಿಗಳಿಂದ ಸದರಿ ಆಸ್ಪತ್ರೆಗಳಿಗೆ ಆಂತರಿಕ ಸಂಪನ್ಮೂಲವಾಗಿ ಸ್ವೀಕರಿಸಲ್ಪಡುತ್ತಿದ್ದ ಶುಲ್ಕವನ್ನು ಸಂಬಂಧಪಟ್ಟ ಆಸ್ಪತ್ರೆಗಳ ಆರೋಗ್ಯ ರಕ್ಷಾ ಸಮಿತಿಗಳಿಗೆ ಮರುಪಾವತಿಸಲು ಸಹ ಸರ್ಕಾರದ ಮಂಜೂರಾತಿ ನೀಡಲಾಗಿದೆ.

ಈ ಆದೇಶವನ್ನು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಮತ್ತು ಅಭಿವೃದ್ಧಿ ಆಯುಕ್ತರ ಅಧ್ಯಕ್ಷತೆಯಲ್ಲಿ ದಿನಾಂಕ: 20-3-2012 ರಂದು ನಡೆದ ಅಧಿಕಾರಯುಕ್ತ ಸಮಿತಿ ಸಭೆಯಲ್ಲಿ ತೆಗೆದುಕೊಂಡ ತೀರ್ಮಾನದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ. ನಾರಾಯಣ,
ಸರ್ಕಾರದ ಅಧೀನ ಕಾರ್ಯದರ್ಶಿ,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ.

ಪಿ.ಆರ್. 1181

ಜಲಸಂಪನ್ಮೂಲ ಸಚಿವಾಲಯ

ವಿಷಯ :- ಬಾಗಲಕೋಟ ಜಿಲ್ಲೆ, ಮುಧೋಳ ತಾಲ್ಲೂಕಿನ ಹತ್ತಿರ ಘಟಪ್ರಭಾ ನದಿಗೆ ಪ್ರವಾಹ ನಿಯಂತ್ರಣ ಕಾಮಗಾರಿಯ ಟೆಂಡರ್ ಅನುಮೋದನೆ ಬಗ್ಗೆ.

ಓದಲಾಗಿದೆ :- 1) ಮುಖ್ಯ ಇಂಜನಿಯರ್, ಸಣ್ಣ ನೀರಾವರಿ ಉತ್ತರ ವಲಯ ಬಿಜಾಪುರರವರ ಪತ್ರದ ಸಂಖ್ಯೆ: ಮುಇಂ; ಸನೀ(ಉ)ವಲಯ: ಬಿಜೆಪಿ: ಎಇ-6: 2011-12: 1559, ದಿನಾಂಕ 19.03.2012.

2) ಸರ್ಕಾರದ ಆದೇಶ ಸಂಖ್ಯೆ: ಸನೀಇ 109 ಮಸಾಪಿ 2011(1) (ತಾಂತ್ರಿಕ), ದಿನಾಂಕ: 03.11.2011.

ಪ್ರಸ್ತಾವನೆ:

ಬಾಗಲಕೋಟ ಜಿಲ್ಲೆ, ಮುಧೋಳ ತಾಲ್ಲೂಕಿನ ಹತ್ತಿರ ಘಟಪ್ರಭಾ ನದಿಗೆ ಪ್ರವಾಹ ನಿಯಂತ್ರಣ ಕಾಮಗಾರಿಯು ಭಾರತ ಸರ್ಕಾರದ ಪ್ರವಾಹ ನಿರ್ವಹಣೆ ಕಾರ್ಯಕ್ರಮಡಿ ಅನುಮೋದನೆ ಗೊಂಡಿರುತ್ತದೆ. ಈ ಕಾಮಗಾರಿಯು ರೂ.1498.00ಲಕ್ಷಗಳ ಅಂದಾಜು ಪಟ್ಟಿಗೆ ಮೇಲೆ (2)ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಆಡಳಿತಾತ್ಮಕ ಅನುಮೋಧನೆ ನೀಡಲಾಗಿದ್ದು ಮುಖ್ಯ ಇಂಜನಿಯರ್, ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರರವರು ತಾಂತ್ರಿಕ ಮಂಜೂರಾತಿ ನೀಡಿರುತ್ತಾರೆ.

ಈ ಕಾಮಗಾರಿಯನ್ನು ಕೈಗೊಳ್ಳಲು ಬಿಜಾಪುರ ಸಣ್ಣ ನೀರಾವರಿ ವಿಭಾಗದಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮದಡಿ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಕರೆಯಲಾದ ಅಲ್ಪಾವಧಿ ಟೆಂಡರ್‌ನ ಪ್ರಕಟಣೆಯನ್ನು ಈ ಕೆಳಕಂಡ ಮಾಧ್ಯಮಗಳಲ್ಲಿ ಪ್ರಕಟಿಸಲಾಗಿದೆ.

ಇಂಡಿಯನ್ ಟ್ರೇಡ್ ಜರ್ನಲ್	15.02.2012
ರಾಜ್ಯ ಟೆಂಡರ್ ಬುಲೆಟಿನ್	17.02.2012
ಸಂಯುಕ್ತ ಕರ್ನಾಟಕ ದಿನ ಪತ್ರಿಕೆ	18.02.2012
ಟೈಮ್ಸ್ ಆಫ್ ಇಂಡಿಯಾ	18.02.2012

ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರನ್ನು ತೆರೆದು ಪರಿಶೀಲಿಸಲಾಗಿ ಈ ಟೆಂಡರ್ ಪ್ರಕಟಣೆಗೆ ಸ್ಪಂದಿಸಿ ಒಬ್ಬರು ಗುತ್ತಿಗೆದಾರರು ಮಾತ್ರ ಭಾಗವಹಿಸಿದ್ದು ಇವರು ಅರ್ಹತೆ ಹೊಂದಿರುತ್ತಾರೆ. ವಿವರಗಳು ಕೆಳಕಂಡಂತಿವೆ.

ಮಂಜೂರಾದ ಅಂದಾಜಿನ ದರಗಳಂತೆ ಟೆಂಡರಿಗೆ ಇಡಲಾದ ಮೊತ್ತ	ರೂ 1429,89,214/-
ಪ್ರಸಕ್ತ ಸಾಲಿನ ದರಪಟ್ಟಿಯ ದರಗಳಿಗೆ ಪರಿಷ್ಕರಿಸಿದಂತೆ ಟೆಂಡರಿಗೆ ಇಡಲಾದ ಮೊತ್ತ	ರೂ 14,28,43,098/-

ಗುತ್ತಿಗೆದಾರರ ಹೆಸರು ಮತ್ತು ದರ್ಜೆ ಶ್ರೀ/ಮೆಸರ್ಸ್	ಟೆಂಡರ್‌ನಲ್ಲಿ ಗುತ್ತಿಗೆದಾರರು ನಮೂದಿಸಿರುವ ದರಗಳಂತೆ ಟೆಂಡರಿನ ಮೊತ್ತ	ಮಂಜೂರಾದ ಅಂದಾಜಿನ ದರಗಳ ಮೇಲಿನ ಶೇಕಡಾವಾರು ಹೆಚ್ಚಳ/ಕಡಿಮೆ	ಪರಿಷ್ಕರಿಸಿದ ದರಗಳ ಮೇಲಿನ ಶೇಕಡಾವಾರು ಹೆಚ್ಚಳ/ಕಡಿಮೆ
ಅಮೃತ ಕನ್‌ಸ್ಟ್ರಕ್ಷನ್ಸ್ ಪ್ರೈವೇಟ್ ಲಿಮಿಟೆಡ್, ಗುತ್ತಿಗೆದಾರರು, ಸಿಂಧನೂರು.	1699,76,056/-	18.873 ಹೆಚ್ಚು	18.995 ಹೆಚ್ಚು

ಮೇಲ್ಕಂಡಂತೆ ಮೆ॥ ಅಮೃತ ಕನ್‌ಸ್ಟ್ರಕ್ಷನ್ಸ್ ಪ್ರೈವೇಟ್ ಲಿಮಿಟೆಡ್, ಒಂದನೇ ದರ್ಜೆ ಗುತ್ತಿಗೆದಾರರು ಇವರು ಟೆಂಡರ್‌ನಲ್ಲಿ ಅರ್ಹತೆ ಹೊಂದಿರುವ ಗುತ್ತಿಗೆದಾರರಾಗಿದ್ದು ಇವರು ನಮೂದಿಸಿದ ದರಗಳನ್ನು ಪ್ರಸಕ್ತ ಸಾಲಿನ ದರಗಳಿಗೆ ಪರಿಷ್ಕರಿಸಿದಂತೆ ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇಕಡ 18.995ರಷ್ಟು ಹೆಚ್ಚಾಗಿರುತ್ತದೆ.

ಇವರ ಟೆಂಡರನ್ನು ದಿನಾಂಕ: 24.03.2012ರಂದು ನಡೆದ ಇಲಾಖಾ ಟೆಂಡರ್ ಪರಿಶೀಲನಾ ಸಭೆಗೆ ಮಂಡಿಸಿ ಪರಿಶೀಲಿಸಲಾಯಿತು. ಗುತ್ತಿಗೆದಾರರು ಕೆಲಸವನ್ನು ನಿರ್ವಹಿಸಲು ಉಂಟಾಗುವ ಸಮಸ್ಯೆಗಳ ಕುರಿತು ವಿವರಿಸಿದರು ಹಾಗೂ ಕಾಮಗಾರಿಯನ್ನು ಪರಿಷ್ಕೃತ ಟೆಂಡರಿಗಿಟ್ಟ ಮೊತ್ತದ ಮೇಲೆ ಶೇ.14.50ರಷ್ಟು ಹೆಚ್ಚಿನ ದರಗಳಲ್ಲಿ ನಿರ್ವಹಿಸಲು ಸಹಮತಿ ಪತ್ರವನ್ನು ನೀಡಿದರು. ಸಮಿತಿಯು ಈ ಟೆಂಡರನ್ನು ಸುಧೀರ್ಘವಾಗಿ ಪರಿಶೀಲಿಸಿದ ಮೇಲೆ ಶೇ.14.50ರಷ್ಟು ಹೆಚ್ಚಿನ ದರಗಳಿಗೆ ಟೆಂಡರನ್ನು ಅನುಮೋದಿಸುವಂತೆ ಸರ್ಕಾರಕ್ಕೆ ಶಿಫಾರಸ್ಸು ಮಾಡಿದೆ.

ಈ ಟೆಂಡರನ್ನು ಸರ್ಕಾರದಲ್ಲಿ ಪರಿಶೀಲಿಸಿ ಪ್ರಸಕ್ತ ಸಾಲಿನ ದರಪಟ್ಟಿಯ ದರಗಳಿಗೆ ಪರಿಷ್ಕರಿಸಿದಂತೆ ಟೆಂಡರಿಗೆ ಇಡಲಾದ ಮೊತ್ತ ರೂ.14,28,43,098/-ಗಳ ಮೇಲೆ ಶೇ.14.50ರಷ್ಟು ಹೆಚ್ಚಿನ ಮೊತ್ತಕ್ಕೆ ಅಂದರೆ ರೂ.16,35,55,347/-ಗಳಿಗೆ ಮೆ॥ ಅಮೃತಾ ಕನ್‌ಸ್ಟ್ರಕ್ಷನ್ಸ್ ಪ್ರೈವೇಟ್ ಲಿಮಿಟೆಡ್, ಇವರಿಗೆ ವಹಿಸಲು ಟೆಂಡರನ್ನು ಅನುಮೋದಿಸಲು ಪರಿಗಣಿಸಿದೆ.

ಮೇಲಿನ ಅಂಶಗಳ ಹಿನ್ನೆಲೆಯಲ್ಲಿ ಸರ್ಕಾರವು ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಸನೀಇ 04 ಪ್ರನೀಕಾ(ತಾಂತ್ರಿಕ) 2012, ಬೆಂಗಳೂರು, ದಿನಾಂಕ: 13ನೇ ಏಪ್ರಿಲ್ 2012

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಬಾಗಲಕೋಟ ಜಿಲ್ಲೆ, ಮುಧೋಳ ತಾಲ್ಲೂಕಿನ ಹತ್ತಿರ ಘಟಪ್ರಭಾ ನದಿಗೆ ಪ್ರವಾಹ ನಿಯಂತ್ರಣ ಕಾಮಗಾರಿಯನ್ನು ಪ್ರಸಕ್ತ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದಂತೆ ಟೆಂಡರಿಗಿಡಲಾದ ಮೊತ್ತ ರೂ.14,28,43,098/-ಗಳ ಮೇಲೆ ಶೇ.14.50ರಷ್ಟು ಹೆಚ್ಚಿನ ದರದಲ್ಲಿ ಅಂದರೆ ರೂ.16,35,55,347/-ಗಳಿಗೆ (ರೂ. ಹದಿನಾರು ಕೋಟಿ ಮೂವತ್ತೈದು ಲಕ್ಷ ಐವತ್ತೈದು ಸಾವಿರದ ಮುನ್ನೂರ ನಲವತ್ತೇಳು ಮಾತ್ರ)ಗಳಿಗೆ ಮೆ॥ ಅಮೃತಾ ಕನ್‌ಸ್ಟ್ರಕ್ಷನ್ಸ್ ಪ್ರೈವೇಟ್ ಲಿಮಿಟೆಡ್ ಗುತ್ತಿಗೆದಾರರು ರವರಿಗೆ ಕೆಳಕಂಡ ಷರತ್ತುಗಳಿಗೆ ಒಳಪಡಿಸಿ ವಹಿಸಲು ಸರ್ಕಾರವು ಅನುಮೋದನೆ ನೀಡಿದೆ.

1. ಕಾಮಗಾರಿಯನ್ನು ನಿಗಧಿತ ಅವಧಿಯಲ್ಲಿ ಪೂರ್ಣಗೊಳಿಸತಕ್ಕದ್ದು.
2. ಸರ್ಕಾರದ ಅನುಮತಿ ಪಡೆಯದೆ ಕಾಮಗಾರಿಯಲ್ಲಿ ಯಾವುದೇ ಹೆಚ್ಚುವರಿ ಕೆಲಸ ನಿರ್ವಹಿಸಬಾರದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ: ಎಫ್‌ಡಿ 1 ಟಿಎಫ್‌ಪಿ 2008, ದಿನಾಂಕ:16.05.2008ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕಾಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ರುದ್ರಮೂರ್ತಿ,

ಪದನಿಮಿತ್ತ ಸರ್ಕಾರದ ಅಧೀನ ಕಾರ್ಯದರ್ಶಿ,

ಪಿ.ಆರ್. 1228 ಜಲಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)

ಜಲಸಂಪನ್ಮೂಲ ಸಚಿವಾಲಯ

ವಿಷಯ :- ಬಾಗಲಕೋಟೆ ಜಿಲ್ಲೆ ಬದಾಮಿ ತಾಲ್ಲೂಕಿನ ನಾಗರಾಳ(ಎಸ್.ಬಿ) ಗ್ರಾಮದ ಹತ್ತಿರ ಏತ ನೀರಾವರಿ ಯೋಜನೆ ನಿರ್ಮಾಣ (ಸರ್ವೆ.ನಂ. 12/2, 12/3, 12/4 ಮತ್ತು 12/5) ಕಾಮಗಾರಿ ಟೆಂಡರ್ ಅನುಮೋದಿಸುವ ಬಗ್ಗೆ.

ಓದಲಾಗಿದೆ :- ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ ಬಿಜಾಪುರರವರ ಪತ್ರದ ಕ್ರಮಾಂಕ:ಮುಇಂ/ಸನೀ(ಉ)ವಲಯ/ಬಿಜೆಪಿ/ಎಇ-6/2011-12/1460ದಿನಾಂಕ:15.03.2012

ಪ್ರಸ್ತಾವನೆ:

ಬಾಗಲಕೋಟೆ ಜಿಲ್ಲೆ ಬದಾಮಿ ತಾಲ್ಲೂಕಿನ ನಾಗರಾಳ(ಎಸ್.ಬಿ) ಗ್ರಾಮದ ಹತ್ತಿರ ಏತ ನೀರಾವರಿ ಯೋಜನೆ ನಿರ್ಮಾಣ (ಸರ್ವೆ.ನಂ. 12/2, 12/3, 12/4 ಮತ್ತು 12/5) ಕಾಮಗಾರಿಯು 2011-12ನೇ ಸಾಲಿನ ವಿಶೇಷ ಘಟಕ ಯೋಜನೆಯಡಿ ಅನುಮೋದನೆ ಗೊಂಡಿರುತ್ತದೆ. ಈ ಕಾಮಗಾರಿಯ ಅಂದಾಜು ಪಟ್ಟಿಗೆ ಕಾರ್ಯಪಾಲಕ ಇಂಜಿನಿಯರ್ ಸಣ್ಣ ನೀರಾವರಿ ವಿಭಾಗ, ಬಿಜಾಪುರರವರು ಆಡಳಿತಾತ್ಮಕ ಅನುಮೋಧನೆ ಹಾಗೂ ತಾಂತ್ರಿಕ ಮಂಜೂರಾತಿ ನೀಡಿರುತ್ತಾರೆ.

ಈ ಕಾಮಗಾರಿಯನ್ನು ಕೈಗೊಳ್ಳಲು ಬಿಜಾಪುರ ಸಣ್ಣ ನೀರಾವರಿ ವಿಭಾಗದಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮದಡಿ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಕರೆಯಲಾದ ಟೆಂಡರ್‌ನ ಪ್ರಕಟಣೆಯನ್ನು ಈ ಕೆಳಕಂಡ ಮಾಧ್ಯಮಗಳಲ್ಲಿ ಪ್ರಕಟಿಸಲಾಗಿದೆ.

ಜಿಲ್ಲಾ ಟೆಂಡರ್ ಬುಲೆಟಿನ್	09.12.2011
ಪ್ರಜಾವಾಣಿ ದಿನ ಪತ್ರಿಕೆ	13.12.2011

ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರನ್ನು ತೆರೆದು ಪರಿಶೀಲಿಸಲಾಗಿ ಈ ಟೆಂಡರ್ ಪ್ರಕಟಣೆಗೆ ಸ್ಪಂದಿಸಿ ಇಬ್ಬರು ಗುತ್ತಿಗೆದಾರರು ಭಾಗವಹಿಸಿದ್ದು ಈ ಪೈಕಿ ಒಬ್ಬರು ಗುತ್ತಿಗೆದಾರರು ಮಾತ್ರ ಅರ್ಹತೆ ಹೊಂದಿರುತ್ತಾರೆ. ವಿವರಗಳು ಕೆಳಕಂಡಂತಿವೆ.

ಮಂಜೂರಾದ ಅಂದಾಜಿನ ದರಗಳಂತೆ ಹಾಗೂ ಪ್ರಸಕ್ತ ಸಾಲಿನ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದಂತೆ ಟೆಂಡರಿಗೆ ಇಡಲಾದ ಮೊತ್ತ	ರೂ.4,19,771/-

ಗುತ್ತಿಗೆದಾರರ ಹೆಸರು ಮತ್ತು ದರ್ಜೆ ಶ್ರೀ/ಮೆಸರ್ಸ್	ಟೆಂಡರ್‌ನಲ್ಲಿ ಗುತ್ತಿಗೆದಾರರು ನಮೂದಿಸಿರುವ ದರಗಳಂತೆ ಟೆಂಡರಿನ ಮೊತ್ತ	ಮಂಜೂರಾದ ಅಂದಾಜಿನ ದರಗಳ ಹಾಗೂ ಪರಿಷ್ಕರಿಸಿದ ದರಗಳ ಮೇಲಿನ ಶೇಕಡಾವಾರು ಹೆಚ್ಚಳ/ಕಡಿಮೆ
ಸಂಗಣ್ಣ ಎನ್. ನಂದನೂರು, ಒಂದನೇ ದರ್ಜೆ ಗುತ್ತಿಗೆದಾರರು	4,85,739/-	15.72 ಹೆಚ್ಚು

ಮೇಲ್ಕಂಡಂತೆ ಶ್ರೀ ಸಂಗಣ್ಣ ಎನ್. ನಂದನೂರು, ಒಂದನೇ ದರ್ಜೆ ಗುತ್ತಿಗೆದಾರರು ಇವರು ಟೆಂಡರ್‌ನಲ್ಲಿ ಅರ್ಹತೆ ಹೊಂದಿರುವ ಗುತ್ತಿಗೆದಾರರಾಗಿದ್ದು ಇವರು ನಮೂದಿಸಿದ ದರಗಳನ್ನು ಪ್ರಸಕ್ತ ಸಾಲಿನ ದರಗಳಿಗೆ ಪರಿಷ್ಕರಿಸಿದಂತೆ ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇ. 15.72ರಷ್ಟು ಹೆಚ್ಚಾಗಿದ್ದು, ಸದರಿಯವರ ಟೆಂಡರ್‌ನ್ನು ಸಂಧಾನದ ಮೂಲಕ ಅಂಗೀಕರಿಸಲು ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರ ಇವರು ಮೇಲೆ ಓದಲಾದ ಪತ್ರದಲ್ಲಿ ಶಿಫಾರಸ್ಸು ಮಾಡಿರುತ್ತಾರೆ.

ಈ ಟೆಂಡರನ್ನು ಸರ್ಕಾರದಲ್ಲಿ ಪರಿಶೀಲಿಸಿ ಪ್ರಸಕ್ತ ಸಾಲಿನ ದರಗಳಿಗೆ ಪರಿಷ್ಕರಿಸಿದಂತೆ ಟೆಂಡರಿಗಿಟ್ಟ ಪರಿಷ್ಕೃತ ಮೊತ್ತ ರೂ. 4,19,771/-ಗಳ ಮೇಲೆ ಶೇ.13.00ರಷ್ಟು ಹೆಚ್ಚಿನ ದರದಲ್ಲಿ ಅಂದರೆ ರೂ.4,74,341/-ಗಳಿಗೆ ಅನುಮೋದಿಸಲು ಪರಿಗಣಿಸಿದೆ.

ಮೇಲಿನ ಅಂಶಗಳ ಹಿನ್ನೆಲೆಯಲ್ಲಿ ಸರ್ಕಾರವು ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಸನೀಇ 18 ವಿನೀಯೋ(ತಾಂತ್ರಿಕ) 2012 ಬೆಂಗಳೂರು, ದಿನಾಂಕ: 13ನೇ ಏಪ್ರಿಲ್ 2012

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಬಾಗಲಕೋಟೆ ಜಿಲ್ಲೆ ಬದಾಮಿ ತಾಲ್ಲೂಕಿನ ನಾಗರಾಳ(ಎಸ್.ಬಿ) ಗ್ರಾಮದ ಹತ್ತಿರ ಏತ ನೀರಾವರಿ ಯೋಜನೆ ನಿರ್ಮಾಣ (ಸರ್ವೆ.ನಂ. 12/2, 12/3, 12/4 ಮತ್ತು 12/5) ಕಾಮಗಾರಿಯನ್ನು ಪ್ರಸಕ್ತ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದಂತೆ ಟೆಂಡರಿಗಿಡಲಾದ ಮೊತ್ತ ರೂ. 4,19,771/-ಗಳ ಮೇಲೆ ಶೇ.13.00ರಷ್ಟು ಹೆಚ್ಚಿನ ದರದಲ್ಲಿ ಅಂದರೆ ರೂ.4,74,341/-ಗಳಿಗೆ (ರೂ. ನಾಲ್ಕು ಲಕ್ಷ ಎಪ್ಪತ್ತನಾಲ್ಕು ಸಾವಿರದ ಮುನ್ನೂರ ನಲವತ್ತೊಂದು ಮಾತ್ರ)ಗಳಿಗೆ ಶ್ರೀ ಸಂಗಣ್ಣ ಎನ್. ನಂದನೂರು, ಒಂದನೇ ದರ್ಜೆ ಗುತ್ತಿಗೆದಾರರು ರವರಿಗೆ ಕೆಳಕಂಡ ಷರತ್ತುಗಳಿಗೆ ಒಳಪಡಿಸಿ ವಹಿಸಲು ಸರ್ಕಾರವು ಅನುಮೋದನೆ ನೀಡಿದೆ.

1. ಕಾಮಗಾರಿಯನ್ನು ನಿಗಧಿತ ಅವಧಿಯಲ್ಲಿ ಪೂರ್ಣಗೊಳಿಸತಕ್ಕದ್ದು.
2. ಸರ್ಕಾರದ ಅನುಮತಿ ಪಡೆಯದೆ ಕಾಮಗಾರಿಯಲ್ಲಿ ಯಾವುದೇ ಹೆಚ್ಚುವರಿ ಕೆಲಸ ನಿರ್ವಹಿಸಬಾರದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ: ಎಫ್‌ಡಿ 1 ಟಿಎಫ್‌ಪಿ 2008, ದಿನಾಂಕ:16.05.2008ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕಾಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ರುದ್ರಮೂರ್ತಿ,

ಪದನಿಮಿತ್ತ ಸರ್ಕಾರದ ಅಧೀನ ಕಾರ್ಯದರ್ಶಿ,

ಜಲಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)

ಪಿ.ಆರ್. 1229

ಜಲಸಂಪನ್ಮೂಲ ಸಚಿವಾಲಯ

ವಿಷಯ :- ಬಿಜಾಪುರ ಜಿಲ್ಲೆ ಹಾಗೂ ತಾಲ್ಲೂಕಿನ ಕನ್ನೂರ ಗ್ರಾಮದ ಸರ್ವೆ.ನಂ. 145/1ಬಿ, 145/2ಬ, 145/2ಅ ಗಳ ಮಲ್ಲಪ್ಪ ಬಾಲಪ್ಪ ಮಾದರ ಹಾಗೂ ಇತರರ ಜಮೀನುಗಳಿಗೆ ಬೋರ್ ವೆಲ್ ಮೂಲಕ ನೀರಾವರಿ ಸೌಲಭ್ಯ ಒದಗಿಸುವ ಕಾಮಗಾರಿ ಟೆಂಡರ್ ಅನುಮೋದಿಸುವ ಬಗ್ಗೆ.

ಓದಲಾಗಿದೆ :- ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ ಬಿಜಾಪುರರವರ ಪತ್ರದ ಕ್ರಮಾಂಕ:ಮುಇಂ/ಸನೀ(ಉ)ವ/ಬಿಜೆಪಿ/ಪಿಬಿ–9/ಕನ್ನೂರ(ಸರ್ವೆ ನಂ.145) ವಿ.ನೀ.ಯೋ./ 2011–12/1452/ದಿನಾಂಕ:14.03.2012.

ಪ್ರಸ್ತಾವನೆ:

ಬಿಜಾಪುರ ಜಿಲ್ಲೆ ಹಾಗೂ ತಾಲ್ಲೂಕಿನ ಕನ್ನೂರ ಗ್ರಾಮದ ಸರ್ವೆ.ನಂ. 145/1ಬಿ, 145/2ಬ, 145/2ಅ ಗಳ ಮಲ್ಲಪ್ಪ ಬಾಲಪ್ಪ ಮಾದರ ಹಾಗೂ ಇತರರ ಜಮೀನುಗಳಿಗೆ ಬೋರ್ ವೆಲ್ ಮೂಲಕ ನೀರಾವರಿ ಸೌಲಭ್ಯ ಒದಗಿಸುವ ಕಾಮಗಾರಿಯು 2011–12ನೇ ಸಾಲಿನ ವಿಶೇಷ ಘಟಕ ಯೋಜನೆಯಡಿ ಅನುಮೋದನೆ ಗೊಂಡಿರುತ್ತದೆ. ಈ ಕಾಮಗಾರಿಯ ಅಂದಾಜು ಪಟ್ಟಿಗೆ ಅಧೀಕ್ಷಕ ಇಂಜಿನಿಯರ್, ಸಣ್ಣ ನೀರಾವರಿ ವೃತ್ತ, ಬೆಳಗಾವಿರವರು ಆಡಳಿತಾತ್ಮಕ ಅನುಮೋಧನೆ ಹಾಗೂ ತಾಂತ್ರಿಕ ಮಂಜೂರಾತಿ ನೀಡಿರುತ್ತಾರೆ.

ಈ ಕಾಮಗಾರಿಯನ್ನು ಕೈಗೊಳ್ಳಲು ಬಿಜಾಪುರ ಸಣ್ಣ ನೀರಾವರಿ ವಿಭಾಗದಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮದಡಿ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಕರೆಯಲಾದ ಟೆಂಡರ್‌ನ ಪ್ರಕಟಣೆಯನ್ನು ಈ ಕೆಳಕಂಡ ಮಾಧ್ಯಮಗಳಲ್ಲಿ ಪ್ರಕಟಿಸಲಾಗಿದೆ.

ಜಿಲ್ಲಾ ಟೆಂಡರ್ ಬುಲೆಟಿನ್	16.01.2012
ವಿಜಯಕರ್ನಾಟಕ ದಿನಪತ್ರಿಕೆ	13.01.2012

ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರನ್ನು ತೆರೆದು ಪರಿಶೀಲಿಸಲಾಗಿ ಈ ಟೆಂಡರ್ ಪ್ರಕಟಣೆಗೆ ಸ್ಪಂದಿಸಿ ಒಬ್ಬರು ಗುತ್ತಿಗೆದಾರರು ಮಾತ್ರ ಭಾಗವಹಿಸಿದ್ದು ಇವರು ಅರ್ಹತೆ ಹೊಂದಿರುತ್ತಾರೆ. ವಿವರಗಳು ಕೆಳಕಂಡಂತಿವೆ.

ಮಂಜೂರಾದ ಅಂದಾಜಿನ ದರಗಳಂತೆ ಟೆಂಡರಿಗೆ ಇಡಲಾದ ಮೊತ್ತ			ರೂ. 8,00,525/-
ಪ್ರಸಕ್ತ ಸಾಲಿನ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದಂತೆ ಟೆಂಡರಿಗೆ ಇಡಲಾದ ಮೊತ್ತ			ರೂ. 8,00,130/-
ಗುತ್ತಿಗೆದಾರರ ಹೆಸರು ಮತ್ತು ದರ್ಜೆ ಶ್ರೀ/ಮೆಸರ್ಸ್	**ಟೆಂಡರ್‌ನಲ್ಲಿ ಗುತ್ತಿಗೆದಾರರು ನಮೂದಿಸಿರುವ ದರಗಳಂತೆ ಟೆಂಡರಿನ ಮೊತ್ತ**	**ಮಂಜೂರಾದ ಅಂದಾಜಿನ ದರಗಳ ಮೇಲಿನ ಶೇಕಡಾವಾರು ಹೆಚ್ಚಳ/ಕಡಿಮೆ**	**ಪರಿಷ್ಕರಿಸಿದ ದರಗಳ ಮೇಲಿನ ಶೇಕಡಾವಾರು ಹೆಚ್ಚಳ/ಕಡಿಮೆ**
ಎಸ್.ಬಿ.ಕರೇಕಲ್, ಒಂದನೇ ದರ್ಜೆ ಗುತ್ತಿಗೆದಾರರು	9,14,970/-	14.29 ಹೆಚ್ಚು	14.35 ಹೆಚ್ಚು

ಮೇಲ್ಕಂಡಂತೆ ಶ್ರೀ ಎಸ್.ಬಿ.ಕರೇಕಲ್, ಒಂದನೇ ದರ್ಜೆ ಗುತ್ತಿಗೆದಾರರು ಇವರು ಟೆಂಡರ್‌ನಲ್ಲಿ ಅರ್ಹತೆ ಹೊಂದಿರುವ ಗುತ್ತಿಗೆದಾರರಾಗಿದ್ದು ಇವರು ನಮೂದಿಸಿದ ದರಗಳನ್ನು ಪ್ರಸಕ್ತ ಸಾಲಿನ ದರಗಳಿಗೆ ಪರಿಷ್ಕರಿಸಿದಂತೆ ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇ. 14.35ರಷ್ಟು ಹೆಚ್ಚಾಗಿದ್ದು, ಸದರಿಯವರ ಟೆಂಡರ್‌ನ್ನು ಸಂಧಾನದ ಮೂಲಕ ಅಂಗೀಕರಿಸಲು ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರ ಇವರು ಮೇಲೆ ಓದಲಾದ ಪತ್ರದಲ್ಲಿ ಶಿಫಾರಸ್ಸು ಮಾಡಿರುತ್ತಾರೆ.

ಈ ಟೆಂಡರನ್ನು ಸರ್ಕಾರದಲ್ಲಿ ಪರಿಶೀಲಿಸಿ ಪ್ರಸಕ್ತ ಸಾಲಿನ ದರಗಳಿಗೆ ಪರಿಷ್ಕರಿಸಿದಂತೆ ಟೆಂಡರಿಗಿಟ್ಟ ಪರಿಷ್ಕೃತ ಮೊತ್ತ ರೂ. 8,00,130/-ಗಳ ಮೇಲೆ ಶೇ.13.00ರಷ್ಟು ಹೆಚ್ಚಿನ ದರದಲ್ಲಿ ಅಂದರೆ ರೂ.9,04,147/-ಗಳಿಗೆ ಅನುಮೋದಿಸಲು ಪರಿಗಣಿಸಿದೆ.

ಮೇಲಿನ ಅಂಶಗಳ ಹಿನ್ನೆಲೆಯಲ್ಲಿ ಸರ್ಕಾರವು ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಸನೀಇ 19 ಏನೀಯೋ(ತಾಂತ್ರಿಕ) 2012 ಬೆಂಗಳೂರು, ದಿನಾಂಕ: 13ನೇ ಏಪ್ರಿಲ್ 2012

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಬಿಜಾಪುರ ಜಿಲ್ಲೆ ಹಾಗೂ ತಾಲ್ಲೂಕಿನ ಕನ್ನೂರ ಗ್ರಾಮದ ಸರ್ವೆ.ನಂ. 145/1ಬಿ, 145/2ಬ, 145/2ಅ ಗಳ ಮಲ್ಲಪ್ಪ ಬಾಲಪ್ಪ ಮಾದರ ಹಾಗೂ ಇತರರ ಜಮೀನುಗಳಿಗೆ ಬೋರ್ ವೆಲ್ ಮೂಲಕ ನೀರಾವರಿ ಸೌಲಭ್ಯ ಒದಗಿಸುವ ಕಾಮಗಾರಿಯನ್ನು ಪ್ರಸಕ್ತ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದಂತೆ ಟೆಂಡರಿಗಿಡಲಾದ ಮೊತ್ತ ರೂ. 8,00,130/-ಗಳ ಮೇಲೆ ಶೇ.13.00ರಷ್ಟು ಹೆಚ್ಚಿನ ದರದಲ್ಲಿ ಅಂದರೆ ರೂ.9,04,147/-ಗಳಿಗೆ (ರೂ. ಒಂಭತ್ತು ಲಕ್ಷ ನಾಲ್ಕು ಸಾವಿರದ ಒಂದು ನೂರ ನಲವತ್ತೇಳು ಮಾತ್ರ)ಗಳಿಗೆ ಶ್ರೀ ಎಸ್.ಬಿ.ಕರೇಕಲ್, ಒಂದನೇ ದರ್ಜೆ ಗುತ್ತಿಗೆದಾರರು ರವರಿಗೆ ಕೆಳಕಂಡ ಷರತ್ತುಗಳಿಗೆ ಒಳಪಡಿಸಿ ವಹಿಸಲು ಸರ್ಕಾರವು ಅನುಮೋದನೆ ನೀಡಿದೆ.

3. ಕಾಮಗಾರಿಯನ್ನು ನಿಗಧಿತ ಅವಧಿಯಲ್ಲಿ ಪೂರ್ಣಗೊಳಿಸತಕ್ಕದ್ದು.

4. ಸರ್ಕಾರದ ಅನುಮತಿ ಪಡೆಯದೆ ಕಾಮಗಾರಿಯಲ್ಲಿ ಯಾವುದೇ ಹೆಚ್ಚುವರಿ ಕೆಲಸ ನಿರ್ವಹಿಸಬಾರದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ: ಎಫ್‌ಡಿ 1 ಟಿಎಫ್‌ಪಿ 2008, ದಿನಾಂಕ:16.05.2008ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕಾಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ರುದ್ರಮೂರ್ತಿ,
ಪದನಿಮಿತ್ತ ಸರ್ಕಾರದ ಅಧೀನ ಕಾರ್ಯದರ್ಶಿ,
ಜಲಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)

ಪಿ.ಆರ್. 1230

ಜಲಸಂಪನ್ಮೂಲ ಸಚಿವಾಲಯ

ವಿಷಯ :- ಬಾಗಲಕೋಟೆ ಜಿಲ್ಲೆ ಜಮಖಂಡಿ ತಾಲ್ಲೂಕಿನ ತುಂಗಳ ಗ್ರಾಮದ ಹತ್ತಿರ ಏತ ನೀರಾವರಿ ನಿರ್ಮಾಣ (ಸರ್ವೆ ನಂ.366,350) ಕಾಮಗಾರಿ ಟೆಂಡರ್ ಅನುಮೋದಿಸುವ ಬಗ್ಗೆ.

ಓದಲಾಗಿದೆ :- ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ ಬಿಜಾಪುರರವರ ಪತ್ರದ ಕ್ರಮಾಂಕ: ಮುಇಂ/ಸನೀ(ಉ)ವಲಯ/ ಬಿಜೆಪಿ/ಎಇ-6/ 2011-12/1459, ದಿನಾಂಕ :15.03.2012

ಪ್ರಸ್ತಾವನೆ:

ಬಾಗಲಕೋಟೆ ಜಿಲ್ಲೆ ಜಮಖಂಡಿ ತಾಲ್ಲೂಕಿನ ತುಂಗಳ ಗ್ರಾಮದ ಹತ್ತಿರ ಏತ ನೀರಾವರಿ ನಿರ್ಮಾಣ (ಸರ್ವೆ ನಂ.366,350) ಕಾಮಗಾರಿಯು 2011-12ನೇ ಸಾಲಿನ ವಿಶೇಷ ಘಟಕ ಯೋಜನೆಯಡಿ ಅನುಮೋದನೆ ಗೊಂಡಿರುತ್ತದೆ. ಈ ಕಾಮಗಾರಿಯ ಅಂದಾಜು ಪಟ್ಟಿಗೆ ಅಧೀಕ್ಷಕ ಇಂಜಿನಿಯರ್ ಸಣ್ಣ ನೀರಾವರಿ ವೃತ್ತ, ಬೆಳಗಾವಿರವರು ಆಡಳಿತಾತ್ಮಕ ಅನುಮೋದನೆ ಹಾಗೂ ತಾಂತ್ರಿಕ ಮಂಜೂರಾತಿ ನೀಡಿರುತ್ತಾರೆ.

ಈ ಕಾಮಗಾರಿಯನ್ನು ಕೈಗೊಳ್ಳಲು ಬಿಜಾಪುರ ಸಣ್ಣ ನೀರಾವರಿ ವಿಭಾಗದಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮದಡಿ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಕರೆಯಲಾದ ಟೆಂಡರ್‌ನ ಪ್ರಕಟಣೆಯನ್ನು ಈ ಕೆಳಕಂಡ ಮಾಧ್ಯಮಗಳಲ್ಲಿ ಪ್ರಕಟಿಸಲಾಗಿದೆ.

ಜಿಲ್ಲಾ ಟೆಂಡರ್ ಬುಲೆಟಿನ್	ದಿನಾಂಕ: 09.12.2011
ಪ್ರಜಾವಾಣಿ ದಿನ ಪತ್ರಿಕೆ	ದಿನಾಂಕ: 13.12.2011

ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರನ್ನು ತೆರೆದು ಪರಿಶೀಲಿಸಲಾಗಿ ಈ ಟೆಂಡರ್ ಪ್ರಕಟಣೆಗೆ ಸ್ಪಂದಿಸಿ ನಾಲ್ಕು ಜನ ಗುತ್ತಿಗೆದಾರರು ಭಾಗವಹಿಸಿದ್ದು ಈ ಪೈಕಿ ಒಬ್ಬರು ಗುತ್ತಿಗೆದಾರರು ಮಾತ್ರ ಅರ್ಹತೆ ಹೊಂದಿರುತ್ತಾರೆ. ವಿವರಗಳು ಕೆಳಕಂಡಂತಿವೆ.

ಮಂಜೂರಾದ ಅಂದಾಜಿನ ದರಗಳಂತೆ ಹಾಗೂ ಪ್ರಸಕ್ತ ಸಾಲಿನ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದಂತೆ ಟೆಂಡರಿಗೆ ಇಡಲಾದ ಮೊತ್ತ		ರೂ.29,93,103/-
ಗುತ್ತಿಗೆದಾರರ ಹೆಸರು ಮತ್ತು ದರ್ಜೆ **ಶ್ರೀ/ಮೆಸರ್ಸ್**	**ಟೆಂಡರ್‌ನಲ್ಲಿ ಗುತ್ತಿಗೆದಾರರು ನಮೂದಿಸಿರುವ ದರಗಳಂತೆ ಟೆಂಡರಿನ ಮೊತ್ತ**	**ಮಂಜೂರಾದ ಅಂದಾಜಿನ ದರಗಳ ಹಾಗೂ ಪರಿಷ್ಕರಿಸಿದ ದರಗಳ ಮೇಲಿನ ಶೇಕಡಾವಾರು ಹೆಚ್ಚಳ/ಕಡಿಮೆ**
ಡಿ.ಎಂ.ತೋಟದ, ಒಂದನೇ ದರ್ಜೆ ಗುತ್ತಿಗೆದಾರರು	33,90,918/-	13.29 ಹೆಚ್ಚು

ಮೇಲ್ಕಂಡಂತೆ ಶ್ರೀ ಡಿ.ಎಂ.ತೋಟದ, ಒಂದನೇ ದರ್ಜೆ ಗುತ್ತಿಗೆದಾರರು ಇವರು ಟೆಂಡರ್‌ನಲ್ಲಿ ಅರ್ಹತೆ ಹೊಂದಿರುವ ಗುತ್ತಿಗೆದಾರರಾಗಿದ್ದು ಇವರು ನಮೂದಿಸಿದ ದರಗಳನ್ನು ಪ್ರಸಕ್ತ ಸಾಲಿನ ದರಗಳಿಗೆ ಪರಿಷ್ಕರಿಸಿದಂತೆ ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇ. 13.29ರಷ್ಟು ಹೆಚ್ಚಾಗಿದ್ದು, ಸದರಿಯವರ ಟೆಂಡರ್‌ನ್ನು ಸಂಧಾನದ ಮೂಲಕ ಅಂಗೀಕರಿಸಲು ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರ ಇವರು ಮೇಲೆ ಓದಲಾದ ಪತ್ರದಲ್ಲಿ ಶಿಫಾರಸ್ಸು ಮಾಡಿರುತ್ತಾರೆ.

ಈ ಟೆಂಡರನ್ನು ಸರ್ಕಾರದಲ್ಲಿ ಪರಿಶೀಲಿಸಿ ಪ್ರಸಕ್ತ ಸಾಲಿನ ದರಗಳಿಗೆ ಪರಿಷ್ಕರಿಸಿದಂತೆ ಟೆಂಡರಿಗಿಟ್ಟ ಪರಿಷ್ಕೃತ ಮೊತ್ತ ರೂ. 29,93,103/-ಗಳ ಮೇಲೆ ಶೇ.13.00ರಷ್ಟು ಹೆಚ್ಚಿನ ದರದಲ್ಲಿ ಅಂದರೆ ರೂ.33,82,206/-ಗಳಿಗೆ ಅನುಮೋದಿಸಲು ಪರಿಗಣಿಸಿದೆ.

ಮೇಲಿನ ಅಂಶಗಳ ಹಿನ್ನೆಲೆಯಲ್ಲಿ ಸರ್ಕಾರವು ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಸನೀಇ 21 ಏನೀಯೋ(ತಾಂತ್ರಿಕ) 2012, ಬೆಂಗಳೂರು, ದಿನಾಂಕ: 13ನೇ ಏಪ್ರಿಲ್ 2012

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಬಾಗಲಕೋಟೆ ಜಿಲ್ಲೆ ಜಮಖಂಡಿ ತಾಲ್ಲೂಕಿನ ತುಂಗಳ ಗ್ರಾಮದ ಹತ್ತಿರ ಏತ ನೀರಾವರಿ ನಿರ್ಮಾಣ (ಸರ್ವೆ ನಂ.366,350) ಕಾಮಗಾರಿಯನ್ನು ಪ್ರಸಕ್ತ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದಂತೆ ಟೆಂಡರಿಗಿಡಲಾದ ಮೊತ್ತ ರೂ. 29,93,103/-ಗಳ ಮೇಲೆ ಶೇ.13.00ರಷ್ಟು ಹೆಚ್ಚಿನ ದರದಲ್ಲಿ ಅಂದರೆ ರೂ.33,82,206/-ಗಳಿಗೆ (ರೂ. ಮೂವತ್ತಮೂರು ಲಕ್ಷ ಎಂಬತ್ತೆರಡು ಸಾವಿರದ ಇನ್ನೂರ ಆರು ಮಾತ್ರ)ಗಳಿಗೆ ಶ್ರೀ ಡಿ.ಎಂ.ತೋಟದ, ಒಂದನೇ ದರ್ಜೆ ಗುತ್ತಿಗೆದಾರರು ರವರಿಗೆ ಕೆಳಕಂಡ ಷರತ್ತುಗಳಿಗೆ ಒಳಪಡಿಸಿ ವಹಿಸಲು ಸರ್ಕಾರವು ಅನುಮೋದನೆ ನೀಡಿದೆ.

1. ಕಾಮಗಾರಿಯನ್ನು ನಿಗಧಿತ ಅವಧಿಯಲ್ಲಿ ಪೂರ್ಣಗೊಳಿಸತಕ್ಕದ್ದು.
2. ಸರ್ಕಾರದ ಅನುಮತಿ ಪಡೆಯದೆ ಕಾಮಗಾರಿಯಲ್ಲಿ ಯಾವುದೇ ಹೆಚ್ಚುವರಿ ಕೆಲಸ ನಿರ್ವಹಿಸಬಾರದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ: ಎಫ್‌ಡಿ 1 ಟಿಎಫ್‌ಪಿ 2008, ದಿನಾಂಕ:16.05.2008ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕಾಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ರುದ್ರಮೂರ್ತಿ,
ಪದನಿಮಿತ್ತ ಸರ್ಕಾರದ ಅಧೀನ ಕಾರ್ಯದರ್ಶಿ,
ಜಲಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)

ಪಿ.ಆರ್. 1231

ಜಲಸಂಪನ್ಮೂಲ ಸಚಿವಾಲಯ

ವಿಷಯ :- ಬಾಗಲಕೋಟೆ ಜಿಲ್ಲೆ ಜಮಖಂಡಿ ತಾಲ್ಲೂಕಿನ ಕುಲಹಳ್ಳಿ ಗ್ರಾಮದ ಮಹಾದೇವ ಪುಂಡಲೀಕ ಮಾದರ ಇವರ ಜಮೀನುಗಳಿಗೆ ಏತ ನೀರಾವರಿ ಸೌಲಭ್ಯ ಒದಗಿಸುವ ಕಾಮಗಾರಿ ಟೆಂಡರನ್ನು ಅನುಮೋದಿಸುವ ಬಗ್ಗೆ.

ಓದಲಾಗಿದೆ :- ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ ಬಿಜಾಪುರರವರ ಪತ್ರದ ಕ್ರಮಾಂಕ: ಮುಇಂ/ ಸನೀ(ಉ)ವಲಯ/ ಬಿಜೆಪಿ/ ಎಇ-6/ 2011-12/ 1804, ದಿನಾಂಕ:24.03.2012.

ಪ್ರಸ್ತಾವನೆ:

ಬಾಗಲಕೋಟೆ ಜಿಲ್ಲೆ ಜಮಖಂಡಿ ತಾಲ್ಲೂಕಿನ ಕುಲಹಳ್ಳಿ ಗ್ರಾಮದ ಮಹಾದೇವ ಪುಂಡಲೀಕ ಮಾದರ ಇವರ ಜಮೀನುಗಳಿಗೆ ಏತ ನೀರಾವರಿ ಸೌಲಭ್ಯ ಒದಗಿಸುವ ಕಾಮಗಾರಿಯು 2011-12ನೇ ಸಾಲಿನ ವಿಶೇಷ ಘಟಕ ಯೋಜನೆಯಡಿ ಅನುಮೋದನೆ ಗೊಂಡಿರುತ್ತದೆ. ಈ ಕಾಮಗಾರಿಯ ಅಂದಾಜು ಪಟ್ಟಿಗೆ ಅಧೀಕ್ಷಕ ಇಂಜಿನಿಯರ್, ಸಣ್ಣ ನೀರಾವರಿ ವೃತ್ತ, ಬೆಳಗಾವಿರವರು ಆಡಳಿತಾತ್ಮಕ ಅನುಮೋಧನೆ ಹಾಗೂ ತಾಂತ್ರಿಕ ಮಂಜೂರಾತಿ ನೀಡಿರುತ್ತಾರೆ.

ಈ ಕಾಮಗಾರಿಯನ್ನು ಕೈಗೊಳ್ಳಲು ಬಿಜಾಪುರ ಸಣ್ಣ ನೀರಾವರಿ ವಿಭಾಗದಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮದಡಿ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಕರೆಯಲಾದ ಟೆಂಡರ್‌ನ ಪ್ರಕಟಣೆಯನ್ನು ಈ ಕೆಳಕಂಡ ಮಾಧ್ಯಮಗಳಲ್ಲಿ ಪ್ರಕಟಿಸಲಾಗಿದೆ.

ಜಿಲ್ಲಾ ಟೆಂಡರ್ ಬುಲೆಟಿನ್	10.02.2012
ಸಂಯುಕ್ತ ಕರ್ನಾಟಕ ದಿನ ಪತ್ರಿಕೆ	11.02.2012

ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರನ್ನು ತೆರೆದು ಪರಿಶೀಲಿಸಲಾಗಿ ಈ ಟೆಂಡರ್ ಪ್ರಕಟಣೆಗೆ ಸ್ಪಂದಿಸಿ ಒಬ್ಬರು ಗುತ್ತಿಗೆದಾರರು ಮಾತ್ರ ಭಾಗವಹಿಸಿದ್ದು ಇವರು ಅರ್ಹತೆ ಹೊಂದಿರುತ್ತಾರೆ. ವಿವರಗಳು ಕೆಳಕಂಡಂತಿವೆ.

ಮಂಜೂರಾದ ಅಂದಾಜಿನ ದರಗಳಂತೆ ಹಾಗೂ ಪ್ರಸಕ್ತ ಸಾಲಿನ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದಂತೆ ಟೆಂಡರಿಗೆ ಇಡಲಾದ ಮೊತ್ತ		ರೂ.40,23,115/-
ಗುತ್ತಿಗೆದಾರರ ಹೆಸರು ಮತ್ತು ದರ್ಜೆ ಶ್ರೀ/ಮೆಸರ್ಸ್	ಟೆಂಡರ್‌ನಲ್ಲಿ ಗುತ್ತಿಗೆದಾರರು ನಮೂದಿಸಿರುವ ದರಗಳಂತೆ ಟೆಂಡರಿನ ಮೊತ್ತ	ಮಂಜೂರಾದ ಅಂದಾಜಿನ ದರಗಳ ಹಾಗೂ ಪರಿಷ್ಕರಿಸಿದ ದರಗಳ ಮೇಲಿನ ಶೇಕಡಾವಾರು ಹೆಚ್ಚಳ/ಕಡಿಮೆ
ಹೆಚ್. ಆರ್. ಚಿಂಚಲಿ, ಒಂದನೇ ದರ್ಜೆ ಗುತ್ತಿಗೆದಾರರು	55,51,585/-	37.99 ಹೆಚ್ಚು

ಮೇಲ್ಕಂಡಂತೆ ಶ್ರೀ ಹೆಚ್. ಆರ್. ಚಿಂಚಲಿ, ಒಂದನೇ ದರ್ಜೆ ಗುತ್ತಿಗೆದಾರರು ಇವರು ಟೆಂಡರ್‌ನಲ್ಲಿ ಅರ್ಹತೆ ಹೊಂದಿರುವ ಗುತ್ತಿಗೆದಾರರಾಗಿದ್ದು ಇವರು ನಮೂದಿಸಿದ ದರಗಳನ್ನು ಪ್ರಸಕ್ತ ಸಾಲಿನ ದರಗಳಿಗೆ ಪರಿಷ್ಕರಿಸಿದಂತೆ ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇ. 37.99ರಷ್ಟು ಹೆಚ್ಚಾಗಿದ್ದು, ಸದರಿಯವರ ಟೆಂಡರ್‌ನ್ನು ಸಂಧಾನದ ಮೂಲಕ ಅಂಗೀಕರಿಸಲು ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರ ಇವರು ಮೇಲೆ ಓದಲಾದ ಪತ್ರದಲ್ಲಿ ಶಿಫಾರಸ್ಸು ಮಾಡಿರುತ್ತಾರೆ.

ಈ ಟೆಂಡರನ್ನು ಸರ್ಕಾರದಲ್ಲಿ ಪರಿಶೀಲಿಸಿ ಪ್ರಸಕ್ತ ಸಾಲಿನ ದರಗಳಿಗೆ ಪರಿಷ್ಕರಿಸಿದಂತೆ ಟೆಂಡರಿಗಿಟ್ಟ ಪರಿಷ್ಕೃತ ಮೊತ್ತ ರೂ. 40,23,115/-ಗಳ ಮೇಲೆ ಶೇ.13.00ರಷ್ಟು ಹೆಚ್ಚಿನ ದರದಲ್ಲಿ ಅಂದರೆ ರೂ.45,46,120/-ಗಳಿಗೆ ಅನುಮೋದಿಸಲು ಪರಿಗಣಿಸಿದೆ.

ಮೇಲಿನ ಅಂಶಗಳ ಹಿನ್ನೆಲೆಯಲ್ಲಿ ಸರ್ಕಾರವು ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಸನೀಇ 27 ಏನೀಯೋ(ತಾಂತ್ರಿಕ) 2012 ಬೆಂಗಳೂರು, ದಿನಾಂಕ: 13ನೇ ಏಪ್ರಿಲ್ 2012

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಬಾಗಲಕೋಟೆ ಜಿಲ್ಲೆ ಜಮಖಂಡಿ ತಾಲ್ಲೂಕಿನ ಕುಲಹಳ್ಳಿ ಗ್ರಾಮದ ಮಹಾದೇವ ಪುಂಡಲೀಕ ಮಾದರ ಇವರ ಜಮೀನುಗಳಿಗೆ ಏತ ನೀರಾವರಿ ಸೌಲಭ್ಯ ಒದಗಿಸುವ ಕಾಮಗಾರಿಯನ್ನು ಪ್ರಸಕ್ತ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದಂತೆ ಟೆಂಡರಿಗಿಡಲಾದ ಮೊತ್ತ ರೂ.40,23,115/-ಗಳ ಮೇಲೆ ಶೇ.13.00ರಷ್ಟು ಹೆಚ್ಚಿನ ದರದಲ್ಲಿ ಅಂದರೆ ರೂ.45,46,120/-ಗಳಿಗೆ (ರೂ. ನಲವತ್ತೈದು ಲಕ್ಷ ನಲವತ್ತಾರು ಸಾವಿರದ ಒಂದು ನೂರ ಇಪ್ಪತ್ತು ಮಾತ್ರ)ಗಳಿಗೆ ಶ್ರೀ ಹೆಚ್. ಆರ್. ಚಿಂಚಲಿ. ಒಂದನೇ ದರ್ಜೆ ಗುತ್ತಿಗೆದಾರರು ರವರಿಗೆ ಕೆಳಕಂಡ ಷರತ್ತುಗಳಿಗೆ ಒಳಪಡಿಸಿ ವಹಿಸಲು ಸರ್ಕಾರವು ಅನುಮೋದನೆ ನೀಡಿದೆ.

1. ಕಾಮಗಾರಿಯನ್ನು ನಿಗಧಿತ ಅವಧಿಯಲ್ಲಿ ಪೂರ್ಣಗೊಳಿಸತಕ್ಕದ್ದು.
2. ಸರ್ಕಾರದ ಅನುಮತಿ ಪಡೆಯದೆ ಕಾಮಗಾರಿಯಲ್ಲಿ ಯಾವುದೇ ಹೆಚ್ಚುವರಿ ಕೆಲಸ ನಿರ್ವಹಿಸಬಾರದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ: ಎಫ್‌ಡಿ 1 ಟಿಎಫ್‌ಪಿ 2008, ದಿನಾಂಕ:16.05.2008ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕಾಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ರುದ್ರಮೂರ್ತಿ,
ಪದನಿಮಿತ್ತ ಸರ್ಕಾರದ ಅಧೀನ ಕಾರ್ಯದರ್ಶಿ,
ಜಲಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)

ಪಿ.ಆರ್. 1232

ಜಲಸಂಪನ್ಮೂಲ ಸಚಿವಾಲಯ

ವಿಷಯ :- ಬಾಗಲಕೋಟೆ ಜಿಲ್ಲೆ ಮುಧೋಳ ತಾಲ್ಲೂಕಿನ ಹೆಬ್ಬಾಳ ಗ್ರಾಮದ ಹತ್ತಿರ ಸರ್ವೆ.ನಂ. 191 ಹಾಗೂ ಇತರರ ಜಮೀನುಗಳಿಗೆ ಏತ ನೀರಾವರಿ ಸೌಲಭ್ಯ ಒದಗಿಸುವ ಕಾಮಗಾರಿ ಟೆಂಡರ್ ಅನುಮೋದಿಸುವ ಬಗ್ಗೆ.

ಓದಲಾಗಿದೆ :- ಮುಖ್ಯ ಇಂಜನಿಯರ್, ಸಣ್ಣ ನೀರಾವರಿ ಉತ್ತರ ವಲಯ ಬಿಜಾಪುರರವರ ಪತ್ರದ ಕ್ರಮಾಂಕ: ಮುಇಂ/ ಸನೀ(ಉ)ವಲಯ/ ಬಿಜೆಪಿ/ ಎಇ-6/ 2011-12/ 1802, ದಿನಾಂಕ:24.03.2012

ಪ್ರಸ್ತಾವನೆ:

ಬಾಗಲಕೋಟೆ ಜಿಲ್ಲೆ ಮುಧೋಳ ತಾಲ್ಲೂಕಿನ ಹೆಬ್ಬಾಳ ಗ್ರಾಮದ ಹತ್ತಿರ ಸರ್ವೆ.ನಂ. 191 ಹಾಗೂ ಇತರರ ಜಮೀನುಗಳಿಗೆ ಏತ ನೀರಾವರಿ ಸೌಲಭ್ಯ ಒದಗಿಸುವ ಕಾಮಗಾರಿಯು 2011-12ನೇ ಸಾಲಿನ ವಿಶೇಷ ಘಟಕ ಯೋಜನೆಯಡಿ ಅನುಮೋದನೆ ಗೊಂಡಿರುತ್ತದೆ. ಈ ಕಾಮಗಾರಿಯ ಅಂದಾಜು ಪಟ್ಟಿಗೆ ಅಧೀಕ್ಷಕ ಇಂಜನಿಯರ್, ಸಣ್ಣ ನೀರಾವರಿ ವೃತ್ತ, ಬೆಳಗಾವಿರವರು ಆಡಳಿತಾತ್ಮಕ ಅನುಮೋದನೆ ಹಾಗೂ ತಾಂತ್ರಿಕ ಮಂಜೂರಾತಿ ನೀಡಿರುತ್ತಾರೆ.

ಈ ಕಾಮಗಾರಿಯನ್ನು ಕೈಗೊಳ್ಳಲು ಬಿಜಾಪುರ ಸಣ್ಣ ನೀರಾವರಿ ವಿಭಾಗದಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮದಡಿ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಕರೆಯಲಾದ ಟೆಂಡರ್‌ನ ಪ್ರಕಟಣೆಯನ್ನು ಈ ಕೆಳಕಂಡ ಮಾಧ್ಯಮಗಳಲ್ಲಿ ಪ್ರಕಟಿಸಲಾಗಿದೆ.

ಜಿಲ್ಲಾ ಟೆಂಡರ್ ಬುಲೆಟಿನ್	21.01.2012
ಸಂಯುಕ್ತ ಕರ್ನಾಟಕ ದಿನ ಪತ್ರಿಕೆ	19.01.2012

ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರನ್ನು ತೆರೆದು ಪರಿಶೀಲಿಸಲಾಗಿ ಈ ಟೆಂಡರ್ ಪ್ರಕಟಣೆಗೆ ಸ್ಪಂದಿಸಿ ಒಬ್ಬರು ಗುತ್ತಿಗೆದಾರರು ಮಾತ್ರ ಭಾಗವಹಿಸಿದ್ದು ಇವರು ಅರ್ಹತೆ ಹೊಂದಿರುತ್ತಾರೆ. ವಿವರಗಳು ಕೆಳಕಂಡಂತಿವೆ.

ಮಂಜೂರಾದ ಅಂದಾಜಿನ ದರಗಳಂತೆ ಹಾಗೂ ಪ್ರಸಕ್ತ ಸಾಲಿನ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದಂತೆ ಟೆಂಡರಿಗೆ ಇಡಲಾದ ಮೊತ್ತ	ರೂ. 30,92,264/-

ಗುತ್ತಿಗೆದಾರರ ಹೆಸರು ಮತ್ತು ದರ್ಜೆ ಶ್ರೀ/ಮೆಸರ್ಸ್	ಟೆಂಡರ್‌ನಲ್ಲಿ ಗುತ್ತಿಗೆದಾರರು ನಮೂದಿಸಿರುವ ದರಗಳಂತೆ ಟೆಂಡರಿನ ಮೊತ್ತ	ಮಂಜೂರಾದ ಅಂದಾಜಿನ ದರಗಳ ಹಾಗೂ ಪರಿಷ್ಕರಿಸಿದ ದರಗಳ ಮೇಲಿನ ಶೇಕಡಾವಾರು ಹೆಚ್ಚಳ/ಕಡಿಮೆ
ಎಸ್.ಬಿ.ಕರೇಕಲ್, ಒಂದನೇ ದರ್ಜೆ ಗುತ್ತಿಗೆದಾರರು	38,59,535/-	24.81 ಹೆಚ್ಚು

ಮೇಲ್ಕಂಡಂತೆ ಶ್ರೀ ಎಸ್.ಬಿ.ಕರೇಕಲ್, ಒಂದನೇ ದರ್ಜೆ ಗುತ್ತಿಗೆದಾರರು ಇವರು ಟೆಂಡರ್‌ನಲ್ಲಿ ಅರ್ಹತೆ ಹೊಂದಿರುವ ಗುತ್ತಿಗೆದಾರರಾಗಿದ್ದು ಇವರು ನಮೂದಿಸಿದ ದರಗಳನ್ನು ಪ್ರಸಕ್ತ ಸಾಲಿನ ದರಗಳಿಗೆ ಪರಿಷ್ಕರಿಸಿದಂತೆ ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇ. 24.81ರಷ್ಟು ಹೆಚ್ಚಾಗಿದ್ದು, ಸದರಿಯವರ ಟೆಂಡರ್‌ನ್ನು ಸಂಧಾನದ ಮೂಲಕ ಅಂಗೀಕರಿಸಲು ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರ ಇವರು ಮೇಲೆ ಓದಲಾದ ಪತ್ರದಲ್ಲಿ ಶಿಪಾರಸ್ಸು ಮಾಡಿರುತ್ತಾರೆ.

ಈ ಟೆಂಡರನ್ನು ಸರ್ಕಾರದಲ್ಲಿ ಪರಿಶೀಲಿಸಿ ಪ್ರಸಕ್ತ ಸಾಲಿನ ದರಗಳಿಗೆ ಪರಿಷ್ಕರಿಸಿದಂತೆ ಟೆಂಡರಿಗಿಟ್ಟ ಪರಿಷ್ಕೃತ ಮೊತ್ತ ರೂ. 30,92,264/-ಗಳ ಮೇಲೆ ಶೇ.13.00ರಷ್ಟು ಹೆಚ್ಚಿನ ದರದಲ್ಲಿ ಅಂದರೆ ರೂ.34,94,258/-ಗಳಿಗೆ ಅನುಮೋದಿಸಲು ಪರಿಗಣಿಸಿದೆ.

ಮೇಲಿನ ಅಂಶಗಳ ಹಿನ್ನಲೆಯಲ್ಲಿ ಸರ್ಕಾರವು ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಸನೀಇ 28 ಏನೀಯೋ(ತಾಂತ್ರಿಕ) 2012 ಬೆಂಗಳೂರು, ದಿನಾಂಕ: 13ನೇ ಏಪ್ರಿಲ್ 2012

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ ಬಾಗಲಕೋಟೆ ಜಿಲ್ಲೆ ಮುಧೋಳ ತಾಲ್ಲೂಕಿನ ಹೆಬ್ಬಾಳ ಗ್ರಾಮದ ಇತರರ ಸರ್ವೆ.ನಂ. 191 ಹಾಗೂ ಇತರರ ಜಮೀನುಗಳಿಗೆ ಏತ ನೀರಾವರಿ ಸೌಲಭ್ಯ ಒದಗಿಸುವ ಕಾಮಗಾರಿಯನ್ನು ಪ್ರಸಕ್ತ ಸಾಲಿನ ದರಪಟ್ಟಿಯ ದರಗಳನ್ನು ಅಳವಡಿಸಿ ಪರಿಷ್ಕರಿಸಿದಂತೆ ಟೆಂಡರಿಗಿಡಲಾದ ಮೊತ್ತ ರೂ. 30,92,264/-ಗಳ ಮೇಲೆ ಶೇ.13.00ರಷ್ಟು ಹೆಚ್ಚಿನ ದರದಲ್ಲಿ ಅಂದರೆ ರೂ.34,94,258/-ಗಳಿಗೆ (ರೂ. ಮೂವತ್ತನಾಲ್ಕು ಲಕ್ಷ ತೊಂಭತ್ತನಾಲ್ಕು ಸಾವಿರದ ಇನ್ನೂರ ಐವತ್ತೆಂಟು ಮಾತ್ರ)ಗಳಿಗೆ ಶ್ರೀ ಎಸ್.ಬಿ.ಕರೇಕಲ್, ಒಂದನೇ ದರ್ಜೆ ಗುತ್ತಿಗೆದಾರರು ರವರಿಗೆ ಕೆಳಕಂಡ ಷರತ್ತುಗಳಿಗೆ ಒಳಪಡಿಸಿ ವಹಿಸಲು ಸರ್ಕಾರವು ಅನುಮೋದನೆ ನೀಡಿದೆ.

1. ಕಾಮಗಾರಿಯನ್ನು ನಿಗಧಿತ ಅವಧಿಯಲ್ಲಿ ಪೂರ್ಣಗೊಳಿಸತಕ್ಕದ್ದು.
2. ಸರ್ಕಾರದ ಅನುಮತಿ ಪಡೆಯದೆ ಕಾಮಗಾರಿಯಲ್ಲಿ ಯಾವುದೇ ಹೆಚ್ಚುವರಿ ಕೆಲಸ ನಿರ್ವಹಿಸಬಾರದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ: ಎಫ್‌ಡಿ 1 ಟಿಎಫ್‌ಪಿ 2008, ದಿನಾಂಕ:16.05.2008ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕಾಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ರುದ್ರಮೂರ್ತಿ,
ಪದನಿಮಿತ್ತ ಸರ್ಕಾರದ ಅಧೀನ ಕಾರ್ಯದರ್ಶಿ,
ಜಲಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)

ಪಿ.ಆರ್. 1233

ಜಲಸಂಪನ್ಮೂಲ ಸಚಿವಾಲಯ

ವಿಷಯ :- ಬೆಳಗಾವಿ ಜಿಲ್ಲೆ ಚಿಕ್ಕೋಡಿ ತಾಲ್ಲೂಕಿನ ಉಮರಾಣಿ ಗ್ರಾಮದ ಶ್ರೀ ಬಸಪ್ಪ ಭರಮಪ್ಪ ಸವದಿ ಮತ್ತು ಮಾಂಗ ವಗೈರೆ 10 ಜನರಿಗೆ ಗಂಗಾ ಕಲ್ಯಾಣ ನೀರಾವರಿ ಯೋಜನೆ (ರಿ. ಸ.ನಂ. 130/2-ಸಿ) ನಿರ್ಮಾಣ ಕಾಮಗಾರಿ ಟೆಂಡರ್ ಅನುಮೋದಿಸುವ ಬಗ್ಗೆ.

ಓದಲಾಗಿದೆ :- ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ ಬಿಜಾಪುರರವರ ಪತ್ರದ ಕ್ರಮಾಂಕ: ಮುಇಂ/ ಸನೀ(ಉ)ವಲಯ/ ಬಿಜೆಪಿ/ಎಇ-1/ 2011 12/1655, ದಿನಾಂಕ :21.03.2012

ಪ್ರಸ್ತಾವನೆ:

ಬೆಳಗಾವಿ ಜಿಲ್ಲೆ ಚಿಕ್ಕೋಡಿ ತಾಲ್ಲೂಕಿನ ಉಮರಾಣಿ ಗ್ರಾಮದ ಶ್ರೀ ಬಸಪ್ಪ ಭರಮಪ್ಪ ಸವದಿ ಮತ್ತು ಮಾಂಗ ವಗೈರೆ 10 ಜನರಿಗೆ ಗಂಗಾ ಕಲ್ಯಾಣ ನೀರಾವರಿ ಯೋಜನೆ (ರಿ. ಸ.ನಂ. 130/2-ಸಿ) ನಿರ್ಮಾಣ ಕಾಮಗಾರಿಯು 2011-12ನೇ ಸಾಲಿನ ಗಿರಿಜನ ಉಪ ಯೋಜನೆಯಡಿ

ಅನುಮೋದನೆ ಗೊಂಡಿರುತ್ತದೆ. ಈ ಕಾಮಗಾರಿಯ ಅಂದಾಜು ಪಟ್ಟಿಗೆ ಅಧೀಕ್ಷಕ ಇಂಜನಿಯರ್ ಸಣ್ಣ ನೀರಾವರಿ ವೃತ್ತ, ಬೆಳಗಾವಿರವರು ಆಡಳಿತಾತ್ಮಕ ಅನುಮೋಧನೆ ಹಾಗೂ ತಾಂತ್ರಿಕ ಮಂಜೂರಾತಿ ನೀಡಿರುತ್ತಾರೆ.

ಈ ಕಾಮಗಾರಿಯನ್ನು ಕೈಗೊಳ್ಳಲು ಬೆಳಗಾವಿ ಸಣ್ಣ ನೀರಾವರಿ ವಿಭಾಗದಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮದಡಿ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಕರೆಯಲಾದ ಅಲ್ಪಾವಧಿ ಟೆಂಡರ್‌ನ ಪ್ರಕಟಣೆಯನ್ನು ಈ ಕೆಳಕಂಡ ಮಾಧ್ಯಮಗಳಲ್ಲಿ ಪ್ರಕಟಿಸಲಾಗಿದೆ.

ಜಿಲ್ಲಾ ಟೆಂಡರ್ ಬುಲೆಟಿನ್	ದಿನಾಂಕ: 13.02.2012
ಪ್ರಜಾವಾಣಿ ದಿನ ಪತ್ರಿಕೆ	ದಿನಾಂಕ: 14.02.2012

ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರನ್ನು ತೆರೆದು ಪರಿಶೀಲಿಸಲಾಗಿ ಈ ಟೆಂಡರ್ ಪ್ರಕಟಣೆಗೆ ಸ್ಪಂದಿಸಿ ಒಬ್ಬರು ಗುತ್ತಿಗೆದಾರರು ಮಾತ್ರ ಭಾಗವಹಿಸಿದ್ದು ಇವರು ಅರ್ಹತೆ ಹೊಂದಿರುತ್ತಾರೆ. ವಿವರಗಳು ಕೆಳಕಂಡಂತಿವೆ.

ಮಂಜೂರಾದ ಅಂದಾಜಿನ ದರಗಳಂತೆ ಹಾಗೂ ಪ್ರಸಕ್ತ ಸಾಲಿನ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದಂತೆ ಟೆಂಡರಿಗೆ ಇಡಲಾದ ಮೊತ್ತ		ರೂ.13,24,435/-
ಗುತ್ತಿಗೆದಾರರ ಹೆಸರು ಮತ್ತು ದರ್ಜೆ ಶ್ರೀ/ಮೆಸರ್ಸ್	ಟೆಂಡರ್‌ನಲ್ಲಿ ಗುತ್ತಿಗೆದಾರರು ನಮೂದಿಸಿರುವ ದರಗಳಂತೆ ಟೆಂಡರಿನ ಮೊತ್ತ	ಮಂಜೂರಾದ ಅಂದಾಜಿನ ದರಗಳ ಹಾಗೂ ಪರಿಷ್ಕರಿಸಿದ ದರಗಳ ಮೇಲಿನ ಶೇಕಡಾವಾರು ಹೆಚ್ಚಳ/ಕಡಿಮೆ
ಎಂ.ಎಂ.ಮುಂಡೆವಾಡಗಿ, ಒಂದನೇ ದರ್ಜೆ ಗುತ್ತಿಗೆದಾರರು	15,09,853/-	14.00 ಹೆಚ್ಚು

ಮೇಲ್ಕಂಡಂತೆ ಶ್ರೀ ಎಂ.ಎಂ.ಮುಂಡೆವಾಡಗಿ, ಒಂದನೇ ದರ್ಜೆ ಗುತ್ತಿಗೆದಾರರು ಇವರು ಟೆಂಡರ್‌ನಲ್ಲಿ ಅರ್ಹತೆ ಹೊಂದಿರುವ ಗುತ್ತಿಗೆದಾರರಾಗಿದ್ದು ಇವರು ನಮೂದಿಸಿದ ದರಗಳನ್ನು ಪ್ರಸಕ್ತ ಸಾಲಿನ ದರಗಳಿಗೆ ಪರಿಷ್ಕರಿಸಿದಂತೆ ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇ. 14.00ರಷ್ಟು ಹೆಚ್ಚಾಗಿದ್ದು, ಸದರಿಯವರ ಟೆಂಡರ್‌ನ್ನು ಸಂಧಾನದ ಮೂಲಕ ಅಂಗೀಕರಿಸಲು ಮುಖ್ಯ ಇಂಜನಿಯರ್, ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರ ಇವರು ಮೇಲೆ ಓದಲಾದ ಪತ್ರದಲ್ಲಿ ಶಿಫಾರಸ್ಸು ಮಾಡಿರುತ್ತಾರೆ.

ಈ ಟೆಂಡರನ್ನು ಸರ್ಕಾರದಲ್ಲಿ ಪರಿಶೀಲಿಸಿ ಪ್ರಸಕ್ತ ಸಾಲಿನ ದರಗಳಿಗೆ ಪರಿಷ್ಕರಿಸಿದಂತೆ ಟೆಂಡರಿಗಿಟ್ಟ ಪರಿಷ್ಕೃತ ಮೊತ್ತ ರೂ. 13,24,435/- ಗಳ ಮೇಲೆ ಶೇ.13.00ರಷ್ಟು ಹೆಚ್ಚಿನ ದರದಲ್ಲಿ ಅಂದರೆ ರೂ.14,96,612/-ಗಳಿಗೆ ಅನುಮೋದಿಸಲು ಪರಿಗಣಿಸಿದೆ.

ಮೇಲಿನ ಅಂಶಗಳ ಹಿನ್ನೆಲೆಯಲ್ಲಿ ಸರ್ಕಾರವು ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಸನೀಇ 31 ಏನೀಯೋ(ತಾಂತ್ರಿಕ) 2012 ಬೆಂಗಳೂರು, ದಿನಾಂಕ: 13ನೇ ಏಪ್ರಿಲ್ 2012

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ ಬೆಳಗಾವಿ ಜಿಲ್ಲೆ ಚಿಕ್ಕೋಡಿ ತಾಲ್ಲೂಕಿನ ಉಮರಾಣೆ ಗ್ರಾಮದ ಶ್ರೀ ಬಸಪ್ಪ ಭರಮಪ್ಪ ಸವದಿ ಮತ್ತು ಮಾಂಗ ವಗೈರೆ 10 ಜನರಿಗೆ ಗಂಗಾ ಕಲ್ಯಾಣ ನೀರಾವರಿ ಯೋಜನೆ (ರಿ. ಸ.ನಂ. 130/2-ಸಿ) ನಿರ್ಮಾಣ ಕಾಮಗಾರಿಯನ್ನು ಪ್ರಸಕ್ತ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದಂತೆ ಟೆಂಡರಿಗಿಡಲಾದ ಮೊತ್ತ ರೂ.13,24,435/-ಗಳ ಮೇಲೆ ಶೇ.13.00ರಷ್ಟು ಹೆಚ್ಚಿನ ದರದಲ್ಲಿ ಅಂದರೆ ರೂ.14,96,612/-ಗಳಿಗೆ (ರೂ. ಹದಿನಾಲ್ಕು ಲಕ್ಷ ತೊಂಭತ್ತಾರು ಸಾವಿರದ ಆರುನೂರ ಹನ್ನೆರಡು ಮಾತ್ರ)ಗಳಿಗೆ ಶ್ರೀ ಎಂ.ಎಂ.ಮುಂಡೆವಾಡಗಿ, ಒಂದನೇ ದರ್ಜೆ ಗುತ್ತಿಗೆದಾರರು ರವರಿಗೆ ಕೆಳಕಂಡ ಷರತ್ತುಗಳಿಗೆ ಒಳಪಡಿಸಿ ವಹಿಸಲು ಸರ್ಕಾರವು ಅನುಮೋದನೆ ನೀಡಿದೆ.

1. ಕಾಮಗಾರಿಯನ್ನು ನಿಗಧಿತ ಅವಧಿಯಲ್ಲಿ ಪೂರ್ಣಗೊಳಿಸತಕ್ಕದ್ದು.
2. ಸರ್ಕಾರದ ಅನುಮತಿ ಪಡೆಯದೆ ಕಾಮಗಾರಿಯಲ್ಲಿ ಯಾವುದೇ ಹೆಚ್ಚುವರಿ ಕೆಲಸ ನಿರ್ವಹಿಸಬಾರದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ: ಎಫ್‌ಡಿ 1 ಟಿಎಫ್‌ಪಿ 2008, ದಿನಾಂಕ:16.05.2008ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕಾಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ರುದ್ರಮೂರ್ತಿ,
ಪದನಿಮಿತ್ತ ಸರ್ಕಾರದ ಅಧೀನ ಕಾರ್ಯದರ್ಶಿ,
ಜಲಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)

ಪಿ.ಆರ್. 1234

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ

ವಿಷಯ: ಪಿ.ಜಿ.ಇ.ಟಿ ಕೌನ್ಸಿಲಿಂಗಾಗಿ ತಯಾರಿಸಲಾಗುವ ಸೀಟ್ ಮ್ಯಾಟ್ರಿಕ್ಸಿನಲ್ಲಿ ಅಂಗವಿಕಲ ಅಭ್ಯರ್ಥಿಗಳಿಗೆ ಮೀಸಲಾತಿ ನೀಡುವ ಬಗ್ಗೆ.

ಓದಲಾಗಿದೆ: 1) ರಿಟ್ ಪಿಟಿಷನ್ ಸಂಖ್ಯೆ: 8253-8254/2012 - ಡಾ: ವೀರೇಶ್ ಹಲ್ಲೂರು V/s ಕರ್ನಾಟಕ ಸರ್ಕಾರ ಮತ್ತು ಇತರರು.

2) ವೈದ್ಯಕೀಯ ಶಿಕ್ಷಣ ನಿರ್ದೇಶಕರ ಪತ್ರ ಸಂಖ್ಯೆ: ವೈ.ಶಿ.ನಿ/ಆಪ್ರ/06/2012-13 ದಿನಾಂಕ: 19.04.2012.

ಪ್ರಸ್ತಾವನೆ:

ವೈದ್ಯಕೀಯ ಶಿಕ್ಷಣ ನಿರ್ದೇಶಕರು ಮೇಲೆ ಓದಲಾದ ಪತ್ರದಲ್ಲಿ ಅಂಗವಿಕಲ ಅಭ್ಯರ್ಥಿಗಳಾದ ಡಾ: ವೀರೇಶ್ ಹಲ್ಲೂರು ಮತ್ತಿತರರು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಪಿಟಿಷನ್ ಸಂಖ್ಯೆ: 8253-8254/2012 ರಲ್ಲಿ ದಾವೆ ಹೂಡಿದ್ದು, ಸದರಿ ದಾವೆಯಲ್ಲಿ ಪಿ.ಜಿ.ಇ.ಟಿ ಕೌನ್ಸಿಲಿಂಗ್‌ಗಾಗಿ ತಯಾರಿಸಲಾಗುವ ಸೀಟ್ ಮ್ಯಾಟ್ರಿಕ್ಸ್‌ನಲ್ಲಿ ಸಮತಳ ಮೀಸಲಾತಿಯನ್ನು ಅನುಸರಿಸಿ ಅಂಗವಿಕಲ ಅಭ್ಯರ್ಥಿಗಳಿಗೆ ಮೀಸಲಾತಿಯನ್ನು ನೀಡಬೇಕೆಂದು ಕೋರಿರುತ್ತಾರೆ. ಈ ಪ್ರಕರಣವನ್ನು ಮಾನ್ಯ ಉಚ್ಚ ನ್ಯಾಯಾಲಯವು ದಿನಾಂಕ 18.4.2012 ರಂದು ವಿಚಾರಣೆಗೆ ತೆಗೆದುಕೊಂಡು ಕೂಲಂಕುಷವಾಗಿ ಎಲ್ಲಾ ವಿಚಾರಗಳನ್ನು ಗಮನಿಸಿ ಕರ್ನಾಟಕ ಸರ್ಕಾರವು ಪಿ.ಜಿ.ಇ.ಟಿ ಕೌನ್ಸಿಲಿಂಗ್‌ಗಾಗಿ ಸೀಟ್ ಮ್ಯಾಟ್ರಿಕ್ಸ್‌ನ್ನು ತಯಾರಿಸುವಾಗ ಅಂಗವಿಕಲ ಅಭ್ಯರ್ಥಿಗಳಿಗೆ ಮೀಸಲಾತಿ ನೀಡುವ ಬಗ್ಗೆ ಅನುಸರಿಸಬೇಕಾದ ಮಾರ್ಗಸೂಚಿಗಳನ್ನು ಕೂಡಲೇ ಹೊರಡಿಸುವಂತೆ ಹಾಗೂ ಈ ಮಾರ್ಗಸೂಚಿಗಳನ್ನು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಪ್ರಮಾಣಪತ್ರವಾಗಿ (Affidavit) ಸಲ್ಲಿಸುವಂತೆಯೂ ಸೂಚಿಸಿರುವುದಾಗಿ ತಿಳಿಸಿರುತ್ತಾರೆ.

ಈ ಸೂಚನೆಯನ್ನು ಪಾಲಿಸಲು ಅಂಗವಿಕಲ ಅಭ್ಯರ್ಥಿಗಳಿಗೆ ಯಾವ ಯಾವ ವೈದ್ಯಕೀಯ ಸ್ನಾತಕೋತ್ತರ ಡಿಗ್ರಿ / ಡಿಪ್ಲೊಮಾ ಸೀಟುಗಳನ್ನು ನೀಡಬೇಕೆಂದು ನಿರ್ಧರಿಸಲು ದಿನಾಂಕ: 18-04-2012 ರಂದು ಪ್ರಧಾನ ಕಾರ್ಯದರ್ಶಿಗಳು, ವೈದ್ಯಕೀಯ ಶಿಕ್ಷಣ ಇವರ ಅಧ್ಯಕ್ಷತೆಯಲ್ಲಿ ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆಯಲ್ಲಿನ ವೈದ್ಯಕೀಯ ವಿಷಯಕ್ಕೆ ಸಂಬಂಧಿಸಿದ ಎಲ್ಲಾ ವಿಭಾಗಗಳ ಮುಖ್ಯಸ್ಥರ ಸಭೆಯನ್ನು ಏರ್ಪಡಿಸಿದ್ದು, ಈ ಸಭೆಯಲ್ಲಿ ವಿಭಾಗದ ಮುಖ್ಯಸ್ಥರುಗಳು ಪ್ರಿ-ಕ್ಲಿನಿಕಲ್ ಹಾಗೂ ಪ್ಯಾರಾ-ಕ್ಲಿನಿಕಲ್ ವಿಷಯಗಳಲ್ಲಿ ಅಂಗವಿಕಲ ಅಭ್ಯರ್ಥಿಗಳಿಗೆ ಎಲ್ಲಾ ಸ್ನಾತಕೋತ್ತರ ಡಿಗ್ರಿ / ಡಿಪ್ಲೊಮಾ ಸೀಟುಗಳನ್ನು ನೀಡಬಹುದೆಂದು ಅಭಿಪ್ರಾಯಪಟ್ಟಿರುತ್ತಾರೆಂದು ತಿಳಿಸುತ್ತಾ ಕ್ಲಿನಿಕಲ್ ವಿಭಾಗಗಳಲ್ಲಿ ಚರ್ಮ ಹಾಗೂ ಲೈಂಗಿಕ ರೋಗಗಳ ವಿಭಾಗ, ರೇಡಿಯೋಥೆರಪಿ ವಿಭಾಗ, ಶಿಶುವೈದ್ಯ ಶಾಸ್ತ್ರ ವಿಭಾಗ, ವೈದ್ಯಶಾಸ್ತ್ರ ವಿಭಾಗ, ಕ್ಷ-ಕಿರಣ ವಿಭಾಗ, ಮನೋರೋಗಶಾಸ್ತ್ರ ವಿಭಾಗ ಮತ್ತು ಕ್ಷಯ ಹಾಗೂ ಎದೆರೋಗ ವಿಭಾಗಗಳಲ್ಲಿ ಅಂಗವಿಕಲ ವಿದ್ಯಾರ್ಥಿಗಳಿಗೆ ಸ್ನಾತಕೋತ್ತರ ಡಿಗ್ರಿ / ಡಿಪ್ಲೊಮಾ ಸೀಟುಗಳನ್ನು ನೀಡಬಹುದೆಂದು ಆಯಾ ವಿಭಾಗಗಳ ಮುಖ್ಯಸ್ಥರು ಅಭಿಪ್ರಾಯಪಟ್ಟಿರುತ್ತಾರೆಂದು ತಿಳಿಸಿ ಶಸ್ತ್ರಚಿಕಿತ್ಸಾ ವಿಭಾಗ, ನೇತ್ರಶಾಸ್ತ್ರ ವಿಭಾಗ, ಅಸ್ಥಿ ಚಿಕಿತ್ಸಾ ವಿಭಾಗ, ಇ.ಎನ್.ಟಿ. ವಿಭಾಗ, ಅರವಳಿಕೆ ಶಾಸ್ತ್ರ ವಿಭಾಗ ಮತ್ತು ಪ್ರಸೂತಿ ಮತ್ತು ಸ್ತ್ರೀರೋಗ ವಿಭಾಗದ ಮುಖ್ಯಸ್ಥರುಗಳು ಅಂಗವಿಕಲ ಅಭ್ಯರ್ಥಿಗಳಿಗೆ ಈ ವಿಭಾಗಗಳಲ್ಲಿ ಕಾರ್ಯನಿರ್ವಹಿಸುವುದು ಕಷ್ಟಕರವಾಗುವುದೆಂಬ ಕಾರಣಗಳನ್ನು ನೀಡಿದ್ದು, ಈ ವಿಭಾಗಗಳಲ್ಲಿ ಅಂಗವಿಕಲ ಅಭ್ಯರ್ಥಿಗಳಿಗೆ ಸ್ನಾತಕೋತ್ತರ ಡಿಗ್ರಿ / ಡಿಪ್ಲೊಮಾ ಸೀಟುಗಳನ್ನು ನೀಡುವುದು ಸೂಕ್ತವಲ್ಲವೆಂದು ಅಭಿಪ್ರಾಯಪಟ್ಟಿರುವುದಾಗಿ ಸಹ ಸದರಿ ಪತ್ರದಲ್ಲಿ ವೈದ್ಯಕೀಯ ಶಿಕ್ಷಣ ನಿರ್ದೇಶಕರು ತಿಳಿಸಿರುತ್ತಾರೆ

ಮೇಲೆ ತಿಳಿಸಿದ ಅಂಶಗಳ ಹಿನ್ನಲೆಯಲ್ಲಿ ಪಿ.ಜಿ.ಇ.ಟಿ. ಸೀಟ್‌ಮ್ಯಾಟ್ರಿಕ್ಸ್‌ನ್ನು ತಯಾರಿಸುವಾಗ ಅಂಗವಿಕಲ ಅಭ್ಯರ್ಥಿಗಳಿಗೆ ಮೀಸಲಾತಿ ನೀಡುವ ಸಂಬಂಧ ಕೆಳಕಂಡ ಮಾರ್ಗಸೂಚಿಗಳನ್ನು ಅನುಸರಿಸಬಹುದೆಂದು ವೈದ್ಯಕೀಯ ಶಿಕ್ಷಣ ನಿರ್ದೇಶಕರು ಅಭಿಪ್ರಾಯಪಟ್ಟಿರುತ್ತಾರೆ.

1) ಅಂಗವಿಕಲ ಅಭ್ಯರ್ಥಿಗಳಿಗೆ ಪಿ.ಜಿ.ಇ.ಟಿ. ಕೌನ್ಸಿಲಿಂಗ್ ಸಮಯದಲ್ಲಿ ಪ್ರತ್ಯೇಕ ಸೀಟ್ ಮ್ಯಾಟ್ರಿಕ್ಸ್‌ನ್ನು ತಯಾರಿಸುವುದು.

2) ಅಂಗವಿಕಲ ಅಭ್ಯರ್ಥಿಗಳ ಕೌನ್ಸಿಲಿಂಗ್‌ನ್ನು, ಪ್ರಥಮ ಸುತ್ತಿನ ಮೊದಲನೇ ದಿನದಲ್ಲಿ ನಡೆಸುವುದು.

3) ಪ್ರಿ-ಕ್ಲಿನಿಕಲ್ ವಿಭಾಗಗಳಾದ ಅನಾಟಮಿ, ಫಿಸಿಯಾಲಜಿ, ಮತ್ತು ಬಯೋಕೆಮಿಸ್ಟ್ರಿ ವಿಭಾಗಗಳಲ್ಲಿ ಒಟ್ಟು ಲಭ್ಯವಿರುವ ಸೀಟುಗಳ ಪೈಕಿ 3% ಸೀಟುಗಳನ್ನು ಅಂಗವಿಕಲ ಅಭ್ಯರ್ಥಿಗಳಿಗೆ ಮೀಸಲಿಡುವುದು.

4) ಪ್ಯಾರಾ ಕ್ಲಿನಿಕಲ್ ವಿಭಾಗಗಳಾದ ಫಾರ್ಮಾಕಾಲಜಿ, ಪೆಥಾಲಜಿ, ಮೈಕ್ರೋ ಬಯಾಲಜಿ, ಕಮ್ಯುನಿಟಿ ಮೆಡಿಸನ್ ಮತ್ತು ಫೊರೆನ್ಸಿಕ್ ಮೆಡಿಸನ್ ವಿಭಾಗಗಳಲ್ಲಿ ಒಟ್ಟು ಲಭ್ಯವಿರುವ ಸ್ನಾತಕೋತ್ತರ ಡಿಗ್ರಿ / ಡಿಪ್ಲೊಮಾ ಸೀಟುಗಳ ಪೈಕಿ 3% ಸೀಟುಗಳನ್ನು ಅಂಗವಿಕಲ ಅಭ್ಯರ್ಥಿಗಳಿಗೆ ಮೀಸಲಿಡುವುದು.

5) ಕ್ಲಿನಿಕಲ್ ವಿಭಾಗಗಳಾದ ಡರ್ಮಿಟಾಲಜಿ, ರೆಡಿಯೋಥೆರಪಿ, ಪೀಡಿಯಾಟ್ರಿಕ್ಸ್, ಜನರಲ್ ಮೆಡಿಸನ್, ರೇಡಿಯೋ ಡಯಾಗ್ನೋಸಿಸ್, ಸೈಕಿಯಾಟ್ರಿ ಮತ್ತು ಪಲ್ಮನರಿ ಮೆಡಿಸನ್ ವಿಭಾಗಗಳಲ್ಲಿ ಒಟ್ಟು ಲಭ್ಯವಿರುವ ಸ್ನಾತಕೋತ್ತರ ಡಿಗ್ರಿ / ಡಿಪ್ಲೊಮಾ ಸೀಟುಗಳ ಪೈಕಿ 3% ಸೀಟುಗಳನ್ನು ಅಂಗವಿಕಲ ಅಭ್ಯರ್ಥಿಗಳಿಗೆ ಮೀಸಲಿಡುವುದು.

6) ಮುಂಬರುವ ವರ್ಷಗಳಲ್ಲಿ ಅಂಗವಿಕಲ ಅಭ್ಯರ್ಥಿಗಳಿಗೆ ಮೇಲೆ ತಿಳಿಸಿದ ಪ್ರಿ-ಕ್ಲಿನಿಕಲ್, ಪ್ಯಾರಾ ಕ್ಲಿನಿಕಲ್ ಮತ್ತು ಕ್ಲಿನಿಕಲ್ ವಿಭಾಗಗಳಲ್ಲಿ ಸರದಿಯಂತೆ (Rotation) ವಿಷಯವಾರು ಸೀಟುಗಳನ್ನು ಒದಗಿಸುವುದು.

7) ಶಸ್ತ್ರಚಿಕಿತ್ಸಾ ವಿಭಾಗ, ನೇತ್ರಶಾಸ್ತ್ರ ವಿಭಾಗ, ಅಸ್ಥಿ ಚಿಕಿತ್ಸಾ ವಿಭಾಗ, ಇ.ಎನ್.ಟಿ. ವಿಭಾಗ, ಅರವಳಿಕೆ ಶಾಸ್ತ್ರ ವಿಭಾಗ ಮತ್ತು ಪ್ರಸೂತಿ ಮತ್ತು ಸ್ತ್ರೀರೋಗ ವಿಭಾಗಗಳಲ್ಲಿ ಮೀಸಲಾತಿ ಇರುವುದಿಲ್ಲ.

ಮೇಲೆ ಹೇಳಿದ ಮಾರ್ಗಸೂಚಿಗಳನ್ನು ಪ್ರಸಕ್ತ ಸಾಲಿನಿಂದಲೇ ಅನುಸರಿಸಲು ಅನುಮತಿಸಿ ಈ ಬಗ್ಗೆ ಸರ್ಕಾರಿ ಆದೇಶವನ್ನು ಹೊರಡಿಸಬೇಕೆಂದು ವೈದ್ಯಕೀಯ ಶಿಕ್ಷಣ ನಿರ್ದೇಶಕರು ಕೋರಿರುತ್ತಾರೆ. ಆದ್ದರಿಂದ ಸರ್ಕಾರವು ಈ ಬಗ್ಗೆ ಕೂಲಂಕುಷವಾಗಿ ಪರಿಶೀಲಿಸಿ ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಆಕುಕ/85/ಆರ್‌ಜಿಯು/2012 ಬೆಂಗಳೂರು, ದಿನಾಂಕ: 20.04.2012

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಮೇರೆಗೆ ಪಿ.ಜಿ.ಇ.ಟಿ. 2012 ರ ಕೌನ್ಸಿಲಿಂಗ್‌ನಲ್ಲಿ ಹಾಗೂ ಮುಂಬರುವ ವರ್ಷಗಳ ಪಿ.ಜಿ.ಇ.ಟಿ. ಕೌನ್ಸಿಲಿಂಗ್‌ಗಾಗಿ ಸೀಟ್ ಮ್ಯಾಟ್ರಿಕ್ಸ್‌ನ್ನು ತಯಾರು ಮಾಡುವಾಗ ಅಂಗವಿಕಲ ಅಭ್ಯರ್ಥಿಗಳಿಗೆ ಮೀಸಲಾತಿ ಒದಗಿಸುವ ಬಗ್ಗೆ ಕೆಳಕಂಡ ಮಾರ್ಗಸೂಚಿಗಳನ್ನು ಅಳವಡಿಸಲು ಆದೇಶಿಸಿದೆ.

1) ಅಂಗವಿಕಲ ಅಭ್ಯರ್ಥಿಗಳಿಗೆ ಪಿ.ಜಿ.ಇ.ಟಿ. ಕೌನ್ಸಿಲಿಂಗ್ ಸಮಯದಲ್ಲಿ ಪ್ರತ್ಯೇಕ ಸೀಟ್ ಮ್ಯಾಟ್ರಿಕ್ಸ್‌ನ್ನು ತಯಾರಿಸುವುದು.

2) ಅಂಗವಿಕಲ ಅಭ್ಯರ್ಥಿಗಳ ಕೌನ್ಸಿಲಿಂಗ್‌ನ್ನು ಪ್ರಥಮ ಸುತ್ತಿನ ಮೊದಲನೇ ದಿನದಲ್ಲಿ ನಡೆಸುವುದು.

3) ಪ್ರಿ-ಕ್ಲಿನಿಕಲ್ ವಿಭಾಗಗಳಾದ ಅನಾಟಮಿ, ಫಿಸಿಯಾಲಜಿ, ಮತ್ತು ಬಯೋಕೆಮಿಸ್ಟ್ರಿ ವಿಭಾಗಗಳಲ್ಲಿ ಒಟ್ಟು ಲಭ್ಯವಿರುವ ಸೀಟುಗಳ ಪೈಕಿ 3% ಸೀಟುಗಳನ್ನು ಅಂಗವಿಕಲ ಅಭ್ಯರ್ಥಿಗಳಿಗೆ ಮೀಸಲಿಡುವುದು.

4) ಪ್ಯಾರಾ ಕ್ಲಿನಿಕಲ್ ವಿಭಾಗಗಳಾದ ಫಾರ್ಮಾಕಾಲಜಿ, ಪೆಥಾಲಜಿ, ಮೈಕ್ರೋ ಬಯಾಲಜಿ, ಕಮ್ಯೂನಿಟಿ ಮೆಡಿಸನ್ ಮತ್ತು ಫೋರೆನ್ಸಿಕ್ ಮೆಡಿಸನ್ ವಿಭಾಗಗಳಲ್ಲಿ ಒಟ್ಟು ಲಭ್ಯವಿರುವ ಸ್ನಾತಕೋತ್ತರ ಡಿಗ್ರಿ / ಡಿಪ್ಲೊಮಾ ಸೀಟುಗಳ ಪೈಕಿ 3% ಸೀಟುಗಳನ್ನು ಅಂಗವಿಕಲ ಅಭ್ಯರ್ಥಿಗಳಿಗೆ ಮೀಸಲಿಡುವುದು.

5) ಕ್ಲಿನಿಕಲ್ ವಿಭಾಗಗಳಾದ ಡರ್ಮಿಟಾಲಜಿ, ರೆಡಿಯೋಥೆರಪಿ, ಪೀಡಿಯಾಟ್ರಿಕ್ಸ್, ಜನರಲ್ ಮೆಡಿಸನ್, ರೇಡಿಯೋ ಡಯಾಗ್ನೋಸಿಸ್. ಸೈಕಿಯಾಟ್ರಿ ಮತ್ತು ಪಲ್ಮನರಿ ಮೆಡಿಸನ್ ವಿಭಾಗಗಳಲ್ಲಿ ಒಟ್ಟು ಲಭ್ಯವಿರುವ ಸ್ನಾತಕೋತ್ತರ ಡಿಗ್ರಿ / ಡಿಪ್ಲೊಮಾ ಸೀಟುಗಳ ಪೈಕಿ 3% ಸೀಟುಗಳನ್ನು ಅಂಗವಿಕಲ ಅಭ್ಯರ್ಥಿಗಳಿಗೆ ಮೀಸಲಿಡುವುದು.

6) ಮುಂಬರುವ ವರ್ಷಗಳಲ್ಲಿ ಅಂಗವಿಕಲ ಅಭ್ಯರ್ಥಿಗಳಿಗೆ ಮೇಲೆ ತಿಳಿಸಿದ ಪ್ರಿ-ಕ್ಲಿನಿಕಲ್, ಪ್ಯಾರಾ ಕ್ಲಿನಿಕಲ್ ಮತ್ತು ಕ್ಲಿನಿಕಲ್ ವಿಭಾಗಗಳಲ್ಲಿ ಸರದಿಯಂತೆ (Rotation) ವಿಷಯವಾರು ಸೀಟುಗಳನ್ನು ನೀಡುವುದು

7) ಶಸ್ತ್ರಚಿಕಿತ್ಸಾ ವಿಭಾಗ, ನೇತ್ರಶಾಸ್ತ್ರ ವಿಭಾಗ, ಅಸ್ಥಿ ಚಿಕಿತ್ಸಾ ವಿಭಾಗ, ಇ.ಎನ್.ಟಿ. ವಿಭಾಗ, ಅರವಳಿಕೆ ಶಾಸ್ತ್ರ ವಿಭಾಗ ಮತ್ತು ಪ್ರಸೂತಿ ಮತ್ತು ಸ್ತ್ರೀರೋಗ ವಿಭಾಗಗಳಲ್ಲಿ ಮೀಸಲಾತಿ ಇರುವುದಿಲ್ಲ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ವಿ. ಸಾಯಿಬಾಬಾ,
ಸರ್ಕಾರದ ಅಧೀನ ಕಾರ್ಯದರ್ಶಿ,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
(ವೈದ್ಯಕೀಯ ಶಿಕ್ಷಣ).

ಪಿ.ಆರ್. 1238

ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯ

ವಿಷಯ: ಶ್ರೀ ಡಿ.ಎಸ್. ವಿಶ್ವನಾಥ್, ಹಿಂದಿನ ಜಂಟಿ ನಿರ್ದೇಶಕರು, ಪ್ರಸ್ತುತ ಐ.ಎ.ಎಸ್. ವ್ಯವಸ್ಥಾಪಕ ನಿರ್ದೇಶಕರು, ಕೆ.ಎಸ್.ಎಸ್.ಐ. ಡಿ.ಸಿ. ಬೆಂಗಳೂರು ಇವರಿಗೆ ಆಯ್ಕೆ ದರ್ಜೆ ವೇತನ ಶ್ರೇಣಿ ಮಂಜೂರು ಮಾಡುವ ಬಗ್ಗೆ.

ಓದಲಾಗಿದೆ:

1) ಸರ್ಕಾರದ ಆದೇಶ ಸಂಖ್ಯೆ:ಎಫ್‌ಡಿ 31 ಎಸ್‌ಆರ್‌ಪಿ 2007(X), ದಿನಾಂಕ:14-08-2008
2) ಶ್ರೀ ಡಿ.ಎಸ್.ವಿಶ್ವನಾಥ್, ಜಿಲ್ಲಾಧಿಕಾರಿ, ಬಾಗಲಕೋಟೆ ರವರ ದಿನಾಂಕ:24.04.2010 ರ ಮನವಿ.
3) ಕೈಗಾರಿಕಾಭಿವೃದ್ಧಿ ಆಯುಕ್ತರ ಪತ್ರದ ಸಂಖ್ಯೆ:ಆಡಳಿತ/ಸಿಬ್ಬಂದಿ/ಇ-2/88/2009-10 ದಿನಾಂಕ:06.08.2010
4) ದಿನಾಂಕ:14.03.2012 ರಂದು ನಡೆದ ಡಿ.ಪಿ.ಸಿ. ಸಭೆಯ ನಡವಳಿ.

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮ ಸಂಖ್ಯೆ (1) ರ ಸರ್ಕಾರದ ಆದೇಶ ಸಂಖ್ಯೆ:ಎಫ್‌ಡಿ 31 ಎಸ್‌ಆರ್‌ಪಿ 2007(X) ದಿ:14.08.2008 ರಲ್ಲಿ ವೇತನ ಶ್ರೇಣಿ ರೂ.20025-28275 ರಲ್ಲಿ ಕನಿಷ್ಠ 6 ವರ್ಷಗಳ ಸೇವೆಯನ್ನು ಪೂರೈಸಿದ "ಎ" ಗುಂಪಿನ ಅಧಿಕಾರಿಗಳಿಗೆ ರೂ.22125-30300 ಗಳ ಆಯ್ಕೆ ದರ್ಜೆ ವೇತನ ಶ್ರೇಣಿಯನ್ನು ಸದರಿ ಆದೇಶದಲ್ಲಿನ ಷರತ್ತಿಗೊಳಪಟ್ಟು ನೀಡಲು ಆದೇಶವಾಗಿರುತ್ತದೆ.

ಮೇಲೆ ಓದಲಾದ ಕಮ ಸಂಖ್ಯೆ (2) ರ ಮನವಿಯಲ್ಲಿ ಶ್ರೀ ಡಿ.ಎಸ್. ವಿಶ್ವನಾಥ್, ಹಿಂದಿನ ಜಂಟಿ ನಿರ್ದೇಶಕರು, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ, ಬೆಂಗಳೂರು ಇವರು ವೇತನ ಶ್ರೇಣಿ ರೂ. 20025-28275 ರ ವ್ಯಾಪ್ತಿಯಲ್ಲಿದ್ದು ಹಾಗೂ 1993 ರಿಂದ 1999 ರವರೆಗೆ ಜಂಟಿ ನಿರ್ದೇಶಕರ ವೃಂದದಲ್ಲಿ 6 ವರ್ಷಗಳಿಗೂ ಮೇಲ್ಪಟ್ಟು ಕರ್ತವ್ಯ ನಿರ್ವಹಿಸಿದ್ದು, ತಮಗೂ ಸಹ ಆಯ್ಕೆ ವೇತನ ಶ್ರೇಣಿಯನ್ನು ಮಂಜೂರು ಮಾಡುವಂತೆ ಕೋರಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ:(3) ರ ಪತ್ರದಲ್ಲಿ ಕೈಗಾರಿಕಾಭಿವೃದ್ಧಿ ಆಯುಕ್ತರು, ಶ್ರೀ ಡಿ.ಎಸ್. ವಿಶ್ವನಾಥ್, ಹಿಂದಿನ ಜಂಟಿ ನಿರ್ದೇಶಕರು, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ, ಬೆಂಗಳೂರು ಇವರು ದಿನಾಂಕ:11.11.1993 ರಿಂದ ಜಂಟಿ ನಿರ್ದೇಶಕರಾಗಿ ನಿರ್ವಹಿಸಿದ್ದು, ಸದರಿಯವರ ಕಳೆದ 5 ವರ್ಷಗಳ ವಾರ್ಷಿಕ ಕಾರ್ಯನಿರ್ವಹಣಾ ವರದಿಗಳನ್ನು ಸರ್ಕಾರಕ್ಕೆ ಸಲ್ಲಿಸಿ, ಆದೇಶ ಸಂಖ್ಯೆ: ಎಫ್‌ಡಿ 31 ಎಸ್‌ಆರ್‌ಪಿ 2007(X) ದಿನಾಂಕ: 14.08.2008 ರ ಅನ್ವಯ ಶ್ರೀಯುತರಿಗೆ ಆಯ್ಕೆ ದರ್ಜೆ ವೇತನ ಶ್ರೇಣಿ ರೂ.22125-30300 ಗಳನ್ನು ಮಂಜೂರು ಮಾಡಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ:(4) ರಲ್ಲಿ ಸದರಿ ಅಧಿಕಾರಿಯವರಿಗೆ ಆಯ್ಕೆ ದರ್ಜೆ ವೇತನ ಶ್ರೇಣಿಯನ್ನು ಮಂಜೂರು ಮಾಡುವ ಬಗ್ಗೆ ದಿನಾಂಕ:14,03.2012 ರಂದು ಇಲಾಖಾ ಮುಂಬಡ್ತಿ ಸಭೆ ನಡೆದಿದ್ದು, ಸದರಿ ಅಧಿಕಾರಿಯವರು ಜಂಟಿ ನಿರ್ದೇಶಕರ ಹುದ್ದೆಯಲ್ಲಿ 6 ವರ್ಷಗಳಿಗೂ ಮೇಲ್ಪಟ್ಟು ಸೇವೆ ಸಲ್ಲಿಸಿದ್ದು, ಮತ್ತು ಸದರಿ ಅಧಿಕಾರಿಯವರ ವಿರುದ್ಧ ಯಾವುದೇ ಇಲಾಖಾ ವಿಚಾರಣೆ/ಕ್ರಿಮಿನಲ್ ಮೊಕದ್ದಮೆ ಬಾಕಿ ಇಲ್ಲದಿರುವುದನ್ನು ಹಾಗೂ ಕಳೆದ 5 ವರ್ಷಗಳ ವಾರ್ಷಿಕ ಕಾರ್ಯನಿರ್ವಹಣಾ ವರದಿ ತೃಪ್ತಿಕರವಾಗಿದ್ದು, ಈ ಅಂಶಗಳನ್ನು ಪರಿಶೀಲಿಸಿ, ಮತ್ತು ಗಮನಿಸಿ ಸದರಿ ಅಧಿಕಾರಿಯವರಿಗೆ ದಿನಾಂಕ:01.08.2008 ರಿಂದ ಆಯ್ಕೆ ದರ್ಜೆ ವೇತನ ಶ್ರೇಣಿ ರೂ.22125-30300 ಗಳನ್ನು ಮಂಜೂರು ಮಾಡಲು ಅರ್ಹರಾಗಿರುತ್ತಾರೆಂದು ಪರಿಗಣಿಸಲಾಗಿದೆ.

ಶ್ರೀ ಡಿ.ಎಸ್. ವಿಶ್ವನಾಥ್, ಹಿಂದಿನ ಜಂಟಿ ನಿರ್ದೇಶಕರು, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ, ಇವರು ಆಯ್ಕೆ ದರ್ಜೆ ವೇತನ ಶ್ರೇಣಿ ರೂ.22125-30300 ಗಳನ್ನು ಪಡೆಯಲು ಅರ್ಹರಾಗಿರುತ್ತಾರೆಂದು ಪರಿಗಣಿಸಿ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ:ವಾಕೈ 83 ಕೈಸೇವಿ 2010 ಬೆಂಗಳೂರು, ದಿನಾಂಕ:21-04-2012

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಶ್ರೀ ಡಿ.ಎಸ್. ವಿಶ್ವನಾಥ್, ಹಿಂದಿನ ಜಂಟಿ ನಿರ್ದೇಶಕರು, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ, ಪ್ರಸ್ತುತ ಐ.ಎ.ಎಸ್. ವ್ಯವಸ್ಥಾಪಕ ನಿರ್ದೇಶಕರು, ಕೆ.ಎಸ್.ಎಸ್.ಐ.ಡಿ.ಸಿ.ಬೆಂಗಳೂರು ಇವರಿಗೆ ದಿ:01.08.2008 ರಿಂದ ಅನ್ವಯವಾಗುವಂತೆ ವೇತನ ಶ್ರೇಣಿ ರೂ. **20025-28275** ರಿಂದ ರೂ. **22125-30300** ಗಳ ಆಯ್ಕೆ ದರ್ಜೆ ವೇತನ ಶ್ರೇಣಿ ನೀಡಲು ಮಂಜೂರು ಮಾಡಿದೆ.

ಈ ಆದೇಶದನ್ವಯ ಮಂಜೂರು ಮಾಡಲಾಗಿರುವ ಆಯ್ಕೆ ದರ್ಜೆ ವೇತನ ಶ್ರೇಣಿಯಲ್ಲಿ ಈ ಅಧಿಕಾರಿಯ ವೇತನವನ್ನು ಕರ್ನಾಟಕ ನಾಗರೀಕ ಸೇವಾ ನಿಯಮಗಳು **1958** ರ ನಿಯಮ **42** (ಬಿ)ರಲ್ಲಿ ಕಲ್ಪಿಸಿರುವ ಅವಕಾಶಗಳನ್ವಯ ನಿಗದಿಪಡಿಸತಕ್ಕದ್ದು.

ಈ ಆದೇಶವನ್ನು ಸರ್ಕಾರದ ಆದೇಶ ಸಂಖ್ಯೆ:ಎಫ್‌ಡಿ 31 ಎಸ್‌ಆರ್‌ಪಿ 2007(X) ದಿ:14.08.2008 ರಲ್ಲಿ ಸಕ್ಷಮ ಪ್ರಾಧಿಕಾರಕ್ಕೆ ಪ್ರತ್ಯಾಯೋಜಿಸಲಾಗಿರುವ ಅಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಎಲ್.ಎಸ್. ವಾಸನ್,
ಸರ್ಕಾರದ ಅಧೀನ ಕಾರ್ಯದರ್ಶಿ
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, (ಸೇವೆಗಳು)

ಪಿ.ಆರ್. 1267

ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯ

ವಿಷಯ: ಚಾಮರಾಜನಗರದಲ್ಲಿನ ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯ ಜಮೀನಿನಲ್ಲಿ ಚೆಕ್‌ಪೋಸ್ಟ್ ಮತ್ತು ವಿಶ್ರಾಂತಿ ಗೃಹ ನಿರ್ಮಾಣಕ್ಕಾಗಿ 2 ಎಕರೆ ಜಮೀನನ್ನು ಸಾರಿಗೆ ಇಲಾಖೆಗೆ ಹಸ್ತಾಂತರಿಸುವ ಬಗ್ಗೆ.

ಓದಲಾಗಿದೆ: ನಿರ್ದೇಶನಾಲಯದ ಪತ್ರ ಸಂಖ್ಯೆ:ಕೈವಾಇ/ವಿಶ್ವ/ವ1/ಚಾ.ನ/ಸ.ನಿ/47/2010-11, ದಿ:21.02.2011 ಮತ್ತು 25.02.2012.

ಪ್ರಸ್ತಾವನೆ:

ಮೇಲೆ ಓದಲಾದ ಪತ್ರಗಳಲ್ಲಿ ಚಾಮರಾಜನಗರ ತಾಲ್ಲೂಕಿನ ಪುಣಜನೂರು ಗ್ರಾಮದ ಸರ್ವೆ ನಂ.38/ಪಿ1, 38/ಪಿ2 ಮತ್ತು 38/ಪಿ3ರಲ್ಲಿ 8 ಎಕರೆ ಭೂಮಿಯನ್ನು ಜೇನು ಕೃಷಿ ಮತ್ತು ತೆಂಗಿನ ನಾರು ಉತ್ಪಾದನಾ ಉದ್ಯಮ ಸ್ಥಾಪಿಸಲು 1986–87ರಲ್ಲಿ ಖರೀದಿಸಿರುವುದಾಗಿ ತಿಳಿಸುತ್ತಾ, ಸದರಿ ಜಮೀನಿನಲ್ಲಿ ಒಂದು ಪಿಪ್ಪ ಕಾರ್ಯಗಾರವನ್ನು ನಿರ್ಮಿಸಿದ್ದು, 4 ಎಕರೆ ಭೂಮಿಯನ್ನು ತೆಂಗಿನ ನಾರು ಅಭಿವೃದ್ಧಿ ನಿಗಮಕ್ಕೆ ಬಿಟ್ಟುಕೊಟ್ಟಿರುವುದಾಗಿ ತಿಳಿಸಲಾಗಿದೆ. ಪ್ರಸ್ತುತ ಪಿಪ್ಪ ಕಾರ್ಯಗಾರವನ್ನು ತೆಂಗಿನ ನಾರು ಅಭಿವೃದ್ಧಿ ನಿಗಮಕ್ಕೆ ವಹಿಸಿದ್ದು, ತೆಂಗಿನ ನಾರು ಉತ್ಪಾದನಾ ಚಟುವಟಿಕೆ ನಡೆಯುತ್ತಿದ್ದು, ಉಳಿದ ಅರ್ಧ ಭಾಗದಲ್ಲಿ ಯಾವುದೇ ಕಾರ್ಯಚಟುವಟಿಕೆಗಳು ನಡೆಯುತ್ತಿಲ್ಲವೆಂದು ತಿಳಿಸಿರುತ್ತಾರೆ.

ಮುಂದುವರೆದು, ಸದರಿ ಜಮೀನು ಎನ್.ಹೆಚ್.209ರ ಪಕ್ಕದಲ್ಲಿರುವುದರಿಂದ ಚೆಕ್ ಪೋಸ್ಟ್ ಮತ್ತು ವಿಶ್ರಾಂತಿ ಗೃಹ ನಿರ್ಮಾಣಕ್ಕಾಗಿ 2 ಎಕರೆ ಜಮೀನನ್ನು ಬಿಟ್ಟುಕೊಡುವಂತೆ ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ಕೋರಿರುವ ಮೇರೆಗೆ ಸದರಿ 2 ಎಕರೆ ಜಮೀನನ್ನು ಸಾರಿಗೆ ಇಲಾಖೆಗೆ ಬಿಟ್ಟುಕೊಡುವ ಬಗ್ಗೆ ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ, ಚಾಮರಾಜನಗರ, ಇವರು ಶಿಫಾರಸ್ಸಿನೊಂದಿಗೆ ಸಲ್ಲಿಸಿದ್ದು, ಅದರಂತೆ, ಪ್ರಸ್ತುತ ನೋಂದಣೀ ಇಲಾಖೆಯ ಗೈಡೆನ್ಸ್ ವ್ಯಾಲ್ಯೂ ಪ್ರಕಾರ ಭೂಮಿಯ ಕಿಮ್ಮತ್ತು ತುಂಬಿಸಿಕೊಂಡು ಚಾಮರಾಜನಗರ ತಾಲ್ಲೂಕಿನ ಪುಣಜನೂರು ಗ್ರಾಮದ ಸರ್ವೆ ನಂ.38/ಪಿ1, 38/ಪಿ2 ಮತ್ತು 38/ಪಿ3ರಲ್ಲಿ ಖಾಲಿ ಇರುವ ಎರಡು ಎಕರೆ ಜಮೀನನ್ನು (ಸಾರಿಗೆ ಇಲಾಖೆಯು ಚೆಕ್ ಪೋಸ್ಟ್ ಮತ್ತು ವಿಶ್ರಾಂತಿ ಗೃಹ ನಿರ್ಮಾಣಕ್ಕಾಗಿ) ಸಾರಿಗೆ ಇಲಾಖೆಗೆ ಹಸ್ತಾಂತರಿಸುವ ಬಗ್ಗೆ ಆದೇಶ ಹೊರಡಿಸಲು ಅಪರ ನಿರ್ದೇಶಕರು (ಪಿಪ್ಪ) ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ, ರವರು ಆಯುಕ್ತರು ಹಾಗೂ ನಿರ್ದೇಶಕರು, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ ರವರ ಅನುಮೋದನೆಯೊಂದಿಗೆ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಪ್ರಸ್ತಾವನೆಯನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ವಾಕೈ 06 ಕೈಯೋವಿ 2011, ಬೆಂಗಳೂರು, ದಿನಾಂಕ:21.04.2012

ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯ ವ್ಯಾಪ್ತಿಯಲ್ಲಿನ ಚಾಮರಾಜನಗರ ತಾಲ್ಲೂಕಿನ ಪುಣಜನೂರು ಗ್ರಾಮದ ಸರ್ವೆ ನಂ.38/ಪಿ1, 38/ಪಿ2 ಮತ್ತು 38/ಪಿ3ರಲ್ಲಿ ಖಾಲಿ ಇರುವ ಎರಡು ಎಕರೆ ಜಮೀನನ್ನು ಪ್ರಸ್ತುತ ನೋಂದಣಿ ಇಲಾಖೆಯ ಗೈಡೆನ್ಸ್ ವ್ಯಾಲ್ಯೂ ಪ್ರಕಾರ ಭೂಮಿಯ ಮೌಲ್ಯ ತುಂಬಿಸಿಕೊಂಡು ಸಾರಿಗೆ ಇಲಾಖೆಯು ಚೆಕ್ ಪೋಸ್ಟ್ ಮತ್ತು ವಿಶ್ರಾಂತಿ ಗೃಹ ನಿರ್ಮಾಣಕ್ಕಾಗಿ ಸದರಿ ಜಮೀನನ್ನು ಸಾರಿಗೆ ಇಲಾಖೆಗೆ ಹಸ್ತಾಂತರಿಸಲು ಸರ್ಕಾರವು ಮಂಜೂರಾತಿ ನೀಡಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಎಲ್.ಎಸ್. ವಾಸನ್,

ಸರ್ಕಾರದ ಅಧೀನ ಕಾರ್ಯದರ್ಶಿ

ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, (ಸೇವೆಗಳು)

ಪಿ.ಆರ್. 1275

ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವಾಲಯ

ವಿಷಯ: ರಾಜ್ಯದ ಗ್ರಾಮ ಪಂಚಾಯತಿಗಳಲ್ಲಿ ಹೊಸದಾಗಿ ಸೃಜಿಸಿದ "ದ್ವಿತೀಯ ದರ್ಜೆ ಲೆಕ್ಕ ಸಹಾಯಕರ" ಹುದ್ದೆಗಳನ್ನು ಜಿಲ್ಲಾವಾರು ಮತ್ತು ತಾಲ್ಲೂಕುವಾರು ಹಂಚಿಕೆ ಮಾಡುವ ಬಗ್ಗೆ.

ಓದಲಾಗಿದೆ:
1. ಸರ್ಕಾರದ ಅದೇಶ ಸಂಖ್ಯೆ: ಗ್ರಾಅಪ 569 ಗ್ರಾಪಂಅ 2006, ದಿನಾಂಕ: 31–3–2008.
2. ಸರ್ಕಾರದ ಅಧಿಸೂಚನೆ ಸಂಖ್ಯೆ: ಗ್ರಾಅಪ 181 ಗ್ರಾಪಂಕಾ 2011, ದಿನಾಂಕ: 31–03–2012.

ಪ್ರಸ್ತಾವನೆ:

ಮೇಲೆ ಕ್ರಮ ಸಂಖ್ಯೆ (1) ರಲ್ಲಿ ಓದಲಾದ ದಿನಾಂಕ: 31–3–2008 ರ ಸರ್ಕಾರದ ಆದೇಶದಲ್ಲಿ ಹೆಚ್ಚಿನ ಆಡಳಿತಾತ್ಮಕ ಹಾಗೂ ಆರ್ಥಿಕ ಜವಾಬ್ದಾರಿಯುಳ್ಳ ಗ್ರಾಮ ಪಂಚಾಯಿತಿಗಳಲ್ಲಿ ಅಂತಹ ಪ್ರತಿ ಗ್ರಾಮ ಪಂಚಾಯಿತಿಗೆ ತಲಾ ಒಂದು ಹುದ್ದೆಯಂತೆ ವೇತನ ಶ್ರೇಣಿ ₹ 5,800–10,500 ರಲ್ಲಿ 2500 ದ್ವಿತೀಯ ದರ್ಜೆ ಲೆಕ್ಕ ಸಹಾಯಕರ ಹುದ್ದೆಗಳನ್ನು ಸೃಜಿಸಲಾಗಿದೆ. ಈ ಹುದ್ದೆಗಳಿಗೆ ನೇಮಕಾತಿ ಮಾಡುವ ಬಗ್ಗೆ ಮೇಲೆ ಕ್ರಮ ಸಂಖ್ಯೆ (2) ರಲ್ಲಿ ಓದಲಾದ ಅಧಿಸೂಚನೆಯಲ್ಲಿ ವೃಂದ ಮತ್ತು ನೇಮಕಾತಿ ನಿಯಮಗಳನ್ನು ರೂಪಿಸಲಾಗಿದೆ.

ಈ ಹುದ್ದೆಗಳ ಪೈಕಿ 2165 ಹುದ್ದೆಗಳು ರಾಜ್ಯದಲ್ಲಿ ಹಾಲಿ ಅಸ್ತಿತ್ವದಲ್ಲಿರುವ ಗ್ರೇಡ್–1 ಗ್ರಾಮ ಪಂಚಾಯಿತಿಗಳಿಗೆ ಲಭ್ಯವಾಗುತ್ತವೆ. ಉಳಿದ 335 ಹುದ್ದೆಗಳ ಪೈಕಿ ಜಿಲ್ಲಾ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ಗ್ರೇಡ್–2 ಗ್ರಾಮ ಪಂಚಾಯಿತಿಗಳ ಸಂಖ್ಯೆಯ ಶೇಕಡ 10 ರಷ್ಟನ್ನು ಪ್ರತಿ ಜಿಲ್ಲೆಗೆ ನಿಗದಿಪಡಿಸಿ ಹಂಚಿಕೆ ಮಾಡಲು ಉದ್ದೇಶಿಸಿದೆ. ಹಾಗೂ ಶೇಕಡ 10 ರಂತೆ ಲಭ್ಯವಾಗುವ ಹೆಚ್ಚುವರಿ ಹುದ್ದೆಗಳನ್ನು ಸಮತೋಲನ ಕಾಯ್ದುಕೊಳ್ಳುವ ದೃಷ್ಟಿಯಿಂದ ತಾಲ್ಲೂಕುವಾರು ಸಮಾನವಾಗಿ ಹಂಚಲು ಸರ್ಕಾರವು ನಿರ್ಣಯಿಸಿದೆ.

ಅದರಂತೆ ಈ ಆದೇಶ

ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 140 ಗ್ರಾಪಂಕಾ 2012, ಬೆಂಗಳೂರು, ದಿನಾಂಕ: 03-04-2012.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಗ್ರಾಮ ಪಂಚಾಯಿತಿಗಳಲ್ಲಿ ಸೃಜಿಸಲಾಗಿರುವ 2500 ದ್ವಿತೀಯ ದರ್ಜೆ ಲೆಕ್ಕ ಸಹಾಯಕರ ಹುದ್ದೆಗಳನ್ನು ಈ ಆದೇಶಕ್ಕೆ ಲಗತ್ತಿಸಿರುವ ಅನುಬಂಧ-1 ಮತ್ತು 2 ರಲ್ಲಿರುವಂತೆ ಜಿಲ್ಲಾವಾರು ಮತ್ತು ತಾಲ್ಲೂಕುವಾರು ಹಂಚಿಕೆ ಮಾಡಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಹೆಚ್.ಬಿ. ರಘುನಾಥ್,

ಸರ್ಕಾರದ ಅಧೀನ ಕಾರ್ಯದರ್ಶಿ

ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 140 ಗ್ರಾಪಂಕಾ 2012, ದಿನಾಂಕ: 03-04-2012 ಕ್ಕೆ ಅನುಬಂಧ-1

ಗ್ರಾಮ ಪಂಚಾಯಿತಿಗಳಿಗೆ ಮಂಜೂರಾಗಿರುವ ದ್ವಿತೀಯ ದರ್ಜೆ ಲೆಕ್ಕ ಸಹಾಯಕರ ಹುದ್ದೆಗಳ ಜಿಲ್ಲಾವಾರು ವಿವರ

ಕ್ರಮ ಸಂಖ್ಯೆ	ಜಿಲ್ಲಾ ಪಂಚಾಯಿತಿ	ಮಂಜೂರಾದ ಹುದ್ದೆಗಳ ಸಂಖ್ಯೆ	ಶೇಕಡಾ 70 ರ ನೇರ ನೇಮಕಾತಿ ಕೋಟಾದ ಹುದ್ದೆಗಳು	ಶೇಕಡಾ 30 ರ ಬಿಲ್ ಕಲೆಕ್ಟರ್ ಇತ್ಯಾದಿ ವೃಂದದ ನೇರ ನೇಮಕಾತಿ ಕೋಟಾದ ಹುದ್ದೆಗಳು
1	ಬೆಂಗಳೂರು ನಗರ	48	34	14
2	ಬೆಂಗಳೂರು ಗ್ರಾಮಾಂತರ	51	36	15
3	ಬಾಗಲಕೋಟೆ	70	49	21
4	ಬೆಳಗಾವಿ	207	145	62
5	ಬಳ್ಳಾರಿ	80	56	24
6	ಬೀದರ್	69	48	21
7	ಬಿಜಾಪುರ	102	71	31
8	ಚಿಕ್ಕಮಗಳೂರು	90	63	27
9	ಚಿತ್ರದುರ್ಗ	100	70	30
10	ಚಾಮರಾಜನಗರ	68	48	20
11	ದಕ್ಷಿಣ ಕನ್ನಡ	84	59	25
12	ದಾವಣಗೆರೆ	70	49	21
13	ಧಾರವಾಡ	38	26	12
14	ಗದಗ	47	33	14
15	ಗುಲ್ಬರ್ಗಾ	99	69	30
16	ಹಾಸನ	86	60	26
17	ಹಾವೇರಿ	83	58	25
18	ಕೊಡಗು	37	26	11
19	ಕೋಲಾರ	57	40	17
20	ಕೊಪ್ಪಳ	58	41	17
21	ಮಂಡ್ಯ	126	88	38
22	ಮೈಸೂರು	149	104	45
23	ರಾಯಚೂರು	86	60	26
24	ಶಿವಮೊಗ್ಗ	104	73	31

ಕ್ರಮ ಸಂಖ್ಯೆ	ಜಿಲ್ಲಾ ಪಂಚಾಯಿತಿ	ಮಂಜೂರಾದ ಹುದ್ದೆಗಳ ಸಂಖ್ಯೆ	ಶೇಕಡಾ 70 ರ ನೇರ ನೇಮಕಾತಿ ಕೋಟಾದ ಹುದ್ದೆಗಳು	ಶೇಕಡಾ 30 ರ ಬಿಲ್ ಕಲೆಕ್ಟರ್ ಇತ್ಯಾದಿ ವೃಂದದ ನೇರ ನೇಮಕಾತಿ ಕೋಟಾದ ಹುದ್ದೆಗಳು
25	ತುಮಕೂರು	172	120	52
26	ಉತ್ತರ ಕನ್ನಡ	82	57	25
27	ಉಡುಪಿ	69	48	21
28	ರಾಮನಗರ	73	51	22
29	ಚಿಕ್ಕಬಳ್ಳಾಪುರ	51	36	15
30	ಯಾದಗಿರಿ	44	31	13
	ಒಟ್ಟು	**2500**	**1750**	**750**

ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 140 ಗ್ರಾಪಂಕಾ 2012, ದಿನಾಂಕ: 03-04-2012ಕ್ಕೆ ಅನುಬಂಧ-2

ರಾಜ್ಯದ ಗ್ರಾಮ ಪಂಚಾಯಿತಿಗಳಿಗೆ ಮಂಜೂರಾಗಿರುವ ತಾಲ್ಲೂಕುವಾರು ದ್ವಿತೀಯ ದರ್ಜೆ ಲೆಕ್ಕ ಸಹಾಯಕರ ಹುದ್ದೆಗಳ ವಿವರ

ಕ್ರ. ಸಂ.	ಜಿಲ್ಲೆಯ ಹೆಸರು	ತಾಲ್ಲೂಕು	ಪ್ರತಿ ಜಿಲ್ಲೆ/ತಾಲ್ಲೂಕಿಗೆ ಹಂಚಿಕೆಯಾದ ದ್ವಿತೀಯ ದರ್ಜೆ ಲೆಕ್ಕ ಸಹಾಯಕರ ಹುದ್ದೆಗಳ ಒಟ್ಟು ಸಂಖ್ಯೆ
1	ಬಾಗಲಕೋಟೆ	ಬಾಗಲಕೋಟೆ	8
		ಹುನಗುಂದ	15
		ಮುಧೋಳ	12
		ಬಾದಾಮಿ	14
		ಜಮಖಂಡಿ	17
		ಬಿಳಗಿ	4
		ಒಟ್ಟು	**70**
2	ಬೆಂಗಳೂರು (ಗ್ರಾ)	ದೇವನಹಳ್ಳಿ	9
		ದೊಡ್ಡಬಳ್ಳಾಪುರ	17
		ಹೊಸಕೋಟೆ	18
		ನೆಲಮಂಗಲ	7
		ಒಟ್ಟು	**51**
3	ಬೆಂಗಳೂರು (ನಗರ)	ಬೆಂಗಳೂರು (ದಕ್ಷಿಣ)	8
		ಬೆಂಗಳೂರು (ಪೂರ್ವ)	7
		ಬೆಂಗಳೂರು (ಉ)	16
		ಅನೇಕಲ್	17
		ಒಟ್ಟು	**48**
4	ಬೆಳಗಾವಿ	ಬೆಳಗಾವಿ	27
		ಖಾನಾಪುರ	10
		ಬೈಲಹೊಂಗಲ	19
		ಸವದತ್ತಿ	18
		ರಾಮದುರ್ಗ	9
		ಹುಕ್ಕೇರಿ	15

ಕ್ರ. ಸಂ.	ಜಿಲ್ಲೆಯ ಹೆಸರು	ತಾಲ್ಲೂಕು	ಪ್ರತಿ ಜಿಲ್ಲೆ/ತಾಲ್ಲೂಕಿಗೆ ಹಂಚಿಕೆಯಾದ ದ್ವಿತೀಯ ದರ್ಜೆ ಲೆಕ್ಕ ಸಹಾಯಕರ ಹುದ್ದೆಗಳ ಒಟ್ಟು ಸಂಖ್ಯೆ
		ಗೋಕಾಕ	30
		ಚಿಕ್ಕೋಡಿ	33
		ರಾಯಬಾಗ	19
		ಅಥಣಿ	27
		ಒಟ್ಟು	**207**
5	ಬಳ್ಳಾರಿ	ಬಳ್ಳಾರಿ	17
		ಹೊಸಪೇಟೆ	8
		ಸಂಡೂರು	12
		ಕೂಡ್ಲಿಗಿ	15
		ಶಿರಗುಪ್ಪ	7
		ಹಗರಿಬೊಮ್ಮನಹಳ್ಳಿ	11
		ಹೂವಿನ ಹಡಗಲಿ	10
		ಒಟ್ಟು	**80**
6	ಬೀದರ್	ಬೀದರ್	15
		ಔರಾದ್	9
		ಭಾಲ್ಕಿ	13
		ಹುಮ್ನಾಬಾದ್	17
		ಬಸವಕಲ್ಯಾಣ	15
		ಒಟ್ಟು	**69**
7	ಬಿಜಾಪುರ	ಬಿಜಾಪುರ	21
		ಬಸವನ ಬಾಗೇವಾಡಿ	17
		ಮುದ್ದೆಬಿಹಾಳ್	14
		ಇಂಡಿ	25
		ಸಿಂದಗಿ	25
		ಒಟ್ಟು	**102**
8	ಚಾಮರಾಜನಗರ	ಚಾಮರಾಜನಗರ	26
		ಗುಂಡ್ಲುಪೇಟೆ	13
		ಕೊಳ್ಳೇಗಾಲ	22
		ಯಳಂದೂರು	7
		ಒಟ್ಟು	**68**
9	ಚಿಕ್ಕಮಗಳೂರು	ಚಿಕ್ಕಮಗಳೂರು	20
		ಕಡೂರು	22
		ಕೊಪ್ಪ	7
		ಮೂಡಿಗೆರೆ	12
		ನರಸಿಂಹರಾಜಪುರ	4

ಕ್ರ. ಸಂ.	ಜಿಲ್ಲೆಯ ಹೆಸರು	ತಾಲ್ಲೂಕು	ಪ್ರತಿ ಜಿಲ್ಲೆ/ತಾಲ್ಲೂಕಿಗೆ ಹಂಚಿಕೆಯಾದ ದ್ವಿತೀಯ ದರ್ಜೆ ಲೆಕ್ಕ ಸಹಾಯಕರ ಹುದ್ದೆಗಳ ಒಟ್ಟು ಸಂಖ್ಯೆ
		ಶೃಂಗೇರಿ	4
		ತರೀಕೆರೆ	21
		ಒಟ್ಟು	**90**
10	ಚಿತ್ರದುರ್ಗ	ಚಿತ್ರದುರ್ಗ	22
		ಚಳ್ಳಕೆರೆ	23
		ಹೊಳಲ್ಕೆರೆ	13
		ಹಿರಿಯೂರು	17
		ಹೊಸದುರ್ಗ	13
		ಮೊಳಕಾಲ್ಮೂರು	12
		ಒಟ್ಟು	**100**
11	ದಕ್ಷಿಣ ಕನ್ನಡ	ಬಂಟ್ವಾಳ	23
		ಬೆಳ್ತಂಗಡಿ	12
		ಮಂಗಳೂರು	30
		ಪುತ್ತೂರು	14
		ಸುಳ್ಯ	5
		ಒಟ್ಟು	**84**
12	ದಾವಣಗೆರೆ	ದಾವಣಗೆರೆ	14
		ಹರಿಹರ	12
		ಹರಪನಹಳ್ಳಿ	18
		ಜಗಳೂರು	8
		ಚನ್ನಗಿರಿ	12
		ಹೊನ್ನಾಳಿ	6
		ಒಟ್ಟು	**70**
13	ಧಾರವಾಡ	ಧಾರವಾಡ	10
		ಹುಬ್ಬಳ್ಳಿ	9
		ಕಲಘಟಗಿ	6
		ಕುಂದಗೋಳ	7
		ನವಲಗುಂದ	6
		ಒಟ್ಟು	**38**
14	ಗದಗ	ಗದಗ	12
		ಮುಂಡರಗಿ	8
		ನರಗುಂದ	4
		ರೋಣ	16
		ಶಿರಹಟ್ಟಿ	7
		ಒಟ್ಟು	**47**

ಕ್ರ. ಸಂ.	ಜಿಲ್ಲೆಯ ಹೆಸರು	ತಾಲ್ಲೂಕು	ಪ್ರತಿ ಜಿಲ್ಲೆ/ತಾಲ್ಲೂಕಿಗೆ ಹಂಚಿಕೆಯಾದ ದ್ವಿತೀಯ ದರ್ಜೆ ಲೆಕ್ಕ ಸಹಾಯಕರ ಹುದ್ದೆಗಳ ಒಟ್ಟು ಸಂಖ್ಯೆ
15	ಗುಲ್ಬರ್ಗಾ	ಜೇವರ್ಗಿ	8
		ಸೇಡಂ	8
		ಆಳಂದ	26
		ಚಿಂಚೋಳಿ	10
		ಚಿತಾಪುರ	17
		ಗುಲ್ಬರ್ಗ	16
		ಅಫಜಲ ಪುರ	14
		ಒಟ್ಟು	**99**
16	ಹಾಸನ	ಆಲೂರು	5
		ಅರಕಲಗೂಡು	13
		ಅರಸೀಕೆರೆ	14
		ಬೇಲೂರು	8
		ಚನ್ನರಾಯ ಪಟ್ಟಣ	19
		ಹಾಸನ	16
		ಹೊಳೆ ನರಸೀಪುರ	8
		ಸಕಲೇಶಪುರ	3
		ಒಟ್ಟು	**86**
17	ಹಾವೇರಿ	ಬ್ಯಾಡಗಿ	6
		ಹಾನಗಲ್	15
		ಹಾವೇರಿ	15
		ರಾಣೆ ಬೆನ್ನೂರು	23
		ಹಿರೆ ಕೆರೂರು	12
		ಸವಣೂರು	5
		ಶಿಗ್ಗಾಂವ್	7
		ಒಟ್ಟು	**83**
18	ಕೊಡಗು	ಮಡಿಕೇರಿ	9
		ಸೋಮವಾರಪೇಟೆ	15
		ವೀರಾಜಪೇಟೆ (ಪೊನ್ನಂಪೇಟೆ)	13
		ಒಟ್ಟು	**37**
19	ಕೋಲಾರ	ಕೋಲಾರ	16
		ಮಾಲೂರು	7
		ಬಂಗಾರಪೇಟೆ	12
		ಮುಳಬಾಗಿಲು	11
		ಶ್ರೀನಿವಾಸಪುರ	11
		ಒಟ್ಟು	**57**

ಕ್ರ. ಸಂ.	ಜಿಲ್ಲೆಯ ಹೆಸರು	ತಾಲ್ಲೂಕು	ಪ್ರತಿ ಜಿಲ್ಲೆ/ತಾಲ್ಲೂಕಿಗೆ ಹಂಚಿಕೆಯಾದ ದ್ವಿತೀಯ ದರ್ಜೆ ಲೆಕ್ಕ ಸಹಾಯಕರ ಹುದ್ದೆಗಳ ಒಟ್ಟು ಸಂಖ್ಯೆ
20	ಕೊಪ್ಪಳ	ಕೊಪ್ಪಳ	15
		ಯಲಬುರ್ಗ	9
		ಕುಷ್ಟಗಿ	13
		ಗಂಗಾವತಿ	21
		ಒಟ್ಟು	**58**
21	ಮಂಡ್ಯ	ಕೃಷ್ಣರಾಜಪೇಟೆ	18
		ಮದ್ದೂರು	23
		ಮಳವಳ್ಳಿ	20
		ಮಂಡ್ಯ	22
		ನಾಗಮಂಗಲ	16
		ಪಾಂಡವಪುರ	16
		ಶ್ರೀರಂಗಪಟ್ಟಣ	11
		ಒಟ್ಟು	**126**
22	ಮೈಸೂರು	ಹೆಗ್ಗಡದೇವನಕೋಟೆ	20
		ಹುಣಸೂರು	14
		ಕೃಷ್ಣರಾಜನಗರ	16
		ಮೈಸೂರು	31
		ನಂಜನಗೂಡು	29
		ಪಿರಿಯಾಪಟ್ಟಣ	17
		ಟಿ. ನರಸೀಪುರ	22
		ಒಟ್ಟು	**149**
23	ರಾಯಚೂರು	ರಾಯಚೂರು	14
		ದೇವದುರ್ಗ	12
		ಮಾನ್ವಿ	23
		ಲಿಂಗಸುಗೂರು	12
		ಸಿಂಧನೂರು	25
		ಒಟ್ಟು	**86**
24	ಶಿವಮೊಗ್ಗ	ಶಿವಮೊಗ್ಗ	20
		ಭದ್ರಾವತಿ	21
		ತೀರ್ಥಹಳ್ಳಿ	8
		ಸಾಗರ	11
		ಸೊರಬ	19

ಕ್ರ. ಸಂ.	ಜಿಲ್ಲೆಯ ಹೆಸರು	ತಾಲ್ಲೂಕು	ಪ್ರತಿ ಜಿಲ್ಲೆ/ತಾಲ್ಲೂಕಿಗೆ ಹಂಚಿಕೆಯಾದ ದ್ವಿತೀಯ ದರ್ಜೆ ಲೆಕ್ಕ ಸಹಾಯಕರ ಹುದ್ದೆಗಳ ಒಟ್ಟು ಸಂಖ್ಯೆ
		ಶಿಕಾರಿಪುರ	15
		ಹೊಸನಗರ	10
		ಒಟ್ಟು	**104**
25	ತುಮಕೂರು	ತುಮಕೂರು	17
		ಗುಬ್ಬಿ	28
		ಕುಣಿಗಲ್	20
		ಚಿಕ್ಕನಾಯಕನಹಳ್ಳಿ	20
		ತಿಪಟೂರು	10
		ಶಿರಾ	24
		ಪಾವಗಡ	14
		ಮಧುಗಿರಿ	18
		ಕೊರಟಗೆರೆ	10
		ತುರುವೇಕೆರೆ	11
		ಒಟ್ಟು	**172**
26	ಉಡುಪಿ	ಕಾರ್ಕಳ	31
		ಕುಂದಾಪುರ	25
		ಉಡುಪಿ	13
		ಒಟ್ಟು	**69**
27	ಚಿಕ್ಕಬಳ್ಳಾಪುರ	ಬಾಗೇಪಲ್ಲಿ	8
		ಚಿಂತಾಮಣಿ	8
		ಚಿಕ್ಕಬಳ್ಳಾಪುರ	6
		ಗುಡಿಬಂಡೆ	4
		ಗೌರಿಬಿದನೂರು	21
		ಶಿಡ್ಲಘಟ್ಟ	4
		ಒಟ್ಟು	**51**
28	ರಾಮನಗರ	ಚನ್ನಪಟ್ಟಣ	18
		ಕನಕಪುರ	30
		ಮಾಗಡಿ	9
		ರಾಮನಗರ	16
		ಒಟ್ಟು	**73**

ಕ್ರ. ಸಂ.	ಜಿಲ್ಲೆಯ ಹೆಸರು	ತಾಲ್ಲೂಕು	ಪ್ರತಿ ಜಿಲ್ಲೆ/ತಾಲ್ಲೂಕಿಗೆ ಹಂಚಿಕೆಯಾದ ದ್ವಿತೀಯ ದರ್ಜೆ ಲೆಕ್ಕ ಸಹಾಯಕರ ಹುದ್ದೆಗಳ ಒಟ್ಟು ಸಂಖ್ಯೆ
29	ಉತ್ತರ ಕನ್ನಡ	ಕಾರವಾರ	7
		ಅಂಕೋಲ	7
		ಕುಮಟಾ	13
		ಹೊನ್ನಾವರ	12
		ಭಟ್ಕಳ	11
		ಯಲ್ಲಾಪುರ	3
		ಶಿರಸಿ	10
		ಸಿದ್ದಾಪುರ	5
		ಮುಂಡಗೋಡ	8
		ಹಳಿಯಾಳ	4
		ಜೊಯ್ಡ (ಸುಪ)	2
		ಒಟ್ಟು	**82**
30	ಯಾದಗಿರಿ	ಸುರಪುರ	17
		ಷಹಾಪುರ	12
		ಯಾದಗಿರಿ	15
		ಒಟ್ಟು	**44**
		ಒಟ್ಟು	**2500**

ಹೆಚ್.ಬಿ. ರಘುನಾಥ್,
ಸರ್ಕಾರದ ಅಧೀನ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

ಪಿ.ಆರ್. 1280

ಇಂಧನ ಸಚಿವಾಲಯ

ವಿಷಯ: ಮೆ॥ ಸನ್ ಪವರ್ ಇಂಡಿಯಾ ರವರ 8.00 ಮೆಗಾ ವ್ಯಾಟ್ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆ ಅನುಷ್ಠಾನಕ್ಕೆ ಕಾಲಾವಕಾಶ ವಿಸ್ತರಣೆ ಮಾಡುವ ಬಗ್ಗೆ.

ಓದಲಾಗಿದೆ:
1) ಸರ್ಕಾರಿ ಆದೇಶ ಸಂಖ್ಯೆ: ಇಎನ್ 22 ಎನ್‌ಸಿಇ 2006 ದಿನಾಂಕ: 20.4.2006.
2) ಸರ್ಕಾರಿ ಆದೇಶ ಸಂಖ್ಯೆ: ಇಎನ್ 509 ಎನ್‌ಸಿಇ 2010 ದಿನಾಂಕ: 28.01.2011.
3) ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ, ವ್ಯವಸ್ಥಾಪಕ ನಿರ್ದೇಶಕರ ಪತ್ರ ಸಂಖ್ಯೆ: ಕೆಆರ್‌ಇಡಿ/06/Sunpower-8.00 MW/2012/1020 ದಿನಾಂಕ: 02/03.04.2012.

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಆದೇಶದಲ್ಲಿ ಮೆ:: ಸನ್ ಪವರ್ ಇಂಡಿಯಾ ಕಂಪನಿಗೆ ಬೆಳಗಾಂ ಜಿಲ್ಲೆಯಲ್ಲಿ 5.00 ಮೆಗಾ ವ್ಯಾಟ್ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ಕೆಳಗೆ ವಿವರಿಸಿರುವಂತೆ ಹಂಚಿಕೆ ಮಾಡಲಾಗಿತ್ತು :

Sl. No.	Proposed capacity in MW	Near by villages of the proposed area	Geographical area description of the project
1	5 MW	Channenadaddi, Jainapur, Chikodi, Chinchani, **Belgaum district.**	The potential area of 5 MW comprises of two locations and is identified as Area-'A' and Area- 'B'. **Area-'A'-(3 MW):** An East-West oriented non-contiguous ridge is located on the North-West of Chikkodi and is situated at a distance of about 1 km. It is an open scrub and has two peaks and it appears to be non-forest area. The area is covered in the following Geographical co-ordinates: **Latitude**: 16°25'51"- 16°26'44" N **Longitude**: 74°33'9"- 74°34'49" E **Ridge peaks:** 761, 763m Amsl. **Area-'B'-(2 MW):** A plateau with 764m peak is located on the North-West of Channenadaddi village and situated on the South-West of Chikodi a distance about 3.5km and is a non-Forest area. The proposed area is covered in the following Geographical co-ordinates: **Latitude**: 16°23'33"- 16°24'31" N **Longitude**: 74°33'0"- 74°33'50" E **Ridge peaks:** 764m Amsl.
Total		**5 MW**	

ಮೇಲಿನ ಕ್ರಮ ಸಂಖ್ಯೆ (1)ರ ಆದೇಶದಲ್ಲಿ ಬೆಳಗಾವಿ ಜಿಲ್ಲೆಯಲ್ಲಿ ಹಂಚಿಕೆಯಾಗಿದ್ದ 5 ಮೆ.ವ್ಯಾ ಸಾಮರ್ಥ್ಯದಲ್ಲಿ Area 'A' ಯಲ್ಲಿನ ಚಿಕ್ಕೋಡಿ ಗ್ರಾಮದಲ್ಲಿನ 3.00 ಮೆ.ವ್ಯಾ. ಸಾಮರ್ಥ್ಯವನ್ನು 8.00 ಮೆ.ವ್ಯಾ. ಸಾಮರ್ಥ್ಯಕ್ಕೆ ಈ ಕೆಳಗೆ ವಿವರಿಸಿರುವಂತೆ ಮೇಲಿನ ಕ್ರಮ ಸಂಖ್ಯೆ (2)ರ ಆದೇಶದಲ್ಲಿ ಹೆಚ್ಚಿಸಲಾಗಿತ್ತು ಹಾಗೂ ಸದರಿ ಯೋಜನೆಯನ್ನು ದಿನಾಂಕ 31.3.2012 ರೊಳಗೆ ಅನುಷ್ಠಾನಗೊಳಿಸತಕ್ಕದ್ದೆಂದು ಆದೇಶಿಸಲಾಗಿತ್ತು.

Geographical Area details	Sanctioned capacity in MW	Capacity proposed for Enhancement	No. of WTGs & rating in kw	Total capacity including proposed enhancement
Area-'A'-(3 MW): An East-West oriented non-contiguous ridge is located on the North-West of Chikkodi and is situated at a distance of about 1 km. It is an open scrub and has two peaks and it appears to be non-forest area. The area is covered in the following Geographical co-ordinates: Latitude: 16°25'51"- 16°26'44" N Longitude: 74°33'09"- 74°34'49" E Ridge peaks: 761, 763m Amsl. Toposheet No: 47 L/11.	3 MW	5 MW	5x1600 kw	8 MW (3 MW to 8 MW)

ಮೇಲೆ ಓದಲಾದ ಕ್ರಮ ಸಂಖ್ಯೆ (3)ರ ಪತ್ರದಲ್ಲಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ, ವ್ಯವಸ್ಥಾಪಕ ನಿರ್ದೇಶಕರು ಮೆ:: ಸನ್ ಪವರ್ ಇಂಡಿಯಾ ರವರ ಮೇಲಿನ 8.00 ಮೆಗಾ ವ್ಯಾಟ್ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯು ಪ್ರಗತಿಯ ಹಂತದಲ್ಲಿರುವುದರಿಂದ ಕಾಲಾವಕಾಶ ವಿಸ್ತರಣಾ ಶುಲ್ಕ ₹ 8.00 ಲಕ್ಷಗಳನ್ನು ಪಾವತಿಸುವ ಷರತ್ತಿಗೊಳಪಟ್ಟು ಯೋಜನೆಯ ಅನುಷ್ಠಾನಕ್ಕೆ ಕಾಲಾವಕಾಶವನ್ನು ದಿನಾಂಕ 31.3.2013 ರವರೆಗೆ ವಿಸ್ತರಿಸುವಂತೆ ಅಭಿವೃದ್ಧಿದಾರರ ಕೋರಿಕೆಯ ಹಿನ್ನೆಲೆಯಲ್ಲಿ ಶಿಫಾರಸ್ಸು ಮಾಡಿ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿ, ಈ ಕೆಳಗಿನಂತೆ ಆದೇಶಿಸಲಾಗಿದೆ:-

ಸರ್ಕಾರಿ ಆದೇಶ ಸಂಖ್ಯೆ: ಇಎನ್ 126 ಎನ್‌ಸಿಇ 2012, ಬೆಂಗಳೂರು, ದಿನಾಂಕ: 25.04.2012.

ಮೆ॥ ಸನ್ ಪವರ್ ಇಂಡಿಯಾ ಇವರಿಗೆ ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ತಾಲ್ಲೂಕಿನ, ಚಿಕ್ಕೋಡಿ ಗ್ರಾಮದಲ್ಲಿ ಮಂಜೂರಾಗಿರುವ 8.00 ಮೆಗಾ ವ್ಯಾಟ್ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯ ಅನುಷ್ಠಾನಕ್ಕಾಗಿ ಕಾಲಾವಕಾಶವನ್ನು ದಿನಾಂಕ 31.3.2013 ರವರೆಗೆ ವಿಸ್ತರಿಸಲು ಹಾಗೂ ಕಾಲಾವಕಾಶ ವಿಸ್ತರಣಾ ಶುಲ್ಕ ₹ 8.00 ಲಕ್ಷಗಳನ್ನು ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತಕ್ಕೆ ಪಾವತಿಸತಕ್ಕದ್ದೆಂಬ ಷರತ್ತಿಗೊಳಪಟ್ಟು ಆದೇಶಿಸಿದೆ.

ಈ ಆದೇಶವನ್ನು ರದ್ದು ಪಡಿಸುವುದು/ಮಾರ್ಪಾಡು ಮಾಡುವ ಅಧಿಕಾರವನ್ನು ಸರ್ಕಾರವು ಹೊಂದಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ.

ಕೌಸಲ್ಯಾ,
ಸರ್ಕಾರದ ಅಧೀನ ಕಾರ್ಯದರ್ಶಿ,
ಇಂಧನ ಇಲಾಖೆ,

ಪಿ.ಆರ್. 1297

ಕಾರ್ಮಿಕ ಸಚಿವಾಲಯ

ವಿಷಯ: ಜರ್ಮನ್ ಇಂಟರ್ ನ್ಯಾಷನಲ್ ಸರ್ವೀಸಸ್ (ಜಿಐಜೆಡ್-ಐಎಸ್)ರವರು ಸಾರ್ವಜನಿಕ ಖಾಸಗಿ ಸಹಭಾಗಿತ್ವದ ಯೋಜನೆಯಡಿಯಲ್ಲಿನ ಕೈಗಾರಿಕಾ ತರಬೇತಿ ಸಂಸ್ಥೆಗಳಲ್ಲಿರುವ ಕಿರಿಯ ತರಬೇತಿ ಅಧಿಕಾರಿಗಳಿಗೆ ಜರ್ಮನಿಯಲ್ಲಿ ತರಬೇತಿ ನೀಡಲು ಆದೇಶ ಹೊರಡಿಸುವ ಬಗ್ಗೆ.

ಓದಲಾಗಿದೆ:
1) ಸರ್ಕಾರಿ ಆದೇಶ ಸಂಖ್ಯೆ: ಕಾಇ 89 ಇಟಿಐ 2011 ದಿನಾಂಕ: 01/10/2011.
2) ಆಯುಕ್ತರು, ಉದ್ಯೋಗ ಮತ್ತು ತರಬೇತಿ ಇಲಾಖೆ ಇವರ ಪತ್ರ ಸಂ. ಉತಇ/ತರಬೇತಿ/ ಪಿಪಿಪಿ-ಜಿಐಜೆಡ್-ಐಎಸ್-ಟಿಆರ್‌ಜಿ/ವಿವ-09/2011-12 ದಿನಾಂಕ: 29/03/2012 ಮತ್ತು 19/04/2012.
3) ದಿನಾಂಕ: 10/04/2012ರಂದು ಕಾರ್ಯದರ್ಶಿ, ಕಾರ್ಮಿಕ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ನಡೆದ ಸ್ಕ್ರೀನಿಂಗ್ ಸಮಿತಿ ಸಭೆಯ ನಡವಳಿಗಳು.

ಪ್ರಸ್ತಾವನೆ:

ಮೇಲೆ (1)ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ಜರ್ಮನ್ ಇಂಟರ್‌ನ್ಯಾಷನಲ್ ಸರ್ವೀಸಸ್ (GIZ-IS) ರವರ ತಾಂತ್ರಿಕ ಸಹಾಯದಿಂದ ಸರ್ಕಾರಿ ಮತ್ತು ಖಾಸಗಿ ಸಹಭಾಗಿತ್ವದೊಂದಿಗೆ ರಾಜ್ಯದಲ್ಲಿನ 76 ಕೈಗಾರಿಕಾ ತರಬೇತಿ ಸಂಸ್ಥೆಗಳನ್ನು ಉನ್ನತೀಕರಿಸುವ ಯೋಜನೆಯನ್ನು 2011-12ನೇ ಸಾಲಿನಿಂದ ಪ್ರಾರಂಭಿಸಲು ಸರ್ಕಾರದ ಮಂಜೂರಾತಿ ನೀಡಲಾಗಿದೆ.

ಮೇಲೆ (2)ರಲ್ಲಿ ಓದಲಾದ ಆಯುಕ್ತರು, ಉದ್ಯೋಗ ಮತ್ತು ತರಬೇತಿ ಇಲಾಖೆ ಇವರ ಪತ್ರದಲ್ಲಿ ಮೇಲಿನ ಯೋಜನೆ ಅಡಿಯಲ್ಲಿ ಜಿಐಜೆಡ್-ಐಎಸ್ ಸಂಸ್ಥೆಯು ಸಾರ್ವಜನಿಕ ಖಾಸಗಿ ಸಹಭಾಗಿತ್ವದ ಯೋಜನೆಯಡಿಯಲ್ಲಿ ಉನ್ನತೀಕರಿಸಲಾಗಿರುವ ಕೈಗಾರಿಕಾ ತರಬೇತಿ ಸಂಸ್ಥೆಗಳಲ್ಲಿನ 8 ಕಿರಿಯ ತರಬೇತಿ ಅಧಿಕಾರಿಗಳನ್ನು SLV, Mannhein Germany ಇಲ್ಲಿ ದಿನಾಂಕ: 23/04/2012ರಿಂದ 04/05/2012ರವರೆಗೆ ನಡೆಯುವ ತರಬೇತಿಗೆ ನಿಯೋಜಿಸಲು ಕೋರಿದ್ದು, ಸದರಿ ತರಬೇತಿಗೆ ತಗಲುವ ಎಲ್ಲಾ ವೆಚ್ಚವನ್ನು ಜಿಐಜೆಡ್-ಐಎಸ್ ರವರಿಗೆ ನೀಡಲಾಗುವ ಯೋಜನಾ ಫೀಸ್‌ನಲ್ಲಿ ಭರಿಸುವುದಾಗಿ ತಿಳಿಸಿರುತ್ತಾರೆ. ಅಲ್ಲದೇ, ಜಿಐಜೆಡ್-ಐಎಸ್ ರವರನ್ನು ತಾಂತ್ರಿಕ ಸಲಹೆಗಾರರನ್ನಾಗಿ ನೇಮಕ ಮಾಡಿಕೊಂಡಿದ್ದು, ಇವರಿಗೆ ನಾಲ್ಕು ವರ್ಷಗಳಿಗೆ ನೀಡಲಾಗುವ ಒಟ್ಟು ಪ್ರಾಜೆಕ್ಟ್ ಮೊತ್ತ ₹ 3000 ಲಕ್ಷಗಳ ಪೈಕಿ ಶೇ. 50 ರಷ್ಟು ರಾಜ್ಯ ಸರ್ಕಾರವು ಭರಿಸುತ್ತಿದ್ದು, ಉಳಿದ ಶೇ. 50ರಷ್ಟು ಮೊತ್ತವನ್ನು 76 ಸಾರ್ವಜನಿಕ ಖಾಸಗಿ ಸಹಭಾಗಿತ್ವದ ಸಂಸ್ಥೆಗಳ ಐಎಂಸಿಗಳಿಂದ ಭರಿಸಲು ಕೇಂದ್ರ ಸರ್ಕಾರದ ಒಪ್ಪಿಗೆಯನ್ನು ಕೋರಿದ್ದು, ನಿರೀಕ್ಷಿಸಲಾಗಿದೆ ಎಂದು ತಿಳಿಸಿರುವರು. ಮುಂದುವರೆದು, 76 ಸಾರ್ವಜನಿಕ ಖಾಸಗಿ ಸಹಭಾಗಿತ್ವದ ಸಂಸ್ಥೆಗಳಲ್ಲಿ 8 ಸಂಸ್ಥೆಗಳಲ್ಲಿ ಮಾತ್ರ ವೆಲ್ಡರ್ ವೃತ್ತಿಯನ್ನು ಅನುಷ್ಠಾನಗೊಳಿಸಿದ್ದು, ಈ 8 ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ 8 ಕಿರಿಯ ತರಬೇತಿ ಅಧಿಕಾರಿಗಳು ತರಬೇತಿಯನ್ನು ಪೂರೈಸಿದ ನಂತರ ಕನಿಷ್ಠ 3 ವರ್ಷಗಳವರೆಗೆ ಸದರಿ ಸಂಸ್ಥೆಯಲ್ಲಿಯೇ ಕಾರ್ಯನಿರ್ವಹಿಸುವಂತೆ ಷರತ್ತಿಗೆ ಒಳಪಡಿಸಿ ತರಬೇತಿಗೆ ನಿಯೋಜಿಸಲು ಕೋರಿರುತ್ತಾರೆ. ಮುಂದುವರೆದು ದಿನಾಂಕ: 19/04/2012ರಲ್ಲಿನ ಪತ್ರದಲ್ಲಿ ಶ್ರೀ ಶೋಯಬ್ ಅಹಮದ್, ಕಿರಿಯ ತರಬೇತಿ ಅಧಿಕಾರಿ, ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ, ವಾಡಿ ಇವರ ವಿರುದ್ಧ ಇಲಾಖಾ ವಿಚಾರಣೆ ನಡೆದು ದಿನಾಂಕ: 19/05/2010ರಿಂದ ಎರಡು ವಾರ್ಷಿಕ ವೇತನ ಬಡ್ತಿಯನ್ನು ತಡೆಹಿಡಿಯುವಂತೆ ದಂಡನೆ ವಿಧಿಸಿರುವ ಹಿನ್ನೆಲೆಯಲ್ಲಿ ಸದರಿಯವರನ್ನು ಹೊರತುಪಡಿಸಿ ಉಳಿದ 7 ಮಂದಿ ಕಿರಿಯ ತರಬೇತಿ ಅಧಿಕಾರಿಗಳನ್ನು ತರಬೇತಿಗೆ ನಿಯೋಜಿಸಲು ಆದೇಶ ಹೊರಡಿಸುವಂತೆ ಕೋರಿರುತ್ತಾರೆ.

ಮೇಲೆ (3)ರಲ್ಲಿ ಓದಲಾದ ಸ್ಕ್ರೀನಿಂಗ್ ಸಮಿತಿ ಸಭೆಯಲ್ಲಿ ಆಯುಕ್ತರು, ಉದ್ಯೋಗ ಮತ್ತು ತರಬೇತಿ ಇಲಾಖೆ ಇವರ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, 8 ಮಂದಿ ಕಿರಿಯ ತರಬೇತಿ ಅಧಿಕಾರಿಗಳನ್ನು ದಿನಾಂಕ: 23/04/2012ರಿಂದ ದಿನಾಂಕ: 04/05/2012ರವರೆಗೆ SLV, Mannhein Germany ಇಲ್ಲಿ ಜಿಐಜೆಡ್–ಐಎಸ್ ಸಂಸ್ಥೆಯು ನಡೆಸಲಿರುವ ತರಬೇತಿಗೆ ನಿಯೋಜಿಸಲು ಸ್ಕ್ರೀನಿಂಗ್ ಸಮಿತಿಯು ಅನುಮೋದನೆ ನೀಡಿರುತ್ತದೆ.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿದ ನಂತರ ಕೆಳಕಂಡ ಆದೇಶವನ್ನು ನೀಡಲಾಗಿದೆ.

ಸರ್ಕಾರಿ ಆದೇಶ ಸಂ: ಕಾಇ 89 ಇಟಿಐ 2011, ಬೆಂಗಳೂರು ದಿನಾಂಕ: 20/04/2012

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ ಇದರೊಂದಿಗೆ ಲಗತ್ತಿಸಿರುವ ಅನುಬಂಧ–1ರಲ್ಲಿನ 7 ಮಂದಿ ಕಿರಿಯ ತರಬೇತಿ ಅಧಿಕಾರಿಗಳನ್ನು ದಿನಾಂಕ: 23/04/2012ರಿಂದ ದಿನಾಂಕ: 04/05/2012ರವರೆಗೆ SLV, Mannhein Germany ಇಲ್ಲಿ ಜಿಐಜೆಡ್-ಐಎಸ್ ಸಂಸ್ಥೆಯು ನಡೆಸಲಿರುವ ತರಬೇತಿಗೆ ನಿಯೋಜಿಸಲು ಸರ್ಕಾರದ ಮಂಜೂರಾತಿ ನೀಡಲಾಗಿದೆ. ಈ 7 ಮಂದಿ ತರಬೇತಿಯನ್ನು ಪೂರೈಸಿದ ನಂತರ ಕನಿಷ್ಠ 3 ವರ್ಷಗಳವರೆಗೆ ಪಿ.ಪಿ.ಪಿ ಸಂಸ್ಥೆಗಳಲ್ಲಿ ಕರ್ತವ್ಯ ನಿರ್ವಹಿಸತಕ್ಕದ್ದು ಎನ್ನುವ ಷರತ್ತನ್ನು ವಿಧಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಜೆ.ಎಸ್.ವಿಶ್ವನಾಥಪ್ಪ,
ಪೀಠಾಧಿಕಾರಿ,
ಕಾರ್ಮಿಕ ಇಲಾಖೆ
(ಉದ್ಯೋಗ ಮತ್ತು ತರಬೇತಿ)

Annexure-1

List of Shortlisted JTOs from the PPP ITIs for Training in Germany

Sl.No.	Name of the ITI	Name of Division	Name of the JTOs	Remarks
1	Govt. ITI Ammasandra	Bangalore	H M Durgaiah	Welding Trade
2	Govt. ITI Tumkur		Vedamurthy B R	Welding Trade
3	Govt. ITI Arasikere	Mysore	Dondappa Navi	Welding Trade
4	Govt. ITI Chickmagalur		Manjunath B S	Welding Trade
5	Govt. ITI Kadur		Lokesh H M	Welding Trade
6	Govt. ITI Guledgud	Belgaum	Mujawar S R	Fitter Trade Welding as one subject being taught by these JTO's
7	Govt. ITI Dharwad		Panchkshrayya S Kashimath	

ಜೆ.ಎಸ್.ವಿಶ್ವನಾಥಪ್ಪ,
ಪೀಠಾಧಿಕಾರಿ,
ಕಾರ್ಮಿಕ ಇಲಾಖೆ
(ಉದ್ಯೋಗ ಮತ್ತು ತರಬೇತಿ)

ಪಿ.ಆರ್. 1240

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯ

ವಿಷಯ: ಶ್ರೀ ಎಂ.ರಾಧಾಕೃಷ್ಣ, ಉಪನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ತುಮಕೂರು ಇವರನ್ನು ಸರ್ಕಾರಿ ಸೇವೆಯಿಂದ ಅಮಾನತ್ತುಗೊಳಿಸುವ ಬಗ್ಗೆ –ಆದೇಶ.

ಓದಲಾಗಿದೆ:

1. ದಿ:15–04–2012 ರ ಕನ್ನಡ ಪ್ರಭ ದಿನಪತ್ರಿಕೆಯಲ್ಲಿ ಪ್ರಕಟವಾದ ಮಾಹಿತಿ "ಸರ್ಕಾರಿ ಅಧಿಕಾರಿ ವಿರುದ್ಧ ಅತ್ಯಾಚಾರ ದೂರು"
2. ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ರವರ ಪತ್ರ ಸಂಖ್ಯೆ:ಮಮಇ/ನಿಸಿಗೆ/3/2012–13 ದಿ:17–04–2012

ಪ್ರಸ್ತಾವನೆ:

ಮೇಲೆ ಉಲ್ಲೇಖ (1) ರಲ್ಲಿ ಓದಲಾದ ದಿ:15–04–2012 ರ ಕನ್ನಡ ಪ್ರಭ ದಿನಪತ್ರಿಕೆಯಲ್ಲಿ ಶ್ರೀ ಎಂ.ರಾಧಾಕೃಷ್ಣ ಉಪನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ತುಮಕೂರು ಇವರು ಖಾಸಗಿ ಸಂಸ್ಥೆಯ ಮುಖ್ಯಸ್ಥೆಯ ಮೇಲೆ ಅತ್ಯಾಚಾರ ಎಸಗಿದರ ಸಂಬಂಧ ಯಲಹಂಕ ಪೋಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆಯೆಂದು ಪ್ರಕಟಣೆ ಇರುತ್ತದೆ. ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಇವರು ಉಲ್ಲೇಖ (2) ರ ತಮ್ಮ ವರದಿಯಲ್ಲಿ ಶ್ರೀ ಎಂ.ರಾಧಾಕೃಷ್ಣ ಉಪನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ತುಮಕೂರು, ಇವರು ಶ್ರೀಮತಿ ಗಂಗಾ ಎಂಬುವರ ಮೇಲೆ ಅತ್ಯಾಚಾರ ಮಾಡಿರುವುದಾಗಿ ಈ ಸಂಬಂಧ ಬೆಂಗಳೂರಿನ ಯಲಹಂಕ ಪೋಲೀಸ್ ಠಾಣೆಯಲ್ಲಿ ಮೊ.ಸಂ: 82/2012 ಕಲಂ 376, 376(ಬಿ) 506 ಐಪಿಸಿ ಮತ್ತು 3(2)(11)(12) ಎಸ್‌ಸಿ/ಎಸ್.ಟಿ.ಆಕ್ಟ್ 1989 ರಡಿ ಪ್ರಥಮ ವರ್ತಮಾನ ವರದಿ(ಎಫ್.ಐ.ಆರ್) ಸಲ್ಲಿಸಿರುವ ಬಗ್ಗೆ ಮಾಹಿತಿ ಒದಗಿಸುತ್ತಾ, ಪ್ರಸ್ತುತ ಅಧಿಕಾರಿಯು ದಿ:14–04–2012 ರಿಂದ ಪೋಲೀಸ್ ದಸ್ತಗಿರಿ ಮಾಡಿದ್ದು, ಮಾನ್ಯ ಸಿ.ಎಂ.ಎಂ. ನ್ಯಾಯಾಲಯಕ್ಕೆ ಹಾಜರುಪಡಿಸಿದ್ದು, ನ್ಯಾಯಾಂಗ ಬಂಧನದಲ್ಲಿರುವುದರಿಂದ ಹಾಗೂ ಬಿಡುಗಡೆ ಕೋರಿ ಸಂಬಂಧಪಟ್ಟ ನ್ಯಾಯಾಲಯದಲ್ಲಿ ಜಾಮೀನು ಅರ್ಜಿ ಪರಿಶೀಲನೆಯಲ್ಲಿರುವುದರಿಂದ ಅರ್ಜಿಯು ವಿಚಾರಣಾ ಹಂತದಲ್ಲಿದ್ದು, ಈ ಬಗ್ಗೆ ಸರ್ಕಾರ ನಿಯಮಾನುಸಾರ ಮುಂದಿನ ಸೂಕ್ತ ಕ್ರಮ ತೆಗೆದುಕೊಳ್ಳುವಂತೆ ವರದಿಸಿರುತ್ತಾರೆ.

ಪ್ರಕರಣವನ್ನು ಕರ್ನಾಟಕ ನಾಗರಿಕ ಸೇವಾ (ಸಿಸಿಎ) ನಿಯಮಾವಳಿ 1957 ರ ನಿಯಮ 10(2)(ಎ) ರನ್ವಯ ಪರಿಶೀಲಿಸಲಾಗಿದೆ. ಯಾವುದೇ ಒಬ್ಬ ಸರ್ಕಾರಿ ಅಧಿಕಾರಿ/ನೌಕರರನ್ನು ಕ್ರಿಮಿನಲ್ ಮೊಕದ್ದಮೆಯಡಿ 48 ಗಂಟೆಗಳ ಕಾಲ ದಸ್ತಗಿರಿ ಮಾಡಿ ವಶದಲ್ಲಿಟ್ಟುಕೊಂಡಲ್ಲಿ ಅಂತಹ ಅಧಿಕಾರಿ/ನೌಕರರನ್ನು ದಸ್ತಗಿರಿ ಮಾಡಿದ ದಿನಾಂಕದಿಂದಲೇ ಜಾರಿಗೆ ಬರುವಂತೆ ಇಲಾಖಾ ವಿಚಾರಣೆ ಬಾಕಿಯಿರಿಸಿ ಸರ್ಕಾರಿ ಸೇವೆಯಿಂದ ಅಮಾನತ್ತುಗೊಳಿಸಲು ಅವಕಾಶ ಕಲ್ಪಿಸಲಾಗಿದೆ. ಅದರಂತೆ ಈ ಪ್ರಕರಣದಲ್ಲಿ ಶ್ರೀ ಎಂ.ರಾಧಾಕೃಷ್ಣ, ಉಪನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ತುಮಕೂರು ಇವರನ್ನು ದಿನಾಂಕ:14–04–2012 ರಿಂದಲೇ ಪೂರ್ವಾನ್ವಯವಾಗಿ ಜಾರಿಗೆ ಬರುವಂತೆ ಇಲಾಖಾ ವಿಚಾರಣೆ ಬಾಕಿಯಿರಿಸಿ, ಕ.ನಾ.ಸೇ(ಸಿಸಿಎ) ನಿಯಮಾವಳಿ 1957 ರ ನಿಯಮ 10(2)(ಎ) ರನ್ವಯ ಸರ್ಕಾರಿ ಸೇವೆಯಿಂದ ಅಮಾನತ್ತುಗೊಳಿಸಲು ತೀರ್ಮಾನಿಸಿ ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರಿ ಆದೇಶ ಸಂಖ್ಯೆ:ಮಮಇ 175 ಎಸ್‌ಜಿಡಿ 2012, ಬೆಂಗಳೂರು, ದಿನಾಂಕ:23–04–2012

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಶ್ರೀ ಎಂ.ರಾಧಾಕೃಷ್ಣ, ಉಪನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ತುಮಕೂರು, ಇವರನ್ನು ಕ.ನಾ.ಸೇ(ಸಿಸಿಎ) ನಿಯಮಾವಳಿ 1957 ರ ನಿಯಮ 10(2)(ಎ) ರನ್ವಯ ದಿನಾಂಕ:14–04–2012 ರಿಂದಲೇ ಪೂರ್ವಾನ್ವಯವಾಗಿ ಜಾರಿಗೆ ಬರುವಂತೆ ಇಲಾಖಾ ವಿಚಾರಣೆ ಬಾಕಿಯಿರಿಸಿ ಸರ್ಕಾರಿ ಸೇವೆಯಿಂದ ಅಮಾನತ್ತುಗೊಳಿಸಿ ಆದೇಶಿಸಲಾಗಿದೆ.

ಅಮಾನತ್ತಿನ ಅವಧಿಯಲ್ಲಿ ಸದರಿ ಅಧಿಕಾರಿಯು ಕರ್ನಾಟಕ ನಾಗರಿಕ ಸೇವಾ ನಿಯಮಾವಳಿಗಳು 1957 ರ ನಿಯಮ 98 (1) ರನ್ವಯ ಜೀವನಾಂಶ ಭತ್ಯೆ ಪಡೆಯಲು ಅರ್ಹರಾಗಿರುತ್ತಾರೆ. ಅಲ್ಲದೆ ಅಮಾನತ್ತಿನ ಅವಧಿಯಲ್ಲಿ ಸದರಿ ಅಧಿಕಾರಿಯು ಸಕ್ಷಮ ಪ್ರಾಧಿಕಾರದ ಲಿಖಿತ ಅನುಮೋದನೆ ಇಲ್ಲದೆ ಕೇಂದ್ರ ಸ್ಥಾನವನ್ನು ಬಿಡತಕ್ಕದ್ದಲ್ಲ.

ಮುಂದುವರೆದು ಇವರು ಅಮಾನತ್ತಿನ ಅವಧಿಯಲ್ಲಿ ಜೀವನಾಂಶ ಭತ್ಯೆ ಪಡೆಯಲು ಇವರ ಲೀನ್ ಅನ್ನು ಉಪನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಕೇಂದ್ರ ಕಛೇರಿ, ಬೆಂಗಳೂರಿಗೆ ವರ್ಗಾಯಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಬಿ.ಕಮಲಮ್ಮ

ಸರ್ಕಾರದ ಅಧೀನಕಾರ್ಯದರ್ಶಿ–2,

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ.

ಪಿ.ಆರ್. 1257

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯ

ವಿಷಯ: ಶ್ರೀಮತಿ ಉಷಾ ಆರ್ ಪಟ್ವಾರಿ, ಹಿಂದಿನ ಜಂಟಿ ನಿರ್ದೇಶಕರು (ಐಸಿಡಿಎಸ್), ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಹಾಲಿ ಪ್ರಧಾನ ವ್ಯವಸ್ಥಾಪಕರು-2, ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ, ಬೆಂಗಳೂರು ಇವರನ್ನು ಸರ್ಕಾರಿ ಸೇವೆಯಿಂದ ಅಮಾನತ್ತುಗೊಳಿಸುವ ಬಗ್ಗೆ-ಆದೇಶ.

ಓದಲಾಗಿದೆ:
1. ದಿನಾಂಕ:10-03-2012 ರಂದು ಪ್ರಜಾವಾಣಿ ದಿನಪತ್ರಿಕೆಯಲ್ಲಿ ಪ್ರಕಟವಾದ ಮಾಹಿತಿ "ಐಎಎಸ್ ಅಧಿಕಾರಿ ಮನೆ ಸೇರಿ 20 ಕಡೆ ಲೋಕಾಯುಕ್ತ ದಾಳಿ"
2. ಅಪರ ಪೋಲೀಸ್ ಮಹಾ ನಿರ್ದೇಶಕರು, ಕರ್ನಾಟಕ ಲೋಕಾಯುಕ್ತ ಬೆಂಗಳೂರು, ರವರ ಕಛೇರಿಯ ಪತ್ರ ಸಂಖ್ಯೆ:ಲೋಕ್/ಐಎನ್‌ವಿ(ಜಿ)/ ಸಿಟಿ/ಕ್ರೈಂ.28/2012 ದಿ:05-04-2012
3. ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಇವರ ಕಛೇರಿಯ ಅರೆ ಸರ್ಕಾರಿ ಪತ್ರ ಸಂಖ್ಯೆ:ಮಮಅಇ/ಆಶಾ/11-12 ದಿನಾಂಕ:17-03-2012

ಪ್ರಸ್ತಾವನೆ:

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಸಮಗ್ರ ಶಿಶು ಅಭಿವೃದ್ಧಿ ಯೋಜನೆಯಲ್ಲಿ (ಐಸಿಡಿಎಸ್) ಭಾರಿ ಪ್ರಮಾಣದ ಅವ್ಯವಹಾರ ನಡೆದಿರುವುದನ್ನು ಲೋಕಾಯುಕ್ತ ಪೋಲೀಸರು ಪತ್ತೆ ಹಚ್ಚಿದ್ದು, ಹಿಂದಿನ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯವರ ನಿವಾಸವನ್ನೊಳಗೊಂಡಂತೆ ರಾಜ್ಯದ ವಿವಿಧೆಡೆ 20 ಕಡೆಗಳಲ್ಲಿ ದಿ:09-03-2012 ರಂದು ಏಕಕಾಲಕ್ಕೆ ದಾಳಿ ನಡೆಸಿ ಮಹತ್ವದ ದಾಖಲೆಗಳನ್ನು ವಶಪಡಿಸಿಕೊಂಡಿದ್ದು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಜಂಟಿ ನಿರ್ದೇಶಕರಾದ ಶ್ರೀಮತಿ ಉಷಾ ಆರ್ ಪಟವಾರಿ, ಸಹಾಯಕ ನಿರ್ದೇಶಕರಾದ ಶ್ರೀ ಎಂ.ಮುನಿರಾಜು, ಇವರುಗಳ ಮನೆ ಮತ್ತು ಕಛೇರಿಗಳಿಗೆ ದಾಳಿ ನಡೆಸಿ ಐ.ಸಿ.ಡಿ.ಎಸ್. ಯೋಜನೆಯ ಪೌಷ್ಠಿಕ ಆಹಾರ ಮತ್ತು ನಿಯಮ ಪೂರ್ವಕ ಗುತ್ತಿಗೆ ಪಡೆದಿರುವ ತಮಿಳುನಾಡು ಮೂಲದ ಕ್ರಿಸ್ಟಿ ಫ್ರೈಡ್‌ಗ್ರಾಮ್ಸ್ ಕಛೇರಿ, ಗೋದಾಮುಗಳ ಮೇಲೆ ಹಾಗೂ ಮಹಿಳಾ ಮತ್ತು ಮಕ್ಕಳ ಕಲ್ಯಾಣ ನಿರ್ದೇಶನಾಲಯ, ಅಂಗನವಾಡಿ ಕೇಂದ್ರಗಳು ಮತ್ತು ಮಹಿಳಾ ಸಂಘಗಳ ಉತ್ಪದನಾ ಕೇಂದ್ರಗಳ ಮೇಲೆ ದಾಳಿ ನಡೆಸಲಾಗಿರುವುದು ಮೇಲೆ ಕ್ರಮ ಸಂಖ್ಯೆ (1) ರಲ್ಲಿ ಓದಲಾದ ದಿ:10-03-2012 ರ ಪ್ರಜಾವಾಣಿ ದಿನಪತ್ರಿಕೆಯಲ್ಲಿ ಪ್ರಕಟವಾಗಿರುತ್ತದೆ.

ಮೇಲೆ ಕ್ರಮ ಸಂಖ್ಯೆ (2) ರಲ್ಲಿ ಓದಲಾದ ದಿನಾಂಕ:05-04-2012 ರ ಅಪರ ಪೋಲೀಸ್ ಮಹಾ ನಿರ್ದೇಶಕರು, ಕರ್ನಾಟಕ ಲೋಕಾಯುಕ್ತ ಬೆಂಗಳೂರು, ರವರ ಪತ್ರದಲ್ಲಿ ಸಾವಿರಾರು ಮಕ್ಕಳು ಹಾಲುಣಿಸುವ ತಾಯಂದಿರು, ಗರ್ಭಿಣಿಯರು ಹಾಗೂ ಕಿಶೋರಿ ಹೆಣ್ಣು ಮಕ್ಕಳಿಗೆ ಅವಶ್ಯಕವಾಗಿರುವ ಪೌಷ್ಠಿಕಾಂಶವನ್ನು ಒದಗಿಸಲು ವಾರ್ಷಿಕ ಸುಮಾರು 500 ಕೋಟಿ ವೆಚ್ಚದ ಸರ್ಕಾರದ ಸಮಗ್ರ ಶಿಶು ಅಭಿವೃದ್ಧಿ ಯೋಜನೆಯಡಿ ನಡೆದಿರುವ ಅವ್ಯಹಾರದಿಂದಾಗಿ ಸುಮಾರು 45 ಲಕ್ಷ ಫಲಾನುಭವಿಗಳಿಗೆ ತೊಂದರೆಯಾಗಿದ್ದು, ಮಕ್ಕಳು ಮತ್ತು ಮಹಿಳೆಯರಲ್ಲಿ ಪೌಷ್ಠಿಕಾಂಶದ ಕೊರತೆ ಬಗ್ಗೆ ಹಲವಾರು ದೂರು/ಮಾಹಿತಿ ಬಂದ ಹಿನ್ನೆಲೆಯಲ್ಲಿ ಈ ಬಗ್ಗೆ ಪ್ರಾಥಮಿಕ ತನಿಖೆ ನಡೆಸಿ ಪಿರ್ಯಾದಿ ಶ್ರೀ ವಿ.ಅನಿಲ್ ಕುಮಾರ್, ಪೋಲೀಸ್ ನಿರೀಕ್ಷಕರು, ನಗರ ವಿಭಾಗ, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ರವರು ನೀಡಿದ ವಿವರವಾದ ವರದಿಯ ಆಧಾರದ ಮೇರೆಗೆ, ಆರೋಪಿ-1 ಡಾ:ಶಮ್ಲಾ ಇಕ್ಬಾಲ್, ಹಿಂದಿನ ನಿರ್ದೇಶಕರು, ಆರೋಪಿ-2 ಶ್ರೀಮತಿ ಉಷಾ ಆರ್ ಪಟವಾರಿ, ಜಂಟಿ ನಿರ್ದೇಶಕರು, ಆರೋಪಿ-3 ಮುನಿರಾಜು, ಸಹಾಯಕ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಂಗಳೂರು ಹಾಗೂ ಇತರರ ವಿರುದ್ಧ ಸರ್ಕಾರಿ ಯೋಜನೆಯ ಅವ್ಯವಹಾರದ ಸಂಬಂಧ ಬೆಂಗಳೂರು ನಗರ ಲೋಕಾಯುಕ್ತ ಪೋಲೀಸ್ ಠಾಣಾ ಮೊ.ಸಂ.20/2012 ರಲ್ಲಿ ದಿ:08-03-2012 ರಂದು ಪ್ರಕರಣವನ್ನು ದಾಖಲಿಸಿ ದಿ:09-03-2012 ರಂದು ಶೋಧನೆಯನ್ನು ಕೈಗೊಳ್ಳಲಾಗಿದೆಯೆಂದು ವರದಿಯಾಗಿದೆ.

ಮುಂದುವರೆದು ಶ್ರೀಮತಿ ಉಷಾ ಆರ್ ಪಟವಾರಿ, ಜಂಟಿ ನಿರ್ದೇಶಕರು, ಮತ್ತು ಶ್ರೀ ಎಂ.ಮುನಿರಾಜು, ಸಹಾಯಕ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ನಿರ್ದೇಶನಾಲಯ, ಬಹುಮಹಡಿಗಳ ಕಟ್ಟಡ, ಬೆಂಗಳೂರು ರವರುಗಳು ತಮ್ಮ ಎಲ್ಲಾ ಬಲ್ಲ ಮೂಲಗಳ ಆದಾಯಕ್ಕಿಂತ ಹೆಚ್ಚಿನ ಅಕ್ರಮ ಆಸ್ತಿ ಗಳಿಸಿರುತ್ತಾರೆಂಬ ಮಾಹಿತಿಯ ಮೇರೆಗೆ ಸದರಿಯವರ ಸ್ಥಿರ ಮತ್ತು ಚರಾಸ್ತಿಗಳ ವಿವರಗಳನ್ನು ಕಲೆ ಹಾಕಿ ದಿ:03-04-2012 ರಂದು ಬೆಂಗಳೂರು ನಗರ ಲೋಕಾಯುಕ್ತ ಪೋಲೀಸ್ ಠಾಣಾ ಮೊ.ಸಂ.28/2012 ರಡಿ ಭ್ರಷ್ಟಾಚಾರ ಪ್ರತಿಬಂಧಕ ಕಾಯ್ದೆ 1988 ರ ಕಲಂ 13(1)(ಇ) ಸಹವಾಚನ 13(2) ರನ್ವಯ ಪ್ರಕರಣವನ್ನು ದಾಖಲಿಸಿದ್ದು, ಪ್ರಸ್ತುತ ತನಿಖೆಯಲ್ಲಿರುತ್ತದೆಯೆಂದು ವರದಿಯಾಗಿದೆ.

ದಿನಾಂಕ:09-03-2012 ರ ಆರೋಪಿತರ ಮನೆ ಶೋಧನೆ ಸಮಯದಲ್ಲಿ ಚಿನ್ನ, ವಜ್ರ ಒಳಗೊಂಡ ಆಭರಣಗಳ ಆರೋಪಿತೆ ಶ್ರೀಮತಿ ಉಷಾ ಪಟ್ವಾರಿ ಹಾಗೂ ಅವರ ಗಂಡ, ಮಗ ಮತ್ತು ಇತರರ ಹೆಸರಿನಲ್ಲಿ ಬೆಲೆ ಬಾಳುವ ಸ್ಥಿರಾಸ್ತಿ, ಚರಾಸ್ಥಿಗಳು, ಬ್ಯಾಂಕ್ ಖಾತೆ, ಠೇವಣಿ ಹಾಗೂ ಲಾಕರ್‌ಗಳನ್ನು ಹೊಂದಿರುವುದು ಕಂಡು ಬಂದಿದ್ದು, ಸಂಬಂಧಪಟ್ಟ ದಾಖಲಾತಿಗಳನ್ನು ಅಮಾನತ್ತುಪಡಿಸಿಕೊಳ್ಳಲಾಗಿದೆ ಎಂದು ವರದಿಯಾಗಿದೆ.

ಶ್ರೀಮತಿ ಉಷಾ ಆರ್ ಪಟ್ವಾರಿ, ಜಂಟಿ ನಿರ್ದೇಶಕರು, ತಮ್ಮ ಎಲ್ಲಾ ಬಲ್ಲ ಮೂಲಗಳ ಆದಾಯಕ್ಕಿಂತ ರೂ.2,15,06,007/- ಗಳಷ್ಟು ಪ್ರಮಾಣದಲ್ಲಿ (ಶೇ.241.64%)ಅಕ್ರಮ ಆಸ್ತಿಯನ್ನು ಸಂಪಾದಿಸಿ ಇತರೆ ವಹಿವಾಟುಗಳು ನಡಸಿ ಭ್ರಷ್ಟಾಚಾರ ಪ್ರತಿಬಂಧಕ ಕಾಯ್ದೆ, 1988 ರ ಕಲಂ 13(1)(ಇ) ಜೊತೆಗೆ 13(2) ರ ಅಡಿ ಶಿಕ್ಷಾರ್ಹವಾದ ಅಪರಾಧವೆಸಗಿರುವುದು ಈವರೆಗೆ ಕಂಡು ಬಂದಿರುತ್ತದೆಂದು, ಸದರಿ ಅಧಿಕಾರಿಯು ತಮ್ಮ ಬಲ್ಲ ಮೂಲಗಳಿಗಿಂತ ಹೆಚ್ಚಿನ ಆಸ್ತಿಯನ್ನು ಹೊಂದಿರುವುದು ಮೇಲ್ನೋಟಕ್ಕೆ ಸಾಬೀತಾಗಿರುವುದರಿಂದ, ಸದರಿ ಅಧಿಕಾರಿಯನ್ನು ಕೂಡಲೇ ಅಮಾನತ್ತಿನಲ್ಲಿಡಲು ಹಾಗೂ ಅವರ ಲೀನ್ (ಸ್ಥಾನ) ಬೇರೆಡೆಗೆ ವರ್ಗಾಯಿಸುವಂತೆ ಅಪರ ಪೋಲೀಸ್ ಮಹಾನಿರ್ದೇಶಕರು ಶಿಫಾರಸ್ಸು ಮಾಡಿರುತ್ತಾರೆ.

ಮಾನ್ಯ ಅಪರ ಪೋಲೀಸ್ ಮಹಾನಿರ್ದೇಶಕರು, ಕರ್ನಾಟಕ ಲೋಕಾಯುಕ್ತ ಬೆಂಗಳೂರು ರವರ ಶಿಫಾರಸ್ಸನ್ನು ಪರಿಗಣಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ:ಮಮಇ 121 ಎಸ್‌ಜೆಡಿ 2012, ಬೆಂಗಳೂರು ದಿನಾಂಕ:23-04-2012

ಪ್ರಸ್ತಾವನೆಯಲ್ಲಿ ವಿವರಿಸಿದ ಕಾರಣಗಳ ಹಿನ್ನಲೆಯಲ್ಲಿ, ಶ್ರೀಮತಿ ಉಷಾ ಆರ್ ಪಟ್ವಾರಿ, ಹಿಂದಿನ ಜಂಟಿ ನಿರ್ದೇಶಕರು (ಐಸಿಡಿಎಸ್), ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಹಾಲಿ ಪ್ರಧಾನ ವ್ಯವಸ್ಥಾಪಕರು-2, ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ, ಬೆಂಗಳೂರು ಇವರನ್ನು ಕರ್ನಾಟಕ ನಾಗರಿಕ ಸೇವಾ (ಸಿ.ಸಿ.ಎ) ನಿಯಮಾವಳಿಗಳು 1957 ರ ನಿಯಮ 10(1)(ಎ) ಮೇರೆಗೆ ಈ ಕೂಡಲೇ ಜಾರಿಗೆ ಬರುವಂತೆ ಸೇವೆಯಿಂದ ಅಮಾನತ್ತುಗೊಳಿಸಿ ಆದೇಶಿಸಿದೆ.

ಶ್ರೀಮತಿ ಉಷಾ ಆರ್ ಪಟ್ವಾರಿ, ಜಂಟಿ ನಿರ್ದೇಶಕರು ಇವರ ಲೀನ್ (ಸ್ಥಾನ) ನ್ನು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಪ್ರಧಾನ ಕಛೇರಿಯ ಜಂಟಿ ನಿರ್ದೇಶಕರ ಹುದ್ದೆಗೆ ವರ್ಗಾಯಿಸಲಾಗಿದೆ.

ಅಮಾನತ್ತಿನ ಅವಧಿಯಲ್ಲಿ ಸದರಿ ಅಧಿಕಾರಿಯು ಕರ್ನಾಟಕ ನಾಗರಿಕ ಸೇವಾ ನಿಯಮಾವಳಿಗಳು 1957 ರ ನಿಯಮ 98(1) ರನ್ವಯ ಜೀವನಾಂಶ ಭತ್ಯೆ ಪಡೆಯಲು ಅರ್ಹರಾಗಿರುತ್ತಾರೆ. ಅಲ್ಲದೆ ಅಮಾನತ್ತಿನ ಅವಧಿಯಲ್ಲಿ ಸದರಿ ಅಧಿಕಾರಿಯು ಸಕ್ಷಮ ಪ್ರಾಧಿಕಾರದ ಲಿಖಿತ ಅನುಮೋದನೆ ಇಲ್ಲದೆ ಕೇಂದ್ರ ಸ್ಥಾನವನ್ನು ಬಿಡತಕ್ಕದ್ದಲ್ಲ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಬಿ.ಕಮಲಮ್ಮ
ಸರ್ಕಾರದ ಅಧೀನಕಾರ್ಯದರ್ಶಿ-2,
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ.

ಪಿ.ಆರ್. 1258

ತೋಟಗಾರಿಕೆ ಸಚಿವಾಲಯ

ವಿಷಯ: ಕರ್ನಾಟಕ ರೇಷ್ಮೆ ಮಾರಾಟ ಮಂಡಳಿಯು ಕೆನರಾ ಬ್ಯಾಂಕಿನಿಂದ ಸಾಲ ಪಡೆಯಲು ಗ್ಯಾರಂಟಿ ನೀಡುವ ಬಗ್ಗೆ.

ಓದಲಾಗಿದೆ:
1. ಸರ್ಕಾರಿ ಆದೇಶ ಸಂಖ್ಯೆ: ವಾಕೈ 03 ರೇಉನಿ 2011(ಭಾಗ-1), ದಿನಾಂಕ: 31-3-2011.
2. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರೇಷ್ಮೆ ಮಾರಾಟ ಮಂಡಳಿ ಇವರ ಪತ್ರ ಸಂಖ್ಯೆ: ಕರೇಮಾಮ/ಹಣಕಾಸು/2011-12/1672, ದಿನಾಂಕ: 1-2-2012.
3. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರೇಷ್ಮೆ ಮಾರಾಟ ಮಂಡಳಿ ಇವರ ಪತ್ರ ಸಂಖ್ಯೆ: ಕರೇಮಾಮ/ಹಣಕಾಸು/2011-12/1671, ದಿನಾಂಕ: 1-2-2012.

ಪ್ರಸ್ತಾವನೆ:

ಕರ್ನಾಟಕ ರೇಷ್ಮೆ ಮಾರಾಟ ಮಂಡಳಿಯು ರೇಷ್ಮೆ ಗೂಡಿನ ಬೆಲೆ ಕುಸಿತವನ್ನು ತಡೆದು ರೇಷ್ಮೆ ನೂಲಿನ ಬೆಲೆಯಲ್ಲಿ ಸ್ಥಿರತೆಯನ್ನು ಉಂಟುಮಾಡಲು ಸಮರ್ಪಕವಾಗಿ ಕಾರ್ಯನಿರ್ವಹಿಸುವುದಕ್ಕಾಗಿ ಅದಕ್ಕೆ ಅಗತ್ಯವಿರುವ ದುಡಿಯುವ ಬಂಡವಾಳಕ್ಕಾಗಿ ಕೆನರಾ ಬ್ಯಾಂಕ್‌ನಿಂದ ರೂ.25.00 ಕೋಟಿಗಳ (ಇಪ್ಪತ್ತೈದು ಕೋಟಿ ರೂಪಾಯಿಗಳು ಮಾತ್ರ) ಸಾಲ ಪಡೆಯುವುದಕ್ಕೆ ಸರ್ಕಾರದ ಗ್ಯಾರಂಟಿಯನ್ನು ಕೆಲವು ಷರತ್ತಿಗಳೊಂದಿಗೆ ಮೇಲೆ ಓದಲಾದ ಕ್ರಮ ಸಂಖ್ಯೆ (1) ರ ಆದೇಶದಲ್ಲಿ ನೀಡಿದೆ.

ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರೇಷ್ಮೆ ಮಾರಾಟ ಮಂಡಳಿ ಇವರು ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ಪತ್ರದಲ್ಲಿ ಬ್ಯಾಂಕಿನಿಂದ ಸಾಲವನ್ನು ಮುಂದುವರೆಸ ಬೇಕಾಗಿರುವುದರಿಂದ ಸರ್ಕಾರದ ಗ್ಯಾರಂಟಿಯ ಅವಧಿಯನ್ನು ದಿನಾಂಕ: 31-3-2013ರವರೆಗೆ ನವೀಕರಿಸಲು ಕೋರಿರುತ್ತಾರೆ. ಹಾಗೂ ಮೇಲೆ ಓದಲಾದ ಕ್ರಮ ಸಂಖ್ಯೆ (3)ರ ಪತ್ರದಲ್ಲಿ ಸರ್ಕಾರದ ಖಾತರಿ ಮೇಲೆ ಕೆನರಾ ಬ್ಯಾಂಕಿನಿಂದ ರೂ. 25.00 ಕೋಟಿ ಸಾಲದ ಮಂಜೂರಾತಿಗೆ ಅಗತ್ಯವಾಗಿರುವ ದಸ್ತಾವೇಜುಗಳನ್ನು ನೀಡಬೇಕಾಗಿರುವುದರಿಂದ ಡೀಡ್ ಆಫ್ ಗ್ಯಾರಂಟಿಗೆ ಅನುಮೋದನೆ ನೀಡುವಂತೆಯೂ ಸಹ ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂ: ವಾಕೈ 03 ರೇಉನಿ 2011(ಭಾಗ-1) ಬೆಂಗಳೂರು, ದಿ: 25-4-2012.

ಕರ್ನಾಟಕ ರೇಷ್ಮೆ ಮಾರಾಟ ಮಂಡಳಿಯು ಕೆನರಾ ಬ್ಯಾಂಕಿನಿಂದ ರೂ.25.00 ಕೋಟಿಗಳ ಸಾಲ ಪಡೆಯುವ ಗ್ಯಾರಂಟಿ ಅವಧಿಯನ್ನು ದಿನಾಂಕ: 31-3-2011ರ ಆದೇಶದಲ್ಲಿ ವಿಧಿಸಿರುವ ಈ ಕೆಳಕಂಡ ಷರತ್ತಿಗೊಳಪಟ್ಟು ದಿನಾಂಕ: 31-3-2013 ರವರೆಗೆ ವಿಸ್ತರಿಸಲು ಹಾಗೂ ಸರ್ಕಾರದ

ಗ್ಯಾರಂಟಿ ಮೇಲೆ ಕೆನರಾ ಬ್ಯಾಂಕಿನಿಂದ ರೂ. 25.00 ಕೋಟಿ ಸಾಲದ ಮಂಜೂರಾತಿಗೆ ಅಗತ್ಯವಾಗಿರುವ ದಸ್ತಾವೇಜುಗಳನ್ನು [illegible] ಡೀಡ್ ಆಫ್ ಗ್ಯಾರಂಟಿಗೆ ಅನುಮೋದನೆ ನೀಡಲಾಗಿದೆ.

a. This guarantee is given primarily for the purpose of price stabilization of silk yarn on account of the reduction in the import duty from 30% to 5% by the Union Government. As a result, the funds should exclusively be used for undertaking price stabilization measures and not for any other internal needs of the KSMBL like payment of salaries and other administrative expenditure.

b. A separate account shall be opened by KSMBL where the proceeds of the proposed loan shall be kept and any transaction for purchase and sale of silk yarn should be escrowed only to the new account. Apart from these transactions any other transaction shall not be undertaken by the Board from this account.

c. The Board shall submit a quarterly report of the transactions undertaken from the designated account to the Government and certify that this money has not been used for any other activity.

d. Further, guarantee commission at the rate of 1% per annum shall be payable by KSMB as per Karnataka Ceiling on Government Guarantees Act, 1999.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: FD/527/Exp.4/2011, ದಿನಾಂಕ: 16–2–2012 ರಲ್ಲಿಯ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಬಿ.ಎಸ್. ಚಂದ್ರಶೇಖರ್,
ಪೀಠಾಧಿಕಾರಿ,
ತೋಟಗಾರಿಕೆ ಇಲಾಖೆ (ರೇಷ್ಮೆ)

ಪಿ.ಆರ್. 1269

ಕಂದಾಯ ಸಚಿವಾಲಯ

ವಿಷಯ: 2012–13ನೇ ಸಾಲಿನಲ್ಲಿ ಶಿವಮೊಗ್ಗ ಜಿಲ್ಲೆಯಲ್ಲಿ ಬೇಸಿಗೆ ಹಿನ್ನಲೆಯಲ್ಲಿ, ಕುಡಿಯುವ ನೀರು ಪೂರೈಸಲು ರಾಜ್ಯ ವಿಪತ್ತು ಪರಿಹಾರ ನಿಧಿಯಿಂದ ಅನುದಾನ ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ: ಜಿಲ್ಲಾಧಿಕಾರಿಗಳು, ಶಿವಮೊಗ್ಗ ಜಿಲ್ಲೆ ಇವರ ಪತ್ರ ಸಂ: ಜಿಕ/ಕುನೀ/ಹ.ಮಂ/2011–12, ದಿನಾಂಕ: 15–04–2012.

ಪ್ರಸ್ತಾವನೆ :

2012–13ನೇ ಸಾಲಿನಲ್ಲಿ ರಾಜ್ಯನಲ್ಲಿ ಬೇಸಿಗೆ ಇರುವುದರಿಂದ, ಶಿವಮೊಗ್ಗ ಜಿಲ್ಲೆಯ, ಗ್ರಾಮೀಣ ಪ್ರದೇಶಗಳಲ್ಲಿ ಉದ್ಭವಿಸಿರುವ ಕುಡಿಯುವ ನೀರಿನ ಸಮಸ್ಯೆ ಕ್ರಮಗಳನ್ನು ಕೈಗೊಳ್ಳಲು, ರಾಜ್ಯ ವಿಪತ್ತು ಪರಿಹಾರ ನಿಧಿಯಿಂದ ಅನುದಾನ ಬಿಡುಗಡೆ ಮಾಡುವಂತೆ ಉಲ್ಲೇಖಿತ ಪತ್ರದಲ್ಲಿ ಜಿಲ್ಲಾಧಿಕಾರಿಗಳು, ಶಿವಮೊಗ್ಗ ಜಿಲ್ಲೆ ಇವರು ಬೇಡಿಕೆ ಸಲ್ಲಿಸಿರುತ್ತಾರೆ. ಈ ಹಿನ್ನೆಲೆಯಲ್ಲಿ, ಕುಡಿಯುವ ನೀರಿನ ಪೂರೈಕೆಗಾಗಿ ರಾಜ್ಯ ವಿಪತ್ತು, ಪರಿಹಾರ ನಿಧಿಯಿಂದ ಅನುದಾನ ಬಿಡುಗಡೆ ಮಾಡಲು ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಕಂಇ 149 ಟಿಎನ್ಆರ್ 2012, ಬೆಂಗಳೂರು, ದಿನಾಂಕ: 20–04–2012.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಬೇಸಿಗೆಯಲ್ಲಿ, ಜನ, ಜಾನುವಾರುಗಳಿಗೆ ಕುಡಿಯುವ ನೀರಿನ ಸಮಸ್ಯೆಗೆ ಕ್ರಮ ಕೈಗೊಳ್ಳಲು, ರಾಜ್ಯ ವಿಪತ್ತು ಪರಿಹಾರ ನಿಧಿಯಿಂದ ಜಿಲ್ಲಾಧಿಕಾರಿಗಳು, ಶಿವಮೊಗ್ಗ ಜಿಲ್ಲೆ, ಇವರಿಗೆ ರೂ.200.00 ಲಕ್ಷಗಳನ್ನು (ರೂಪಾಯಿ ಇನ್ನೂರು ಲಕ್ಷಗಳು ಮಾತ್ರ) ಬಿಡುಗಡೆ ಮಾಡಲು ಮಂಜೂರಾತಿ ನೀಡಲಾಗಿದೆ.

1) ಈ ಆದೇಶದಲ್ಲಿ ಬಿಡುಗಡೆ ಮಾಡಿದ ಅನುದಾನವನ್ನು ಜಿಲ್ಲಾಧಿಕಾರಿಗಳು ಮತ್ತು ಮುಖ್ಯ ಕಾರ್ಯನಿರ್ವಹಕಾಧಿಕಾರಿಗಳು ಸಮಾಲೋಚಿಸಿ ತುರ್ತು ಕುಡಿಯುವ ನೀರಿನ ವ್ಯವಸ್ಥೆಗಾಗಿ ಬಳಸುವುದು.

2) ಕೇಂದ್ರ ಸರ್ಕಾರವು ಹೊರಡಿಸಿರುವ ಮಾರ್ಗಸೂಚಿಗಳ ಪ್ರಕಾರ ವೆಚ್ಚ ಮಾಡುವುದು.

3) ಬರಪೀಡಿತ ಪ್ರದೇಶಗಳಿಗೆ ಜಿಲ್ಲಾಧಿಕಾರಿಗಳು ಹಾಗೂ ಮುಖ್ಯ ಕಾರ್ಯನಿರ್ವಹಕಾಧಿಕಾರಿಗಳು ವ್ಯಾಪಕವಾಗಿ ಪ್ರವಾಸ ಮಾಡುವುದು ಹಾಗೂ ಯಾವುದೇ ಗ್ರಾಮದಲ್ಲಿ ಕುಡಿಯುವ ನೀರು ಹಾಗೂ ಜಾನುವಾರುಗಳಿಗೆ ಸಂಬಂಧಪಟ್ಟ ಸಮಸ್ಯೆಗಳು ಉದ್ಭವವಾಗದಂತೆ ನೋಡಿಕೊಳ್ಳುವುದು.

4) ಕುಡಿಯುವ ನೀರಿನ ಸಮಸ್ಯೆಗಳನ್ನು ಬಗೆಹರಿಸಲು ತಾಲ್ಲೂಕಿಗೊಂದು ಸಹಾಯವಾಣಿಯನ್ನು ಸ್ಥಾಪಿಸಿ, ತಾಂತ್ರಿಕ ಸಿಬ್ಬಂದಿಯನ್ನು ನಿಯೋಜಿಸಿ 24 ಗಂಟೆಯೊಳಗಾಗಿ ಕುಡಿಯುವ ನೀರಿನ ಸಮಸ್ಯೆಗಳನ್ನು ಬಗೆಹರಿಸುವುದು.

5) ಪ್ರತಿ 15 ದಿನಗಳಿಗೊಮ್ಮೆ ಜಿಲ್ಲಾಧಿಕಾರಿಗಳು ಮತ್ತು ಮುಖ್ಯ ಕಾರ್ಯನಿರ್ವಹಕಾಧಿಕಾರಿಗಳು ಜಂಟಿಯಾಗಿ ಬರ ಪರಿಹಾರ ಕಾಮಗಾರಿಗಳ ಬಗ್ಗೆ ಪತ್ರಿಕಾ ಗೋಷ್ಠಿ ನಡೆಸಿ ಮಾಧ್ಯಮಗಳಿಗೆ ಜಿಲ್ಲೆಯಲ್ಲಿ ಕೈಗೊಂಡಿರುವ ಕುಡಿಯುವ ನೀರಿಗೆ ಸಂಬಂಧಿಸಿದಂತೆ ಸಾಧಿಸಿರುವ ಪ್ರಗತಿಯ ಚಿತ್ರಣವನ್ನು ಬಿಂಬಿಸುವುದು. ಪತ್ರಿಕಾಗೋಷ್ಠಿಯಲ್ಲಿ ಸಿದ್ಧಪಡಿಸಿದ ಟಿಪ್ಪಣಿಯನ್ನು ಇ-ಮೇಲ್ ಮುಖಾಂತರ ಸರ್ಕಾರಕ್ಕೆ ರವಾನಿಸುವುದು. ಇ-ಮೇಲ್ ವಿಳಾಸ **secyrelief-rev@karnataka.gov.in.**

6) ಪ್ರತಿ ಹೋಬಳಿಗೆ ಒಬ್ಬ ಜಿಲ್ಲಾ ಮಟ್ಟದ ನೋಡಲ್ ಅಧಿಕಾರಿಯನ್ನು ನೇಮಿಸಿ ಅವರ ಮೂಲಕ ಕುಡಿಯುವ ನೀರಿನ ಕಾಮಗಾರಿಗಳನ್ನು ವ್ಯಾಪಕವಾಗಿ ಪರಿಶೀಲನೆ ಮಾಡುವುದು.

7) ಮುಂದಿನ 2 ತಿಂಗಳುಗಳ ಕಾಲ ಕುಡಿಯುವ ನೀರಿನ ಕೊರತೆಯುಂಟಾಗದಂತೆ ಹಾಗೂ ಯಾವುದೇ ದೂರುಗಳು ಬರದಂತೆ ಕಾರ್ಯ ನಿರ್ವಹಿಸುವುದು.

8) ಪ್ರತಿಯೊಂದು ಕಾಮಗಾರಿಯ ಆರಂಭ, ಚಾಲ್ತಿಯಲ್ಲಿರುವ ಹಾಗೂ ಮುಕ್ತಾಯದ ಹಂತಗಳ ಛಾಯಾ ಚಿತ್ರಗಳನ್ನು ದಾಖಲಿಸಿ, ಮೂರನೇ ಹಂತದ ಪರಿವೀಕ್ಷಣೆಗೆ ಒಳಪಡಿಸಿ, ಅಂತಿಮ ಬಿಲ್ ಪಾವತಿ ಮಾಡುವುದು. ಪೂರ್ಣಗೊಂಡ ಪ್ರತಿಯೊಂದು ಕಾಮಗಾರಿಯ ಛಾಯಾ ಚಿತ್ರಗಳು ಹಾಗೂ ವೆಚ್ಚದ ವಿವರಗಳನ್ನು ಇ-ಮೇಲ್ ಮುಖಾಂತರ **(secyrelief-rev@karnataka.gov.in)** ಕಳುಹಿಸುವುದು.

9) ಪ್ರತಿಯೊಂದು ಕಾಮಗಾರಿಯ ವಿವರಗಳನ್ನು ಫಲಕದಲ್ಲಿ ಸಾರ್ವಜನಿಕರಿಗೆ ಕಾಣುವಂತೆ ಈ ಕೆಳಕಂಡ ಮಾದರಿಯಲ್ಲಿ ನಮೂದಿಸುವುದು.

ಪ್ರಕೃತಿ ವಿಕೋಪ ಕಾಮಗಾರಿ

ಕಾಮಗಾರಿಯ ಹೆಸರು:	
ಅಂದಾಜು ಮೊತ್ತ:	
ಕಾಮಗಾರಿ ಪ್ರಾರಂಭಿಸಿದ ದಿನಾಂಕ:	
ಕಾಮಗಾರಿ ಮುಕ್ತಾಯವಾದ ದಿನಾಂಕ:	
ಅನುಷ್ಠಾನಗೊಳಿಸಿದ ಸಂಸ್ಥೆ:	

10) ಪ್ರತಿ ತಿಂಗಳು ಅಂತ್ಯಕ್ಕೆ ಅನುದಾನ ಬಳಕೆಯಾದ ವಿವರಗಳನ್ನು ಮೇಲ್ಕಂಡ ಇ-ಮೇಲ್ ಮುಖಾಂತರ ಸಲ್ಲಿಸುವುದು. ಬಳಕೆ ಪ್ರಮಾಣ ಪತ್ರಗಳನ್ನೂ ಸಹ ತಪ್ಪದೇ ಸರ್ಕಾರಕ್ಕೆ ರವಾನಿಸುವುದು.

11) ಪ್ರತಿ ತಿಂಗಳು ಸಾಧಿಸಿದ ಪ್ರಗತಿಯನ್ನು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳ ಹಾಗೂ ಪ್ರಾದೇಶಿಕ ಆಯುಕ್ತರ ಗಮನಕ್ಕೆ ತರುವುದು ಮತ್ತು ಅವರಿಂದ ಸಲಹೆ-ಸೂಚನೆಗಳನ್ನು ಪಡೆಯುವುದು.

12) ಅನುದಾನ ಲಭ್ಯತೆ ಇಲ್ಲದೇ ಯಾವುದೇ ದುರಸ್ತಿ ಕಾಮಗಾರಿಗಳನ್ನು ಎಸ್.ಡಿ.ಆರ್.ಎಫ್/ ಎನ್.ಡಿ.ಆರ್.ಎಫ್ ಅಡಿಯಲ್ಲಿ ಕೈಗೊಳ್ಳುವಂತಿಲ್ಲ. ಹಾಗೂ ಕಾಮಗಾರಿಗಳನ್ನು ಬಿಡುಗಡೆಯಾದ ಅನುದಾನಕ್ಕೆ ಸೀಮಿತಗೊಳಿಸುವುದು.

ಮೇಲಿನಂತೆ ಬಿಡುಗಡೆ ಮಾಡಿರುವ ಅನುದಾನವನ್ನು ಸಂಬಂಧಪಟ್ಟ ಜಿಲ್ಲೆಯ ಜಿಲ್ಲಾಧಿಕಾರಿಗಳು ಪೇಯೀಸ್ ರಸೀದಿ ಬಿಲ್ಲುಗಳನ್ನು ತಯಾರಿಸಿ ಮೇಲು ರುಜು ಮಾಡಿ ಜಿಲ್ಲಾ ಖಜಾನೆಯಿಂದ ಡ್ರಾ ಮಾಡಿ ಎಸ್.ಡಿ.ಆರ್.ಎಫ್ ಖಾತೆಗೆ ಜಮಾ ಮಾಡಿದ ನಂತರ ಪರಿಹಾರ ಕಾರ್ಯಗಳಿಗೆ ಉಪಯೋಗಿಸತಕ್ಕದ್ದು.

ಮೇಲಿನಂತೆ ಬಿಡುಗಡೆ ಮಾಡಿರುವ ಅನುದಾನವನ್ನು ಸಂಬಂಧಪಟ್ಟ 2012-13ನೇ ಸಾಲಿನ ಆಯವ್ಯಯ ಲೆಕ್ಕ ಶೀರ್ಷಿಕೆ 2245-01-102-0-00-100 (ಯೋಜನೇತರ) ಅಡಿಯಲ್ಲಿ ಭರಿಸತಕ್ಕದ್ದು.

ಅನುದಾನ ವೆಚ್ಚ ಮಾಡುವಾಗ ಸರ್ಕಾರವು ಕಾಲಕಾಲಕ್ಕೆ ಹೊರಡಿಸಿರುವ ಮಾರ್ಗಸೂಚಿ/ಆದೇಶ/ ಸುತ್ತೋಲೆಗಳನ್ನು ಪಾಲಿಸುವುದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಅನಧಿಕೃತ ಟಿಪ್ಪಣಿ ಸಂ: FD-392, Exp-7/2012, Dt: 05-04-2012 ರ ಸಹಮತಿ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಎಸ್.ಎಂ. ಆನಂದಪ್ಪ,
ಸರ್ಕಾರದ ಅಧೀನ ಕಾರ್ಯದರ್ಶಿ
ಕಂದಾಯ ಇಲಾಖೆ
(ವಿಪತ್ತು ನಿರ್ವಹಣೆ ಮತ್ತು ಸೇವೆಗಳು-2).

ಪಿ.ಆರ್. 1273

ಲೋಕೋಪಯೋಗಿ, ಬಂದರುಗಳು ಹಾಗೂ ಒಳನಾಡು ಜಲಸಾರಿಗೆ ಸಚಿವಾಲಯ

ವಿಷಯ: ಮೈಸೂರು ಜಿಲ್ಲೆ, ಹೆಚ್.ಡಿ. ಕೋಟೆ ತಾಲ್ಲೂಕು ದೊಮ್ಮನಕಟ್ಟೆಯಿಂದ–ಹೊನ್ನಮ್ಮನಕಟ್ಟೆ –ನಿಶ್ನ–ಎ– ಹೊಸಹೊಳಲು–ಕೆ.ಆರ್.ಪುರ–ಮಳಲಿ–ಎನ್.ಬೆಳತ್ತೂರು–ಕಾರಾಪುರ–ಎಂ.ಗಂಡತ್ತೂರು, ಮಾರ್ಗ ಉದ್ಬೂರು ಗೇಟ್‌ನಲ್ಲಿ ಕೊರಟಗೆರೆ–ಬಾವಲಿ ರಾಜ್ಯ ಹೆದ್ದಾರಿ–33 ನ್ನು ಸೇರುವ ರಸ್ತೆ ಸರಪಳಿ 0.00 ರಿಂದ 14.02 ಕಿ.ಮೀ. ವರೆಗೆ ರಸ್ತೆ ಅಭಿವೃದ್ಧಿಪಡಿಸುವ ಕಾಮಗಾರಿಯ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆ ಬಗ್ಗೆ.

ಓದಲಾಗಿದೆ: ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡಗಳು(ದಕ್ಷಿಣ), ಬೆಂಗಳೂರು, ಇವರ ಪತ್ರ ಸಂಖ್ಯೆ: ಮುಇಂ/ಸಂಕದ/ರಶಾ/ಸಇಂ1/2011–12 ದಿನಾಂಕ: 11.01.2012.

ಪ್ರಸ್ತಾವನೆ:–

1. ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಪ್ರೊಜೆಕ್ಟ್ ಟೈಗರ್) ಇವರು ತಮ್ಮ ಟಿಪ್ಪಣಿ ಸಂಖ್ಯೆ: FCS/PT/NH/2008-09 ದಿನಾಂಕ: 19.12.2011 ರಲ್ಲಿ ಮೈಸೂರು ಜಿಲ್ಲೆ, ಹೆಚ್.ಡಿ. ಕೋಟೆ ತಾಲ್ಲೂಕಿನ ದೊಮ್ಮನಕಟ್ಟೆ ಉದ್ಬೂರು ಗೇಟ್ ಮಧ್ಯದ ರಸ್ತೆ (ಸರಪಳಿ 0.00 ಕಿ.ಮೀ. ಯಿಂದ 14.02 ಕಿ.ಮೀ.) ಯನ್ನು ಮೇಲ್ದರ್ಜೆಗೇರಿಸುವಂತೆ ಮತ್ತು ಸದರಿ ರಸ್ತೆಯನ್ನು ರಾಜ್ಯ ಹೆದ್ದಾರಿ–33 (ಸರಪಳಿ 60.60 ಕಿ.ಮೀ. ಯಿಂದ 69.75 ರವರೆಗೆ) ರಕ್ಷಿತ ಅರಣ್ಯ ಪ್ರದೇಶದಲ್ಲಿರುವ ನಿಷೇಧಿತ ರಸ್ತೆಗೆ ಪರ್ಯಾಯವಾಗಿ ಲೋಕೋಪಯೋಗಿ ಇಲಾಖೆಯಿಂದ ಅಭಿವೃದ್ಧಿಪಡಿಸುವಂತೆ ಕೋರಿರುತ್ತಾರೆ. ಕರ್ನಾಟಕದ ಸನ್ಮಾನ್ಯ ಮುಖ್ಯಮಂತ್ರಿಯವರು ಕೇರಳದ ಮಾನ್ಯ ಮುಖ್ಯ ಮಂತ್ರಿಯವರಿಗೆ ದಿನಾಂಕ:18.12.2011ರಂದು ಬೆಂಗಳೂರಿನಲ್ಲಿ ನಡೆದ ಸಭೆಯಲ್ಲಿ ದೊಮ್ಮನಕಟ್ಟೆಯಿಂದ ಉದ್ಬೂರು ಗೇಟ್ ವರೆಗಿನ 14.00 ಕಿ.ಮೀ. ಉದ್ದದ ರಸ್ತೆಯನ್ನು ಅಭಿವೃದ್ಧಿಪಡಿಸುವ ಭರವಸೆಯನ್ನು ನೀಡಿರುವ ಬಗ್ಗೆ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಇವರು ಪ್ರಸ್ತಾಪಿಸಿರುತ್ತಾರೆ.

2. ಮೇಲೆ ಓದಲಾದ ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡಗಳು(ದಕ್ಷಿಣ), ಬೆಂಗಳೂರು, ಇವರ ಪತ್ರದಲ್ಲಿ ಮೈಸೂರು ಜಿಲ್ಲೆ, ಹೆಚ್.ಡಿ. ಕೋಟೆ ತಾಲ್ಲೂಕು ದೊಮ್ಮನಕಟ್ಟೆಯಿಂದ–ಹೊನ್ನಮ್ಮನಕಟ್ಟೆ–ನಿಶ್ನ – ಎ– ಹೊಸಹೊಳಲು –ಕೆ.ಆರ್.ಪುರ–ಮಳಲಿ–ಎನ್. ಬೆಳತ್ತೂರು ಕಾರಾಪುರ–ಎಂ. ಗಂಡತ್ತೂರು ಮಾರ್ಗ ಉದ್ಬೂರು ಗೇಟ್‌ನಲ್ಲಿ ಕೊರಟಗೆರೆ–ಬಾವಲಿ ರಾಜ್ಯ ಹೆದ್ದಾರಿ–33 ನ್ನು ಸೇರುವ ರಸ್ತೆ ಸರಪಳಿ 0.00 ರಿಂದ 14.02 ಕಿ.ಮೀ. ವರೆಗೆ ರಸ್ತೆ ಅಭಿವೃದ್ಧಿಗೆ ರೂ.18.00 ಕೋಟಿಗಳ ಮೊತ್ತಕ್ಕೆ ಆಡಳಿತಾತ್ಮಕ ಅನುಮೋದನೆ ಕೋರಿ ಪ್ರಸ್ತಾವನೆ ಸಲ್ಲಿಸಲಾಗಿರುತ್ತದೆ.

3. ದಿನಾಂಕ: 7.2.2012 ರಂದು ಮಾನ್ಯ ಲೋಕೋಪಯೋಗಿ ಸಚಿವರು ಹಾಗೂ ಅರಣ್ಯ ಸಚಿವರ ಜಂಟಿ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಚರ್ಚಿಸಿದಂತೆ, ಮೈಸೂರು–ಮಾನಂದವಾಡಿಯ ಪ್ರಸ್ತಾವಿತ 10.00 ಕಿ.ಮೀ. ಉದ್ದದ ರಸ್ತೆಯು ರಾಜೀವ್ ಗಾಂಧಿ ರಾಷ್ಟ್ರೀಯ ಉದ್ಯಾನವನದಲ್ಲಿ ಬರುತ್ತಿದ್ದು, Central Empowered Committeeಯು ಸದರಿ ರಸ್ತೆಯನ್ನು ಪರಿವೀಕ್ಷಿಸಿದೆ. ಮತ್ತು ಈ ರಸ್ತೆಗೆ ಪರ್ಯಾಯ ರಸ್ತೆಯನ್ನು ಅಭಿವೃದ್ಧಿಪಡಿಸುವಂತೆ ಸನ್ಮಾನ್ಯ ಸರ್ವೋಚ್ಚ ನ್ಯಾಯಾಲಯಕ್ಕೆ ವರದಿಯನ್ನು ಸಲ್ಲಿಸಿರುತ್ತದೆ. ಅದರಂತೆ ದೊಮ್ಮನಕಟ್ಟೆಯಿಂದ ಉದ್ಬೂರು ಗೇಟ್‌ವರೆಗೆ ಪರ್ಯಾಯವಾಗಿ 14.02 ಕಿ.ಮೀ.ನ ಗ್ರಾಮೀಣ ರಸ್ತೆಯನ್ನು ಅಭಿವೃದ್ಧಿಪಡಿಸಲು ಅಂದಾಜು ಪಟ್ಟಿಯೊಂದನ್ನು ಸಿದ್ಧಪಡಿಸಲಾಗಿದೆ. ಅರಣ್ಯ ಇಲಾಖೆಯ ಅಧಿಕಾರಿಗಳು ಅರಣ್ಯ ಇಲಾಖೆ ವ್ಯಾಪ್ತಿಯಲ್ಲಿ ಬರುವ 1.83 ಕಿ.ಮೀ. ರಸ್ತೆಯನ್ನು ಸಹ ಅಭಿವೃದ್ಧಿಪಡಿಸಲು ಸಭೆಯಲ್ಲಿ ಒಪ್ಪಿಗೆ ನೀಡಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿ ಸರ್ಕಾರವು ಈ ಕೆಳಗಿನಂತೆ ಆದೇಶಿಸಿದೆ:

ಸರ್ಕಾರದ ಆದೇಶ ಸಂಖ್ಯೆ: ಲೋಇ 659 ಸಿಆರ್‌ಎಂ 2011 ದಿನಾಂಕ: 26.04.2012.

ಪ್ರಸ್ತಾವನೆಯಲ್ಲಿ ವಿವರಿಸಲಾದ ಹಿನ್ನೆಲೆಯಲ್ಲಿ ಮೈಸೂರು ಜಿಲ್ಲೆ, ಹೆಚ್.ಡಿ. ಕೋಟೆ ತಾಲ್ಲೂಕು ದೊಮ್ಮನಕಟ್ಟೆಯಿಂದ–ಹೊನ್ನಮ್ಮನಕಟ್ಟೆ–ನಿಶ್ನ–ಎ–ಹೊಸಹೊಳಲು–ಕೆ.ಆರ್.ಪುರ–ಮಳಲಿ–ಎನ್.ಬೆಳತ್ತೂರು–ಕಾರಾಪುರ–ಎಂ.ಗಂಡತ್ತೂರು ಮಾರ್ಗ ಉದ್ಬೂರು ಗೇಟ್‌ನಲ್ಲಿ ಕೊರಟಗೆರೆ–ಬಾವಲಿ ರಾಜ್ಯ ಹೆದ್ದಾರಿ–33 ನ್ನು ಸೇರುವ ರಸ್ತೆ ಸರಪಳಿ 0.00 ರಿಂದ 14.02 ಕಿ.ಮೀ. ವರೆಗೆ ರಸ್ತೆ ಅಭಿವೃದ್ಧಿಪಡಿಸುವ ಕಾಮಗಾರಿಯ ಅಂದಾಜು ಮೊತ್ತ ರೂ.18.00 ಕೋಟಿಗಳಿಗೆ (ಹದಿನೆಂಟು ಕೋಟಿ ರೂಪಾಯಿಗಳು ಮಾತ್ರ) ಆಡಳಿತಾತ್ಮಕ ಅನುಮೋದನೆ ನೀಡಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಲೋಇ 133/ಆಕೋ–1/12 ದಿನಾಂಕ: 17.02.2012 ರನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಎಸ್.ಆರ್.ರೇವಣ್ಣ,
ಸರ್ಕಾರದ ಅಧೀನ ಕಾರ್ಯದರ್ಶಿ,
ಲೋಕೋಪಯೋಗಿ, ಬಂದರುಗಳು ಹಾಗೂ ಒಳನಾಡು ಜಲಸಾರಿಗೆ ಇಲಾಖೆ (ಸಂಪರ್ಕ)

ಪಿ.ಆರ್. 1308

ಕಂದಾಯ ಸಚಿವಾಲಯ

ವಿಷಯ :– 2012–13ನೇ ಸಾಲಿನಲ್ಲಿ ರಾಜ್ಯದಲ್ಲಿ ಉಂಟಾಗಿರುವ ಬರ ಪರಿಸ್ಥಿತಿಗೆ ಸಂಬಂಧಿಸಿದಂತೆ, ತುರ್ತು ಪರಿಹಾರ ಕ್ರಮ ಕೈಗೊಳ್ಳಲು ರಾಜ್ಯ ವಿಪತ್ತು ಪರಿಹಾರ ನಿಧಿಯಿಂದ ಅನುದಾನ ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ :– 1) ಹಾಸನ ಜಿಲ್ಲಾಧಿಕಾರಿಗಳಿಂದ ಬಂದಿರುವ ಬೇಡಿಕೆ ಪತ್ರ.

ಪ್ರಸ್ತಾವನೆ :

2012–13ನೇ ಸಾಲಿನಲ್ಲಿ ಮುಂಗಾರು ಮಳೆವಿಫಲವಾಗಿ, ರಾಜ್ಯದ 24 ಜಿಲ್ಲೆಗಳ 123 ತಾಲ್ಲೂಕುಗಳಲ್ಲಿ ಬರ ಪರಿಸ್ಥಿತಿ ಉಂಟಾಗಿರುತ್ತದೆ. ಬರ ಪರಿಸ್ಥಿತಿಯನ್ನು ಎದುರಿಸಲು ಕುಡಿಯುವ ನೀರು ಸರಬರಾಜು, ಜಾನುವಾರುಗಳಿಗೆ ಮೇವುಒದಗಿಸುವ ಮತ್ತು ಜಾನುವಾರು ಸಂರಕ್ಷಣೆ ಕಾರ್ಯಗಳನ್ನು ಕೈಗೊಳ್ಳಬೇಕಾಗಿರುತ್ತದೆ. ಆದ್ದರಿಂದ ರಾಜ್ಯದಲ್ಲಿ ಉಂಟಾಗಿರುವ ಬರ ಪರಿಸ್ಥಿತಿಯನ್ನು ನಿಭಾಯಿಸಲು ರಾಜ್ಯ ವಿಪತ್ತು ಪರಿಹಾರ ನಿಧಿಯಿಂದ ಅನುದಾನ ಬಿಡುಗಡೆ ಮಾಡುವಂತೆ ಹಾಸನ ಜಿಲ್ಲಾಧಿಕಾರಿಗಳು ಪತ್ರದ ಮುಖೇನ ಬೇಡಿಕೆ ಸಲ್ಲಿಸಿರುತ್ತಾರೆ. ಈ ಹಿನ್ನಲೆಯಲ್ಲಿ, ಜಿಲ್ಲಾಧಿಕಾರಿಗಳ ಪ್ರಸ್ತಾವನೆಗಳನ್ನು ಕೂಲಂಕಷವಾಗಿ, ಪರಿಶೀಲಿಸಿ, ರಾಜ್ಯದಲ್ಲಿ ಉಂಟಾಗಿರುವ ಬರ ಪರಿಸ್ಥಿಯನ್ನು ನಿಭಾಯಿಸಲು ರಾಜ್ಯ ವಿಪತ್ತು, ಪರಿಹಾರ ನಿಧಿಯಿಂದ ಅನುದಾನ ಬಿಡುಗಡೆ ಮಾಡಲು ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಕಂಇ 149 ಟಿಎನ್ಆರ್ 2012(2), ಬೆಂಗಳೂರು, ದಿನಾಂಕ: 26–04–2012.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ. ಮುಂಗಾರು ಮಳೆಯ ಕೊರತೆಯಿಂದ ರಾಜ್ಯದಲ್ಲಿ ಉಂಟಾಗಿರುವ ಬರ ಪರಿಸ್ಥಿತಿಗೆ ಸಂಬಂಧಿಸಿದಂತೆ ರಾಜ್ಯ ವಿಪತ್ತು ಪರಿಹಾರ ನಿಧಿಯಿಂದ ರೂ.300 ಲಕ್ಷ (ರೂ.ಮುನ್ನೂರು ಲಕ್ಷಗಳು ಮಾತ್ರ) ಗಳನ್ನು ಜಿಲ್ಲಾಧಿಕಾರಿಗಳು ಹಾಸನ ಜಿಲ್ಲೆ. ಹಾಸನ ಇವರಿಗೆ ಬಿಡುಗಡೆ ಮಾಡಲು ಮಂಜೂರಾತಿ ನೀಡಲಾಗಿದೆ.

1) ಕೇಂದ್ರ ಸರ್ಕಾರವು ಹೊರಡಿಸಿರುವ ಮಾರ್ಗಸೂಚಿಗಳ ಪ್ರಕಾರ ಅನುದಾನವನ್ನು ವೆಚ್ಚ ಮಾಡುವುದು.

2) ಈ ಆದೇಶದಲ್ಲಿ ಬಿಡುಗಡೆ ಮಾಡಿದ ಅನುದಾನವನ್ನು ಜಿಲ್ಲಾಧಿಕಾರಿಗಳು ಮತ್ತು ಮುಖ್ಯ ಕಾರ್ಯನಿರ್ವಹಕಾಧಿಕಾರಿಗಳು ಸಮಾಲೋಚಿಸಿ

   ಅ) ಕುಡಿಯುವ ನೀರಿನ ವ್ಯವಸ್ಥೆ, ಹಾಗೂ

   ಆ) ಜಾನುವಾರುಗಳ ಸಂರಕ್ಷಣೆಗಾಗಿ ಮಾತ್ರ ಅನುದಾನವನ್ನು ಬಳಸುವುದು.

3) ಜಿಲ್ಲಾ ಉಸ್ತುವಾರಿ ಸಚಿವರುಗಳು ಜಿಲ್ಲಾ ಮಟ್ಟದ ಸಭೆಗಳನ್ನು ತಿಂಗಳಿಗೊಮ್ಮೆ ನಡೆಸಿ ಬರಪರಿಸ್ಥಿತಿಯ ಬಗ್ಗೆ ಅವಲೋಕನ ಮಾಡುವುದು ಮತ್ತು ಸರ್ಕಾರದಿಂದ ಮಂಜೂರಾಗಿರುವ ಅನುದಾನವನ್ನು ಕುಡಿಯುವ ನೀರು, ಜಾನುವಾರು ಸಂರಕ್ಷಣೆ ಮತ್ತು ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ವತಿಯಿಂದ ಮಂಜೂರಾಗಿರುವ ಅನುದಾನವನ್ನು ಕುಡಿಯುವ ನೀರಿನ ಯೋಜನೆಗಳು, ಕೊಳವೆ ಬಾವಿ ತೆರೆಯುವುದು ಹಾಗೂ ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆಯಡಿ ಸಾಧಿಸುವ ಪ್ರಗತಿಯನ್ನು ವಿಶೇಷವಾಗಿ ಪರಿಶೀಲಿಸುವುದು. ಈ ಬಗ್ಗೆ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿರವರುಗಳು ಆಯಾ ಜಿಲ್ಲಾ ಸಚಿವರೊಡನೆ ನಿಕಟ ಸಂಪರ್ಕವಿರಿಸಿಕೊಂಡು ಸಭೆಗಳನ್ನು ಆಯೋಜಿಸಲು ಕ್ರಮ ವಹಿಸುವುದು.

4) ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಜಿಲ್ಲಾ ಮಟ್ಟದ ಸಭೆಗಳನ್ನು ತಿಂಗಳಿಗೊಮ್ಮೆ ನಡೆಸಿ ಬರಪರಿಸ್ಥಿತಿಯ ಬಗ್ಗೆ ಅವಲೋಕನ ಮಾಡುವುದು ಮತ್ತು ಸರ್ಕಾರದಿಂದ ಮಂಜೂರಾಗಿರುವ ಅನುದಾನವನ್ನು ಕುಡಿಯುವ ನೀರು, ಜಾನುವಾರು ಸಂರಕ್ಷಣೆ ಮತ್ತು ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ವತಿಯಿಂದ ಮಂಜೂರಾಗಿರುವ ಅನುದಾನವನ್ನು ಕುಡಿಯುವ ನೀರಿನ ಯೋಜನೆಗಳು, ಕೊಳವೆ ಬಾವಿ ತೆರೆಯುವುದು ಹಾಗೂ ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆಯಡಿ ಸಾಧಿಸುವ ಪ್ರಗತಿಯನ್ನು ವಿಶೇಷವಾಗಿ ಪರಿಶೀಲಿಸುವುದು. ಪ್ರತಿ ತಿಂಗಳ 5ನೇ ತಾರೀಖಿನೊಳಗೆ ಸಭೆಗಳ ನಡೆವಳಿಗಳನ್ನು ಸರ್ಕಾರಕ್ಕೆ ಸಲ್ಲಿಸುವುದು.

5) ಪ್ರತಿ ತಾಲ್ಲೂಕಿನಲ್ಲಿ ಶಾಸಕರ ಅಧ್ಯಕ್ಷತೆಯಲ್ಲಿ ಬರಪರಿಹಾರ ಕಾಮಗಾರಿಗಳಿಗೆ ಸಂಬಂಧಿಸಿದಂತೆ ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆಯನ್ನೂ ಸೇರಿಸಿದಂತೆ ಕ್ರಿಯಾ ಯೋಜನೆಗಳನ್ನು ಸಿದ್ಧಪಡಿಸಿ ಜಿಲ್ಲಾ ಉಸ್ತುವಾರಿ ಸಚಿವರ ಅಧ್ಯಕ್ಷತೆಯಲ್ಲಿ ಸಭೆ ಕರೆದು ಸಿದ್ಧಪಡಿಸಿದ ಹಾಗೂ ಅನುಮೋದಿಸಿದ ಕಾರ್ಯ ಯೋಜನೆಗಳನ್ನು ಯುದ್ಧೋಪಾದಿಯಲ್ಲಿ ಜಾರಿಗೊಳಿಸುವುದು.

6) ಬರಪೀಡಿತ ಪ್ರದೇಶಗಳಿಗೆ ಜಿಲ್ಲಾಧಿಕಾರಿಗಳು ಹಾಗೂ ಮುಖ್ಯ ಕಾರ್ಯನಿರ್ವಹಕಾಧಿಕಾರಿಗಳು ವ್ಯಾಪಕವಾಗಿ ಪ್ರವಾಸ ಮಾಡುವುದು ಹಾಗೂ ಯಾವುದೇ ಗ್ರಾಮದಲ್ಲಿ ಕುಡಿಯುವ ನೀರು ಹಾಗೂ ಜಾನುವಾರುಗಳಿಗೆ ಸಂಬಂಧಪಟ್ಟ ಸಮಸ್ಯೆಗಳು ಉದ್ಭವವಾಗದಂತೆ ನೋಡಿಕೊಳ್ಳುವುದು. ಬರಪೀಡಿತ ಪ್ರದೇಶದಲ್ಲಿ ಜನರು ಗುಳೇ ಹೋಗುವುದನ್ನು ತಡೆಗಟ್ಟಲು ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆಯಡಿ ಕಾಮಗಾರಿಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಬೇಡಿಕೆಗನುಗುಣವಾಗಿ ಅನುಷ್ಠಾನಗೊಳಿಸುವುದು.

7) ಕುಡಿಯುವ ನೀರಿನ ಸಮಸ್ಯೆಗಳನ್ನು ಬಗೆಹರಿಸಲು ತಾಲ್ಲೂಕಿಗೊಂದು ಸಹಾಯವಾಣಿಯನ್ನು ಸ್ಥಾಪಿಸಿ, ತಾಂತ್ರಿಕ ಸಿಬ್ಬಂದಿಯನ್ನು ನಿಯೋಜಿಸಿ 24 ಗಂಟೆಯೊಳಗಾಗಿ ಕುಡಿಯುವ ನೀರಿನ ಸಮಸ್ಯೆಗಳನ್ನು ಬಗೆಹರಿಸುವುದು.

8) ಪ್ರತಿ 15 ದಿನಗಳಿಗೊಮ್ಮೆ ಜಿಲ್ಲಾಧಿಕಾರಿಗಳು ಮತ್ತು ಮುಖ್ಯ ಕಾರ್ಯನಿರ್ವಹಕಾಧಿಕಾರಿಗಳು ಜಂಟಿಯಾಗಿ ಬರ ಪರಿಹಾರ ಕಾಮಗಾರಿಗಳ ಬಗ್ಗೆ ಪತ್ರಿಕಾ ಗೋಷ್ಠಿ ನಡೆಸಿ ಮಾಧ್ಯಮಗಳಿಗೆ ಜಿಲ್ಲೆಯಲ್ಲಿ ಕೈಗೊಂಡಿರುವ ಕುಡಿಯುವ ನೀರು, ಜಾನುವಾರು ಸಂರಕ್ಷಣೆ, ಉದ್ಯೋಗ ಖಾತರಿ ಯೋಜನೆ ಮತ್ತು ಬರಪರಿಹಾರಕ್ಕೆ ಸಂಬಂಧಿಸಿದಂತೆ ಸಾಧಿಸಿರುವ ಪ್ರಗತಿಯ ಚಿತ್ರಣವನ್ನು ಬಿಂಬಿಸುವುದು. ಪತ್ರಿಕಾಗೋಷ್ಠಿಯಲ್ಲಿ ಸಿದ್ಧಪಡಿಸಿದ ಟಿಪ್ಪಣಿಯನ್ನು ಇ-ಮೇಲ್ ಮುಖಾಂತರ ಸರ್ಕಾರಕ್ಕೆ ರವಾನಿಸುವುದು. ಇ-ಮೇಲ್ ವಿಳಾಸ secyrelief-rev@karnataka.gov.in.

9) ಪ್ರತಿ ಹೋಬಳಿಗೆ ಒಬ್ಬ ಜಿಲ್ಲಾ ಮಟ್ಟದ ನೋಡಲ್ ಅಧಿಕಾರಿಯನ್ನು ನೇಮಿಸಿ ಅವರ ಮೂಲಕ ಬರಪರಿಹಾರ ಕಾಮಗಾರಿಗಳು, ಜಾನುವಾರು ಸಂರಕ್ಷಣೆ ಮತ್ತು ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ನಿರ್ವಹಿಸಲಾಗುತ್ತಿರುವ ಕಾಮಗಾರಿಗಳನ್ನು ವ್ಯಾಪಕವಾಗಿ ಪರಿಶೀಲನೆ ಮಾಡುವುದು.

10) ಮುಂದಿನ 2 ತಿಂಗಳುಗಳ ಕಾಲ ಕುಡಿಯುವ ನೀರು/ ಮೇವಿನ ಕೊರತೆ ಹಾಗೂ ಉದ್ಯೋಗಕ್ಕೆ ಕೊರತೆಯುಂಟಾಗದಂತೆ ಹಾಗೂ ಯಾವುದೇ ದೂರುಗಳು ಬರದಂತೆ ಕಾರ್ಯ ನಿರ್ವಹಿಸುವುದು.

11) ಪ್ರತಿಯೊಂದು ಕಾಮಗಾರಿಯ ಆರಂಭ, ಚಾಲ್ತಿಯಲ್ಲಿರುವ ಹಾಗೂ ಮುಕ್ತಾಯದ ಹಂತಗಳ ಛಾಯಾ ಚಿತ್ರಗಳನ್ನು ದಾಖಲಿಸಿ, ಮೂರನೇ ಹಂತದ ಪರಿವೀಕ್ಷಣೆಗೆ ಒಳಪಡಿಸಿ, ಅಂತಿಮ ಬಿಲ್ ಪಾವತಿ ಮಾಡುವುದು.

12) ಪೂರ್ಣಗೊಂಡ ಪ್ರತಿಯೊಂದು ಕಾಮಗಾರಿಯ ಛಾಯಾ ಚಿತ್ರಗಳು ಹಾಗೂ ವೆಚ್ಚದ ವಿವರಗಳನ್ನು ಇ-ಮೇಲ್ ಮುಖಾಂತರ (secyrelief-rev@karnataka.gov.in) ಕಳುಹಿಸುವುದು

13) ಪ್ರತಿಯೊಂದು ಕಾಮಗಾರಿಯ ವಿವರಗಳನ್ನು ಫಲಕದಲ್ಲಿ ಸಾರ್ವಜನಿಕರಿಗೆ ಕಾಣುವಂತೆ ಈ ಕೆಳಕಂಡ ಮಾದರಿಯಲ್ಲಿ ನಮೂದಿಸುವುದು.

ಪ್ರಕೃತಿ ವಿಕೋಪ ಕಾಮಗಾರಿ

ಕಾಮಗಾರಿಯ ಹೆಸರು:	
ಅಂದಾಜು ಮೊತ್ತ:	
ಕಾಮಗಾರಿ ಪ್ರಾರಂಭಿಸಿದ ದಿನಾಂಕ:	
ಕಾಮಗಾರಿ ಮುಕ್ತಾಯವಾದ ದಿನಾಂಕ:	
ಅನುಷ್ಠಾನಗೊಳಿಸಿದ ಸಂಸ್ಥೆ:	

14) ಪ್ರತಿ ತಿಂಗಳು ಅಂತ್ಯಕ್ಕೆ ಅನುದಾನ ಬಳಕೆಯಾದ ವಿವರಗಳನ್ನು ಮೇಲ್ಕಂಡ ಇ-ಮೇಲ್ ಮುಖಾಂತರ ಸಲ್ಲಿಸುವುದು. ಬಳಕೆ ಪ್ರಮಾಣ ಪತ್ರಗಳನ್ನೂ ಸಹ ತಪ್ಪದೇ ಸರ್ಕಾರಕ್ಕೆ ರವಾನಿಸುವುದು.

15) ಪ್ರತಿ ತಿಂಗಳು ಸಾಧಿಸಿದ ಪ್ರಗತಿಯನ್ನು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳ ಹಾಗೂ ಪ್ರಾದೇಶಿಕ ಆಯುಕ್ತರ ಗಮನಕ್ಕೆ ತರುವುದು ಮತ್ತು ಅವರಿಂದ ಸಲಹೆ-ಸೂಚನೆಗಳನ್ನು ಪಡೆಯುವುದು.

16) ಅನುದಾನ ಲಭ್ಯತೆ ಇಲ್ಲದೇ ಯಾವುದೇ ದುರಸ್ತಿ ಕಾಮಗಾರಿಗಳನ್ನು ಎಸ್.ಡಿ.ಆರ್.ಎಫ್/ ಎನ್.ಡಿ.ಆರ್.ಎಫ್ ಅಡಿಯಲ್ಲಿ ಕೈಗೊಳ್ಳುವಂತಿಲ್ಲ. ಹಾಗೂ ಕಾಮಗಾರಿಗಳನ್ನು ಬಿಡುಗಡೆಯಾದ ಅನುದಾನಕ್ಕೆ ಸೀಮಿತಗೊಳಿಸುವುದು.

ಮೇಲಿನಂತೆ ಬಿಡುಗಡೆ ಮಾಡಿರುವ ಅನುದಾನವನ್ನು ಸಂಬಂಧಪಟ್ಟ ಜಿಲ್ಲೆಯ ಜಿಲ್ಲಾಧಿಕಾರಿಗಳು ಪೇಯೀಸ್ ರಸೀದಿ ಬಿಲ್ಲುಗಳನ್ನು ತಯಾರಿಸಿ ಮೇಲು ರುಜು ಮಾಡಿ ಜಿಲ್ಲಾ ಖಜಾನೆಯಿಂದ ಡ್ರಾ ಮಾಡಿ ಎಸ್.ಡಿ.ಆರ್.ಎಫ್ ಖಾತೆಗೆ ಜಮಾ ಮಾಡಿದ ನಂತರ ಪರಿಹಾರ ಕಾರ್ಯಗಳಿಗೆ ಉಪಯೋಗಿಸತಕ್ಕದ್ದು.

ಮೇಲಿನಂತೆ ಬಿಡುಗಡೆ ಮಾಡಿರುವ ಅನುದಾನವನ್ನು ಸಂಬಂಧಪಟ್ಟ 2012-13ನೇ ಸಾಲಿನ ಆಯವ್ಯಯ ಲೆಕ್ಕ ಶೀರ್ಷಿಕೆ 2245-01-102-0-00-100 (ಯೋಜನೇತರ) ಅಡಿಯಲ್ಲಿ ಭರಿಸತಕ್ಕದ್ದು.

ಅನುದಾನ ವೆಚ್ಚ ಮಾಡುವಾಗ ಸರ್ಕಾರವು ಕಾಲಕಾಲಕ್ಕೆ ಹೊರಡಿಸಿರುವ ಮಾರ್ಗಸೂಚಿ/ಆದೇಶ/ ಸುತ್ತೋಲೆಗಳನ್ನು ಪಾಲಿಸುವುದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂ:ಆ.ಇ 243 ವೆಚ್ಚ-7/2012, ದಿನಾಂಕ: 15-04-2012ರಲ್ಲಿ ನೀಡಿರುವ ಸಹಮತಿ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಹೆಚ್.ಎಂ.ಮಲ್ಲಿಕಾರ್ಜುನಸ್ವಾಮಿ,
ಸರ್ಕಾರದ ಉಪ ಕಾರ್ಯದರ್ಶಿ,

ಪಿ.ಆರ್. 1310

ಕಂದಾಯ ಸಚಿವಾಲಯ

ವಿಷಯ :– 2012–13ನೇ ಸಾಲಿನಲ್ಲಿ ರಾಜ್ಯದಲ್ಲಿ ಉಂಟಾಗಿರುವ ಬರ ಪರಿಸ್ಥಿತಿಗೆ ಸಂಬಂಧಿಸಿದಂತೆ, ತುರ್ತು ಪರಿಹಾರ ಕ್ರಮ ಕೈಗೊಳ್ಳಲು ರಾಜ್ಯ ವಿಪತ್ತು ಪರಿಹಾರ ನಿಧಿಯಿಂದ ಅನುದಾನ ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ :– ಕೋಲಾರ ಜಿಲ್ಲಾಧಿಕಾರಿಗಳಿಂದ ಬಂದಿರುವ ಬೇಡಿಕೆ ಪತ್ರ.

ಪ್ರಸ್ತಾವನೆ :

2012–13ನೇ ಸಾಲಿನಲ್ಲಿ ಮುಂಗಾರು ಮಳೆವಿಫಲವಾಗಿ, ರಾಜ್ಯದ 24 ಜಿಲ್ಲೆಗಳ 123 ತಾಲ್ಲೂಕುಗಳಲ್ಲಿ ಬರ ಪರಿಸ್ಥಿತಿ ಉಂಟಾಗಿರುತ್ತದೆ. ಬರ ಪರಿಸ್ಥಿತಿಯನ್ನು ಎದುರಿಸಲು ಕುಡಿಯುವ ನೀರು ಸರಬರಾಜು, ಜಾನುವಾರುಗಳಿಗೆ ಮೇವುಒದಗಿಸುವ ಮತ್ತು ಜಾನುವಾರು ಸಂರಕ್ಷಣೆ ಕಾರ್ಯಗಳನ್ನು ಕೈಗೊಳ್ಳಬೇಕಾಗಿರುತ್ತದೆ. ಆದ್ದರಿಂದ ರಾಜ್ಯದಲ್ಲಿ ಉಂಟಾಗಿರುವ ಬರ ಪರಿಸ್ಥಿತಿಯನ್ನು ನಿಭಾಯಿಸಲು ರಾಜ್ಯ ವಿಪತ್ತು ಪರಿಹಾರ ನಿಧಿಯಿಂದ ಅನುದಾನ ಬಿಡುಗಡೆ ಮಾಡುವಂತೆ ಕೋಲಾರ ಜಿಲ್ಲಾಧಿಕಾರಿಗಳು ಪತ್ರಗಳ ಮುಖೇನ ಬೇಡಿಕೆ ಸಲ್ಲಿಸಿರುತ್ತಾರೆ. ಈ ಹಿನ್ನಲೆಯಲ್ಲಿ, ಜಿಲ್ಲಾಧಿಕಾರಿಗಳ ಪ್ರಸ್ತಾವನೆಗಳನ್ನು ಕೂಲಂಕಷವಾಗಿ, ಪರಿಶೀಲಿಸಿ, ರಾಜ್ಯದಲ್ಲಿ ಉಂಟಾಗಿರುವ ಬರ ಪರಿಸ್ಥಿಯನ್ನು ನಿಭಾಯಿಸಲು ರಾಜ್ಯ ವಿಪತ್ತು ಪರಿಹಾರ ನಿಧಿಯಿಂದ ಅನುದಾನ ಬಿಡುಗಡೆ ಮಾಡಲು ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಕಂಇ 149 ಟಿಎನ್‌ಆರ್ 2012(1), ಬೆಂಗಳೂರು, ದಿನಾಂಕ: 26–04–2012 (P)

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಮುಂಗಾರು ಮಳೆಯ ಕೊರತೆಯಿಂದ ರಾಜ್ಯದಲ್ಲಿ ಉಂಟಾಗಿರುವ ಬರ ಪರಿಸ್ಥಿತಿಗೆ ಸಂಬಂಧಿಸಿದಂತೆ ರಾಜ್ಯ ವಿಪತ್ತು ಪರಿಹಾರ ನಿಧಿಯಿಂದ ರೂ.250ಲಕ್ಷ (ರೂಪಾಯಿ ಇನ್ನೂರ ಐವತ್ತು ಲಕ್ಷಗಳು ಮಾತ್ರ) ಗಳನ್ನು ಜಿಲ್ಲಾಧಿಕಾರಿಗಳು ಕೋಲಾರ ಜಿಲ್ಲೆ, ಕೋಲಾರ ಇವರಿಗೆ ಬಿಡುಗಡೆ ಮಾಡಲು ಮಂಜೂರಾತಿ ನೀಡಲಾಗಿದೆ.

1) ಕೇಂದ್ರ ಸರ್ಕಾರವು ಹೊರಡಿಸಿರುವ ಮಾರ್ಗಸೂಚಿಗಳ ಪ್ರಕಾರ ಅನುದಾನವನ್ನು ವೆಚ್ಚ ಮಾಡುವುದು.

2) ಈ ಆದೇಶದಲ್ಲಿ ಬಿಡುಗಡೆ ಮಾಡಿದ ಅನುದಾನವನ್ನು ಜಿಲ್ಲಾಧಿಕಾರಿಗಳು ಮತ್ತು ಮುಖ್ಯ ಕಾರ್ಯನಿರ್ವಹಕಾಧಿಕಾರಿಗಳು ಸಮಾಲೋಚಿಸಿ

ಅ) ಕುಡಿಯುವ ನೀರಿನ ವ್ಯವಸ್ಥೆ, ಹಾಗೂ .

ಆ) ಜಾನುವಾರುಗಳ ಸಂರಕ್ಷಣೆಗಾಗಿ ಮಾತ್ರ ಅನುದಾನವನ್ನು ಬಳಸುವುದು.

3) ಜಿಲ್ಲಾಉಸ್ತುವಾರಿ ಸಚಿವರುಗಳು ಜಿಲ್ಲಾ ಮಟ್ಟದ ಸಭೆಗಳನ್ನು ತಿಂಗಳಿಗೊಮ್ಮೆ ನಡೆಸಿ ಬರಪರಿಸ್ಥಿತಿಯ ಬಗ್ಗೆ ಅವಲೋಕನ ಮಾಡುವುದು ಮತ್ತು ಸರ್ಕಾರದಿಂದ ಮಂಜೂರಾಗಿರುವ ಅನುದಾನವನ್ನು ಕುಡಿಯುವ ನೀರು, ಜಾನುವಾರು ಸಂರಕ್ಷಣೆ ಮತ್ತು ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ವತಿಯಿಂದ ಮಂಜೂರಾಗಿರುವ ಅನುದಾನವನ್ನು ಕುಡಿಯುವ ನೀರಿನ ಯೋಜನೆಗಳು, ಕೊಳವೆ ಬಾವಿ ತೆರೆಯುವುದು ಹಾಗೂ ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆಯಡಿ ಸಾಧಿಸುವ ಪ್ರಗತಿಯನ್ನು ವಿಶೇಷವಾಗಿ ಪರಿಶೀಲಿಸುವುದು. ಈ ಬಗ್ಗೆ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿರವರುಗಳು ಆಯಾ ಜಿಲ್ಲಾ ಸಚಿವರೊಡನೆ ನಿಕಟ ಸಂಪರ್ಕವಿರಿಸಿಕೊಂಡು ಸಭೆಗಳನ್ನು ಆಯೋಜಿಸಲು ಕ್ರಮ ವಹಿಸುವುದು.

4) ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಜಿಲ್ಲಾ ಮಟ್ಟದ ಸಭೆಗಳನ್ನು ತಿಂಗಳಿಗೊಮ್ಮೆ ನಡೆಸಿ ಬರಪರಿಸ್ಥಿತಿಯ ಬಗ್ಗೆ ಅವಲೋಕನ ಮಾಡುವುದು ಮತ್ತು ಸರ್ಕಾರದಿಂದ ಮಂಜೂರಾಗಿರುವ ಅನುದಾನವನ್ನು ಕುಡಿಯುವ ನೀರು, ಜಾನುವಾರು ಸಂರಕ್ಷಣೆ ಮತ್ತು ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ವತಿಯಿಂದ ಮಂಜೂರಾಗಿರುವ ಅನುದಾನವನ್ನು ಕುಡಿಯುವ ನೀರಿನ ಯೋಜನೆಗಳು, ಕೊಳವೆ ಬಾವಿ ತೆರೆಯುವುದು ಹಾಗೂ ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆಯಡಿ ಸಾಧಿಸುವ ಪ್ರಗತಿಯನ್ನು ವಿಶೇಷವಾಗಿ ಪರಿಶೀಲಿಸುವುದು. ಪ್ರತಿ ತಿಂಗಳ 5ನೇ ತಾರೀಖಿನೊಳಗೆ ಸಭೆಗಳ ನಡವಳಿಗಳನ್ನು ಸರ್ಕಾರಕ್ಕೆ ಸಲ್ಲಿಸುವುದು.

5) ಪ್ರತಿ ತಾಲ್ಲೂಕಿನಲ್ಲಿ ಶಾಸಕರ ಅಧ್ಯಕ್ಷತೆಯಲ್ಲಿ ಬರಪರಿಹಾರ ಕಾಮಗಾರಿಗಳಿಗೆ ಸಂಬಂಧಿಸಿದಂತೆ ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆಯನ್ನೂ ಸೇರಿಸಿದಂತೆ ಕ್ರಿಯಾ ಯೋಜನೆಗಳನ್ನು ಸಿದ್ಧಪಡಿಸಿ ಜಿಲ್ಲಾ ಉಸ್ತುವಾರಿ ಸಚಿವರ ಅಧ್ಯಕ್ಷತೆಯಲ್ಲಿ ಸಭೆ ಕರೆದು ಸಿದ್ಧಪಡಿಸಿದ ಹಾಗೂ ಅನುಮೋದಿಸಿದ ಕಾರ್ಯ ಯೋಜನೆಗಳನ್ನು ಯುದ್ಧೋಪಾದಿಯಲ್ಲಿ ಜಾರಿಗೊಳಿಸುವುದು.

6) ಬರಪೀಡಿತ ಪ್ರದೇಶಗಳಿಗೆ ಜಿಲ್ಲಾಧಿಕಾರಿಗಳು ಹಾಗೂ ಮುಖ್ಯ ಕಾರ್ಯನಿರ್ವಹಕಾಧಿಕಾರಿಗಳು ವ್ಯಾಪಕವಾಗಿ ಪ್ರವಾಸ ಮಾಡುವುದು ಹಾಗೂ ಯಾವುದೇ ಗ್ರಾಮದಲ್ಲಿ ಕುಡಿಯುವ ನೀರು ಹಾಗೂ ಜಾನುವಾರುಗಳಿಗೆ ಸಂಬಂಧಪಟ್ಟ ಸಮಸ್ಯೆಗಳು ಉದ್ಭವವಾಗದಂತೆ ನೋಡಿಕೊಳ್ಳುವುದು. ಬರಪೀಡಿತ ಪ್ರದೇಶದಲ್ಲಿ ಜನರು ಗುಳೇ ಹೋಗುವುದನ್ನು ತಡೆಗಟ್ಟಲು ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆಯಡಿ ಕಾಮಗಾರಿಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಬೇಡಿಕೆಗನುಗುಣವಾಗಿ ಅನುಷ್ಠಾನಗೊಳಿಸುವುದು.

7) ಕುಡಿಯುವ ನೀರಿನ ಸಮಸ್ಯೆಗಳನ್ನು ಬಗೆಹರಿಸಲು ತಾಲ್ಲೂಕಿಗೊಂದು ಸಹಾಯವಾಣಿಯನ್ನು ಸ್ಥಾಪಿಸಿ, ತಾಂತ್ರಿಕ ಸಿಬ್ಬಂದಿಯನ್ನು ನಿಯೋಜಿಸಿ 24 ಗಂಟೆಯೊಳಗಾಗಿ ಕುಡಿಯುವ ನೀರಿನ ಸಮಸ್ಯೆಗಳನ್ನು ಬಗೆಹರಿಸುವುದು.

8) ಪ್ರತಿ 15 ದಿನಗಳಿಗೊಮ್ಮೆ ಜಿಲ್ಲಾಧಿಕಾರಿಗಳು ಮತ್ತು ಮುಖ್ಯ ಕಾರ್ಯನಿರ್ವಹಕಾಧಿಕಾರಿಗಳು ಜಂಟಿಯಾಗಿ ಬರ ಪರಿಹಾರ ಕಾಮಗಾರಿಗಳ ಬಗ್ಗೆ ಪತ್ರಿಕಾ ಗೋಷ್ಠಿ ನಡೆಸಿ ಮಾಧ್ಯಮಗಳಿಗೆ ಜಿಲ್ಲೆಯಲ್ಲಿ ಕೈಗೊಂಡಿರುವ ಕುಡಿಯುವ ನೀರು, ಜಾನುವಾರು ಸಂರಕ್ಷಣೆ, ಉದ್ಯೋಗ ಖಾತರಿ

ಯೋಜನೆ ಮತ್ತು ಬರಪರಿಹಾರಕ್ಕೆ ಸಂಬಂಧಿಸಿದಂತೆ ಸಾಧಿಸಿರುವ ಪ್ರಗತಿಯ ಚಿತ್ರಣವನ್ನು ಬಿಂಬಿಸುವುದು. ಪತ್ರಿಕಾಗೋಷ್ಠಿಯಲ್ಲಿ ಸಿದ್ಧಪಡಿಸಿದ ಟಿಪ್ಪಣಿಯನ್ನು ಇ-ಮೇಲ್ ಮುಖಾಂತರ ಸರ್ಕಾರಕ್ಕೆ ರವಾನಿಸುವುದು. ಇ-ಮೇಲ್ ವಿಳಾಸ secyrelief-rev@karnataka.gov.in.

9) ಪ್ರತಿ ಹೋಬಳಿಗೆ ಒಬ್ಬ ಜಿಲ್ಲಾ ಮಟ್ಟದ ನೋಡಲ್ ಅಧಿಕಾರಿಯನ್ನು ನೇಮಿಸಿ ಅವರ ಮೂಲಕ ಬರಪರಿಹಾರ ಕಾಮಗಾರಿಗಳು, ಜಾನುವಾರು ಸಂರಕ್ಷಣೆ ಮತ್ತು ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ನಿರ್ವಹಿಸಲಾಗುತ್ತಿರುವ ಕಾಮಗಾರಿಗಳನ್ನು ವ್ಯಾಪಕವಾಗಿ ಪರಿಶೀಲನೆ ಮಾಡುವುದು.

10) ಮುಂದಿನ 2 ತಿಂಗಳುಗಳ ಕಾಲ ಕುಡಿಯುವ ನೀರು/ ಮೇವಿನ ಕೊರತೆ ಹಾಗೂ ಉದ್ಯೋಗಕ್ಕೆ ಕೊರತೆಯುಂಟಾಗದಂತೆ ಹಾಗೂ ಯಾವುದೇ ದೂರುಗಳು ಬರದಂತೆ ಕಾರ್ಯ ನಿರ್ವಹಿಸುವುದು.

11) ಪ್ರತಿಯೊಂದು ಕಾಮಗಾರಿಯ ಆರಂಭ, ಚಾಲ್ತಿಯಲ್ಲಿರುವ ಹಾಗೂ ಮುಕ್ತಾಯದ ಹಂತಗಳ ಛಾಯಾ ಚಿತ್ರಗಳನ್ನು ದಾಖಲಿಸಿ, ಮೂರನೇ ಹಂತದ ಪರಿವೀಕ್ಷಣೆಗೆ ಒಳಪಡಿಸಿ, ಅಂತಿಮ ಬಿಲ್ ಪಾವತಿ ಮಾಡುವುದು

12) ಪೂರ್ಣಗೊಂಡ ಪ್ರತಿಯೊಂದು ಕಾಮಗಾರಿಯ ಛಾಯಾ ಚಿತ್ರಗಳು ಹಾಗೂ ವೆಚ್ಚದ ವಿವರಗಳನ್ನು ಇ-ಮೇಲ್ ಮುಖಾಂತರ (secyrelief-rev@karnataka.gov.in) ಕಳುಹಿಸುವುದು.

13) ಪ್ರತಿಯೊಂದು ಕಾಮಗಾರಿಯ ವಿವರಗಳನ್ನು ಫಲಕದಲ್ಲಿ ಸಾರ್ವಜನಿಕರಿಗೆ ಕಾಣುವಂತೆ ಈ ಕೆಳಕಂಡ ಮಾದರಿಯಲ್ಲಿ ನಮೂದಿಸುವುದು.

ಪ್ರಕೃತಿ ವಿಕೋಪ ಕಾಮಗಾರಿ

ಕಾಮಗಾರಿಯ ಹೆಸರು:	
ಅಂದಾಜು ಮೊತ್ತ:	
ಕಾಮಗಾರಿ ಪ್ರಾರಂಭಿಸಿದ ದಿನಾಂಕ:	
ಕಾಮಗಾರಿ ಮುಕ್ತಾಯವಾದ ದಿನಾಂಕ:	
ಅನುಷ್ಠಾನಗೊಳಿಸಿದ ಸಂಸ್ಥೆ:	

14) ಪ್ರತಿ ತಿಂಗಳು ಅಂತ್ಯಕ್ಕೆ ಅನುದಾನ ಬಳಕೆಯಾದ ವಿವರಗಳನ್ನು ಮೇಲ್ಕಂಡ ಇ-ಮೇಲ್ ಮುಖಾಂತರ ಸಲ್ಲಿಸುವುದು. ಬಳಕೆ ಪ್ರಮಾಣ ಪತ್ರಗಳನ್ನೂ ಸಹ ತಪ್ಪದೇ ಸರ್ಕಾರಕ್ಕೆ ರವಾನಿಸುವುದು.

15) ಪ್ರತಿ ತಿಂಗಳು ಸಾಧಿಸಿದ ಪ್ರಗತಿಯನ್ನು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳ ಹಾಗೂ ಪ್ರಾದೇಶಿಕ ಆಯುಕ್ತರ ಗಮನಕ್ಕೆ ತರುವುದು ಮತ್ತು ಅವರಿಂದ ಸಲಹೆ-ಸೂಚನೆಗಳನ್ನು ಪಡೆಯುವುದು.

16) ಅನುದಾನ ಲಭ್ಯತೆ ಇಲ್ಲದೇ ಯಾವುದೇ ದುರಸ್ತಿ ಕಾಮಗಾರಿಗಳನ್ನು ಎಸ್.ಡಿ.ಆರ್.ಎಫ್/ ಎನ್.ಡಿ.ಆರ್.ಎಫ್ ಅಡಿಯಲ್ಲಿ ಕೈಗೊಳ್ಳುವಂತಿಲ್ಲ. ಹಾಗೂ ಕಾಮಗಾರಿಗಳನ್ನು ಬಿಡುಗಡೆಯಾದ ಅನುದಾನಕ್ಕೆ ಸೀಮಿತಗೊಳಿಸುವುದು.

ಈ ವೆಚ್ಚವನ್ನು ವಿಧಾನಸೌಧದ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಶಾಖೆಯಲ್ಲಿರುವ ಸಿ.ಆರ್.ಎಫ್ ಉಳಿಕೆ ಮೊತ್ತದಿಂದ ಭರಿಸುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಹೆಚ್.ಎಂ.ಮಲ್ಲಿಕಾರ್ಜುನಸ್ವಾಮಿ,
ಸರ್ಕಾರದ ಉಪ ಕಾರ್ಯದರ್ಶಿ,
ಕಂದಾಯ ಇಲಾಖೆ (ವಿಪತ್ತು ನಿರ್ವಹಣೆ).

ಪಿ.ಆರ್. 1311

INFRASTRUCTURE DEVELOPMENT SECRETARIAT

Sub: Release of Funds to M/s Feedback Infra to carryout the Consultancy Services for "Institutional Strengthening & Sector Specific Inventory For PPP Mainstreaming " for Tourism Department.

Read:

1. Letter No. IDD 104 ITS 2011 dated 19.01.2012.
2. Letter No. Nil dtd. 13.03.2012.from Feedback Infrastructure Services Private Ltd, New Delhi.
3. Letter D.O. No. KCIT 48 prs/2012 dtd. 28.03.2012 from Principle Secretary to Government, Tourism Department.

Preamble:

In the letter read at (1) above, IDD has awarded the task of Consultancy Services for "Institutional Strengthening and Sector Specific Inventory for PPP Mainstreaming" for Tourism Department to M/s. Feedback Infrastructure Services Pvt. Ltd. for which IDD would pay an amount of Rs. 45,00,000/-(inclusive of taxes) as per the payment schedule in the RFP.

In the letter read at (2) above, M/s. Feedback Infrastructure Services Pvt. Ltd. has submitted a invoice vide no. 089 /2011-12 dated 13.03.2012 of Rs. 2,25,000/- (Inclusive of taxes) towards the submission of Inception Report and requested to make early payment.

In the letter read at (3) above, Tourism Department has reported that they had received the inception report. The Inception report has been examined and it is appropriate.

Hence the following order.

GOVERNMENT ORDER NO.ID 34 ITS 2012, BANGALORE DATED 05.05.2012

Under the circumstances explained in the preamble, Government is pleased to accord sanction to release Rs 2,25,000/- (Rupees two lakhs twenty five thousand only) (for submission of inception report) to M/s. Feedback Infrastructure Services Pvt. Ltd, payable at New Delhi towards providing consultancy services for "Institutional Strengthening and Sector Specific Inventory for PPP Mainstreaming" for Tourism Department.

The expenditure shall be met out under the Budget Head 3451-00-090-1-06-059 Infrastructure Preliminary Studies other expenditure (Plan) 2012-13.

The Senior Associate, M/s. Feedback Infrastructure Services Pvt. Ltd, Bangalore is authorized to draw the amount on a Payees Receipt duly countersigned by the Under Secretary to Government, Infrastructure Development Department from the State Huzoor Treasury, Bangalore.

This order is issued in accordance with the delegation of financial powers to Principal Secretary/Secretary to Govt., vide G.O No. FD 1 TFP 2008 dated 16/05/2008.

By order and in the name of the Governor of Karnataka

R.SHIVALINGAIAH,
Under Secretary to Govt. (PPP Cell),
Infrastructure Development Department.

P.R. 1325

INFRASTRUCTURE DEVELOPMENT SECRETARIAT

Sub: Release of Funds to M/s Deloitte Touche Tohmatsu India Pvt. ltd to Carryout the Consultancy Services for "Institutional Strengthening & Sector Specific Inventory for PPP Mainstreaming " for Directorate Urban Land Transport Department.

Read:

1. Letter No. IDD 104 ITS 2011 dated 19.01.2012.
2. Letter No. Nil dtd. 23.03.2012.from Senior Director, M/s Deloitte Touche Tohmatsu India Pvt.Ltd ' Bangalore.
3. Letter No 71/ADM/2011-12/15 dtd: 11.04.2012 from Special officer Directorate of Urban Land Transport, Urban Development Department.

Preamble:

In the letter read at (1) above, IDD has awarded the task of Consultancy Services for "Institutional Strengthening and Sector Specific Inventory for PPP Mainstreaming" for Directorate of Urban Land Transport to M/s. Deloitte Touche Tohmatsu India Pvt. Ltd. for which IDD would pay an amount of Rs. 45,00,000/-(inclusive of taxes) as per the payment schedule in the RFP.

In the letter read at (2) above, Senior Associate, Deloitte Touche Tohmatsu India Pvt. Ltd. has submitted a Invoice vide no. 2360001971 dated 23.03.2012 of Rs. 2,24,999.87/- towards the submission of Inception Report and requested to make early payment.

In the letter read at (3) above, Special officer, Directorate of Urban Land Transport has informed that the inspection report has been perused and is acceptable

Hence the following order.

GOVERNMENT ORDER NO.ID 42 ITS 2012, BANGALORE DATED 05.05.2012

Under the circumstances explained in the preamble, Government is pleased to accord sanction to release Rs 2,25,000/- (Rupees two lakhs twenty five thousand only) (for submission of inception report) to M/s. Deloitte Touche Tohmatsu India Pvt. Ltd payable at New Delhi towards providing consultancy services for "Institutional Strengthening and Sector Specific Inventory for PPP Mainstreaming" for Directorate of Urban Land Transport.

The expenditure shall be met out under the Budget Head 3451-00-090-1-06-059 Infrastructure Preliminary Studies other expenditure (Plan) 2012-13.

The Senior Director, M/s. Deloitte Touche Tohmatsu India Pvt. Ltd., is authorized to draw the amount on a Payees Receipt duly countersigned by the Under Secretary to Government, Infrastructure Development Department from the State Huzoor Treasury, Bangalore.

This order is issued in accordance with the delegation of financial powers to Principal Secretary/Secretary to Govt., vide G.O No. FD 1 TFP 2008 dated 16/05/2008.

By order and in the name of the Governor of Karnataka

R.SHIVALINGAIAH,

Under Secretary to Govt. (PPP Cell),

P.R. 1326 Infrastructure Development Department.

INFRASTRUCTURE DEVELOPMENT SECRETARIAT

Sub: Release of Funds to M/s Feedback Infra to carryout the Consultancy Services for "Institutional Strengthening & Sector Specific Inventory for PPP Mainstreaming " for Transport Department.

Read:

1. Letter No. IDD 104 ITS 2011 dated 19.01.2012.
2. G.O. No. SARIE 53 RIC 2012 dtd. 22.03.2012 from Under Secretary to Govt, Transport Department.
3. Letter No. SAARAIE 55 RIC 2012 dtd. 27.03.2012 from Deputy Secretary to Govt., Transport Department.
4. Letter No. FISPL/Advisory/IDD/11-12/2903-1 dtd. 29.03.2012 from Feedback Infrastructure Services Pvt. Ltd.
5. Letter No. FISPL/Advisory/IDD/11-12/2903-2 dtd. 29.03.2012 from Feedback Infrastructure Services Pvt. Ltd.

Preamble:

In the letter read at (1) above, IDD has awarded the task of Consultancy Services for "Institutional Strengthening and Sector Specific Inventory for PPP Mainstreaming" for Transport Department to M/s. Feedback Infrastructure Services Pvt. Ltd. for which IDD would pay an amount of Rs. 37,50,000/-(inclusive of taxes) as per the payment schedule in the RFP.

In the G.O read at (2) above, the Transport Department has created PPP Cell to identify, conceptualize and create a shelf of projects in consultation with the various corporations and sub departments and recommend approval of suitable projects for implementation on PPP route.

In the letter read at (3) above, Transport Department has reported that they had received the inception report for the aforesaid assignment prepared by M/s. Feedback Infrastructure Services Pvt. Ltd. is accepted and the entitled amount to concerned may be released.

In the letter read at (4) above, M/s. Feedback Infrastructure Services Pvt. Ltd. has submitted a invoice vide no. FISPL/ADV/95/11-12/IDD dtd. 28.03.2012 of Rs. 1,87,500/- towards the submission of Inception Report and requested to make early payment.

In the letter read at (5) above, M/s. Feedback Infrastructure Services Pvt. Ltd. has submitted a invoice vide no. FISPL/ADV/96/11-12/IDD dtd. 28.03.2012 of Rs. 93,750/- towards the creation of PPP Cell at Transport Department and requested to make early payment.

Hence the following orders.

GOVERNMENT ORDER NO.ID 33 ITS 2012, BANGALORE DATED 05.05.2012

Under the circumstances explained in the preamble, Government is pleased to accord sanction to release Rs 2,81,250/- (Rupees two lakhs eighty one thousand and two fifty only) (for submission of Inception Report Rs. 1,87,500/- & Creation of PPP Cell at Transport Department Rs. 93,750/-) to M/s. Feedback Infrastructure Services Pvt. Ltd, payable at New Delhi towards providing consultancy services for "Institutional Strengthening and Sector Specific Inventory for PPP Mainstreaming" for Transport Department.

The expenditure shall be met out under the Budget Head 3451-00-090-1-06-059 Infrastructure Preliminary Studies other expenditure (Plan) 2012-13.

The, Manager, M/s. Feedback Infrastructure Services Pvt. Ltd. is authorized to draw the amount on a Payees Receipt duly countersigned by the Under Secretary to Government, Infrastructure Development Department from the State Huzoor Treasury, Bangalore.

This order is issued in accordance with the delegation of financial powers to Principal Secretary/Secretary to Govt., vide G.O No. FD 1 TFP 2008 dated 16/05/2008.

By order and in the name of the Governor of Karnataka

R.SHIVALINGAIAH,
Under Secretary to Govt. (PPP Cell),
Infrastructure Development Department.

P.R. 1327

INFRASTRUCTURE DEVELOPMENT SECRETARIAT

Sub: Release of Funds for engaging the services of MC & A as Branding and Communication agency of Infrastructure Development Department.

Read:

1. G.O. No. IDD 138 IDM 2011 dated 28.07.2011.
2. Letter No.IDD/CSD/3062 dtd. 18.01.2012 from DGM, MC&A, Bangalore, Letter No.IDD/CSD/3281 dtd 14.02.2012 from DGM, MC&A, Bangalore and Letter No.IDD/CSD/3662 dtd 14.03.2012 from DGM, MC&A, Bangalore.

Preamble:

In the G.O read at (1) above, sanction was accorded for engaging the services of Marketing Consultants & Agencies ltd., Bangalore as Branding & Communication Agency of IDD with a view to project various activities of the department before the GIM 2012.

In the letters read at (2) above, the Deputy General Manager, MC&A has submitted proposals towards providing consultancy services of Branding & Communication for IDD for the month of December 2011, January 2012 and February 2012, for an amount of Rs 2.00 Lakhs each, and requested the Govt. for release of amount in this regard.

Hence the following orders.

GOVERNMENT ORDER NO.IDD 138 IDM 2011, BANGALORE DATED 05.05.2012

Under the circumstances explained in the preamble, Government is pleased to accord sanction to release Rs 6.00 Lakhs (Rupees Six lakhs only) (for the month of December 2011, January 2012 & February 2012 only) to Managing Director, MC&A, Bangalore towards providing consultancy services of Branding & Communication for IDD for the progress achieved by MC & A Bangalore.

2. The expenditure shall be met out under the Budget Head 3451-00-090-1-06-059 Infrastructure Preliminary Studies other expenditure (Plan) 2012-13.

3. The Managing Director, MC&A, Bangalore is authorized to draw the amount on a Payees Receipt duly countersigned by the Under Secretary to Government, Infrastructure Development Department from the State Huzoor Treasury, Bangalore.

4. This order is issued in accordance with the delegation of financial powers to Principal Secretary/Secretary to Govt., vide G.O No. FD 1 TFP 2008 dated 16/05/2008.

By order and in the name of the Governor of Karnataka

R.SHIVALINGAIAH,
Under Secretary to Govt. (PPP Cell),
Infrastructure Development Department.

P.R. 1328

ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವಾಲಯ

ವಿಷಯ: ಮೆ: ಮೈಸೂರು ಕಾಗದ ಕಾರ್ಖಾನೆಯವರು ವನ್ಯಜೀವಿ ವಿಭಾಗ ಪ್ರದೇಶದಲ್ಲಿ ಬೆಳೆದ ನೆಡುತೋಪಿಗೆ ಪರಿಹಾರವಾಗಿ ಗುತ್ತಿಗೆ ಬಾಡಿಗೆಯನ್ನು ವಿನಾಯಿತಿ ನೀಡುವ ಕುರಿತು ಪರಿಶೀಲಿಸಲು ರಚಿಸಿರುವ ಸಮಿತಿಯನ್ನು ಪುನರ್ ರಚಿಸುವ ಬಗ್ಗೆ.

ಓದಲಾಗಿದೆ:
1) ಸರ್ಕಾರದ ಪ್ರಧಾನ ಕಾರ್ಯದರ್ಶಿ ಅಪಜೀ ಇಲಾಖೆ ರವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ದಿನಾಂಕ: 02-04-2009 ನಡವಳಿ ಬಗ್ಗೆ.
2) ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ವನ್ಯಜೀವಿ) ರವರ ಪತ್ರದ ಸಂಖ್ಯೆ:ಬಿ/ವಜೀ/ಸಿಆರ್-95/1994-95 ದಿನಾಂಕ: 03-07-2009 ಮತ್ತು 24-07-2009.
3) ಸರ್ಕಾರದ ಆದೇಶ ಸಂಖ್ಯೆ: ಅಪಜೀ 54 ಎಫ್‌ಡಬ್ಲ್ಯುಎಲ್ 2006, ದಿನಾಂಕ: 24-09-2009.

ಪ್ರಸ್ತಾವನೆ:

ಮೇಲೆ (1)ರಲ್ಲಿ ಓದಲಾದ ಸರ್ಕಾರದ ಪ್ರಧಾನ ಕಾರ್ಯದರ್ಶಿ ಅಪಜೀ ಇಲಾಖೆ ರವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ದಿನಾಂಕ: 02-04-2009ರ ನಡವಳಿಯಲ್ಲಿ ಮೆ: ಮೈಸೂರು ಕಾಗದ ಕಾರ್ಖಾನೆಯವರು ವನ್ಯಜೀವಿ ವಿಭಾಗ ಪ್ರದೇಶದಲ್ಲಿ ಬೆಳೆದ ನೆಡುತೋಪಿಗೆ ಪರಿಹಾರವಾಗಿ ಸದರಿಯವರಿಗೆ ಗುತ್ತಿಗೆ ಬಾಡಿಗೆ ವಿನಾಯಿತಿ ನೀಡುವ ಕುರಿತು ಪರಿಶೀಲಿಸಲು ಒಂದು ಸಮಿತಿಯನ್ನು ರಚಿಸಲು ತೀರ್ಮಾನಿಸಲಾಗಿತ್ತು.

ಮೇಲೆ (2) ರಲ್ಲಿ ಓದಲಾದ ಪತ್ರಗಳಲ್ಲಿ ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ವನ್ಯಜೀವಿ) ರವರು ಹಿಂದೆ ನೇಮಿಸಲಾಗಿದ್ದ ಸಮಿತಿಯ ಕೆಲವು ಅಧಿಕಾರಿಗಳು ವರ್ಗಾವಣೆಯಾಗಿರುವುದರಿಂದ ಹಾಗೂ ಇತರೇ ಕಾರಣಗಳಿಂದ ಸಮಿತಿಯನ್ನು ಪುನರ್ ರಚಿಸಲು ಸರ್ಕಾರವನ್ನು ಕೋರಿದ ಹಿನ್ನೆಲೆಯಲ್ಲಿ ಮೇಲೆ (3)ರಲ್ಲಿ ಓದಲಾದ ಸರ್ಕಾರದ ಆದೇಶ ಸಂಖ್ಯೆ: ಅಪಜೀ 54 ಎಫ್‌ಡಬ್ಲ್ಯುಎಲ್ 2006, ದಿನಾಂಕ: 24-09-2009ರಲ್ಲಿ ಈ ಕೆಳಕಂಡಂತೆ ಸಮಿತಿಯನ್ನು ಪುನರ್ ರಚಿಸಿ ಆದೇಶ ಹೊರಡಿಸಲಾಗಿರುತ್ತದೆ.

1.	ಶ್ರೀ ಜಿ.ಸೆಲ್ವಕುಮಾರ್, ಭಾ.ಅ.ಸೇ., ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ವನ್ಯಜೀವಿ)- ಅಧ್ಯಕ್ಷರು
2.	ಶ್ರೀ ಬಿ.ಬಿ. ನಾಡಗೌಡರ್, ಭಾ.ಅ.ಸೇ., ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯ ಸಂರಕ್ಷಣೆ)
3.	ಶ್ರೀ ಕೆ.ಎಸ್.ಅರಳಿಕಟ್ಟಿ, ಭಾ.ಅ.ಸೇ., ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಹಾಗೂ ನಿರ್ದೇಶಕರು, ಮೈಸೂರು ಪೇಪರ್ ಮಿಲ್ಸ್ ಲಿಮಿಟೆಡ್.
4.	ಶ್ರೀ ಎನ್.ಎಂ.ಹುಂಚ್ಯಾಳಿ, ನಿರ್ದೇಶಕರು(ಹಣಕಾಸು), ಮೈಸೂರು ಪೇಪರ್ ಮಿಲ್ಸ್.

5.	ಶ್ರೀಮತಿ ಸ್ಮಿತಾ ಎಸ್.ಬಿಜ್ಜೂರು, ಭಾ.ಅ.ಸೇ., ಶಿವಮೊಗ್ಗ ವನ್ಯಜೀವಿ ವಿಭಾಗ, ಶಿವಮೊಗ್ಗ.
6.	ಶ್ರೀ ಪ್ರಕಾಶ್ ನೆಟಾಲ್ಕರ್, ಭಾ.ಅ.ಸೇ., ಉಪ ಅರಣ್ಯ ಸಂರಕ್ಷಣಾಧಿಕಾರಿ, ಕುದುರೆಮುಖ ವನ್ಯಜೀವಿ ವಿಭಾಗ, ಕಾರ್ಕಳ.

ಆದರೆ, ಸದರಿ ಸಮಿತಿಗೆ ನೇಮಕಗೊಂಡ ಅಧಿಕಾರಿಗಳು ವರ್ಗಾವಣೆಗೊಂಡಾಗ ಸಮಿತಿಯನ್ನು ಮತ್ತೆ ಪುನರ್ ರಚಿಸಬೇಕಾಗುತ್ತದೆ. ಇದರಿಂದಾಗಿ ಸಮಿತಿಯು ತುರ್ತಾಗಿ ವರದಿ ನೀಡುವಲ್ಲಿ ವಿಳಂಬವಾಗುತ್ತಿರುವುದರಿಂದ ಸಮಿತಿಯಲ್ಲಿನ ಅಧಿಕಾರಿಗಳು ಹೊಂದಿರುವ ಹುದ್ದೆಗಳನ್ನು ನಮೂದಿಸಿ ಸಮಿತಿಯನ್ನು ಪುನರ್ ರಚಿಸಲು ಸರ್ಕಾರವು ತೀರ್ಮಾನ ಕೈಗೊಂಡಿರುತ್ತದೆ.

ಆದ್ದರಿಂದ ಈ ಕೆಳಗಿನಂತೆ ಆದೇಶ.

ಸರ್ಕಾರದ ಆದೇಶ ಸಂಖ್ಯೆ: ಅಪಜೀ 54 ಎಫ್‌ಡಬ್ಲ್ಯುಎಲ್ 2006, ಬೆಂಗಳೂರು. ದಿನಾಂಕ: 17-04-2012.

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ ಮೆ: ಮೈಸೂರು ಕಾಗದ ಕಾರ್ಖಾನೆಯವರು ವನ್ಯಜೀವಿ ವಿಭಾಗ ಪ್ರದೇಶದಲ್ಲಿ ಬೆಳೆದ ನೆಡುತೋಪಿಗೆ ಪರ್ಯಾಯವಾಗಿ ಗುತ್ತಿಗೆ ಬಾಡಿಗೆ ವಿನಾಯಿತಿ ನೀಡುವ ಕುರಿತು ಪರಿಶೀಲಿಸಲು ರಚಿಸಿರುವ ಸಮಿತಿಯನ್ನು ಈ ಕೆಳಕಂಡಂತೆ ಅಧಿಕಾರಿಗಳು ಹೊಂದಿದ ಹುದ್ದೆಯ ಪದನಾಮವನ್ನು ಗುರುತಿಸಿ ಸಮಿತಿಯನ್ನು ಪುನರ್ ರಚಿಸಲಾಗಿದೆ.

1.	ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ವನ್ಯಜೀವಿ) – ಅಧ್ಯಕ್ಷರು
2.	ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯ ಸಂರಕ್ಷಣೆ)
3.	ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಹಾಗೂ ನಿರ್ದೇಶಕರು, ಮೈಸೂರು ಪೇಪರ್ ಮಿಲ್ಸ್ ಲಿಮಿಟೆಡ್.
4.	ನಿರ್ದೇಶಕರು(ಹಣಕಾಸು), ಮೈಸೂರು ಪೇಪರ್ ಮಿಲ್ಸ್.
5.	ಉಪ ಅರಣ್ಯ ಸಂರಕ್ಷಣಾಧಿಕಾರಿ, ಶಿವಮೊಗ್ಗ ವನ್ಯಜೀವಿ ವಿಭಾಗ, ಶಿವಮೊಗ್ಗ.
6.	ಉಪ ಅರಣ್ಯ ಸಂರಕ್ಷಣಾಧಿಕಾರಿ, ಕುದುರೆಮುಖ ವನ್ಯಜೀವಿ ವಿಭಾಗ, ಕಾರ್ಕಳ.

2. ಸದರಿ ಸಮಿತಿಯು ಈ ಆದೇಶ ಹೊರಡಿಸಿದ ದಿನಾಂಕದಿಂದ ಒಂದು ತಿಂಗಳೊಳಗಾಗಿ ಸರ್ಕಾರಕ್ಕೆ ವರದಿಯನ್ನು ಸಲ್ಲಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರಮತ್ತು ಅವರ ಹೆಸರಿನಲ್ಲಿ,

ಉಮಾದೇವಿ,
ಸರ್ಕಾರದ ಅಧೀನ ಕಾರ್ಯದರ್ಶಿ,
ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ.

ಪಿ.ಆರ್. 1270

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸಚಿವಾಲಯ

ವಿಷಯ: ಕರ್ನಾಟಕ ನಾಗರೀಕ ಸೇವೆಗಳ ಖಾತರಿ ಅಧಿನಿಯಮ 2011ನ್ನು ಅನುಷ್ಠಾನಗೊಳಿಸಲು ರಚಿಸಿರುವ ಸಕಾಲ ಮಂಡಳಿಗೆ ನಿರ್ವಹಣಾ ಸಮಾಲೋಚಕರನ್ನಾಗಿ ಶ್ರೀ ಸುಬ್ರಮಣಿಯನ್, ಎಸ್ ಇವರನ್ನು ನೇಮಿಸುವ ಬಗ್ಗೆ

ಓದಲಾಗಿದೆ:
1) ಅಧಿಸೂಚನೆ ಸಂಖ್ಯೆ: ಸಂವ್ಯಶಾಇ 39 ಶಾಸನ 2011, ದಿನಾಂಕ: 02/01/2012.
2) ಅಧಿಸೂಚನೆ ಸಂಖ್ಯೆ: ಸಿಆಸುಇ 04 ಇಕಾಅ 2012, ದಿನಾಂಕ: 01/03/2012.
3) ಆದೇಶ ಸಂಖ್ಯೆ ಸಿಆಸುಇ 20 ಇಕಾಅ 2012. ದಿನಾಂಕ 06-03-2012.

ಪ್ರಸ್ತಾವನೆ:

11 ಇಲಾಖೆಗಳ ಮುಖಾಂತರ 151 ಕಾಲಮಿತಿ ಸೇವೆಯನ್ನು ನಾಗರೀಕರಿಗೆ ಒದಗಿಸಲು ಕರ್ನಾಟಕ ನಾಗರಿಕರಿಗೆ ಸೇವೆಗಳ ಖಾತರಿ ಅಧಿನಿಯಮ, 2011 ನ್ನು ಜಾರಿಗೊಳಿಸಲಾಗಿದೆ. ಸಾರ್ವಜನಿಕರಿಗೆ ಸರ್ಕಾರಿ ಅಧಿಕಾರಿಗಳ ಹೊಣೆಗಾರಿಕೆಯನ್ನು ಖಾತರಿಪಡಿಸುವ ಮೂಲಕ ಸುಧಾರಿತ

ಸೇವೆಯನ್ನು ನೀಡುವುದು ಈ ಅಧಿನಿಯಮದ ಗುರಿಯಾಗಿದೆ. ಇದು ಆಡಳಿತದಲ್ಲಿ ಹೆಚ್ಚಿನ ಪಾರದರ್ಶಕತೆ ಹಾಗೂ ದಕ್ಷತೆಯನು, ತರುವುದಲ್ಲದೇ ದೊಡ್ಡ ಪ್ರಮಾಣದಲ್ಲಿ ಸಾರ್ವಜನಿಕ ಕುಂದುಕೊರತೆ ಹಾಗೂ ಭ್ರಷ್ಟ ಪದ್ಧತಿಗಳನ್ನು ಕಡಿಮೆ ಮಾಡುತ್ತದೆ.

ಮೇಲೆ ಓದಲಾದ ಉಲ್ಲೇಖ (1)ರ ದಿನಾಂಕ: 02/01/2012ರ ಅಧಿಸೂಚನೆಯಲ್ಲಿ ಕರ್ನಾಟಕ ನಾಗರೀಕರಿಗೆ ಸೇವೆಗಳ ಖಾತರಿ ಅಧಿನಿಯಮದ ಮಸೂದೆಯನ್ನು ಕರ್ನಾಟಕ ರಾಜ್ಯ ವಿಶೇಷ ಪತ್ರಿಕೆಯಲ್ಲಿ ಭಾಗ–4ಎ ಯಲ್ಲಿ ಪ್ರಕಟಿಸಲಾಗಿದೆ.

ಮೇಲೆ ಓದಲಾದ ಉಲ್ಲೇಖ (2)ರ ಅಧಿಸೂಚನೆಯಲ್ಲಿ ಕರ್ನಾಟಕ ನಾಗರೀಕರಿಗೆ ಸೇವೆಗಳ ಖಾತರಿ ನಿಯಮಗಳು 2012ನ್ನು ಕರ್ನಾಟಕ ರಾಜ್ಯ ವಿಶೇಶ ಪತ್ರಿಕೆಯ ಭಾಗ–4ಎ ನಲ್ಲಿ ದಿನಾಂಕ: 01/03/2012 ರಂದು ಪ್ರಕಟಿಸಿ ಜಾರಿಗೊಳಿಸಲಾಗಿದೆ.

ಮೇಲೆ ಓದಲಾದ ಉಲ್ಲೇಖ (3)ರ ಆದೇಶದಲ್ಲಿ ಕರ್ನಾಟಕ ನಾಗರೀಕ ಸೇವೆಗಳ ಖಾತರಿ ಅಧಿನಿಯಮ 2011ನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಸಕಾಲ ಮಂಡಳಿಯನ್ನು ರಚಿಸಲಾಗಿದೆ. ಹೀಗೆ ರಚಿಸಲಾಗಿರುವ ಸಕಾಲ ಮಂಡಳಿಯ ನಿರ್ವಹಣಾ ಸಮಾಲೋಚಕರ ಹುದ್ದೆಗೆ ದಿನಾಂಕ : 14–03–2012ರಂದು ನಡೆದ ಸಂದರ್ಶನದಲ್ಲಿ ಆಯ್ಕೆಯಾಗಿರುವ ಶ್ರೀ ಸುಬ್ರಮಣಿಯನ್. ಎಸ್, # 401, ಜಿ.ಕೆ ಪರ್ಲ್, 6ನೇ ಮುಖ್ಯ ರಸ್ತೆ, ಹೆಚ್.ಎ.ಎಲ್ 3ನೇ ಹಂತ, ಬೆಂಗಳೂರು–560075 ಇವರನ್ನು ನೇಮಿಸಲು ತೀರ್ಮಾನಿಸಿದ್ದು ಅವರು ಸಕಾಲ ಮಂಡಳಿಯ ನಿರ್ವಹಣಾ ಸಮಾಲೋಚಕರಾಗಿ ಕಾರ್ಯನಿರ್ವಹಿಸಲು ತಮ್ಮ ಒಪ್ಪಿಗೆಯನ್ನು ಸೂಚಿಸಿರುತ್ತಾರೆ. ಈ ಹಿನ್ನೆಲೆಯಲ್ಲಿ, ಕೆಳಕಂಡಂತೆ ಸರ್ಕಾರದ ಆದೇಶವನ್ನು ಹೊರಡಿಸಲಾಗಿದೆ.

ಸರ್ಕಾರಿ ಆದೇಶ ಸಂಖ್ಯೆ ಸಿಆಸುಇ 78 ಇಕಾಅ 2012, ಬೆಂಗಳೂರು ದಿನಾಂಕ : 18ನೇ ಏಪ್ರಿಲ್ 2012.

ದಿನಾಂಕ:14–3–2012 ರಂದು ನಡೆದ ಸಂದರ್ಶನದಲ್ಲಿ ಆಯ್ಕೆಯಾಗಿರುವ ಶ್ರೀ ಸುಬ್ರಮಣಿಯನ್. ಎಸ್, # 401, ಜಿ.ಕೆ ಪರ್ಲ್, 6ನೇ ಮುಖ್ಯ ರಸ್ತೆ, ಹೆಚ್.ಎ.ಎಲ್ 3ನೇ ಹಂತ, ಬೆಂಗಳೂರು–560 075 ಇವರನ್ನು ಸಕಾಲ ಮಂಡಳಿಯ ನಿರ್ವಹಣಾ ಸಮಾಲೋಚಕರ (Management Consultant) ಹುದ್ದೆಗೆ ಒಂದು ವರ್ಷದ ಅವಧಿಗೆ ವಾರ್ಷಿಕ ರೂ. 13.00 ಲಕ್ಷಗಳ (ರೂಪಾಯಿ ಹದಿಮೂರು ಲಕ್ಷಗಳು ಮಾತ್ರ) ಸಂಚಿತ ವೇತನದೊಂದಿಗೆ ದಿನಾಂಕ : 18–04–2012 ರಿಂದ ಜಾರಿಗೆ ಬರುವಂತೆ ಗುತ್ತಿಗೆ ಆಧಾರದ ಮೇಲೆ ನೇಮಿಸಲಾಗಿದೆ. ಅವರು ಕೆಳಕಂಡ ವಿಷಯಗಳ ಬಗ್ಗೆ ಕಾರ್ಯನಿರ್ವಹಿಸುವರು:

ಅ) ಕರ್ನಾಟಕ ನಾಗರೀಕರಿಗೆ ಸೇವೆಗಳ ಖಾತರಿ ಅಧಿನಿಯಮ 2011ರ ಪರಿಣಾಮಕಾರಿ ನಿರ್ವಹಣೆಗಾಗಿ ಸೇವೆಗಳನ್ನು ವಿಳಂಬ / ವಿಫಲವಾಗದಂತೆ ನೀಡಲು ಸೂಕ್ತವಾದ ಸ್ಟ್ರಾಟಜಿಗಳನ್ನು ತಯಾರಿಸಿ ಮಿಷನ್ ನಿದೇರ್ಶಕರಿಗೆ ನೀಡುವುದು ಮತ್ತು ಅವುಗಳನ್ನು ಕಾರ್ಯರೂಪಕ್ಕೆ ತರುವುದು.

ಆ) ಮುಂಬರುವ ದಿನಗಳಲ್ಲಿ ಪ್ರತಿಯೊಂದು ಇಲಾಖೆಯ ಪ್ರತಿಯೊಂದು ಸೇವೆಯ ಕಾರ್ಯಹರಿವಿನ ಬಗ್ಗೆ ನಿಯಮಗಳು/ವಿಧಿವಿಧಾನಗಳನ್ನು ಅಭ್ಯಸಿಸಿ ಅದರ ಸರಳೀಕರಣ/ಆಧುನೀಕರಣ ಹಾಗೂ ಕ್ಷಿಪ್ರಗತಿಯಲ್ಲಿ ಕಾರ್ಯನಿರ್ವಹಿಸಲು ಸಹಕರಿಸುವುದು.

ಇ) ಸಕಾಲ ಮಿಷನ್ನಿನ ನಿರ್ದೆಶಕರು/ಅಪರ ನಿರ್ದೇಶಕರು/ಜಂಟಿ ನಿರ್ದೇಶಕರು ವಹಿಸುವ ಯಾವುದೇ ಕೆಲಸಕಾರ್ಯಗಳ ನಿರ್ವಹಣೆ.

ಈ ನೇಮಕಾತಿಯು ಕೆಳಕಂಡ ಷರತ್ತುಗಳಿಗೆ ಒಳಪಟ್ಟಿರುತ್ತದೆ:

ಅ) ನಿರ್ವಹಣಾ ಸಮಾಲೋಚಕರ ನೇಮಕಾತಿಯು ಮೊದಲಿಗೆ ಒಂದು ವರ್ಷದ ಅವಧಿಯದ್ದಾಗಿರುತ್ತದೆ. ಅವರ ಸೇವೆಯು ತೃಪ್ತಕರವಾಗಿರುವುದು ಕಂಡುಬಂದಲ್ಲಿ ಅವರ ಸೇವೆಯನ್ನು ಮುಂದುವರೆಸುವ ಬಗ್ಗೆ ಪರಿಶೀಲಿಸಲಾಗುವುದು.

ಆ) ನಿರ್ವಹಣಾ ಸಮಾಲೋಚಕರ ಸೇವೆಯು ಪ್ರತಿನಿತ್ಯವು ಅವಶ್ಯವಿರುವುದರಿಂದ, ಪ್ರತಿದಿನವು ಕಚೇರಿ ವೇಳೆಯಲ್ಲಿ ಕಚೇರಿಯಲ್ಲಿ ಹಾಜರಿರತಕ್ಕದ್ದು.

ಇ) ಪ್ರತಿನಿತ್ಯ ಕಚೇರಿಗೆ ಹಾಜರಾಗುವುದರಿಂದ 12 ದಿನಗಳ ಸಾಂದರ್ಭಿಕ ರಜೆ ಪಡೆಯಲು ಅರ್ಹರಾಗಿರುತ್ತಾರೆ.

ಈ) ಕಚೇರಿ ಕೆಲಸದ ಮೇಲೆ ರಾಜ್ಯದಲ್ಲಿ, ನವದೆಹಲಿ ಅಥವಾ ಇನ್ನಾವುದೇ ಸ್ಥಳಕ್ಕೆ ಭೇಟಿ ನೀಡಬೇಕಾದಲ್ಲಿ, ರಾಜ್ಯ ಸರ್ಕಾರದ ವೃಂದ–ಎ ಅಧಿಕಾರಿಗಳಿಗೆ ಅನ್ವಯಿಸುವ ದಿನಭತ್ಯೆ ಮತ್ತು ಪ್ರವಾಸಭತ್ಯೆ ಪಡೆಯಲು ಅರ್ಹರಾಗಿರುತ್ತಾರೆ.

ಉ) ನಿರ್ವಹಣಾ ಸಮಾಲೋಚಕರ ಹುದ್ದೆಯ ಸೇವಾವಧಿಯ ಭದ್ರತೆಗಾಗಿ ರೂ.1,00,000/– (ರೂಪಾಯಿ ಒಂದು ಲಕ್ಷಗಳು ಮಾತ್ರ) ಬ್ಯಾಂಕ್ ಗ್ಯಾರಂಟಿಯನ್ನು ನೀಡುವುದು.

ಊ) ಒಂದು ತಿಂಗಳ ಮುಂಚಿತವಾಗಿ ನೋಟಿಸ್ ನೀಡದೇ ಸಂಸ್ಥೆಯ ಕೆಲಸವನ್ನು ಬಿಡತಕ್ಕದ್ದಲ್ಲ. ಒಂದು ಪಕ್ಷ ನೋಟಿಸ್ ನೀಡದೇ ಕೆಲಸ ಬಿಟ್ಟಲ್ಲಿ ಬ್ಯಾಂಕ್ ಗ್ಯಾರಂಟಿಯನ್ನು ಸರ್ಕಾರದಿಂದ ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

ಋ) ಕಾಲಕಾಲಕ್ಕೆ ಸರ್ಕಾರವು ವಿಧಿಸಬಹುದಾದ ಯಾವುದೇ ಷರತ್ತುಗಳಿಗೆ ಬದ್ಧರಾಗಿರತಕ್ಕದ್ದು.

ಮೇಲಿನ ವೆಚ್ಚವನ್ನು 2012–13ನೇ ಸಾಲಿನ ಲೆಕ್ಕಶೀರ್ಷಿಕೆ ಸಂಖ್ಯೆ '2052–00–090–0–26–051 ಕರ್ನಾಟಕ ನಾಗರೀಕರಿಗೆ ಸೇವೆಗಳ ಖಾತರಿ ಅಧಿನಿಯಮದ ಅನುಷ್ಠಾನ' ದಲ್ಲಿ ಭರಿಸಲಾಗುವುದು.

ಈ ಆದೇಶವನ್ನು ಆರ್ಥಿಕ ಇಲಾಖೆಯು ಆದೇಶ ಸಂಖ್ಯೆ: ಆಇ 309 ವೆಚ್ಚ-12/12 ದಿನಾಂಕ 20-03-2012ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಎಂ. ಎಸ್. ಪ್ರೇಮಚಂದ್ರ
ಅಧೀನ ಕಾರ್ಯದರ್ಶಿ
ಸಿಬ್ಬಂದಿ & ಆಡಳಿತ ಸುಧಾರಣೆ ಇಲಾಖೆ,
(ಆಸು- ನಾಗರೀಕ ಸೇವೆಗಳು)

ಪಿ.ಆರ್. 1272

ವಾಣಿಜ್ಯ ಮತ್ತು ಕೈಗಾರಿಕೆ ಸಚಿವಾಲಯ

ವಿಷಯ: ರೈತರ ಸಹಕಾರಿ ಸಕ್ಕರೆ ಕಾರ್ಖಾನೆ, ರನ್ನಾನಗರ, ಇವರಿಗೆ ಹುಡ್ಕೋ ಸಂಸ್ಥೆಯಿಂದ ಪಡೆದುಕೊಂಡಿರುವ ಸಾಲವನ್ನು ಮರುಪಾವತಿಸಲು ₹ 4.00 ಕೋಟಿಗಳ ಮೃದು ಸಾಲವನ್ನು ಮಂಜೂರು ಮಾಡುವ ಬಗ್ಗೆ.

ಓದಲಾಗಿದೆ:
1) ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು ಇವರ ಪತ್ರ ಸಂಖ್ಯೆ ಡಿಎಸ್‌ಕೆ/ಎಫ್‌ಐಎನ್/09/2004-05 ದಿನಾಂಕ 03-01-2012.
2) ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು ಇವರ ಪತ್ರ ಸಂಖ್ಯೆ ಡಿಎಸ್‌ಕೆ/ಎಫ್‌ಐಎನ್/09/2004-05 ದಿನಾಂಕ 17-03-2012.

ಪ್ರಸ್ತಾವನೆ:-

ಮೇಲೆ ಓದಲಾದ (1)ರಲ್ಲಿ ರೈತರ ಸಹಕಾರಿ ಸಕ್ಕರೆ ಕಾರ್ಖಾನೆ, ರನ್ನಾನಗರ, ಮುಧೋಳ್ ತಾಲ್ಲೂಕು, ಬಾಗಲಕೋಟೆ ಜಿಲ್ಲೆ ಈ ಸಂಸ್ಥೆಯು ಸಹಕಾರಿ ವಲಯದಲ್ಲಿದ್ದು, ಬಾಗಲಕೋಟೆ ಜಿಲ್ಲೆಯ ಕಬ್ಬು ಬೆಳೆಗಾರ ರೈತರ ಮತ್ತು ಕಾರ್ಮಿಕರ ಹಿತದೃಷ್ಟಿಯಿಂದ ಹುಡ್ಕೋ ಸಂಸ್ಥೆಗೆ ಕಾರ್ಖಾನೆಯು ಮರುಪಾವತಿಸಬೇಕಾಗಿರುವ ಸಾಲವನ್ನು ಏಕಕಾಲಿಕ ತೀರುವಳಿ ಯೋಜನೆಯಡಿಯಲ್ಲಿ ಮರುಪಾವತಿಸಲು ಸರ್ಕಾರವು ₹ 3.00 ಕೋಟಿಗಳ ಮೃದು ಸಾಲವನ್ನು ಈ ಕೆಳಕಂಡ ಷರತ್ತುಗಳೊಂದಿಗೆ ಮಂಜೂರು ಮಾಡಲು ಕಬ್ಬು ಅಭಿವೃದ್ಧಿ ಆಯುಕ್ತರು ಮತ್ತು ಸಕ್ಕರೆ ನಿರ್ದೇಶಕರು ಶಿಫಾರಸ್ಸು ಮಾಡಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

1) ಮೃದು ಸಾಲದ ಅವಧಿಯು 10 ವರ್ಷಗಳಾಗಿದ್ದು, ಈ ಅವಧಿಯಲ್ಲಿ ಪ್ರತಿ ತ್ರೈಮಾಸಿಕ ಅವಧಿಯ ಅಂತ್ಯಕ್ಕೆ ಸಾಲದ ಕಂತು ಮತ್ತು ಬಡ್ಡಿಯನ್ನು ಮರುಪಾವತಿಸಬೇಕು;
2) ಸದರಿ ಮೃದು ಸಾಲದ ಮೊತ್ತವನ್ನು ಸಂಪೂರ್ಣವಾಗಿ ಹುಡ್ಕೋ ಸಂಸ್ಥೆಯಿಂದ ಪಡೆದಿರುವ ಸಾಲವನ್ನು ಮರುಪಾವತಿಸಲು ಮಾತ್ರ ಉಪಯೋಗಿಸತಕ್ಕದ್ದು.

ಓದಲಾದ ಕ್ರಮ ಸಂಖ್ಯೆ (2)ರಲ್ಲಿ, ಹುಡ್ಕೋ ಸಂಸ್ಥೆಯ ದಿನಾಂಕ 12-3-2012ರ ಪತ್ರದಲ್ಲಿ ಕಾರ್ಖಾನೆಯ ಸಾಲವನ್ನು ಒಂದೇ ಕಂತಿನಲ್ಲಿ ಪಾವತಿಸಿದಲ್ಲಿ ₹ 891.00 ಲಕ್ಷಗಳನ್ನು ಮನ್ನಾ ಮಾಡಲಾಗುವುದಾಗಿ ತಿಳಿಸಿದ್ದು, ಸದರಿ ಕಾರ್ಖಾನೆಯ ಆರ್ಥಿಕ ಪರಿಸ್ಥಿತಿಯ ಹಿನ್ನೆಲೆಯಲ್ಲಿ ಹುಡ್ಕೋ ಸಂಸ್ಥೆಯ ಷರತ್ತಿನಂತೆ ಸಾಲವನ್ನು ಮರುಪಾವತಿಸುವುದು ಸಾಧ್ಯವಾಗದ ಕಾರಣ ಈ ಕೆಳಕಂಡ ಷರತ್ತುಗಳನ್ನು ವಿಧಿಸಿ ₹ 600.00 ಲಕ್ಷಗಳನ್ನು ಕಾರ್ಖಾನೆಗೆ ಮೃದು ಸಾಲವಾಗಿ ಮಂಜೂರು ಮಾಡುವಂತೆ ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

1) ಕಾರ್ಖಾನೆ ಹುಡ್ಕೋ ಸಂಸ್ಥೆಗೆ ಬಾಕಿ ಉಳಿಯುವ ಸಾಲ ₹ 1722.00 ಲಕ್ಷಗಳನ್ನು ಹುಡ್ಕೋ ಸಂಸ್ಥೆ ವಿಧಿಸಿರುವ ಷರತ್ತಿನಂತೆ 28 ತ್ರೈಮಾಸಿಕ ಕಂತುಗಳಲ್ಲಿ 7 ವರ್ಷದ ಅವಧಿಯಲ್ಲಿ ಕಡ್ಡಾಯವಾಗಿ ಪಾವತಿ ಮಾಡಬೇಕು;
2) ಹುಡ್ಕೋ ಸಂಸ್ಥೆಯವರು ದಿನಾಂಕ 12-3-2012ರ ಪತ್ರದಲ್ಲಿ ತಿಳಿಸಿರುವಂತೆ, ಈಗ ನೀಡಿರುವ OTS offer ಅನ್ನು 30 ದಿನಗಳೊಳಗಾಗಿ ಅನುಷ್ಠಾನಗೊಳಿಸಬೇಕು;
3) ರಾಜ್ಯ ಸರ್ಕಾರದಿಂದ ಕಾರ್ಖಾನೆಗೆ ಹುಡ್ಕೋ ಸಂಸ್ಥೆಯ ಸಾಲ ಮರುಪಾವತಿಸಲು ₹ 600.00 ಲಕ್ಷಗಳ ಮೃದು ಸಾಲವನ್ನು ಸೂಕ್ತ ಷರತ್ತು ಮತ್ತು ನಿಬಂಧನೆಗಳಿಗೆ ಒಳಪಟ್ಟು ಮಂಜೂರು ಮಾಡುವುದು.
4) ಕಾರ್ಖಾನೆ ಮತ್ತು ಹುಡ್ಕೋ ಸಂಸ್ಥೆಯ ಜಂಟಿ ಹೆಸರಿನಲ್ಲಿ ಎಸ್ಕ್ರೋ ಖಾತೆಯನ್ನು ಬ್ಯಾಂಕಿನಲ್ಲಿ ಪ್ರಾರಂಭಿಸಿ ವಿದ್ಯುತ್ ಉತ್ಪಾದನೆಯಿಂದ ಬರುವ ಆದಾಯವನ್ನು ಸಾಲ ಮರುಪಾವತಿಗೆ ಉಪಯೋಗಿಸುವುದು;
5) ವಿದ್ಯುತ್ ಮಾರಾಟದಿಂದ ಕಾರ್ಖಾನೆಗೆ ಕೆಪಿಟಿಸಿಎಲ್ ಸಂಸ್ಥೆಯಿಂದ ಬರುವ ಆದಾಯವನ್ನು ಎಸ್ಕ್ರೋ ಖಾತೆಗೆ ಜಮಾ ಮಾಡುವುದು.

ಪ್ರಸ್ತಾವನೆಯನ್ನು, ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ವಾಕೈ 80 ಸಸಕಾ 2010, ಬೆಂಗಳೂರು, ದಿನಾಂಕ 26.04.2012

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಮೇರೆಗೆ ರೈತರ ಸಹಕಾರಿ ಸಕ್ಕರೆ ಕಾರ್ಖಾನೆ, ರನ್ನಾನಗರ, ಮುದೋಳ್ ತಾಲ್ಲೂಕು, ಬಾಗಲಕೋಟೆ ಜಿಲ್ಲೆ, ಈ ಕಾರ್ಖಾನೆಯು ಹುಡ್ಕೋ ಸಂಸ್ಥೆಗೆ ಮರುಪಾವತಿಸಬೇಕಾಗಿರುವ ಸಾಲವನ್ನು ಏಕಕಾಲಿಕ ತೀರುವಳಿ ಯೋಜನೆಯಡಿಯಲ್ಲಿ ಮರುಪಾವತಿಸಲು ಸರ್ಕಾರವು ₹ 4.00 ಕೋಟಿಗಳ (ನಾಲ್ಕು ಕೋಟಿಗಳು ಮಾತ್ರ) ಮೃದು ಸಾಲವನ್ನು ಲೆಕ್ಕಶೀರ್ಷಿಕೆ 8000-00-660-0-00 ಸಾದಿಲ್ವಾರು ನಿಧಿಯಿಂದ ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಮಂಜೂರು ಮಾಡಿದೆ.

1. Raithara Sahakari Sakkare Karkhane, Rannanagara, Mudhol Taluk, Bagalkote District should pay another ₹2.00 crore out of its resources to HUDCO;
2. Government of Karnataka will provide a short term loan of ₹4.00 crore to said Karkhane (repayable within a year with interest at 10% p.a);
3. The said Karkhane should open an escrow account in which ₹100/Q of sugar sales should be deposited for servicing/repaying the Government loan of ₹4.00 crore. Commissioner (Sugar) should ensure compliance to this condition.
4. Government of Karnataka will stand guarantee for the rescheduled HUDCO loan of `17.22 crore repayable in 28 quarterly instalment. Another escrow account in favour of HUDCO should be opened in which all proceeds of cogen plant should be deposited for servicing/repaying the loan.
5. In the event of default of 1(one) quarter by the said Karkhane, HUDCO should inform Government of Karnataka i.e. Finance Department, Commerce and Industries Department and Commissioner (Sugar).

ಈ ಮೊತ್ತವನ್ನು ಮೊದಲಿಗೆ ಸಾದಿಲ್ವಾರು ನಿಧಿ ಲೆಕ್ಕಶೀರ್ಷಿಕೆ 8000-00-660-0-00-ಸಹಕಾರಕ್ಕೆ ಸಾಲ ಇದರಡಿಯಲ್ಲಿ ಭರಿಸಿ ನಂತರ ಪೂರಕ ಅಂದಾಜು-Iರ ಮೂಲಕ ಲೆಕ್ಕಶಿರ್ಷಿಕೆ 6860-04-101-0-29ರಿಂದ ಭರ್ತಿ ಮಾಡಿಕೊಳ್ಳತಕ್ಕದ್ದು ಈ ಸಂಬಂಧ ಸಾದಿಲ್ವಾರು ನಿಧಿಯಿಂದ ಹಣ ಬಿಡುಗಡೆ ಮಾಡಿ ಆರ್ಥಿಕ ಇಲಾಖೆಯು ಹೊರಡಿಸುವ ಪ್ರತ್ಯೇಕ ಆದೇಶವಿಲ್ಲದೆ, ಈ ಆದೇಶದ ಮೇರೆಗೇ ಹಣವನ್ನು ಡ್ರಾ ಮಾಡತಕ್ಕದ್ದಲ್ಲ. ಹಣ ಡ್ರಾ ಮಾಡುವ ಅಧಿಕಾರಿಯು ಸಾದಿಲ್ವಾರು ನಿಧಿಯಿಂದ ಹಣವನ್ನು ಡ್ರಾ ಮಾಡಲು ಖಜಾನೆಗೆ ಬಿಲ್ಲನ್ನು ಸಲ್ಲಿಸಿದಾಗ ಆರ್ಥಿಕ ಇಲಾಖೆಯ ಪ್ರತ್ಯೇಕ ಆದೇಶವನ್ನು ಲಗತ್ತಿಸಿದ ನಂತರವೇ ಖಜಾನೆಯು ಹಣವನ್ನು ಬಿಡುಗಡೆ ಮಾಡತಕ್ಕದ್ದು.

ಕಬ್ಬು ಅಭಿವೃದ್ಧಿ ಆಯುಕ್ತರು ಮತ್ತು ಸಕ್ಕರೆ ನಿರ್ದೇಶಕರ ಕಚೇರಿಯ ಸಹಕಾರ ಸಂಘಗಳ ಲೆಕ್ಕ ಪರಿಶೋಧನಾ ಸಹಾಯಕ ನಿರ್ದೇಶಕರು ಹಣ ಸಂದಾಯ ಸ್ವೀಕೃತಿಯ ಮೇಲೆ ಕಬ್ಬು ಅಭಿವೃದ್ಧಿ ಆಯುಕ್ತರು ಮೇಲು ರುಜುವಿನೊಂದಿಗೆ ಈ ಹಣವನ್ನು ಖಜಾನೆಯಿಂದ ಡ್ರಾ ಮಾಡಿ ರೈತರ ಸಹಕಾರಿ ಸಕ್ಕರೆ ಕಾರ್ಖಾನೆ ನಿಯಮಿತ, ರನ್ನಾನಗರ, ಮುಧೋಳ್ ತಾಲ್ಲೂಕು, ಭಾಗಲಕೋಟೆ ಜಿಲ್ಲೆ ಇವರಿಗೆ ಬಿಡುಗಡೆ ಮಾಡತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯು ಅನಧಿಕೃತ ಟಿಪ್ಪಣಿ ಸಂಖ್ಯೆ ಆಇ 22 ವೆಚ್ಚ-2/2012 ದಿನಾಂಕ 20-4-2012ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ
ಬಿ.ರಾಮಸ್ವಾಮಿ,
ಸರ್ಕಾರದ ಅಧೀನ ಕಾರ್ಯದರ್ಶಿ
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ
(ಸಹಕಾರಿ ಸಕ್ಕರೆ)

ಪಿ.ಆರ್. 1274

ಒಳಾಡಳಿತ ಸಚಿವಾಲಯ

ವಿಷಯ: ದಿನಾಂಕ: 24-02-2012 ರಂದು ಬೆಂಗಳೂರು ನಗರದ ಯಶವಂತಪುರ ಕೈಗಾರಿಕಾ ಪ್ರದೇಶದಲ್ಲಿರುವ ಬಾಂಬೆರೈಯಾನ್ಸ್ ಫ್ಯಾಷನ್ ಲಿಮಿಟೆಡ್ ನಲ್ಲಿ ಅಣಕು ಪ್ರದರ್ಶನ ನಡೆಸುತ್ತಿದ್ದಂತಹ ಸಂಧರ್ಬದಲ್ಲಿ ಸಂಭವಿಸಿದ ಅವಗಡ ಬಗ್ಗೆ ಜಂಟಿ ವಿಚಾರಣೆ ನಡೆಸುವ ಕುರಿತು.

ಓದಲಾಗಿದೆ: ಪೊಲೀಸ್ ಮಹಾ ನಿರ್ದೇಶಕರು ಮತ್ತು ಮಹಾ ನಿರ್ದೇಶಕರು, ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆ ಇವರ ಪತ್ರ ಸಂಖ್ಯೆ: ಪಿಯುಎನ್ (2) 309/2012, ದಿನಾಂಕ: 19-03-2012.

ಪ್ರಸ್ತಾವನೆ:

ಮೇಲೆ ಓದಲಾದ ಪತ್ರದಲ್ಲಿ ಪೊಲೀಸ್ ಮಹಾ ನಿರ್ದೇಶಕರು ಮತ್ತು ಮಹಾ ನಿರ್ದೇಶಕರು, ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆ ಇವರು ಸರ್ಕಾರಕ್ಕೆ ಪತ್ರ ಬರೆದು ದಿನಾಂಕ: 24-02-2012 ರಂದು ಬೆಂಗಳೂರು ನಗರದ ಯಶವಂತಪುರ ಕೈಗಾರಿಕಾ ಪ್ರದೇಶದಲ್ಲಿರುವ ಬಾಂಬೆ ರೈಯಾನ್ಸ್ ಫ್ಯಾಷನ್ ಲಿಮಿಟೆಡ್, ಯುನಿಕ್ 14 ರಲ್ಲಿ ಅಣಕು ಪ್ರದರ್ಶನ ನಡೆಸುತ್ತಿದ್ದಂತಹ ಸಂದರ್ಭದಲ್ಲಿ ಫ್ಯಾಕ್ಟರಿ ಕಲ್ಯಾಣ ಅಧಿಕಾರಿಯಾದ ಕುಮಾರಿ ನಳಿನಿ ಎಂಬುವವರನ್ನು ಹಗ್ಗದ ಮೂಲಕ ಕೆಳಗೆ ಇಳಿಸುತ್ತಿದ್ದಾಗ ಇದ್ದಕ್ಕಿದ್ದಂತೆ ಹಗ್ಗ ತುಂಡಾಗಿ ಆಕೆ ಕೆಳಗೆ ಬಿದ್ದು ತೀವ್ರವಾಗಿ ಗಾಯಗೊಂಡು ಮರಣ ಹೊಂದಿರುತ್ತಾರೆ. ಈ ಬಗ್ಗೆ ಮುಖ್ಯ ಅಗ್ನಿಶಾಮಕ ಅಧಿಕಾರಿ, ಮಂಗಳೂರು ಇವರು ಪ್ರಾಥಮಿಕ ವಿಚಾರಣೆಯನ್ನು ನಡೆಸಿದ್ದಾರೆ. ಈ ವಿಚಾರಣಾ ವರದಿಯನ್ನು ಇಲಾಖೆಯು ಕೂಲಂಕಷವಾಗಿ ಪರಿಶೀಲಿಸಿ ಈ ಘಟನೆಯು ಕೆಳಕಂಡ ಅಧಿಕಾರಿ ಹಾಗೂ ಸಿಬ್ಬಂದಿಗಳ ನಿರ್ಲಕ್ಷತೆಯಿಂದ ಉಂಟಾಗಿದೆ ಎಂದು ಆಪಾದಿಸಲಾಗಿದೆ.

1) ಶ್ರೀ ಎನ್.ಯು. ಈರಪ್ಪ, ಮುಖ್ಯ ಅಗ್ನಿಶಾಮಕ ಅಧಿಕಾರಿ, ಬೆಂಗಳೂರು, ಪಶ್ಚಿಮ ಪ್ರಾಂತಿಯ

2) ಶ್ರೀ ಕೆ. ಮರಿಯಣ್ಣ, ಅಗ್ನಿಶಾಮಕ ಠಾಣಾಧಿಕಾರಿ, ಯಶವಂತಪುರ, ಅಗ್ನಿಶಾಮಕ ಠಾಣೆ.

3) ಶ್ರೀ ದೇವರಾಜು, ಜಿಲ್ಲಾ ಅಗ್ನಿಶಾಮಕ ಅಧಿಕಾರಿ, ಪೀಣ್ಯ ಅಗ್ನಿಶಾಮಕ ಠಾಣೆ

4) ಶ್ರೀ ಕೆ. ನಾರಾಯಣಸ್ವಾಮಿ, ಜಿಲ್ಲಾ ಅಗ್ನಿಶಾಮಕ ಅಧಿಕಾರಿ, ಹೆಬ್ಬಾಳ, ಅಗ್ನಿಶಾಮಕ ಠಾಣೆ.

5) ಶ್ರೀ ಎಂ. ಚನ್ನಬಸವರಾಜು, ಪ್ರಮುಖ ಅಗ್ನಿಶಾಮಕ 486, ಯಶವಂತಪುರ, ಅಗ್ನಿಶಾಮಕ ಠಾಣೆ.

6) ಶ್ರೀ ಸಿ. ವಿವೇಕಾನಂದ, ಅಗ್ನಿಶಾಮಕ 746, ಯಶವಂತಪುರ ಅಗ್ನಿಶಾಮಕ ಠಾಣೆ

7) ಶ್ರೀ ಬಿ.ಇ. ಗಿರೀಶ್, ಅಗ್ನಿಶಾಮಕ 3764, ಯಶವಂತಪುರ ಅಗ್ನಿಶಾಮಕ ಠಾಣೆ

ಮೇಲ್ಕಂಡ ಅಧಿಕಾರಿ/ಸಿಬ್ಬಂದಿಗಳ ಕ್ರಮ ಸಂಖ್ಯೆ: 2 ರಿಂದ 4 ರವರೆಗೆ ದಿನಾಂಕ: 26-02-2012 ರಿಂದ ಹಾಗೂ ಕ್ರಮ ಸಂ: 5 ರಿಂದ 7 ರವರುಗಳನ್ನು ದಿನಾಂಕ: 19-03-2012 ರಿಂದ ಇಲಾಖೆಯು ಅಮಾನತ್ತಿನಲ್ಲಿಟ್ಟಿದೆ. ಅಣಕು ಪ್ರದರ್ಶನವನ್ನು ಆಯೋಜಿಸಿ ಮೇಲುಸ್ತುವಾರಿ ವಹಿಸಿದಂತಹ ಶ್ರೀ ಎನ್.ಯು. ಈರಪ್ಪ, ಮುಖ್ಯ ಅಗ್ನಿಶಾಮಕ ಅಧಿಕಾರಿಯವರು ಸದರಿ ಅವಗಡಕ್ಕೆ ನೈತಿಕವಾಗಿ ಹೊಣೆಗಾರರಾಗಿರುತ್ತಾರೆಂದು ವಿಚಾರಣಾ ವರದಿಯಲ್ಲಿ ಅಭಿಪ್ರಾಯ ಪಡಲಾಗಿದೆ. ಹಾಗೂ ಘಟನೆಯ ಸಂದರ್ಭದಲ್ಲಿ ನಿರ್ಲಕ್ಷತನ ತೋರಿ ಕರ್ತವ್ಯ ಲೋಪ ಎಸಗಿರುವಂತಹ ಶ್ರೀ ಕೆ. ಮರಿಯಣ್ಣ, ಅಗ್ನಿಶಾಮಕ ಠಾಣಾಧಿಕಾರಿ, ಯಶವಂತಪುರ ಅಗ್ನಿಶಾಮಕ ಠಾಣೆ, ಶ್ರೀ ದೇವರಾಜು, ಜಿಲ್ಲಾ ಅಗ್ನಿಶಾಮಕ ಅಧಿಕಾರಿ ಪೀಣ್ಯ ಅಗ್ನಿಶಾಮಕ ಠಾಣೆ, ಶ್ರೀ ಕೆ. ನಾರಾಯಣಸ್ವಾಮಿ, ಜಿಲ್ಲಾ ಅಗ್ನಿಶಾಮಕ ಅಧಿಕಾರಿ, ಹೆಬ್ಬಾಳ ಅಗ್ನಿಶಾಮಕ ಠಾಣೆ, ಶ್ರೀ ಎಂ. ಚನ್ನಬಸವರಾಜು, ಪ್ರಮುಖ ಅಗ್ನಿಶಾಮಕ 486, ಯಶವಂತಪುರ ಅಗ್ನಿಶಾಮಕ ಠಾಣೆ, ಶ್ರೀ ಸಿ. ವಿವೇಕಾನಂದ ಅಗ್ನಿಶಾಮಕ 746, ಯಶವಂತಪುರ ಅಗ್ನಿಶಾಮಕ ಠಾಣೆ, ಶ್ರೀ ಬಿ.ಇ. ಗಿರೀಶ್, ಅಗ್ನಿಶಾಮಕ 3764, ಯಶವಂತರಪುರ ಅಗ್ನಿಶಾಮಕ ಠಾಣೆ ಇವರುಗಳ ಮೇಲೆ ಶಿಸ್ತು ಕ್ರಮಕ್ಕಾಗಿ ಜಂಟಿ ಇಲಾಖಾ ವಿಚಾರಣೆಗೆ ಆದೇಶಿಸುವಂತೆ ಕೋರಿದ್ದಾರೆ.

ಜಂಟಿ ಇಲಾಖಾ ವಿಚಾರಣೆಗೆ ಉಪ ನಿರ್ದೇಶಕರು (ಆಡಳಿತ) ಅಗ್ನಿಶಾಮಕ ಮತ್ತು ತುರ್ತು ಸೇವಾ ಇಲಾಖೆಯು ಇವರನ್ನು ವಿಚಾರಣಾಧಿಕಾರಿಯನ್ನಾಗಿ ಹಾಗೂ ಪ್ರಾದೇಶಿಕ ಅಗ್ನಿಶಾಮಕ ಅಧಿಕಾರಿ, ಬೆಂಗಳೂರು ಪೂರ್ವ ವಲಯ, ಅಥವಾ ಪ್ರಾದೇಶಿಕ ಅಗ್ನಿಶಾಮಕ ಅಧಿಕಾರಿ, ಗುಲ್ಬರ್ಗಾ ವಲಯ ಇವರುಗಳನ್ನು ಮಂಡನಾಧಿಕಾರಿಯನ್ನಾಗಿ ನೇಮಿಸಬಹುದು ಎಂದು ತಿಳಿಸಿದ್ದಾರೆ.

ಶ್ರೀ ಎನ್.ಯು. ಈರಪ್ಪ, ಮುಖ್ಯ ಅಗ್ನಿಶಾಮಕ ಅಧಿಕಾರಿ , ಬೆಂಗಳೂರು ಪಶ್ಚಿಮ ಪ್ರಾಂತಿಯ ಇವರು ಸದರಿ ಅಣಕು ಪ್ರದರ್ಶನ ಮೇಲುಸ್ತುವಾರಿ ವಹಿಸಿಕೊಂಡಿದ್ದು, ಸಂಭವಿಸಿದ ಅವಗಡಕ್ಕೆ ನೈತಿಕವಾಗಿ ಹೊಣೆಗಾರರಾಗಿದ್ದು, ಇತರ ಸಿಬ್ಬಂದಿಗಳು ನೇರವಾಗಿ ಅಣಕು ಪ್ರದರ್ಶನವನ್ನು ಆಯೋಜಿಸಿರುವ ಕಾರಣ ಶ್ರೀ ಎನ್.ಯು. ಈರಪ್ಪ ಇವರಿಗೆ ಲಘು ಶಿಕ್ಷೆ ವಿಧಿಸಲು ದೋಷಾರೋಪಣಾ ಪತ್ರ ಹೊರಡಿಸಲು ಶಿಫಾರಸ್ಸು ಮಾಡಿದ್ದಾರೆ.

ಮುಖ್ಯ ಅಗ್ನಿಶಾಮಕ ಅಧಿಕಾರಿ, ಮಂಗಳೂರು ರವರು ನಡೆಸಿರುವ ಪ್ರಾಥಮಿಕ ವಿಚಾರಣಾ ವರದಿಯನ್ನು ಹಾಗೂ ಇಲಾಖಾ ಪ್ರಸ್ತಾವನೆಯನ್ನು ಕೂಲಂಕುಷವಾಗಿ ಪರಿಶೀಲಿಸಿ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂ: ಒಇ 69 ಕಅಸೇ 2012 ಬೆಂಗಳೂರು, ದಿನಾಂಕ: 25-04-2012

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಬಾಂಬೆರೆಯಾನ್ಸ್ ಫ್ಯಾಷನ್ಸ್ ಲಿಮಿಟೆಡ್‌ನ ಕಲ್ಯಾಣ ಅಧಿಕಾರಿಯಾದ ಕುಮಾರಿ ನಳಿನಿ, ಇವರ ಸಾವಿಗೆ ಕಾರಣರಾಗಿ ಆರೋಪ ಎಸಗಿರುವ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆಯ ಈ ಕೆಳಕಂಡ ಅಧಿಕಾರಿ/ಸಿಬ್ಬಂದಿಗಳ ವಿರುದ್ಧ ಕರ್ನಾಟಕ ಅಗ್ನಿಶಾಮಕ ದಳದ (ಶಿಸ್ತು ನಿರ್ವಹಣೆ ಮತ್ತು ಸೇವೆಯಿಂದ ತೆಗೆದುಹಾಕುವುದು) ನಿಯಮಗಳು 1971ರ ನಿಯಮ 7 ಅನ್ನು ನಿಯಮ 9 ರೊಂದಿಗೆ ಓದಿಕೊಂಡಂತೆ ಜಂಟಿ ಇಲಾಖಾ ವಿಚಾರಣೆಗೆ ಸರ್ಕಾರವು ಆದೇಶಿಸಿದೆ:-

1) ಶ್ರೀ ಎನ್.ಯು. ಈರಪ್ಪ, ಮುಖ್ಯ ಅಗ್ನಿಶಾಮಕ ಅಧಿಕಾರಿ, ಬೆಂಗಳೂರು ಪಶ್ಚಿಮ ವಲಯ, ಬೆಂಗಳೂರು.

2) ಶ್ರೀ ಕೆ. ಮರಿಯಣ್ಣ, ಅಗ್ನಿಶಾಮಕ ಠಾಣಾಧಿಕಾರಿ, ಯಶವಂತಪುರ ಅಗ್ನಿಶಾಮಕ ಠಾಣೆ.

3) ಶ್ರೀ ದೇವರಾಜು, ಜಿಲ್ಲಾ ಅಗ್ನಿಶಾಮಕ ಅಧಿಕಾರಿ, ಪೀಣ್ಯ ಅಗ್ನಿಶಾಮಕ ಠಾಣೆ.

4) ಶ್ರೀ ಕೆ. ನಾರಾಯಣಸ್ವಾಮಿ, ಜಿಲ್ಲಾ ಅಗ್ನಿಶಾಮಕ ಅಧಿಕಾರಿ, ಹೆಬ್ಬಾಳ ಅಗ್ನಿಶಾಮಕ ಠಾಣೆ.

5) ಶ್ರೀ ಎಂ. ಚನ್ನಬಸವರಾಜು, ಪ್ರಮುಖ ಅಗ್ನಿಶಾಮಕ-486, ಯಶವಂತಪುರ ಅಗ್ನಿಶಾಮಕ ಠಾಣೆ.

6) ಶ್ರೀ ಸಿ. ವಿವೇಕಾನಂದ, ಅಗ್ನಿಶಾಮಕ – 746, ಯಶವಂತಪುರ ಅಗ್ನಿಶಾಮಕ ಠಾಣೆ.

7) ಶ್ರೀ ಬಿ. ಇ. ಗಿರೀಶ್, ಅಗ್ನಿಶಾಮಕ – 3764, ಯಶವಂತಪುರ ಅಗ್ನಿಶಾಮಕ ಠಾಣೆ.

ಮೇಲೆ ನಮೂದಿಸಿರುವ ಅದಿಕಾರಿ/ಸಿಬ್ಬಂದಿಯವರುಗಳ ವಿರುದ್ಧ ಮಾಡಲಾಗಿರುವ ಆರೋಪಗಳ ಬಗ್ಗೆ ಜಂಟಿ ಇಲಾಖಾ ವಿಚಾರಣೆಯನ್ನು ನಡೆಸಲು ಶ್ರೀ ಕೆ.ವಿ. ಶ್ರೀಧರ್, ಉಪ ಮಹಾಸಮಾದೇಷ್ಟರು, ಗೃಹರಕ್ಷಕ ದಳ ಹಾಗು ಪೌರರಕ್ಷಣಾ ಇಲಾಖೆ, ಬೆಂಗಳೂರು ಇವರನ್ನು ವಿಚಾರಣಾಧಿಕಾರಿಯನ್ನಾಗಿ ನೇಮಿಸಿ ಆದೇಶಿಸಿದೆ.

ಮುಂದುವರಿದು, ಶಿಸ್ತು ಪ್ರಾಧಿಕಾರಿಯ ಪರವಾಗಿ ಪ್ರಕರಣವನ್ನು ವಿಚಾರಣಾಧಿಕಾರಿಯವರ ಮುಂದೆ ಮಂಡಿಸಲು ಪ್ರಾದೇಶಿಕ ಅಗ್ನಿಶಾಮಕ ಅಧಿಕಾರಿ, ಬೆಂಗಳೂರು ಪೂರ್ವ ವಲಯ, ಇವರನ್ನು ಮಂಡನಾಧಿಕಾರಿಯನ್ನಾಗಿ ನೇಮಿಸಿ ಆದೇಶಿಸಲಾಗಿದೆ.

ವಿಚಾರಣಾಧಿಕಾರಿಗಳು ದೋಷಾರೋಪನಾ ಪಟ್ಟಿಯನ್ನು ತಯಾರಿಸಿ ಕೂಡಲೇ ಹೊರಡಿಸಲು ಸಹ ಆದೇಶಿಸಿದೆ.

ವಿಚಾರಣಾಧಿಕಾರಿಗಳು ಈ ಪ್ರಕರಣದ ಜಂಟಿ ಇಲಾಖಾ ವಿಚಾರಣೆಯನ್ನು ನಡೆಸಿ, ಎರಡು ತಿಂಗಳುಗಳ ಒಳಗಾಗಿ ವಿಚಾರಣಾ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಬೇಕೆಂದು ಸಹ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಬಿ. ರಾಜಮ್ಮ,
ಸರ್ಕಾರದ ಅಧೀನ ಕಾರ್ಯದರ್ಶಿ
ಒಳಾಡಳಿತ ಇಲಾಖೆ,
(ಪೊಲೀಸ್ ಸಹಾಯಕ ಸೇವೆಗಳು)

ಪಿ.ಆರ್. 1277

ಒಳಾಡಳಿತ ಸಚಿವಾಲಯ

ವಿಷಯ: ಮೇಜರ್ (ನಿವೃತ್ತ) ಶಿವಾಜಿ ಎಂ. ತುಕ್ಕಾರ್, ಉಪ ನಿರ್ದೇಶಕರು ಇವರ ಪರಿವೀಕ್ಷಣಾ ಸೇವಾ ಅವಧಿಯನ್ನು ತೃಪ್ತಿಕರವಾಗಿ ಪೂರ್ಣಗೊಳಿಸಿದ್ದಾರೆಂದು ಘೋಷಿಸುವ ಬಗ್ಗೆ.

ಓದಲಾಗಿದೆ: 1) ಸರ್ಕಾರದ ಅಧಿಸೂಚನೆ ಸಂಖ್ಯೆ: ಒಇ 94 ಕಸೈಸೇ 2006, ದಿನಾಂಕ: 23-10-2009.

2) ನಿರ್ದೇಶಕರು, ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆರವರ ಪತ್ರ ಸಂ: ಸೈಕಪುಇ/ಸಿಬ್ಬಂದಿ/ಎಸ್‌ಎಂಟಿ/7ಎ/2011, ದಿನಾಂಕ:30-11-2011 & 13-01-2012.

ಪ್ರಸ್ತಾವನೆ:

ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆಯಲ್ಲಿ ಹಾಲಿ ಖಾಲಿ ಇರುವ ಉಪ ನಿರ್ದೇಶಕರ ಹುದ್ದೆಗಳಿಗೆ ಮೇಲೆ ಓದಲಾದ (1) ರ ಅಧಿಸೂಚನೆಯಲ್ಲಿ ಮೇಜರ್ ಶಿವಾಜಿ ಮಲ್ಲಪ್ಪ ತುಕ್ಕಾರ್ ಇವರನ್ನು ನೇಮಕ ಮಾಡಲಾಗಿತ್ತು. ಸದರಿ ಅಧಿಕಾರಿಯವರು ದಿನಾಂಕ: 09-11-2009 ರಂದು ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆಯಲ್ಲಿ ಉಪ ನಿರ್ದೇಶಕರ ಹುದ್ದೆಗೆ ಹಾಜರಾಗಿರುತ್ತಾರೆ. ಮೇಲೆ ಓದಲಾದ (2)ರ ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆಯ ನಿರ್ದೇಶಕರ ಪತ್ರದಲ್ಲಿ ಶ್ರೀ ಮೇಜರ್ (ನಿವೃತ್ತ) ಶಿವಾಜಿ ಎಂ. ತುಕ್ಕಾರ್, ಉಪ ನಿರ್ದೇಶಕರಾಗಿ ದಿನಾಂಕ: 09-11-2009 ರಿಂದ 08-11-2011ರವರೆಗೆ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ಎರಡು ವರ್ಷಗಳ ಪರಿವೀಕ್ಷಣಾ ಅವಧಿಯನ್ನು ಪೂರೈಸಿರುತ್ತಾರೆ. ಸದರಿಯವರಿಗೆ ಪರಿವೀಕ್ಷಣಾ ಅವಧಿಯಲ್ಲಿ ನಿಗದಿಪಡಿಸಲಾದ ಇಲಾಖಾ ಪರೀಕ್ಷೆ ಅಕೌಂಟ್ಸ್ ಲೋಯರ್, ಜನರಲ್ ಲಾ ಭಾಗ-2 ಅಕೌಂಟ್ಸ್ ಹೈಯರ್ ಮತ್ತು ಜನರಲ್ ಲಾ ಭಾಗ-1ನ್ನು 2009 ನೇ ಸಾಲಿನಲ್ಲಿ ಎರಡನೇ ಅಧಿವೇಶನದಲ್ಲಿ ತೇರ್ಗಡೆಯಾಗಿರುತ್ತಾರೆ. ಹಾಗೂ ಕನ್ನಡ ಬಾಷಾ ಪರೀಕ್ಷೆಗಳ ನಿಯಮಗಳು 1974ರ ನಿಯಮ 5 (5)ರ ಪ್ರಕಾರ ಇಲಾಖಾ ಕನ್ನಡ ಬಾಷಾ ಪರೀಕ್ಷೆಯಿಂದ ವಿನಾಯಿತಿ ಹೊಂದಿದ್ದಾರೆ. ಪರಿವೀಕ್ಷಣಾ ಅವಧಿಯಲ್ಲಿ ಸದರಿಯವರ ಮೇಲೆಯಾವುದೇ ಪ್ರತಿಕೂಲ ಷರಾಗಳು ಇರುವುದಿಲ್ಲ ಹಾಗೂ ಇವರ ಕಾರ್ಯ ನಿರ್ವಹಣೆಯು ತೃಪ್ತಿಕರವಾಗಿದೆ ಎಂದು ತಿಳಿಸಿ ಎರಡು

ವರ್ಷಗಳ ಪರಿವೀಕ್ಷಣಾ ಅವಧಿಯನ್ನು ಕರ್ನಾಟಕ ನಾಗರೀಕ ಸೇವಾ (ಪ್ರೊಬೇಷನರ್) ನಿಯಮಗಳು 1977 ನಿಯಮ 5 ರಂತೆ ಆದೇಶ ಹೊರಡಿಸಲು ಕೋರಿದ್ದಾರೆ.

ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆಯ ನಿರ್ದೇಶಕರ ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಒಇ 184 ಕಸೈಸೇ 2011, ಬೆಂಗಳೂರು, ದಿನಾಂಕ: 17-04-2012.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಮೇಜರ್ (ನಿವೃತ್ತ) ಶಿವಾಜಿ ಎಂ. ತುಕ್ಕಾರ್ ಇವರು ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆಯಲ್ಲಿ ಉಪ ನಿರ್ದೇಶಕರ ಹುದ್ದೆಗೆ ನೇಮಕಗೊಂಡು ದಿನಾಂಕ: 09-11-2009 ರಿಂದ 08-11-2011 ರವರೆಗೆ ಎರಡು ವರ್ಷಗಳ ಅರ್ಹತಾ ಪರಿವೀಕ್ಷಣಾ ಅವಧಿಯನ್ನು ತೃಪ್ತಿಕರವಾಗಿ ಪೂರೈಸಿರುವುದರಿಂದ ಕರ್ನಾಟಕ ನಾಗರೀಕ ಸೇವಾ (ಪ್ರೊಬೇಷನರ್) ನಿಯಮಗಳು 1977ರ ನಿಯಮ 5 ರಂತೆ ಪರಿವೀಕ್ಷಣಾ ಅವಧಿ ತೃಪ್ತಿಕರವಾಗಿದೆ ಎಂದು ಸರ್ಕಾರವು ಘೋಷಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಬಿ. ರಾಜಮ್ಮ,
ಸರ್ಕಾರದ ಅಧೀನ ಕಾರ್ಯದರ್ಶಿ
ಒಳಾಡಳಿತ ಇಲಾಖೆ,
(ಪೊಲೀಸ್ ಸಹಾಯಕ ಸೇವೆಗಳು)

ಪಿ.ಆರ್. 1278

ಒಳಾಡಳಿತ ಸಚಿವಾಲಯ

ವಿಷಯ: ಶ್ರೀ ಜಿ.ಟಿ.ನಾಯಕ್, ಡಿವೈ.ಎಸ್.ಪಿ, ಅಪರಾಧ, ಪೊಲೀಸ್ ಪ್ರಧಾನ ಕಛೇರಿ, ಬೆಂಗಳೂರು (ಈ ಹಿಂದೆ ಎ.ಸಿ.ಪಿ, ಚಾಮರಾಜಪೇಟೆ, ಬೆಂಗಳೂರು) ರವರನ್ನು ಸೇವೆಯಿಂದ ವಜಾ ಮಾಡುವ ಕುರಿತು.

ಓದಲಾಗಿದೆ:
1) ಸರ್ಕಾರದ ಆದೇಶ ಸಂಖ್ಯೆ:ಒಇ 510 ಪೊಸಿಪ 09 ದಿನಾಂಕ 02-01-2010.
2) ಪೊಲೀಸ್ ಮಹಾ ನಿರ್ದೇಶಕರು ರವರ ಪತ್ರ ಸಂಖ್ಯೆ:ಸಿಬಿ(5)38/2009-10 ದಿನಾಂಕ 29-01-2011.
3) ನೋಟೀಸ್ ಸಂಖ್ಯೆ:ಒಇ 510 ಪೊಸಿಪ 2009 ದಿನಾಂಕ 17-05-2011.
4) ಪೊಲೀಸ್ ಮಹಾ ನಿರ್ದೇಶಕರು ರವರ ಪತ್ರ ಸಂಖ್ಯೆ:ಸಿಬಿ(5)38/2009-10 ದಿನಾಂಕ 14-06-2011.
5) ಶ್ರೀ ಜಿ.ಟಿ.ನಾಯಕ್, ಡಿವೈ.ಎಸ್.ಪಿ, ಅಪರಾಧ, ಪೊಲೀಸ್ ಪ್ರಧಾನ ಕಛೇರಿ, ಬೆಂಗಳೂರು ರವರ ಸಮಜಾಯಿಷಿ ದಿನಾಂಕ 02-07-2011.
6) ಸರ್ಕಾರದ ಪತ್ರ ಸಂಖ್ಯೆ.ಒಇ 510 ಪೊಸಿಪ 2009 ದಿನಾಂಕ 05-09-2011.
7) ಕಾರ್ಯದರ್ಶಿ, ಕರ್ನಾಟಕ ಲೋಕಸೇವಾ ಆಯೋಗದ ಪತ್ರ ಸಂಖ್ಯೆ:ಪಿಎಸ್‌ಸಿ 121 ಸಿಎನ್‌ಎಸ್ 11 ದಿನಾಂಕ 04-10-2011.

ಪ್ರಸ್ತಾವನೆ:

ಮೇಲೆ (1)ರಲ್ಲಿ ಓದಲಾದ ಆದೇಶದಲ್ಲಿ ಶ್ರೀ ಜಿ.ಟಿ.ನಾಯಕ್ ಡಿವೈ.ಎಸ್.ಪಿ ರವರು ಈ ಹಿಂದೆ ಚಾಮರಾಜಪೇಟೆ, ಬೆಂಗಳೂರು ನಗರ ಎ.ಸಿ.ಪಿ ಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ಶ್ರೀ ಎನ್.ಪುಟ್ಟಸ್ವಾಮಿ ಎಂಬುವವರು ಇವರ ವಿರುದ್ಧ ಸಲ್ಲಿಸಿದ ದೂರಿನನ್ವಯ ಕರ್ನಾಟಕ ಲೋಕಾಯುಕ್ತ ಮತ್ತು ಪ್ರಭಾರ ಉಪ ಲೋಕಾಯುಕ್ತ ರವರು ಕರ್ನಾಟಕ ಲೋಕಾಯುಕ್ತ ಅಧಿನಿಯಮ, 1984 ರ ಕಲಂ 12(3) ರಡಿಯಲ್ಲಿ ತನಿಖಾ ವರದಿಯನ್ನು ಸಲ್ಲಿಸಿದ್ದು, ಸದರಿಯವರ ವಿರುದ್ಧ ಲೋಕಾಯುಕ್ತ ವರದಿಯೊಡನೆ ಕಳುಹಿಸಿರುವ ದಾಖಲಾತಿಗಳ ಅನ್ವಯ ಸಿವಿಲ್ ಪ್ರಕರಣದಲ್ಲಿ ಅಧಿಕಾರ ದುರ್ಬಳಕೆ ಮಾಡಿರುವುದು ಹಾಗೂ ಪೊಲೀಸ್ ಅಧಿಕಾರಿಗೆ ತಕ್ಕದ್ದಲ್ಲದ ರೀತಿಯಲ್ಲಿ ನಡೆದುಕೊಂಡಿರುವುದು ಮೇಲ್ನೋಟಕ್ಕೆ ಸಾಬೀತಾಗಿರುವ ಹಿನ್ನೆಲೆಯಲ್ಲಿ ಡಿಜಿ ಮತ್ತು ಐಜಿಪಿ ರವರು ಶಿಫಾರಸ್ಸು ಮಾಡಿರುವಂತೆ ಶ್ರೀ ಜಿ.ಟಿ.ನಾಯಕ್, ಡಿವೈ.ಎಸ್.ಪಿ. ರವರ ವಿರುದ್ಧ ಕರ್ನಾಟಕ ರಾಜ್ಯ (ಶಿಸ್ತು ನಡವಳಿ) ನಿಯಮಗಳು, 1965ರ ನಿಯಮ 6ರ ಪ್ರಕಾರ ಇಲಾಖಾ ವಿಚಾರಣೆಗೆ ಆದೇಶಿಸಿ ಡಿ.ಐ.ಜಿ.ಪಿ. ರೈಲ್ವೇಸ್, ಬೆಂಗಳೂರು ಇವರನ್ನು ಇಲಾಖಾ ವಿಚಾರಣಾಧಿಕಾರಿಯನ್ನಾಗಿ ನೇಮಿಸಿ ಆದೇಶ ಹೊರಡಿಸಲಾಗಿತ್ತು.

ಮೇಲೆ (2)ರಲ್ಲಿ ಓದಲಾದ ಪತ್ರದಲ್ಲಿ ಡಿ.ಜಿ.ಪಿ ರವರು ವಿಚಾರಣಾಧಿಕಾರಿಗಳಿಂದ ವಿಚಾರಣಾ ವರದಿಯನ್ನು ಪಡೆದು ವಿಚಾರಣಾಧಿಕಾರಿಗಳ ಶಿಫಾರಸ್ಸಿನಂತೆ ಶ್ರೀ ಜಿ.ಟಿ.ನಾಯಕ್, ಡಿವೈ.ಎಸ್.ಪಿ ರವರ ವಿರುದ್ಧ ಶಿಸ್ತು ಕ್ರಮ ಜರುಗಿಸಲು ಕೋರಿರುತ್ತಾರೆ. ವಿಚಾರಣಾಧಿಕಾರಿಗಳಿಂದ ಸಲ್ಲಿಸಿರುವ ವರದಿಯನ್ನು ಪರಿಶೀಲಿಸಲಾಗಿ ವಿಚಾರಣಾಧಿಕಾರಿಗಳು ಅಭಿಯೋಗದ ಪರವಾಗಿ 3 ಸಾಕ್ಷಿಗಳು, ರಕ್ಷಣಾ ಪರವಾಗಿ 2 ಸಾಕ್ಷಿಗಳು ಹಾಗೂ ಅಭಿಯೋಗದ ಪರವಾಗಿ 4 ದಾಖಲಾತಿಗಳನ್ನು ಹಾಗೂ ರಕ್ಷಣಾ ಪರವಾಗಿ 5 ದಾಖಲಾತಿಗಳನ್ನು ಗುರುತಿಸಿ ಪಾಟಿ ಸವಾಲು ಮಾಡಿರುತ್ತಾರೆ.

ಈ ಪ್ರಕರಣದಲ್ಲಿ ಶ್ರೀ ಜಿ.ಟಿ.ನಾಯಕ್, ಡಿವೈ.ಎಸ್.ಪಿ ಹಿಂದೆ ಎ.ಸಿ.ಪಿ, ಚಾಮರಾಜಪೇಟೆ ರವರು ಶ್ರೀ ಪುಟ್ಟಸ್ವಾಮಿ ಎಂಬುವವರನ್ನು ಪ್ರತಿನಿತ್ಯವೂ ಠಾಣೆಗೆ ಕರೆಯಿಸಿ ಅವರ ಮೊಬೈಲ್ ಮತ್ತು ಸ್ಥಿರ ದೂರವಾಣಿಗೆ ಪ್ರತಿ ದಿನವೂ ಕರೆ ಮಾಡಿ ಶ್ರೀ ಜಿನೇಶ್ ಕುಮಾರ್ ಎಂಬುವವರಿಗೆ ಮನೆಯೊಂದನ್ನು ಕಡಿಮೆ ಬೆಲೆಗೆ ಮಾರುವಂತೆ ಒತ್ತಾಯಿಸಿರುವುದು ಮತ್ತು ದಿನಾಂಕ 25-03-2007ರಂದು ಶ್ರೀ ಪುಟ್ಟಸ್ವಾಮಿ ರವರ ವಿರುದ್ಧ ದೂರು ಅರ್ಜಿ ಬರೆಸಿಕೊಂಡು ಅವರನ್ನು ಹೆದರಿಸಿ ಬೆದರಿಸಿರುವುದು. ತದನಂತರ ಇವರಿಂದ ಬೇಸತ್ತ ಪುಟ್ಟಸ್ವಾಮಿ ರವರು ಲೋಕಾಯುಕ್ತಕ್ಕೆ ದೂರನ್ನು ನೀಡಿರುವುದು ಸಹ ಸಾಬೀತಾಗಿರುತ್ತದೆ ಎಂದು ವಿಚಾರಣಾಧಿಕಾರಿಗಳು ಅಭಿಪ್ರಾಯಪಟ್ಟಿರುತ್ತಾರೆ. ಆರೋಪಿತ ಪೊಲೀಸ್ ಅಧಿಕಾರಿ ರವರ ವಿರುದ್ಧ ನಡೆಸಲಾದ ಇಲಾಖಾ ವಿಚಾರಣೆಯಲ್ಲಿ ಮುಖ್ಯವಾದ ಆರೋಪಗಳು ಸಮರ್ಪಕ ಸಾಕ್ಷ್ಯಾಧಾರಗಳಿಂದ ಕೂಡಿದ್ದು, ಅವರನ್ನು ದೋಷಿ ಎಂಬುದಾಗಿ ಪರಿಗಣಿಸಲು ಕಾನೂನಿನಲ್ಲಿ ಯಾವುದೇ ಅಡಚಣೆ ಇರುವುದಿಲ್ಲ. ಅಲ್ಲದೆ, ಸದರಿ ಅಧಿಕಾರಿಯವರು ಅಧಿಕಾರವನ್ನು ದುರ್ಬಳಕೆ ಮಾಡಿಕೊಂಡಿರುವ ಆರೋಪವು ಯಾವುದೇ ವಿಧವಾದ ಅನುಮಾನಕ್ಕೆ ಆಸ್ಪದವಿಲ್ಲದಂತೆ ದೃಢಪಟ್ಟಿದ್ದು ಅವರ ವಿರುದ್ಧದ ಆರೋಪಗಳು ಸಾಬೀತಾಗಿರುವುದಾಗಿ ವಿಚಾರಣಾ ವರದಿಯಲ್ಲಿ ವಿವರಿಸಲಾಗಿರುತ್ತದೆ.

ಮೇಲೆ (3)ರಲ್ಲಿ ಓದಲಾದ ಪತ್ರದಲ್ಲಿ ಆರೋಪಿತ ಅಧಿಕಾರಿಗಳಿಗೆ ಕಾರಣ ಕೇಳುವ ನೋಟೀಸ್ ಜಾರಿ ಮಾಡಿ ಅವರಿಂದ ಸಜಮಾಯಿಷಿ ಕೋರಲಾಗಿತ್ತು. ಮೇಲೆ (4)ರಲ್ಲಿ ಓದಲಾದ ಪತ್ರದಲ್ಲಿ ಆರೋಪಿತ ಅಧಿಕಾರಿಗಳಿಗೆ ನೋಟೀಸ್ ಜಾರಿ ಮಾಡಿ ಸ್ವೀಕೃತಿ ಪಡೆದು ಪೊಲೀಸ್ ಮಹಾನಿರ್ದೇಶಕರು ವರದಿ ಮಾಡಿರುತ್ತಾರೆ. ಮೇಲೆ (5)ರಲ್ಲಿ ಓದಲಾದ ಪತ್ರದಲ್ಲಿ ಶ್ರೀ ಜಿ.ಟಿ.ನಾಯಕ್, ಡಿವೈ.ಎಸ್.ಪಿ ರವರು ಸರ್ಕಾರಕ್ಕೆ ನೀಡಿರುವ ಸಮಜಾಯಿಷಿಯಲ್ಲಿ ದಿನಾಂಕ 16-06-2006 ರಿಂದ 18-12-2007 ರವರೆಗೆ ಚಾಮರಾಜಪೇಟೆ ಉಪ ವಿಭಾಗದಲ್ಲಿ ಎ.ಸಿ.ಪಿ. ಆಗಿ ಕರ್ತವ್ಯ ನಿರ್ವಹಿಸುತ್ತಿದ್ದುದಾಗಿ ತಿಳಿಸಿ, ಇಲಾಖಾ ವಿಚಾರಣೆಯ ದಾಖಲಾತಿಗಳು ಹಾಗೂ ಇಲಾಖಾ ವಿಚಾರಣಾ ವಿಷಯಗಳನ್ನು ವಿಶ್ಲೇಷಿಸಿರುತ್ತಾರೆ. ಇವುಗಳಲ್ಲಿ ಯಾವುದೇ ಹೊಸ ಅಂಶಗಳು ಕಂಡು ಬಂದಿರುವುದಿಲ್ಲ. ಆದರೆ, ಎ.ಸಿ.ಪಿ. ಆಗಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ತಮ್ಮ ವ್ಯಾಪ್ತಿಯಲ್ಲಿ 5 ಪೊಲೀಸ್ ಠಾಣೆಗಳು ಬರುತ್ತಿದ್ದು, ಹನುಮಂತನಗರ ಪೊಲೀಸ್ ಠಾಣೆ ಸಹ ತನ್ನ ವ್ಯಾಪ್ತಿಯಲ್ಲಿದ್ದು, ತನಗೆ ನೀಡಿದ ಅರ್ಜಿಯನ್ನು ವಿಚಾರಣೆ ಮಾಡುವ ಅಧಿಕಾರ ಹೊಂದಿರುತ್ತೇನೆ. ಅರ್ಜಿ ವಿಚಾರಣೆ ಮಾಡುವ ಅಧಿಕಾರವಿದ್ದು, ದುರ್ನಡತೆಯಾಗುವುದಿಲ್ಲವೆಂದು ನಮೂದಿಸಿರುತ್ತಾರೆ. ಮುಂದುವರೆದು, ನಿರ್ದೇಶಕರು (ವಿಜಿಲೆನ್ಸ್ ಲೋಕಾಯುಕ್ತ) ಬೆಂಗಳೂರು ರವರು ಪೂರ್ವಭಾವಿ ವಿಚಾರಣೆ ಮಾಡಿದ್ದು ಆ ಕಾಲಕ್ಕೆ ಸದರಿಯವರು ಘಟನೆಯ ಪೂರ್ವದಲ್ಲಿ ನಡೆದಂತಹ ಅಪರಾಧ ಸಂಖ್ಯೆ:242/05 ನೇದ್ದರಲ್ಲಿ ಕಾಗದ ಪತ್ರಗಳನ್ನು ಆಧಾರವಾಗಿಟ್ಟುಕೊಂಡು ಪೂರ್ವಭಾವಿ ವಿಚಾರಣೆ ಮಾಡಿದ ಕಾಲಕ್ಕೆ ಅವುಗಳನ್ನು ಉಪಯೋಗಿಸಿದ್ದು ಸಿ.ಸಿ.ಎ. ನಿಯಮಾವಳಿ, 1957ರ ಪ್ರಕಾರ ವಿರುದ್ಧವಾಗಿರುತ್ತದೆ ಎಂದು ತಿಳಿಸಿರುತ್ತಾರೆ. ಅಲ್ಲದೆ ತಾವು ರೌಡಿಗಳನ್ನು ಮಟ್ಟ ಹಾಕಿದ್ದಕ್ಕೆ ಬೆಂಗಳೂರು ನಗರ ಆಯುಕ್ತರಿಂದ 2007 ರಲ್ಲಿ ತನ್ನನ್ನು ಕಾನೂನು & ಸುವ್ಯವಸ್ಥೆ ಕಾಪಾಡುವ 'Best ACP' ಎಂದು ಗುರುತಿಸಲಾಗಿದೆ ಎಂದು ತಿಳಿಸಿರುತ್ತಾರೆ.

ಆಪಾದಿತರು ನೀಡಿರುವ ಸಮಜಾಯಿಷಿಯನ್ನು ಸರ್ಕಾರ ಪರಿಶೀಲಿಸಿ ತಿರಸ್ಕರಿಸಿದೆ. ಕರ್ನಾಟಕ ಲೋಕಾಯುಕ್ತ ತನ್ನ ವಿಚಾರಣಾ ವರದಿಯಲ್ಲಿ ಮಾಡಿರುವ ಶಿಫಾರಸ್ಸುಗಳನ್ನು ಒಪ್ಪದೇ ಇರಲು ಸಮರ್ಥನೆ ಇರುವುದಿಲ್ಲ ಎಂದು ಪರಿಗಣಿಸಿದೆ. ಅದರಂತೆ, ಅಧಿಕಾರಿಯು ಎಸಗಿರುವ ದುರ್ನಡತೆ ಹಾಗೂ ಅಪರಾಧದ ಸಾಂದ್ರತೆಗೆ ತಕ್ಕಂತೆ ಇವರನ್ನು ಸರ್ಕಾರಿ ಸೇವೆಯಿಂದ ವಜಾಗೊಳಿಸಲು ತೀರ್ಮಾನಿಸಿದೆ.

ಮೇಲೆ (6)ರಲ್ಲಿ ಓದಲಾದ ಪತ್ರದಲ್ಲಿ ದಂಡನೆ ವಿಧಿಸುವ ಮುನ್ನ ನಿಯಮಾನುಸಾರ ಕರ್ನಾಟಕ ಲೋಕಸೇವಾ ಆಯೋಗದ ಸಹಮತಿ ಪಡೆಯಲು ಪತ್ರ ಬರೆಯಲಾಗಿತ್ತು. ಮೇಲೆ (7)ರಲ್ಲಿ ಓದಲಾದ ಪತ್ರದಲ್ಲಿ ಕರ್ನಾಟಕ ಲೋಕಸೇವಾ ಆಯೋಗವು ಸರ್ಕಾರದ ಪ್ರಸ್ತಾವನೆಗೆ ತನ್ನ ಸಹಮತಿ ನೀಡಿರುತ್ತದೆ. ಮೇಲೆ ವಿವರಿಸಿರುವ ಸನ್ನಿವೇಶಗಳಲ್ಲಿ ಶ್ರೀ ಜಿ.ಟಿ.ನಾಯಕ್, ಡಿವೈ.ಎಸ್.ಪಿ (ಸಿವಿಲ್) ರವರನ್ನು ಸರ್ಕಾರದ ಸೇವೆಯಿಂದ ವಜಾ ಮಾಡಲು ತೀರ್ಮಾನಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ.ಒಇ 510 ಪೊಸಿಪ 2009 ಬೆಂಗಳೂರು, ದಿನಾಂಕ :02-05-2012

ಪ್ರಸ್ತಾವನೆಯಲ್ಲಿ ವಿವರಿಸಿದಂತೆ ಶ್ರೀ ಜಿ.ಟಿ.ನಾಯಕ್, ಡಿವೈ.ಎಸ್.ಪಿ(ಸಿವಿಲ್) ಅಪರಾಧ, ಪೊಲೀಸ್ ಪ್ರಧಾನ ಕಛೇರಿ, ಬೆಂಗಳೂರು (ಈ ಹಿಂದೆ ಎ.ಸಿ.ಪಿ, ಚಾಮರಾಜಪೇಟೆ, ಬೆಂಗಳೂರು ನಗರ) ರವರ ವಿರುದ್ಧ ಆರೋಪಗಳು ವಿಚಾರಣಾ ವರದಿಯಿಂದ ಸಾಬೀತಾಗಿರುವ ಹಿನ್ನಲೆಯಲ್ಲಿ ಕೆ.ಎಸ್.ಪಿ (ಡಿ.ಪಿ) ಕಾಯ್ದೆ, 1963ರ ಕಲಂ 23(1)(ಬಿ) (iv) ರನ್ವಯ ಸೇವೆಯಿಂದ ವಜಾ ಮಾಡುವ ದಂಡನೆ ವಿಧಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಟಿ.ಎನ್.ರವಿಪ್ರಕಾಶ್,
ಸರ್ಕಾರದ ಅಧೀನ ಕಾರ್ಯದರ್ಶಿ,
ಒಳಾಡಳಿತ ಇಲಾಖೆ (ಪೊಲೀಸ್ ಸೇವೆಗಳು-ಎ)

ಪಿ.ಆರ್. 1306

ಶಿಕ್ಷಣ ಸಚಿವಾಲಯ

ವಿಷಯ: ಶ್ರೀ ಕೆ.ಎಂ.ಈಶ್ವರಪ್ಪ, ಉಪನ್ಯಾಸಕರು, ಸರ್ಕಾರಿ ಪಾಲಿಟೆಕ್ನಿಕ್, ಬೀದರ್ ಇವರನ್ನು ಸರ್ಕಾರಿ ಸೇವೆಯಿಂದ ಕಡ್ಡಾಯ ನಿವೃತ್ತಿಗೊಳಿಸುವ ದಂಡನೆ ವಿಧಿಸುವ ಕುರಿತು.

ಓದಲಾಗಿದೆ: (1) ಸರ್ಕಾರದ ಆದೇಶ ಸಂಖ್ಯೆ: ಇಡಿ 99 ಡಿಟಿಇ 2008 ದಿನಾಂಕ: 07–08–2010.

(2) ವಿಚಾರಣಾ ವರದಿ ದಿನಾಂಕ: 15–4–2011.

(3) ಎರಡನೇ ಕಾರಣ ಕೇಳುವ ನೋಟೀಸ್ ಸಂಖ್ಯೆ:ಇಡಿ 99 ಡಿಟಿಇ 2008 ದಿನಾಂಕ: 21–7–2011.

(4) ಶ್ರೀ ಕೆ.ಎಂ.ಈಶ್ವರಪ್ಪ, ಉಪನ್ಯಾಸಕರು ಇವರು ನೀಡಿರುವ ಸಮಜಾಯಿಷಿ ದಿನಾಂಕ: 28–9–2011.

ಪ್ರಸ್ತಾವನೆ:

ಶ್ರೀ ಕೆ.ಎಂ.ಈಶ್ವರಪ್ಪ, ಸಿವಿಲ್ ಇಂಜಿನಿಯರಿಂಗ್ ವಿಭಾಗದ ಉಪನ್ಯಾಸಕರು, ಸರ್ಕಾರಿ ಪಾಲಿಟೆಕ್ನಿಕ್, ಬೀದರ್ ಇಲ್ಲಿ ಕಾರ್ಯನಿರ್ವಹಿಸುತ್ತಿದ್ದಾಗ ದಿನಾಂಕ: 11–12–2002ರಿಂದ 14–12–2002ರವರೆಗೆ ಸಾಂದರ್ಭಿಕ ರಜೆಯ ಮೇಲೆ ತೆರಳಿದ್ದು ನಂತರ ಅವರು ದಿನಾಂಕ: 15–12–2002ರಿಂದ ಇದುವರೆವಿಗೂ ಕರ್ತವ್ಯಕ್ಕೆ ಅನಧಿಕೃತವಾಗಿ ಗೈರು ಹಾಜರಾಗಿರುತ್ತಾರೆ. ಸದರಿಯವರು ತನ್ನ ಗೈರು ಹಾಜರಿಗೆ ಯಾವ ರಜಾ ಅರ್ಜಿಯನ್ನು ಸಲ್ಲಿಸದೆ ಹಾಗೂ ಮೇಲಾಧಿಕಾರಿಗಳಿಂದ ಪೂರ್ವಾನುಮತಿಯನ್ನು ಪಡೆಯದೆ ಕರ್ತವ್ಯಕ್ಕೆ ಗೈರು ಹಾಜರಾಗಿರುತ್ತಾರೆ. ಸದರಿ ಉಪನ್ಯಾಸಕರಿಗೆ ಕರ್ತವ್ಯಕ್ಕೆ ಹಾಜರಾಗುವಂತೆ ಅನೇಕ ಜ್ಞಾಪನಗಳನ್ನು ಜಾರಿಗೊಳಿಸಿದ್ದರೂ ಸಹ ಕರ್ತವ್ಯಕ್ಕೆ ಹಾಜರಾಗದ ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 1966ರ ನಿಯಮ 3ನ್ನು ಉಲ್ಲಂಘಿಸಿ ದುರ್ನಡತೆ ಎಸಗಿರುವ ಆರೋಪಕ್ಕಾಗಿ ಸದರಿಯವರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ಮೇಲೆ (1)ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ಶ್ರೀ ಎ.ಕೃಷ್ಣಪ್ಪ, ನಿವೃತ್ತ ಜಿಲ್ಲಾ ನ್ಯಾಯಾಧೀಶರು ಇವರನ್ನು ವಿಚಾರಣಾಧಿಕಾರಿಗಳನ್ನಾಗಿ ನೇಮಿಸಲಾಗಿತ್ತು.

ಸದರಿ ಪ್ರಕರಣದ ಬಗ್ಗೆ ವಿಚಾರಣೆ ನಡೆಸಿದ ವಿಚಾರಣಾಧಿಕಾರಿಗಳು ಮೇಲೆ ಕ್ರಮ ಸಂಖ್ಯೆ (2)ರಲ್ಲಿ ಓದಲಾದ ದಿನಾಂಕ: 15–4–2011ರಲ್ಲಿ ವಿಚಾರಣಾ ವರದಿಯನ್ನು ಸಲ್ಲಿಸಿ ಆರೋಪಿತರ ವಿರುದ್ಧ ಆರೋಪಗಳ ಕುರಿತು ಸಾಕ್ಷ್ಯ ಮತ್ತು ಪ್ರಮುಖ ಅಂಶಗಳನ್ನು ಗಣನೆಗೆ ತೆಗೆದುಕೊಂಡು ಈ ಕೆಳಗಿನಂತೆ ಅಭಿಪ್ರಾಯ ನೀಡಿರುತ್ತಾರೆ.

ಆಪಾದಿತರ ವಿರುದ್ಧ ಮಾಡಿರುವ 1ನೇ ಆರೋಪದ ಇಲಾಖಾ ಪರ ಸಾಕ್ಷಿದಾರರಾದ ಶ್ರೀ ಸೂರ್ಯಕಾಂತ್, ಪ್ರಭಾರೆ ಪ್ರಾಂಶುಪಾಲರು, ಸರ್ಕಾರಿ ಪಾಲಿಟೆಕ್ನಿಕ್, ಬೀದರ್ ಇವರು ತನ್ನ ಸಾಕ್ಷ್ಯದಲ್ಲಿ ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಆಪಾದಿತರು ಉಪನ್ಯಾಸಕರಾಗಿ ಸದರಿ ಪಾಲಿಟೆಕ್ನಿಕ್‌ನ ಸಿವಿಲ್ ವಿಭಾಗದಲ್ಲಿ ದಿನಾಂಕ: 21–10–2001ರಿಂದ ಕರ್ತವ್ಯ ನಿರ್ವಹಿಸುತ್ತಿದ್ದು, ನಂತರ ಅವರು ದಿನಾಂಕ: 11–12–2002 ರಿಂದ 14–12–2002ರವರೆಗೆ ಸಾಂದರ್ಭಿಕ ರಜೆ ಉಪಯೋಗಿಸಿಕೊಂಡು (4 ದಿನಗಳು) (ರಜೆ ಮಂಜೂರು ಮಾಡಲಾಗಿದೆ) ನಂತರ ಅವರು ದಿನಾಂಕ: 15–12–2002ರಿಂದ ಇದುವರೆವಿಗೂ ಅನಧಿಕೃತ ಗೈರು ಹಾಜರಿಯಾಗಿರುತ್ತಾರೆ. ಅಲ್ಲದೆ ಅವರು ತನ್ನ ಗೈರು ಹಾಜರಿಗೆ ಯಾವ ರಜಾ ಅರ್ಜಿ ಸಲ್ಲಿಸದೇ ಹಾಗೂ ಮೇಲಾಧಿಕಾರಿಗಳಿಂದ ಪೂರ್ವಾನುಮತಿ ಪಡೆಯದೇ ಕರ್ತವ್ಯಕ್ಕೆ ಗೈರು ಹಾಜರಾಗಿದ್ದಾರೆ ಎಂದು ನುಡಿದಿರುತ್ತಾರೆ.

ಆಪಾದಿತರ ವಿರುದ್ಧ ಮಾಡಿರುವ 2ನೇ ಆರೋಪದ ಇಲಾಖಾ ಪರ ಸಾಕ್ಷಿದಾರರಾದ ತಾಂತ್ರಿಕ ಶಿಕ್ಷಣ ನಿರ್ದೇಶನಾಲಯದ ಆಡಳಿತಾಧಿಕಾರಿಯವರು ತನ್ನ ಸಾಕ್ಷ್ಯದಲ್ಲಿ ಆಪಾದಿತರ ಅನಧಿಕೃತ ಗೈರು ಹಾಜರಾತಿ ಬಗ್ಗೆ ಕನ್ನಡ ದಿನಪತ್ರಿಕೆ ಹಾಗೂ ಡೆಕ್ಕನ್ ಹೆರಾಲ್ಡ್ ದಿನಪತ್ರಿಕೆಗಳಲ್ಲಿ ಜಾಹೀರಾತು ನೀಡಿ ಕರ್ತವ್ಯಕ್ಕೆ ಹಾಜರಾಗುವಂತೆ ತಿಳಿಸಿದ್ದರೂ ಸಹ ಆಪಾದಿತರು ಕರ್ತವ್ಯಕ್ಕೆ ಹಾಜರಾಗಿರುವುದಿಲ್ಲವೆಂದು ದಿನಪತ್ರಿಕೆಗಳ ನಕಲು ಪ್ರತಿಗಳನ್ನು ಸಲ್ಲಿಸಿರುತ್ತಾರೆ.

ಮೇಲಿನ ಸಾಕ್ಷ್ಯಾಧಾರಗಳ ಆಧಾರದ ಮೇಲೆ ಶ್ರೀ ಕೆ.ಎಂ.ಈಶ್ವರಪ್ಪ, ಇವರು ದಿನಾಂಕ: 15–12–2002ರಿಂದ ಇದುವರೆವಿಗೂ ಕರ್ತವ್ಯಕ್ಕೆ ಗೈರು ಹಾಜರಾಗಿರುವುದು ದೃಢಪಟ್ಟಿರುತ್ತದೆ. ಆದುದರಿಂದ ಸದರಿ ಉಪನ್ಯಾಸಕರು ರಜೆಯನ್ನು ಪಡೆಯದೆ ನಾಲ್ಕು ತಿಂಗಳುಗಳು ಅಥವಾ ಅದಕ್ಕೂ ಹೆಚ್ಚಿನ ಅವಧಿಗೆ ಕರ್ತವ್ಯಕ್ಕೆ ಗೈರು ಹಾಜರಾಗಿರುವುದರಿಂದ ಕರ್ನಾಟಕ ಸರ್ಕಾರಿ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957ರ ಹಾಗೂ ಕೆ.ಸಿ.ಎಸ್.ಆರ್. ನಿಯಮ 108ರ ಪ್ರಕಾರ ಸದರಿಯವರು ಸೇವೆಯಿಂದ ವಜಾ ಮಾಡುವ ಅಥವಾ ತೆಗೆದು ಹಾಕುವ ದಂಡನೆಗೆ ಗುರಿಯಾಗಿರುತ್ತಾರೆ ಎಂದು ತಿಳಿಸಿ ಸದರಿಯವರ ವಿರುದ್ಧ ಮಾಡಲಾದ ಎಲ್ಲಾ ಆರೋಪಗಳು ರುಜುವಾತಾಗಿದೆ ಎಂದು ವಿಚಾರಣಾಧಿಕಾರಿಗಳು ಅಭಿಪ್ರಾಯ ನೀಡಿರುತ್ತಾರೆ.

ಮೇಲಿನ ವಿಚಾರಣಾ ವರದಿಯ ಪ್ರತಿಯನ್ನು ಲಗತ್ತಿಸಿ ಆಪಾದಿತರಿಗೆ ಮೇಲೆ ಕ್ರಮ ಸಂಖ್ಯೆ (3)ರಲ್ಲಿ ಓದಲಾದ ನೋಟೀಸ್‌ನ ಮೂಲಕ ಜಾರಿ ಮಾಡಿ ವಿಚಾರಣಾ ವರದಿಯ ಬಗ್ಗೆ ಅಹವಾಲು ಇದ್ದಲ್ಲಿ ಸಲ್ಲಿಸಲು ಅವಕಾಶ ಕಲ್ಪಿಸಲಾಗಿತ್ತು.

ಆಪಾದಿತರು ಮೇಲೆ ಓದಲಾದ ಕ್ರಮ ಸಂಖ್ಯೆ (4)ರಲ್ಲಿ ವಿವರಣೆಯನ್ನು ಸಲ್ಲಿಸಿರುತ್ತಾರೆ. ಅದನ್ನು ಸಂಕ್ಷಿಪ್ತವಾಗಿ ವಿವರಿಸಿದೆ.

ವಿಚಾರಣಾಧಿಕಾರಿಗಳು ನೀಡಿರುವ ವಿಚಾರಣಾ ವರದಿಯನ್ವಯ ಪ್ರಸ್ತುತ ಪ್ರಕರಣದಲ್ಲಿ ಶಿಸ್ತು ಪ್ರಾಧಿಕಾರಿಯ ಪರ ವಿಚಾರಣೆಗೊಳಪಡಿಸಿರುವ ಸಾಕ್ಷಿದಾರರು ಆರೋಪಗಳನ್ನು ಸಮರ್ಥಿಸಿರುವುದಿಲ್ಲ. ಸಾಕ್ಷಿದಾರರಾದ ಶ್ರೀ ಸೂರ್ಯಕಾಂತ್. ಪ್ರಭಾರೆ ಪ್ರಾಂಶುಪಾಲರು ದಿನಾಂಕ: 01-07-2009ರಿಂದ ಸರ್ಕಾರಿ ಪಾಲಿಟೆಕ್ನಿಕ್, ಬೀದರ್ ಇಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು 2002ನೇ ಸಾಲಿನಿಂದ 2004ನೇ ಸಾಲಿನ ಅವಧಿಗೆ ಸಂಬಂಧಿಸಿದ್ದ ವಿಚಾರಣೆಯಲ್ಲಿನ ದಾಖಲೆ / ಕಡತಗಳನ್ನು ಸಾಕ್ಷಿದಾರರು ನಿರ್ವಹಿಸದೆ ಕಡತಗಳನ್ನು ನೋಡಿ ಸಾಕ್ಷಿ ನುಡಿದಿದ್ದಾರೆ. ಅವರು ಆರೋಪವನ್ನು ಸಮರ್ಥಿಸಿರುವುದಿಲ್ಲ. ಕಡತಗಳನ್ನು ಸ್ವತ: ನಿರ್ವಹಿಸದೆ ಅಥವಾ ಆದೇಶ ಮಾಡದಿರುವ ಇವರು ಸಾಕ್ಷಿದಾರರಾಗಲು ಅನರ್ಹರಾಗಿರುತ್ತಾರೆ.

ಅಲ್ಲದೆ ಸಾಕ್ಷಿದಾರರು ಪಾಟೀ ಸವಾಲಿನ ತಮ್ಮ ಉತ್ತರದಲ್ಲಿ ಸದರಿ ಪ್ರಕರಣದ ಕುರಿತು ಸುಪ್ರೀಂ ಕೋರ್ಟಿನ ನೋಟೀಸಿನ ಬಗ್ಗೆಯಾಗಲೀ, ಕೋರ್ಟಿನ ಯಾವುದೇ ವಿಷಯ ತಿಳಿಸಿರುವುದಿಲ್ಲ ಹಾಗೂ ಆಪಾದಿತರ ಅನಧಿಕೃತ ಗೈರು ಹಾಜರಿಯ ಬಗ್ಗೆ ಕಡತವನ್ನು ನೋಡಿದರೆ ಕಾರಣ ತಿಳಿಯುತ್ತದೆಂದು ಸಾಕ್ಷಿ ನುಡಿದಿದ್ದಾರೆ. ಆದರೆ ಗೈರು ಹಾಜರಾತಿಯ ಕಡತವನ್ನು ವಿಚಾರಣಾಧಿಕಾರಿಯವರ ಮುಂದೆ ಹಾಜರುಪಡಿಸಿರುವುದಿಲ್ಲ. ಇದರಿಂದ ಆರೋಪಗಳು ಸಾಬೀತಾಗುವುದಿಲ್ಲ. ಆದ್ದರಿಂದ ಸಾಕ್ಷಿದಾರರ ಹೇಳಿಕೆಯನ್ನು ಪರಿಗಣಿಸಬಾರದೆಂದು ಕೋರಲಾಗಿದೆ.

ಅಲ್ಲದೆ ಕೆ.ಸಿ.ಎಸ್. (ಸಿಸಿಎ) ನಿಯಮಗಳು, 1957ರ 11ನೇ ನಿಯಮದ (11)ನೇ ಉಪ-ನಿಯಮದನ್ವಯ ಆಪಾದಿತರು ತಮ್ಮ ಪ್ರತಿರಕ್ಷಣೆಗೆ ಸರ್ಕಾರದಿಂದ ಕೋರಿರುವ ದಾಖಲೆಗಳನ್ನು ಒದಗಿಸಿಕೊಡಬೇಕಾಗಿದೆ. ಆದರೆ ಸದರಿ ದಾಖಲೆಗಳನ್ನು ಒದಗಿಸದಿರಲು ಕಾರಣಗಳೇನು ಎಂಬುದನ್ನು ವಿಚಾರಣಾ ನಡವಳಿಯಲ್ಲಿ ತಿಳಿಸಿ ಪ್ರಸ್ತುತ ಇರುವ ಆರೋಪವು ಅನಧಿಕೃತ ಗೈರು ಹಾಜರಿಯ ಬಗ್ಗೆ ಮಾತ್ರ ಇದ್ದು ಸರ್ಕಾರದಲ್ಲಿರುವ ದಾಖಲೆಗಳು ವರ್ಗಾವಣೆಗೆ ಸಂಬಂಧಿಸಿದ ದಾಖಲೆಗಳಾಗಿದ್ದು ಆರೋಪಕ್ಕೂ ಆ ದಾಖಲೆಗಳಿಗೂ ಯಾವುದೇ ಸಂಬಂಧವಿಲ್ಲವೆಂದು ವಿಚಾರಣಾಧಿಕಾರಿಯವರು ದಾಖಲೆಗಳನ್ನು ಪರಿಶೀಲಿಸದೆ ನಿರ್ಣಯ ದಾಖಲಿಸಿರುತ್ತಾರೆ ಎಂದು ತಿಳಿಸಿರುತ್ತಾರೆ.

ಆರೋಪಿತರು ನೀಡಿದ ಸಮಜಾಯಿಷಿಯನ್ನು ಪ್ರಕರಣದ ದಾಖಲೆಗಳೊಡನೆ ಹಾಗೂ ವಿಚಾರಣಾ ವರದಿಯೊಂದಿಗೆ ಮತ್ತೊಮ್ಮೆ ಪರಿಶೀಲಿಸಲಾಯಿತು. ಆರೋಪಿತರು ನೀಡಿರುವ ಸಮಜಾಯಿಷಿಯನ್ನು ಒಪ್ಪಲು ಸಮರ್ಥನೀಯ ಕಾರಣಗಳು ಕಂಡು ಬಂದಿಲ್ಲ ಹಾಗೂ ಶ್ರೀ ಕೆ.ಎಂ.ಈಶ್ವರಪ್ಪ ಇವರು ಸುಮಾರು 10 ವರ್ಷಗಳ ಕಾಲ ಕರ್ತವ್ಯಕ್ಕೆ ಗೈರು ಹಾಜರಾಗಿರುವುದು ಅಕ್ಷಮ್ಯ ಅಪರಾಧ. ಇದು ಉದ್ದೇಶಪೂರ್ವಕವಾಗಿ ಮಾಡಿರುವ ಕೃತ್ಯವಾಗಿದ್ದು ಇದರಿಂದಾಗಿ ಸಂಸ್ಥೆ ಮತ್ತು ವಿದ್ಯಾರ್ಥಿಗಳ ಹಿತಕ್ಕೆ ಧಕ್ಕೆಯಾಗಿರುತ್ತದೆ ಮತ್ತು ಇವರ ವಿರುದ್ಧ ಮಾಡಲಾದ ಎಲ್ಲಾ ಆರೋಪಗಳು ಇಲಾಖಾ ವಿಚಾರಣೆಯಲ್ಲಿ ಸಾಬೀತಾಗಿರುತ್ತವೆ. ಆದುದರಿಂದ ಸದರಿಯವರು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿಗಳು, 1966ರ ನಿಯಮ 3(1)ನ್ನು ಉಲ್ಲಂಘಿಸಿರುವುದು ಖಚಿತವಾಗಿರುವುದರಿಂದ ಇವರಿಗೆ ಕಠಿಣ ದಂಡನೆ ವಿಧಿಸಲು ತೀರ್ಮಾನಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಇಡಿ 99 ಡಿಟಇ 2008, ಬೆಂಗಳೂರು, ದಿನಾಂಕ: 03ನೇ ಮೇ 2012

ಪ್ರಸ್ತಾವನೆಯಲ್ಲಿ ವಿವರಿಸಲಾಗಿರುವ ಕಾರಣಗಳಿಂದಾಗಿ, ಶ್ರೀ ಕೆ.ಎಂ.ಈಶ್ವರಪ್ಪ, ಸಿವಿಲ್ ಇಂಜಿನಿಯರಿಂಗ್ ವಿಭಾಗದ ಉಪನ್ಯಾಸಕರು, ಸರ್ಕಾರಿ ಪಾಲಿಟೆಕ್ನಿಕ್, ಬೀದರ್ (ಅನಧಿಕೃತ ಗೈರು ಹಾಜರಾತಿಯಲ್ಲಿರುವ) ಇವರು ದಿನಾಂಕ: 15-12-2002 ರಿಂದ ಇದುವರೆವಿಗೂ ಕರ್ತವ್ಯಕ್ಕೆ ಗೈರುಹಾಜರಾಗಿರುವುದರಿಂದ ಇದನ್ನು ಸರ್ಕಾರವು ಗಂಭೀರವಾಗಿ ಪರಿಗಣಿಸಿ, ಸದರಿಯವರನ್ನು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು, 1957ರ ನಿಯಮ 11 ಮತ್ತು 11ಎ ರೊಡನೆ ಓದಿಕೊಂಡಂತೆ ಅದೇ ನಿಯಮಾವಳಿಗಳ ನಿಯಮ 8(vi)ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಸರ್ಕಾರವು ಇವರನ್ನು ತಕ್ಷಣದಿಂದ ಜಾರಿಗೆ ಬರುವಂತೆ ಸರ್ಕಾರಿ ಸೇವೆಯಿಂದ ಕಡ್ಡಾಯ ನಿವೃತ್ತಿಗೊಳಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಬಿ.ಎನ್.ಜಗದೀಶ್,
ಸರ್ಕಾರದ ಅಧೀನ ಕಾರ್ಯದರ್ಶಿ,
ಶಿಕ್ಷಣ ಇಲಾಖೆ (ತಾಂತ್ರಿಕ ಶಿಕ್ಷಣ).

ಪಿ.ಆರ್. 1319

ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವಾಲಯ

ವಿಷಯ :- 2012-13ನೇ ಸಾಲಿನಲ್ಲಿ ಕರ್ನಾಟಕ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯನ್ನು ಮುಂದುವರೆಸುವ ಬಗ್ಗೆ.

ಓದಲಾಗಿದೆ :- 1) ಮುಖ್ಯ ಕಾರ್ಯದರ್ಶಿಯವರ ಸುತ್ತೋಲೆ ಸಂಖ್ಯೆ : ಪಿಡಿ 08 ಐಎಂಎಂ 2012, ದಿನಾಂಕ: 02-04-2012.

2) ದಿನಾಂಕ : 13-04-2012 ರಂದು ನಡೆದ ಸಭೆಯ ನಡವಳಿಗಳು.

ಪ್ರಸ್ತಾವನೆ:-

ಕರ್ನಾಟಕ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯಡಿ 2012-13ನೇ ಸಾಲಿನ ಆಯವ್ಯಯದಲ್ಲಿ ಒಟ್ಟು ರೂ. 30,000.00 ಲಕ್ಷಗಳನ್ನು ಒದಗಿಸಲಾಗಿದೆ. ಈ ಮೊತ್ತದ ಪೈಕಿ ಲೆಕ್ಕಶೀರ್ಷಿಕೆವಾರು ವಿವರ ಕೆಳಕಂಡಂತಿದೆ :

		ಲಕ್ಷ ರೂ.ಗಳಲ್ಲಿ
ಅ)	2575-60-265-0-01-059	15.00 ರಾಜ್ಯ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯ ಇತರೆ ವೆಚ್ಚಗಳು
ಆ)	2575-60-265-0-02-059	135.00 ಶಾಸಕರ ಕ್ಷೇತ್ರ ಪ್ರದೇಶಾಭಿವೃದ್ಧಿ ಯೋಜನೆ ಇತರೆ ವೆಚ್ಚಗಳು
ಇ)	4575-60-800-0-01-132	17896.85 ಬಂಡವಾಳ ವೆಚ್ಚ
ಈ)	4575-60-800-0-01-422	8590.63 ವಿಶೇಷ ಘಟಕ ಯೋಜನೆ
ಉ)	4575-60-800-0-01-423	3362.52 ಗಿರಿಜನ ಉಪಯೋಗಕ್ಕೆ
	ಒಟ್ಟು	30000.00

ಈ ಯೋಜನೆಯಡಿ ಯಾವುದೇ ಮಾರ್ಪಾಟು ಇಲ್ಲದಿರುವುದರಿಂದ ಉಲ್ಲೇಖ-1ರಲ್ಲಿನ ಸುತ್ತೋಲೆಯನ್ವಯ ದಿನಾಂಕ 13-04-2012ರಂದು ಪ್ರಧಾನ ಕಾರ್ಯದರ್ಶಿ, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಈ ಯೋಜನೆಯನ್ನು 2012-13ನೇ ಸಾಲಿನಲ್ಲಿ ಮುಂದುವರೆಸಲು ನಿರ್ಣಯಿಸಲಾಯಿತು. ಆದುದರಿಂದ ಈ ಆದೇಶ.

ಸರ್ಕಾರಿ ಆದೇಶ ಸಂಖ್ಯೆ: ಯೋಇ 40 ಯೋವಿವಿ 2012, ಬೆಂಗಳೂರು, ದಿನಾಂಕ: 13.04.2012.

2012-13ನೇ ಸಾಲಿನ ಆಯವ್ಯಯದಲ್ಲಿ ಕರ್ನಾಟಕ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಗೆ ಈ ಕೆಳಕಂಡಂತೆ ಅನುದಾನವನ್ನು ಒದಗಿಸಲಾಗಿದೆ.

		ಲಕ್ಷ ರೂ.ಗಳಲ್ಲಿ
ಅ)	2575-60-265-0-01-059	15.00 ರಾಜ್ಯ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯ ಇತರೆ ವೆಚ್ಚಗಳು
ಆ)	2575-60-265-0-02-059	135.00 ಶಾಸಕರ ಕ್ಷೇತ್ರ ಪ್ರದೇಶಾಭಿವೃದ್ಧಿ ಯೋಜನೆ ಇತರೆ ವೆಚ್ಚಗಳು
ಇ)	4575-60-800-0-01-132	17896.85 ಬಂಡವಾಳ ವೆಚ್ಚ
ಈ)	4575-60-800-0-01-422	8590.63 ವಿಶೇಷ ಘಟಕ ಯೋಜನೆ
ಉ)	4575-60-800-0-01-423	3362.52 ಗಿರಿಜನ ಉಪಯೋಗಕ್ಕೆ
	ಒಟ್ಟು	30000.00

ಒಟ್ಟು ರೂ. 30000.00 ಲಕ್ಷಗಳಿಗೆ ಸದರಿ ಯೋಜನೆಗೆ 2012-13 ಸಾಲಿನಲ್ಲಿ ಸಹ ಮುಂದುವರೆಸಲು ಮಂಜೂರಾತಿ ನೀಡಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಎಸ್. ರವೀಂದ್ರ ಕುಮಾರ್

ಸರ್ಕಾರದ ಅಧೀನ ಕಾರ್ಯದರ್ಶಿ 1 ಮತ್ತು 2 (ಪ್ರ),

ಪಿ.ಆರ್. ನಂ. 1251 ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ.

ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವಾಲಯ

ವಿಷಯ :- 2012-13ನೇ ಸಾಲಿನಲ್ಲಿ ಹೈದ್ರಾಬಾದ್ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ ಯೋಜನೆಯನ್ನು ಮುಂದುವರೆಸುವ ಬಗ್ಗೆ.

ಓದಲಾಗಿದೆ :- 1) ಮುಖ್ಯ ಕಾರ್ಯದರ್ಶಿಯವರ ಸುತ್ತೋಲೆ ಸಂಖ್ಯೆ : ಪಿಡಿ 08 ಐಎಂಎಂ 2012, ದಿನಾಂಕ: 02-04-2012.

2) ದಿನಾಂಕ : 13-04-2012 ರ ಸಭೆಯ ನಡವಳಿಗಳು.

ಪ್ರಸ್ತಾವನೆ:-

ಹೈದ್ರಾಬಾದ್ ಕರ್ನಾಟಕ ಪ್ರದೇಶಾಭಿವೃದ್ಧಿ ಯೋಜನೆಯಡಿ 2012-13ನೇ ಸಾಲಿನ ಆಯವ್ಯಯ ಲೆಕ್ಕಶೀರ್ಷಿಕೆ 2515-00-103-0-01-101 ಅಡಿಯಲ್ಲಿ ರೂ. 130.00 ಲಕ್ಷಗಳು, ಲೆಕ್ಕಶೀರ್ಷಿಕೆ 4515-00-800-0-01-132 ಅಡಿಯಲ್ಲಿ ರೂ. 4319.28 ಲಕ್ಷಗಳಂತೆ, ಲೆಕ್ಕಶೀರ್ಷಿಕೆ 4515-00-

800-0-01-422 ಅಡಿಯಲ್ಲಿ ರೂ. 1450 ಲಕ್ಷಗಳಂತೆ ಹಾಗೂ ಲೆಕ್ಕಶೀರ್ಷಿಕೆ 4515-00-800-0-01-423 ಅಡಿಯಲ್ಲಿ ರೂ. 400.72 ಲಕ್ಷಗಳಂತೆ ಒಟ್ಟು ರೂ. 6300.00 ಲಕ್ಷಗಳನ್ನು ಒದಗಿಸಲಾಗಿದೆ.

ಈ ಯೋಜನೆಯಡಿ ಯಾವುದೇ ಮಾರ್ಪಾಟು ಇಲ್ಲದಿರುವುದರಿಂದ ಉಲ್ಲೇಖ-1ರಲ್ಲಿನ ಸುತ್ತೋಲೆಯನ್ವಯ ದಿನಾಂಕ : 13-04-2012ರಂದು ಪ್ರಧಾನ ಕಾರ್ಯದರ್ಶಿ, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಈ ಯೋಜನೆಯನ್ನು 2012-13ನೇ ಸಾಲಿನಲ್ಲಿ ಮುಂದುವರೆಸಲು ನಿರ್ಣಯಿಸಲಾಯಿತು.

ಆದುದರಿಂದ ಈ ಆದೇಶ.

ಸರ್ಕಾರಿ ಆದೇಶ ಸಂಖ್ಯೆ: ಯೋಇ 05 ಹೈಕಮಂ 2012, ಬೆಂಗಳೂರು, ದಿನಾಂಕ: 13.04.2012.

2012-13ನೇ ಸಾಲಿನ ಆಯವ್ಯಯದಲ್ಲಿ ಹೈದ್ರಾಬಾದ್ ಕರ್ನಾಟಕ ಪ್ರದೇಶಾಭಿವೃದ್ಧಿ ಯೋಜನೆಗೆ ಲೆಕ್ಕಶೀರ್ಷಿಕೆ 2515-00-103-0-01-101 ಅಡಿಯಲ್ಲಿ ರೂ. 130.00 ಲಕ್ಷಗಳು, ಲೆಕ್ಕಶೀರ್ಷಿಕೆ 4515-00-800-0-01-132 ಅಡಿಯಲ್ಲಿ ರೂ. 4319.28 ಲಕ್ಷಗಳಂತೆ, ಲೆಕ್ಕಶೀರ್ಷಿಕೆ 4515-00-800-0-01-422 ಅಡಿಯಲ್ಲಿ ರೂ. 1450.00 ಲಕ್ಷಗಳಂತೆ ಹಾಗೂ ಲೆಕ್ಕಶೀರ್ಷಿಕೆ 4515-00-800-0-01-423 ಅಡಿಯಲ್ಲಿ ರೂ. 400.72 ಲಕ್ಷಗಳಂತೆ ಒಟ್ಟು ರೂ. 6300.00 ಲಕ್ಷಗಳ ಯೋಜನೆಗೆ 2012-13ರ ಸಾಲಿಗೆ ಮುಂದುವರಿಸಲು ಮಂಜೂರಾತಿ ನೀಡಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ
ಎಸ್. ರವೀಂದ್ರ ಕುಮಾರ್
ಸರ್ಕಾರದ ಅಧೀನ ಕಾರ್ಯದರ್ಶಿ 1 ಮತ್ತು 2 (ಪ್ರ.),
ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ.

ಪಿ.ಆರ್. ನಂ. 1250

ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವಾಲಯ

ವಿಷಯ :- 2012-13ನೇ ಸಾಲಿನಲ್ಲಿ ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿ ಯೋಜನೆಯನ್ನು ಮುಂದುವರೆಸುವ ಬಗ್ಗೆ.

ಓದಲಾಗಿದೆ :- 1) ಮುಖ್ಯ ಕಾರ್ಯದರ್ಶಿಯವರ ಸುತ್ತೋಲೆ ಸಂಖ್ಯೆ : ಪಿಡಿ 08 ಐಎಂಎಂ 2012, ದಿನಾಂಕ: 02-04-2012.
2) ದಿನಾಂಕ : 13-04-2012 ರಂದು ನಡೆದ ಸಭೆಯ ನಡವಳಿಗಳು.

ಪ್ರಸ್ತಾವನೆ:-

ಮಲೆನಾಡು ಪ್ರದೇಶಾಭಿವೃದ್ಧಿ ಯೋಜನೆಯಡಿ 2012-13ನೇ ಸಾಲಿನ ಆಯವ್ಯಯ ಲೆಕ್ಕಶೀರ್ಷಿಕೆ 2515-00-103-0-02-101 ಅಡಿಯಲ್ಲಿ ರೂ. 100.00 ಲಕ್ಷಗಳು, ಲೆಕ್ಕಶೀರ್ಷಿಕೆ 4515-00-800-0-03-132 ಅಡಿಯಲ್ಲಿ ರೂ. 2199.99 ಲಕ್ಷಗಳಂತೆ, ಲೆಕ್ಕಶೀರ್ಷಿಕೆ 4515-00-800-0-03-422 ಅಡಿಯಲ್ಲಿ ರೂ. 850.01 ಲಕ್ಷಗಳಂತೆ ಹಾಗೂ ಲೆಕ್ಕಶೀರ್ಷಿಕೆ 4515-00-800-0-03-423 ಅಡಿಯಲ್ಲಿ ರೂ. 250.00 ಲಕ್ಷಗಳಂತೆ ಒಟ್ಟು ರೂ. 3400.00 ಲಕ್ಷಗಳನ್ನು ಒದಗಿಸಲಾಗಿದೆ.

ಈ ಯೋಜನೆಯಡಿ ಯಾವುದೇ ಮಾರ್ಪಾಟು ಇಲ್ಲದಿರುವುದರಿಂದ ಉಲ್ಲೇಖ-1ರಲ್ಲಿನ ಸುತ್ತೋಲೆಯನ್ವಯ ದಿನಾಂಕ : 13-04-2012ರಂದು ಪ್ರಧಾನ ಕಾರ್ಯದರ್ಶಿ, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಈ ಯೋಜನೆಯನ್ನು 2012-13ನೇ ಸಾಲಿನಲ್ಲಿ ಮುಂದುವರೆಸಲು ನಿರ್ಣಯಿಸಲಾಯಿತು. ಆದುದರಿಂದ ಈ ಆದೇಶ.

ಸರ್ಕಾರಿ ಆದೇಶ ಸಂಖ್ಯೆ: ಯೋಇ 03 ಮಪ್ರಮಂ 2012, ಬೆಂಗಳೂರು, ದಿನಾಂಕ: 13.04.2012.

2012-13ನೇ ಸಾಲಿನ ಆಯವ್ಯಯದಲ್ಲಿ ಮಲೆನಾಡು ಪ್ರದೇಶಾಭಿವೃದ್ಧಿ ಯೋಜನೆಗ ಲೆಕ್ಕಶೀರ್ಷಿಕೆ 2515-00-103-0-02-101 ಅಡಿಯಲ್ಲಿ ರೂ. 100.00 ಲಕ್ಷಗಳು, ಲೆಕ್ಕಶೀರ್ಷಿಕೆ 4515-00-800-0-03-132 ಅಡಿಯಲ್ಲಿ ರೂ. 2199.99 ಲಕ್ಷಗಳು, ಲೆಕ್ಕಶೀರ್ಷಿಕೆ 4515-00-800-0-03-422 ಅಡಿಯಲ್ಲಿ ರೂ. 850.01 ಲಕ್ಷಗಳು ಹಾಗೂ ಲೆಕ್ಕಶೀರ್ಷಿಕೆ 4515-00-800-0-03-423 ಅಡಿಯಲ್ಲಿ ರೂ. 250.00 ಲಕ್ಷಗಳಂತೆ ಒಟ್ಟು ರೂ. 3400.00 ಲಕ್ಷಗಳ ಯೋಜನೆಗೆ 2012-13ರ ಸಾಲಿಗೆ ಮುಂದುವರಿಸಲು ಮಂಜೂರಾತಿ ನೀಡಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ
ಎಸ್. ರವೀಂದ್ರ ಕುಮಾರ್
ಸರ್ಕಾರದ ಅಧೀನ ಕಾರ್ಯದರ್ಶಿ 1 ಮತ್ತು 2 (ಪ್ರ.),
ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ.

ಪಿ.ಆರ್. ನಂ. 1249

ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವಾಲಯ

ವಿಷಯ :- 2012-13ನೇ ಸಾಲಿನಲ್ಲಿ ಹೊಸ ಜಿಲ್ಲೆಯಾದ ಯಾದಗಿರಿ ಜಿಲ್ಲೆಯಲ್ಲಿ ಅಭಿವೃದ್ಧಿ ಕಾಮಗಾರಿಗಳು ಎಂಬ ಯೋಜನೆಯನ್ನು ಮುಂದುವರೆಸುವ ಬಗ್ಗೆ.

ಓದಲಾಗಿದೆ :- 1) ಮುಖ್ಯ ಕಾರ್ಯದರ್ಶಿಯವರ ಸುತ್ತೋಲೆ ಸಂಖ್ಯೆ : ಪಿಡಿ 08 ಐಎಂಎಂ 2012, ದಿನಾಂಕ: 02-04-2012.

2) ದಿನಾಂಕ : 13-04-2012 ರ ಸಭೆಯ ನಡವಳಿಗಳು.

ಪ್ರಸ್ತಾವನೆ:-

ಹೊಸ ಜಿಲ್ಲೆಯಾದ ಯಾದಗಿರಿ ಜಿಲ್ಲೆಯಲ್ಲಿ ಅಭಿವೃದ್ಧಿ ಕಾಮಗಾರಿಗಳ ಈ ಯೋಜನೆಗೆ 2012-13ನೇ ಸಾಲಿನ ಆಯವ್ಯಯ ಲೆಕ್ಕಶೀರ್ಷಿಕೆ 4515-00-101-1-03-132 ಅಡಿಯಲ್ಲಿ ರೂ. 1823.00 ಲಕ್ಷಗಳಂತೆ, ಲೆಕ್ಕಶೀರ್ಷಿಕೆ 4515-00-101-1-03-422 ಅಡಿಯಲ್ಲಿ ರೂ. 500.00 ಲಕ್ಷಗಳಂತೆ ಹಾಗೂ ಲೆಕ್ಕಶೀರ್ಷಿಕೆ 4515-00-101-1-03-423 ಅಡಿಯಲ್ಲಿ ರೂ. 177.00 ಲಕ್ಷಗಳಂತೆ ಒಟ್ಟು ರೂ. 2500.00 ಲಕ್ಷಗಳನ್ನು ಒದಗಿಸಲಾಗಿದೆ.

ಈ ಯೋಜನೆಯಡಿ ಯಾವುದೇ ಮಾರ್ಪಾಟು ಇಲ್ಲದಿರುವುದರಿಂದ ಉಲ್ಲೇಖ-1ರಲ್ಲಿನ ಸುತ್ತೋಲೆಯನ್ವಯ ದಿನಾಂಕ 13-04-2012ರಂದು ಪ್ರಧಾನ ಕಾರ್ಯದರ್ಶಿ, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಈ ಯೋಜನೆಯನ್ನು 2012-13ನೇ ಸಾಲಿನಲ್ಲಿ ಮುಂದುವರೆಸಲು ನಿರ್ಣಯಿಸಲಾಯಿತು. ಆದುದರಿಂದ ಈ ಆದೇಶ.

ಸರ್ಕಾರಿ ಆದೇಶ ಸಂಖ್ಯೆ: ಯೋಇ 06 ಹೈಕಮಂ 2012, ಬೆಂಗಳೂರು, ದಿನಾಂಕ: 13.04.2012.

2012-13ನೇ ಸಾಲಿನ ಆಯವ್ಯಯದಲ್ಲಿ ಹೊಸ ಜಿಲ್ಲೆಯಾದ ಯಾದಗಿರಿ ಜಿಲ್ಲೆಯಲ್ಲಿ ಅಭಿವೃದ್ಧಿ ಕಾಮಗಾರಿಗಳು ಎಂಬ ಯೋಜನೆಗೆ ಲೆಕ್ಕಶೀರ್ಷಿಕೆ 4515-00-101-1-03-132 ಅಡಿಯಲ್ಲಿ ರೂ. 1823.00 ಲಕ್ಷಗಳಂತೆ, ಲೆಕ್ಕಶೀರ್ಷಿಕೆ 4515-00-101-1-03-422 ಅಡಿಯಲ್ಲಿ ರೂ. 500.00 ಲಕ್ಷಗಳಂತೆ ಹಾಗೂ ಲೆಕ್ಕಶೀರ್ಷಿಕೆ 4515-00-101-1-03-423 ಅಡಿಯಲ್ಲಿ ರೂ. 177.00 ಲಕ್ಷಗಳಂತೆ ಒಟ್ಟು ರೂ. 2500.00 ಲಕ್ಷಗಳ ಯೋಜನೆಗೆ 2012-13ರ ಸಾಲಿಗೆ ಮುಂದುವರಿಸಲು ಮಂಜೂರಾತಿ ನೀಡಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಎಸ್. ರವೀಂದ್ರ ಕುಮಾರ್

ಸರ್ಕಾರದ ಅಧೀನ ಕಾರ್ಯದರ್ಶಿ I ಮತ್ತು 2 (ಪ್ರ).

ಪಿ.ಆರ್. ನಂ. 1248 ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ.

HEALTH AND FAMILY WELFARE SECRETARIAT

Sub : Approval for extension of Karnataka Health System Development and Reform Project – reg.

Read :

1) Govt. Order No. HFW/KHSDRP/Sect/1/2006, dated 30-12-2006.

2) Letter No. 5/4/2001-FB-V, dated 12-12-2011 from the Ministry of Finance, Department of Economic Affairs, GoI, New Delhi.

3) Note No. FD/413/Exp-V/2011, dated 16-03-2011 and approval of the FD obtained on 12-07-2011.

4) World Bank letter dated 29-02-2012.

5) Proceedings of the 29th meeting of the Programme Steering Committee held on 31-03-2012.

Preamble :

Government of Karnataka has approved implementation of the Karnataka Health System Development and Reform Project with assistance from the World Bank. The project's main objective is to increase utilization of essential curative and public health services particularly in the underserved areas and among vulnerable groups, and to improve health outcomes in the state. These essential services will have an impact on improving the maternal & child health, reducing maternal & infant mortality rates, fertility ratio and effectively controlling communicable diseases, which have been given priority in the health, related UN Millennium Development Goals.

In the Government Order referred at (1) above, approval was accorded for implementation of the World Bank assisted Karnataka Health System Development and Reform Project, over a period of 5 years with the Project closure date of 31-03-2012, at a cost of US $ 206.48 million (Rs. 897.79 crores) with IDA assistance of US $ 141.83 million along with sanction for the staff strength per Annexure A to the order, formation of the Project Governing Board (PGB) & Programme Steering Committee (PSC) for Project

monitoring & implementation, with the delegation of powers & functions to each of them. The sanctions accorded were effective up to 31-03-2012.

Proposal for Project extension by 3 years up to 31-03-2015 with Additional Financing of US $ 100 million has been recommended by the State Government. Change in the counterpart funding from 90:10 for the original credit to 70:30 for the proposed additional credit suggested by the Government of India (GoI), in the Department of Economic Affairs (DEA) keeping in view the constraints in the headroom for the IDA, was concurred to by the Finance Department on file on 12-07-2011. In the letter read at (2) above, DEA, GoI, communicated its support to the proposal of Government of Karnataka for additional financing of US $ 70 million & extension of the Project period till 31-03-2015 and requested the World Bank to consider the proposal favourably. Pending further preparation, appraisal and approval of the proposal for Project extension by 3 years with additional financing, World Bank in its letter dated 29-02-2012 has extended the credit closing date of the existing IDA Credit 4229 IN by 6 months up to 30-09-2012.

In view of above extension of the currency of the credit up to 30-09-2012, to continue/sustain the initiatives already undertaken/under implementation as also firm up the activities/components under the Additional Financing, approval for extension of the Project from 31-03-2012 to 30-09-2012, as per the existing structure and framework, is required.

On finalization of the activities/components to be undertaken under the Additional Financing, Project will submit proposal for Project extension up to 31-03-2015 with Additional Financing, for consideration & approval of the State Level Steering Committee (SLSC) and Cabinet.

In the meeting proceedings referred to at (5) above, Programme Steering Committee has recommended for approval the proposal for Project extension by 6 months up to 30-09-2012 with the existing staff strength, delegation of administrative & financial powers, to the Chief Secretary & Chairman, PGB. Pending ratification by the Cabinet, proposal for Project extension under IDA Credit 4229 IN by 6 months upto 30-09-2012 has been approved Chief Secretary & Chairman, PGB and Hon'ble Chief Minister.

Hence the following order.

Govt. Order No. HFW (PR) 7 WBA 2012, Bangalore, dated 17-04-2012.

In the circumstances explained in the preamble, pending further preparation, appraisal and approval of the proposal for Project extension by 3 years with additional financing by the World Bank, Government are pleased to approve extension of the World Bank assisted Karnataka Health System Development and Reform Project under IDA Credit 4229 IN by 6 months from 31-03-2012 to 30-09-2012 as per the existing organization structure, framework, staff strength and delegation of administrative & financial powers to the PGB, PSC and other Project functionaries.

This order issues with the concurrence of the Finance Dept. vide its approval dated 12-07-2011 and approval of the Hon'ble Chief Minister obtained on file No. HFW (PR) 7 WBA 2012 Bangalore.

By Order and in the name of the Governor of Karnataka,

K.N. RAMESH

Deputy Secretary to Govt. (I/c),

KHSDRP

Health and Family welfare Department

PR No. 1271

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ

ವಿಷಯ :– ಜಿಲ್ಲಾ ಆಸ್ಪತ್ರೆ, ಗುಲ್ಬರ್ಗಾ ಈ ಆಸ್ಪತ್ರೆಯನ್ನು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಆಡಳಿತ ವ್ಯಾಪ್ತಿಗೆ ವರ್ಗಾಯಿಸುವ ಬಗ್ಗೆ.

ಪ್ರಸ್ತಾವನೆ:–

ಜಿಲ್ಲಾ ಆಸ್ಪತ್ರೆ, ಗುಲ್ಬರ್ಗಾ ಈ ಆಸ್ಪತ್ರೆಯು ಪ್ರಸ್ತುತ ವೈದ್ಯಕೀಯ ಶಿಕ್ಷಣ ಇಲಾಖೆಯ ಆಡಳಿತ ವ್ಯಾಪ್ತಿಯಲ್ಲಿದ್ದು, ಇದು ದ್ವಿತೀಯ ಹಂತದ ಆರೋಗ್ಯ ಸೇವೆಯನ್ನು ನೀಡುತ್ತಿರುವ ಆಸ್ಪತ್ರೆಯಾಗಿರುವುದರಿಂದ. ಈ ಆಸ್ಪತ್ರೆಯ ನಿರ್ವಹಣೆಯನ್ನು ಆಡಳಿತಾತ್ಮಕ ಹಾಗೂ ಸಾರ್ವಜನಿಕ

ಹಿತದೃಷ್ಟಿಯಿಂದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಧಿಕಾರದ ವ್ಯಾಪ್ತಿಗೊಳಪಡಿಸುವುದು ಸೂಕ್ತವೆಂದು ಸರ್ಕಾರವು ಮನಗಂಡು ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ಆಕುಕ 337 ಎಂಎಸ್ಎಫ್ 2011, ಬೆಂಗಳೂರು, ದಿನಾಂಕ: 30-04-2012

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಮೇರೆಗೆ, ಸರ್ಕಾರವು ಜಿಲ್ಲಾ ಆಸ್ಪತ್ರೆ, ಗುಲ್ಬರ್ಗಾ ಈ ಆಸ್ಪತ್ರೆಯನ್ನು ತತ್‌ಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಆಡಳಿತಾತ್ಮಕ ಹಾಗೂ ಸಾರ್ವಜನಿಕ ಹಿತದೃಷ್ಟಿಯಿಂದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಆಡಳಿತ ವ್ಯಾಪ್ತಿಗೆ ವರ್ಗಾಯಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ
ಪಿ. ಸಾಯಿಬಾಬಾ
ಸರ್ಕಾರದ ಅಧೀನ ಕಾರ್ಯದರ್ಶಿ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
(ವೈದ್ಯಕೀಯ ಶಿಕ್ಷಣ)

ಪಿ.ಆರ್. ನಂ. 1318

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸಚಿವಾಲಯ

ವಿಷಯ :- ಮಾನ್ಯ ಮುಖ್ಯಮಂತ್ರಿಗಳ ಸಚಿವಾಲಯದಲ್ಲಿ ಗುತ್ತಿಗೆ ಆಧಾರದ ಮೇರೆಗೆ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ/ಸಿಬ್ಬಂದಿ ವರ್ಗದವರಿಗೆ ಗೌರವ ಧನವನ್ನು ಮಂಜೂರು ಮಾಡುವ ಬಗ್ಗೆ.

ಓದಲಾಗಿದೆ :- 1) ಸರ್ಕಾರದ ಆದೇಶ ಸಂಖ್ಯೆ : ಸಿಆಸುಇ 69 ಸಅಸೇ 2009, ದಿನಾಂಕ : 21-06-2010.

2) ಮಾನ್ಯ ಮುಖ್ಯಮಂತ್ರಿಯವರ ಕಾರ್ಯದರ್ಶಿಯವರ ಟಿಪ್ಪಣಿ ಸಂಖ್ಯೆ : ಮುಮಕಾ 490/136:2011, ದಿನಾಂಕ : 03-02-2011 ಮತ್ತು 18-08-2011.

ಪ್ರಸ್ತಾವನೆ:-

ಮೇಲೆ ಓದಲಾದ (1)ರ ಆದೇಶದಲ್ಲಿ ಮಾನ್ಯ ಮುಖ್ಯಮಂತ್ರಿಗಳ ಸಚಿವಾಲಯದಲ್ಲಿ ಗುತ್ತಿಗೆ ಆಧಾರದ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿ/ನೌಕರರಿಗೆ ವಿಧಾನ ಮಂಡಲದ ಅಧಿವೇಶನ ನಡೆಯುವ ಸಮಯದಲ್ಲಿ ದಿನವೊಂದಕ್ಕೆ ರೂ. 125/-ಗಳ ಗೌರವಧನವನ್ನು ದಿನಾಂಕ : 4-6-2008 ರಿಂದ ಜಾರಿಗೆ ಬರುವಂತೆ ಹಾಗೂ ವಿಶೇಷ ಪ್ರಕರಣವೆಂದು ಪರಿಗಣಿಸಿ, ಮತ್ತು ಇದನ್ನು ಯಾವುದೇ ಕಾರಣಕ್ಕೂ ಪೂರ್ವ ನಿದರ್ಶನವೆಂದು ಪರಿಗಣಿಸತಕ್ಕದ್ದಲ್ಲ ಎಂಬ ಷರತ್ತಿನೊಂದಿಗೆ ಮಂಜೂರಾತಿ ನೀಡಲಾಗಿದೆ.

ಮೇಲೆ ಓದಲಾದ (2)ರ ಟಿಪ್ಪಣಿಯಲ್ಲಿ ಮಾನ್ಯ ಮುಖ್ಯಮಂತ್ರಿಯವರ ಸಚಿವಾಲಯದಲ್ಲಿ ಗುತ್ತಿಗೆ ಆಧಾರದ ಮೇಲೆ ವಿವಿಧ ವೃಂದದ ಹುದ್ದೆಗಳಲ್ಲಿ ಗ್ರೂಪ್-ಬಿ, ಸಿ ಮತ್ತು ಡಿ ವೃಂದದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ ವಿಧಾನ ಮಂಡಲದ ಅಧಿವೇಶನದ ಸಮಯದಲ್ಲಿ ಪ್ರತಿ ದಿವಸಕ್ಕೆ ರೂ. 125/- ಗಳ ಗೌರವ ಧನವನ್ನು ಪಾವತಿ ಮಾಡಲಾಗುತ್ತಿದೆ. ಖಾಯಂ ನೌಕರರುಗಳಿಗೆ ರೂ. 500/-ಗಳ ಗೌರವ ಧನವನ್ನು ಪಾವತಿ ಮಾಡಲಾಗುತ್ತಿದ್ದು, ಖಾಯಂ ನೌಕರರಿಗೆ ಪಾವತಿಸಿದಂತೆ ಗುತ್ತಿಗೆ ನೌಕರರುಗಳಿಗೂ ಸಹ ಅಧಿವೇಶನದ ಸಮಯದಲ್ಲಿ ಪ್ರತಿ ದಿವಸ ರೂ. 500/-ಗಳ ಗೌರವಧನವನ್ನು ಮಂಜೂರು ಮಾಡುವಂತೆ ಮಾನ್ಯ ಮುಖ್ಯಮಂತ್ರಿಯವರ ಕಾರ್ಯದರ್ಶಿಯವರು ಕೋರಿರುತ್ತಾರೆ.

ಅದರಂತೆ, ಸರ್ಕಾರವು ಈ ಕೆಳಕಂಡಂತೆ ಆದೇಶವನ್ನು ಹೊರಡಿಸಲಾಗಿದೆ.

ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 132 ಸಅಸೇ 2011, ಬೆಂಗಳೂರು, ದಿನಾಂಕ: 07-05-2012.

ಪ್ರಸ್ತಾವನೆಯಲ್ಲಿ ತಿಳಿಸಿರುವ ವಿವರಗಳ ಹಿನ್ನೆಲೆಯಲ್ಲಿ ಮಾನ್ಯ ಮುಖ್ಯಮಂತ್ರಿಗಳ ಸಚಿವಾಲಯದಲ್ಲಿ ಗುತ್ತಿಗೆ ಆಧಾರದ ಮೇಲೆ ವಿವಿಧ ವೃಂದದ ಹುದ್ದೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿ/ನೌಕರರುಗಳಿಗೆ ಕರ್ನಾಟಕ ವಿಧಾನ ಮಂಡಲದ ಅಧಿವೇಶನ ನಡೆಯುವ ಅವಧಿಗೆ ಮಾತ್ರ ಅನ್ವಯವಾಗುವಂತೆ ಗೌರವ ಧನವನ್ನು ದಿನಾಂಕ : 27-10-2010 ರಿಂದ ಪೂರ್ವಾನ್ವಯವಾಗಿ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ದಿನವೊಂದಕ್ಕೆ ರೂ. 250/- (ಎರಡು ನೂರ ಐವತ್ತು ರೂಪಾಯಿಗಳು ಮಾತ್ರ) ಗಳಿಗೆ ಹೆಚ್ಚಿಸಿ ಆದೇಶಿಸಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ : ಆಇ 28 ಎಸ್ಆರ್‌ಪಿ 2011, ದಿನಾಂಕ : 26-04-2012ರಲ್ಲಿ ನೀಡಿರುವ ಸಹಮತಿಯೊಂದಿಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ
ಹೆಚ್.ಕೆ. ಲಕ್ಷ್ಮೀನಾರಾಯಣರಾವ್
ಸರ್ಕಾರದ ಅಧೀನ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಸೇವೆಗಳು-3)

ಪಿ.ಆರ್. ನಂ. 1321

ಶಿಕ್ಷಣ ಸಚಿವಾಲಯ

ವಿಷಯ :- ಕರ್ನಾಟಕ ರಾಜ್ಯದಲ್ಲಿನ ಅನುದಾನಿತ ಇಂಜಿನಿಯರಿಂಗ್ ಕಾಲೇಜುಗಳಿಗೆ ಸಂಬಂಧಿಸಿದಂತೆ ಅನುದಾನ ಸಂಹಿತೆಯನ್ನು ಪರಿಷ್ಕರಿಸುವ ಬಗ್ಗೆ.

ಓದಲಾಗಿದೆ :- 1) ಸರ್ಕಾರದ ಆದೇಶ ಸಂಖ್ಯೆ : ಇಡಿ 130 ಟಿಇಸಿ 2011, ದಿನಾಂಕ: 04-01-2012.

2) ಕರ್ನಾಟಕ ರಾಜ್ಯದಲ್ಲಿನ ಖಾಸಗಿ ಅನುದಾನಿತ ಇಂಜಿನಿಯರಿಂಗ್ ಕಾಲೇಜುಗಳ ಆಡಳಿತ ಮಂಡಳಿಗಳ ಸಂಘ, ಬೆಂಗಳೂರು ಇವರ ಮನವಿ ದಿನಾಂಕ : 12-01-2012.

ಪ್ರಸ್ತಾವನೆ:-

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಆದೇಶದಲ್ಲಿ ಕರ್ನಾಟಕ ರಾಜ್ಯದಲ್ಲಿನ 10 ಖಾಸಗಿ ಅನುದಾನಿತ ಇಂಜಿನಿಯರಿಂಗ್ ಕಾಲೇಜುಗಳಲ್ಲಿನ ಅನುದಾನಿತ ಕೋರ್ಸುಗಳಿಗೆ ಕೆಲವು ಷರತ್ತುಗಳಿಗೆ ಒಳಪಟ್ಟು ಆಡಳಿತ ಮಂಡಳಿಯವರು ಪಡೆಯುತ್ತಿರುವ ಶೇ 100 ರಷ್ಟು ಬೋಧನಾ ಶುಲ್ಕವನ್ನು ಆಡಳಿತ ಮಂಡಳಿಯೇ ಉಳಿಸಿಕೊಳ್ಳಲು ಸರ್ಕಾರವು ಅನುಮತಿ ನೀಡಿ ಈ ಆದೇಶವು ದಿನಾಂಕ : 01-04-2012 ರಿಂದ ಮುಂದಿನ ಆದೇಶದವರೆಗೆ ಜಾರಿಗೆ ಬರುತ್ತದೆ ಎಂದು ತಿಳಿಸಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (2)ರಲ್ಲಿನ ಮನವಿಯಲ್ಲಿ ರಾಜ್ಯ ಸರ್ಕಾರವು ಸರ್ಕಾರಿ/ಅನುದಾನಿತ ಇಂಜಿನಿಯರಿಂಗ್ ಕಾಲೇಜುಗಳಲ್ಲಿನ ಬೋಧಕ ಸಿಬ್ಬಂದಿ ವರ್ಗದವರಿಗೆ ಪರಿಷ್ಕೃತ ಎಐಸಿಟಿಇ ವೇತನ ಶ್ರೇಣಿಗಳನ್ನು ದಿನಾಂಕ : 01-04-2011 ರಿಂದ ಜಾರಿಗೊಳಿಸಿರುವುದರಿಂದ 2011-12ನೇ ಸಾಲಿನಲ್ಲಿ ಸಿಬ್ಬಂದಿ ವರ್ಗದವರ ವೇತನ ಪಾವತಿಗೆ ಆಡಳಿತ ಮಂಡಳಿಯ ವತಿಯಿಂದ ಶೇ. 15ರಷ್ಟು ವೇತನವನ್ನು ಮತ್ತು ಇನ್ನಿತರೆ ರೆಕರಿಂಗ್ ವೆಚ್ಚಗಳನ್ನು ಭರಿಸಲು ಆಡಳಿತ ಮಂಡಳಿಯವರಿಂದ ಸಾಧ್ಯವಾಗುವುದಿಲ್ಲವೆಂದೂ, ಆದುದರಿಂದ ಈಗಾಗಲೇ ದಿನಾಂಕ : 01-01-2012 ರಂದು ಹೊರಡಿಸಿರುವ ಆದೇಶವನ್ನು ಪರಿಷ್ಕರಿಸಿ ದಿನಾಂಕ : 01-04-2011 ರಿಂದಲೇ ಜಾರಿಗೆ ಬರುವಂತೆ ಶೇ. 100 ರಷ್ಟು ಬೋಧನಾ ಶುಲ್ಕವನ್ನು ಆಡಳಿತ ಮಂಡಳಿಗಳೇ ಉಳಿಸಿಕೊಳ್ಳಲು ಅನುಮತಿ ನೀಡುವಂತೆ ಸರ್ಕಾರಕ್ಕೆ ಬೇಡಿಕೆಯನ್ನು ಸಲ್ಲಿಸಿರುತ್ತದೆ. ಈ ಬೇಡಿಕೆಯನ್ನು ಪರಿಶೀಲಿಸಿದ ಸರ್ಕಾರವು ಈ ಕೆಳಗಿನಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ಇಡಿ 130 ಟಿಇಸಿ 2011, ಬೆಂಗಳೂರು, ದಿನಾಂಕ: 21.04.2012.

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ ಸರ್ಕಾರದ ಆದೇಶ ಸಂಖ್ಯೆ ಇಡಿ 130 ಟಿಇಸಿ 2011, ದಿನಾಂಕ : 04-01-2012 ರಲ್ಲಿ ಕರ್ನಾಟಕ ರಾಜ್ಯದಲ್ಲಿನ 10 ಖಾಸಗಿ ಅನುದಾನಿತ ಇಂಜಿನಿಯರಿಂಗ್ ಕಾಲೇಜುಗಳಲ್ಲಿನ ಅನುದಾನಿತ ಕೋರ್ಸುಗಳಿಗೆ ಆಡಳಿತ ಮಂಡಳಿಯವರು ಪಡೆಯುತ್ತಿರುವ ಶೇ. 100ರಷ್ಟು ಬೋಧನಾ ಶುಲ್ಕವನ್ನು ಆಡಳಿತ ಮಂಡಳಿಯೇ ಉಳಿಸಿಕೊಳ್ಳಲು ಅನುಮತಿ ನೀಡಿ ಈ ಆದೇಶವು ದಿನಾಂಕ : 01-04-2012 ರಿಂದ ಜಾರಿಗೆ ಬರುವಂತೆ ಎಂದು ನಮೂದಿಸಿರುವುದನ್ನು ಮಾರ್ಪಡಿಸಿ ಸದರಿ ಆದೇಶವು ದಿನಾಂಕ : 01-04-2011 ರಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಜಾರಿಯಲ್ಲಿರತಕ್ಕದ್ದು ಎಂದು ಆದೇಶಿಸಿದೆ ಹಾಗೂ ದಿನಾಂಕ : 04-01-2012ರ ಆದೇಶದಲ್ಲಿನ ಕ್ರಮ ಸಂಖ್ಯೆ (2) ರಿಂದ (5) ರಲ್ಲಿನ ಷರತ್ತುಗಳು ಯಥಾವತ್ತಾಗಿ ಅನ್ವಯಿಸುತ್ತವೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಬಿ.ಎನ್. ಜಗದೀಶ್

ಸರ್ಕಾರದ ಅಧೀನ ಕಾರ್ಯದರ್ಶಿ,

ಪಿ.ಆರ್. ನಂ. 1320 ಶಿಕ್ಷಣ ಇಲಾಖೆ (ತಾಂತ್ರಿಕ ಶಿಕ್ಷಣ)

ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವಾಲಯ

ವಿಷಯ :- ಹೈದ್ರಾಬಾದ್ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಗೆ 2012-2013ನೇ ಸಾಲಿನ ಅನುದಾನ ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ :- ಪತ್ರ ಸಂಖ್ಯೆ : ಹೈಕಪ್ರಮಂ/ಹನಿ/ಲೆಕ್ಕ-1/2012-13/46, ದಿನಾಂಕ : 17-04-2012.

ಪ್ರಸ್ತಾವನೆ:-

2012-13ನೇ ಸಾಲಿನಲ್ಲಿ ಹೈದ್ರಾಬಾದ್ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಗೆ ಲೆಕ್ಕಶೀರ್ಷಿಕೆ "2515-00-103-0-01-101 ಅಡಿಯಲ್ಲಿ ರೂ. 130.00 ಲಕ್ಷಗಳನ್ನು ಹಾಗೂ 4515-0-800-0-01-132 ಅಡಿಯಲ್ಲಿ ರೂ. 4319.28 ಲಕ್ಷಗಳಂತೆ, ಲೆಕ್ಕಶೀರ್ಷಿಕೆ 4515-00-800-0-01-422 ಅಡಿಯಲ್ಲಿ ರೂ. 1450.00 ಲಕ್ಷಗಳಂತೆ ಹಾಗೂ ಲೆಕ್ಕಶೀರ್ಷಿಕೆ 4515-00-800-0-01-423 ಅಡಿಯಲ್ಲಿ ರೂ. 400.72 ಲಕ್ಷಗಳಂತೆ ಒಟ್ಟು ರೂ. 6300.00 ಲಕ್ಷಗಳನ್ನು ಒದಗಿಸಲಾಗಿದೆ. ಉಲ್ಲೇಖದಲ್ಲಿನ ಪತ್ರದಲ್ಲಿ ಕಾರ್ಯದರ್ಶಿ ಹೈದ್ರಾಬಾದ್ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ ಇವರು ಅನುದಾನ ಬಿಡುಗಡೆ ಮಾಡಲು ಕೋರಿರುವ ಹಿನ್ನೆಲೆಯಲ್ಲಿ ಮಂಡಳಿಗೆ ರೂ. 1575.00 ಲಕ್ಷಗಳ ಅನುದಾನ ಬಿಡುಗಡೆ ಮಾಡಲು ಉದ್ದೇಶಿಸಲಾಗಿದೆ. ಆದುದರಿಂದ ಈ ಆದೇಶ.

ಸರ್ಕಾರಿ ಆದೇಶ ಸಂಖ್ಯೆ: ಯೋಇ 07 ಹೈಕಮಂ 2012, ಬೆಂಗಳೂರು, ದಿನಾಂಕ: 28.04.2012.

2012–13ನೇ ಸಾಲಿನಲ್ಲಿ ಹೈದ್ರಾಬಾದ್ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಗೆ ಆಡಳಿತ ವೆಚ್ಚಗಳಿಗಾಗಿ ಲೆಕ್ಕಶೀರ್ಷಿಕೆ "2515–00–800–0–01–101 (ಸಹಾಯಾನುದಾನ)" ಅಡಿಯಲ್ಲಿ ರೂ. 32.50 ಲಕ್ಷಗಳನ್ನು (ಮುವತ್ತೆರಡು ಲಕ್ಷ ಐವತ್ತು ಸಾವಿರ ಮಾತ್ರ) ಬಂಡವಾಳ ವೆಚ್ಚಗಳಿಗಾಗಿ ಲೆಕ್ಕಶೀರ್ಷಿಕೆ 4515–00–800–0–01–132 ಅಡಿ ರೂ. 1079.82 ಲಕ್ಷಗಳನ್ನು (ಹತ್ತು ಕೋಟಿ ಎಪ್ಪತ್ತೊಂಭತ್ತು ಲಕ್ಷ ಎಂಭತ್ತೆರಡು ಸಾವಿರಗಳು ಮಾತ್ರ) ವಿಶೇಷ ಘಟಕ ಯೋಜನೆಯಡಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಲೆಕ್ಕಶೀರ್ಷಿಕೆ 4515–00–800–0–01–422 ಅಡಿಯಲ್ಲಿ ರೂ. 362.50 ಲಕ್ಷಗಳನ್ನು (ಮೂರು ಕೋಟಿ ಅರವತ್ತೆರಡು ಲಕ್ಷ ಐವತ್ತು ಸಾವಿರಗಳು ಮಾತ್ರ) ಹಾಗೂ ಗಿರಿಜನ ಉಪಯೋಜನೆಯಡಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಲೆಕ್ಕಶೀರ್ಷಿಕೆ 4515–00–800–0–01–423 ಅಡಿಯಲ್ಲಿ ರೂ. 100.18 ಲಕ್ಷಗಳು (ಒಂದು ಕೋಟಿ ಹದಿನೆಂಟು ಸಾವಿರ ರೂ.ಗಳು ಮಾತ್ರ) ಮೊದಲನೆಯ ಕಂತಾಗಿ ಬಿಡುಗಡೆ ಮಾಡಲಾಗಿದೆ.

2) ಬಿಡುಗಡೆಯಾದ ಮೊತ್ತವನ್ನು ಮಂಡಳಿಯ ವೈಯಕ್ತಿಕ ಖಾತೆಯಲ್ಲಿ ಮೊದಲು ಇಟ್ಟು ನಂತರ ಕಾರ್ಯಕ್ರಮದ ಅನುಗುಣವಾಗಿ ಖರ್ಚು ಮಾಡತಕ್ಕದ್ದು. ನಿಯಮಾನುಸಾರ ಹಣ ಬಳಕೆ ದೃಢೀಕರಣ ಪತ್ರವನ್ನು 2012–13ರ ಸಾಲಿನಲ್ಲಿ ಮಂಡಳಿಯ ಕಾರ್ಯದರ್ಶಿಯವರು ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಹಿಂಬರಹ ಸಂಖ್ಯೆ : ಆಇ 537 Exp–6/2011, ದಿನಾಂಕ : 29–02–2012ರ ಸಹಮತಿಯೊಂದಿಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಎಸ್. ಉಮಾಪತಿ

ಸರ್ಕಾರದ ಅಧೀನ ಕಾರ್ಯದರ್ಶಿ 1 ಮತ್ತು 2,

ಪಿ.ಆರ್. ನಂ. 1322 ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ.

ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವಾಲಯ

ತಿದ್ದುಪಡಿ

ಸಂಖ್ಯೆ : ಯೋಇ 07/ಹೈಕಮಂ 2012, ಬೆಂಗಳೂರು, ದಿನಾಂಕ : 04–05–2012

ಸರ್ಕಾರದ ಆದೇಶ ಸಂಖ್ಯೆ : ಯೋಇ 07 ಹೈಕಮಂ 2012, ದಿನಾಂಕ : 28–04–2012 ರಲ್ಲಿ ಲೆಕ್ಕಶೀರ್ಷಿಕೆ 2515–00–800–0–01–101 ಎಂದು ತಪ್ಪಾಗಿ ಬೆರಳಚ್ಚಿಸಲಾಗಿ ಇದರ ಬದಲಾಗಿ ಲೆಕ್ಕಶೀರ್ಷಿಕೆ 2515–00–103–0–01–101 ಎಂದು ತಿದ್ದಿ ಓದಿಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಎಸ್. ಉಮಾಪತಿ

ಸರ್ಕಾರದ ಅಧೀನ ಕಾರ್ಯದರ್ಶಿ 1 ಮತ್ತು 2,

ಪಿ.ಆರ್. ನಂ. 1323 ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ.

ಅಲ್ಪಸಂಖ್ಯಾತರ ಕಲ್ಯಾಣ, ಹಜ್ ಮತ್ತು ವಕ್ಫ್ ಸಚಿವಾಲಯ

ವಿಷಯ :– 2012–13ನೇ ಸಾಲಿನ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮಕ್ಕೆ ಒದಗಿಸಿದ ಆಯವ್ಯಯದಲ್ಲಿ ಮೊದಲನೇ ಕಂತಾಗಿ ಶೇ. 25 ರಷ್ಟು ಅನುದಾನವನ್ನು ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ :– 1) ಸರ್ಕಾರದ ಆದೇಶ ಸಂಖ್ಯೆ : ಅಸಂಕಿ 200, ಎಂಡಿಎಸ್ 2012, ದಿನಾಂಕ: 11–04–2012.

2) ವ್ಯವಸ್ಥಾಪಕ ನಿರ್ದೇಶಕರು, ಕೆಎಂಡಿಸಿ ಇವರ ಪತ್ರ ಸಂಖ್ಯೆ : ಕಅನಿ/654(7)/2012–13/113, ದಿನಾಂಕ : 17–04–2012.

ಪ್ರಸ್ತಾವನೆ:–

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಆದೇಶದಲ್ಲಿ ಅಲ್ಪಸಂಖ್ಯಾತರ ಕಲ್ಯಾಣ ಹಜ್ ಮತ್ತು ವಕ್ಫ್ ಇಲಾಖೆಯ ಪ್ರಸ್ತುತ ಯೋಜನಾ ಕಾರ್ಯಕ್ರಮಗಳನ್ನು 2012–13ನೇ ಆರ್ಥಿಕ ಸಾಲಿನಲ್ಲಿ ಮುಂದುವರಿಸಲಾಗಿದೆ.

ಮೇಲೆ ಕ್ರಮ ಸಂಖ್ಯೆ (2)ರಲ್ಲಿ ವ್ಯವಸ್ಥಾಪಕರು, ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ ನಿಯಮಿತ ಇವರು ಪ್ರಸ್ತಾವನೆಯನ್ನು ಸಲ್ಲಿಸಿ, ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮಕ್ಕೆ ವಿವಿಧ ಕಾರ್ಯಕ್ರಮಗಳನ್ನು 2012–13ನೇ ಸಾಲಿನಲ್ಲಿ ಅನುಷ್ಠಾನಗೊಳಿಸಲು ಆಯವ್ಯಯದಲ್ಲಿ ಒದಗಿಸಲಾದ ಅನುದಾನ ರೂ. 10000.00 (ರೂ. ಹತ್ತು ಸಾವಿರ ಲಕ್ಷಗಳು) ಲಕ್ಷಗಳ ಪೈಕಿ ಮೊದಲನೇ ಕಂತಾಗಿ ರೂ. 2500.00 ಲಕ್ಷಗಳ ಅನುದಾನ ಬಿಡುಗಡೆ ಮಾಡುವಂತೆ ಕೋರಿ ಪ್ರಸ್ತಾವನೆಯನ್ನು ಕಳುಹಿಸಿರುತ್ತಾರೆ. ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಕಂಡಂತೆ ಆದೇಶ.

ಸರ್ಕಾರಿ ಆದೇಶ ಸಂಖ್ಯೆ: ಅಸಂಕಇ 17, ಎಂಡಿಸಿ 2012, ಬೆಂಗಳೂರು, ದಿನಾಂಕ: 05.05.2012.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳನ್ನು ಪರಿಶೀಲಿಸಿ, 2011-13ನೇ ಸಾಲಿನಲ್ಲಿ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮಕ್ಕೆ ಈ ಕೆಳಕಂಡ 1275.00 ಲಕ್ಷಗಳ ಮೊದಲನೇ ಕಂತಿನ ಅನುದಾನ ಬಿಡುಗಡೆಗೊಳಿಸಿ ಆದೇಶಿಸಲಾಗಿದೆ.

ಕ್ರ.ಸಂ.	ಕಾರ್ಯಕ್ರಮಗಳ ವಿವರ ಮತ್ತು ಲೆಕ್ಕಶೀರ್ಷಿಕೆ	2012-13ನೇ ಸಾಲಿನ ಆಯವ್ಯಯ ಅನುದಾನ	ಶೇ.25ರಷ್ಟು ಬಿಡುಗಡೆ ಮಾಡಲಾದ ಅನುದಾನದ ಮೊದಲೇ ಕಂತು
1	ಸಹಾಯಧನ 2225-03-800-0-04-106	200.00	50.00
2	ನಗರ ಕಲ್ಯಾಣ ಯೋಜನೆ 2225-03-800-0-04-059	1900.00	475.00
ಈ ಹಿನ್ನಲೆಯಲ್ಲಿ ಅಧಿಸೂಚನೆಗೆ ಸಂಬಂಧಿಸಿದಂತೆ ವಾಣಿಜ್ಯ ತೆರಿಗೆಗಳ ಆಯುಕ್ತರವರ ಕಚೇರಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ವಾಣಿಜ್ಯ ತೆರಿಗೆ ಅಪರ ಆಯುಕ್ತರು/ವಾಣಿಜ್ಯ ತೆರಿಗೆ ಜಂಟಿ ಆಯುಕ್ತರುಗಳನ್ನು ಶಾಖಾನುಸಾರ ಹಾಗೂ ಕರ್ತವ್ಯಗಳಿಗನುಗುಣವಾಗಿ ಮೇಲ್ಮನವಿ ಪ್ರಾಧಿಕಾರವನ್ನು ಹಾಗೂ ವಾಣಿಜ್ಯ ತೆರಿಗೆ ಆಯುಕ್ತರ ಹಾಗೂ ವಾಣಿಜ್ಯ ತೆರಿಗೆ ಅಪರ ಆಯುಕ್ತರುಗಳ ಆಪ್ತಶಾಖೆಗಳಿಗೆ ಸಂಬಂಧಿಸಿದಂತೆ ಕರ್ತವ್ಯ ನಿರ್ವಹಿಸಲು ಸಾರ್ವಜನಿಕ ಮಾಹಿತಿ ಅಧಿಕಾರಿಯನ್ನು ಮರು ನೇಮಕ ಮಾಡಿ ಈ ಅಧಿಸೂಚನೆಗೆ ಲಗತ್ತಿಸಿದ ಅನುಬಂಧದಂತೆ ಮೇಲ್ಮನವಿ ಪ್ರಾಧಿಕಾರ ಹಾಗೂ ಸಾರ್ವಜನಿಕ ಮಾಹಿತಿ ಅಧಿಕಾರಿ ಎಂದು ಮಾರ್ಪಡಿಸಲಾಗಿದೆ. ಈ ಆದೇಶವು ದಿನಾಂಕ : 26–03–2012 ರಿಂದ ಜಾರಿಗೆ ಬಂದಿದ್ದು ಮುಂದಿನ ಆದೇಶದ ತನಕ ಜಾರಿಯಲ್ಲಿರುತ್ತದೆ.

1. ಮಾಹಿತಿ ಹಕ್ಕು ಅಧಿನಿಯಮ 2005 (2005 ರ ಕೇಂದ್ರ ಕಾಯ್ದೆ ಸಂಖ್ಯೆ 22) ಅಡಿ ಈ ಕೆಳಗಿನಂತೆ ವಾಣಿಜ್ಯ ತೆರಿಗೆ ಆಯುಕ್ತರ ಕಚೇರಿಗೆ ಸಂಬಂಧಿಸಿದಂತೆ ಹೊಸದಾಗಿ ಆದೇಶವನ್ನು ಹೊರಡಿಸಲಾಗಿದೆ.
2. ಮಾಹಿತಿ ಹಕ್ಕು ಅಧಿನಿಯಮ 2005 ರ ಸೆಕ್ಷನ್ 19(1)ರ ಅಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಅನುಬಂಧದಲ್ಲಿನ ಕಲಂ (4) ರಲ್ಲಿ ನಮೂದಿಸಿದ ವಾಣಿಜ್ಯ ತೆರಿಗೆ ಆಯುಕ್ತರ ಕಚೇರಿಯ ಅಧಿಕಾರಿಗಳನ್ನು ಅನುಬಂಧದಲ್ಲಿನ (3)ನೇ ಕಲಂನಲ್ಲಿ ಕಾಣಿಸಿದ

ಸಾರ್ವಜನಿಕ ಮಾಹಿತಿ ಅಧಿಕಾರಿಗಳ ಆದೇಶಗಳ ಮೇಲೆ ಕಾಯ್ದೆಯಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಲು "ಮೇಲ್ಮನವಿ ಪ್ರಾಧಿಕಾರ" ಎಂದು ನೇಮಕ ಮಾಡಲಾಗಿದೆ.

3. ಕರ್ನಾಟಕ ಸರ್ಕಾರದ ಅಧಿಸೂಚನೆ ಸಂಖ್ಯೆ: ಆಇ 184 ಸಮಯ/2005, ದಿನಾಂಕ : 22-09-2005ರ ಪ್ರಕಾರ ಸಾರ್ವಜನಿಕ ಪ್ರಾಧಿಕಾರವೆಂದು ಪರಿಗಣಿತವಾದ ಈ ಕೆಳಗೆ ಸಹಿ ಮಾಡಿದ ಅಧಿಕಾರಿಯು ಮಾಹಿತಿ ಹಕ್ಕು ಕಾಯಿದೆ 2005, (2005ರ ಕೇಂದ್ರ ಕಾಯ್ದೆ ಸಂಖ್ಯೆ.22 ರ ಸೆಕ್ಷನ್ 5(1) ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ವಾಣಿಜ್ಯ ತೆರಿಗೆಗಳ ಆಯುಕ್ತರ ಕಚೇರಿಗೆ ಸಂಬಂಧಿಸಿದಂತೆ ಅನುಬಂಧದ ಕಲಂ (2) ರಲ್ಲಿ ಕಾಣಿಸಿದ ಶಾಖೆಯ ಕಾರ್ಯವ್ಯಾಪ್ತಿಗೆ ಅನ್ವಯಿಸುವಂತೆ ಅನುಬಂಧದ ಕಲಂ (3) ರಲ್ಲಿ ವಾಣಿಜ್ಯ ತೆರಿಗೆಗಳ ಆಯುಕ್ತರ ಕಚೇರಿಯಲ್ಲಿ ಕರ್ತವ್ಯ ನಿರ್ವಯಿಸುತ್ತಿರುವ ಆಪ್ತ ಶಾಖೆಗಳಿಗೆ ಸಂಬಂಧಿಸಿದಂತೆ ಸಾರ್ವಜನಿಕ ಮಾಹಿತಿ ಅಧಿಕಾರಿಯನ್ನಾಗಿ ನೇಮಕ ಮಾಡಲಾಗಿದೆ.

ಪ್ರದೀಪ್ ಸಿಂಗ್ ಖರೋಲ,
ವಾಣಿಜ್ಯ ತೆರಿಗೆಗಳ ಆಯುಕ್ತರು,
(ಕರ್ನಾಟಕ), ಬೆಂಗಳೂರು.

ಪರಿಷ್ಕೃತ ಅನುಬಂಧ

ಕ್ರ ಸಂ	ಶಾಖೆಯ ಹೆಸರು	ಸಾರ್ವಜನಿಕ ಮಾಹಿತಿ ಅಧಿಕಾರಿ	ಮೇಲ್ಮನವಿ ಪ್ರಾಧಿಕಾರ
1.	ವಾಣಿಜ್ಯ ತೆರಿಗೆಗಳ ಆಯುಕ್ತರು ವಾ.ತೆ.ಅ.ಆ. a) (ಕೇಂದ್ರ ಕಚೇರಿ)-1 b) (ಕೇಂದ್ರ ಕಚೇರಿ)-2 c) ಕಾನೂನು ಕಾರ್ಯನೀತಿ d) ಗುಪ್ತವಾರ್ತೆ & ಸಮನ್ವಯ e) ಜಾಗೃತಿ f) ಕಾನೂನು ವ್ಯವಹಾರಗಳು g) ಸರಕು ಮತ್ತು ಸೇವಾ ತೆರಿಗೆ – ಆಪ್ತ ಶಾಖೆ	ವಾಣಿಜ್ಯ ತೆರಿಗೆ ಸಹಾಯಕ ಆಯುಕ್ತರು (ಮಾಹಿತಿ ಹಕ್ಕು ಕಾಯಿದೆ ಮತ್ತು ಮಾಹಿತಿ ಅಧಿಕಾರಿ)	ವಾಣಿಜ್ಯ ತೆರಿಗೆ ಅಪರ ಆಯುಕ್ತರು (ಕೇಂ.ಕ)-1 ವಾಣಿಜ್ಯ ತೆರಿಗೆ ಅಪರ ಆಯುಕ್ತರು (ಕೇಂ.ಕ)-1 ವಾಣಿಜ್ಯ ತೆರಿಗೆ ಅಪರ ಆಯುಕ್ತರು (ಕೇಂ.ಕ)-2 ವಾಣಿಜ್ಯ ತೆರಿಗೆ ಜಂಟಿ ಆಯುಕ್ತರು (ಕಾ.&ಕಾ) ವಾಣಿಜ್ಯ ತೆರಿಗೆ ಅಪರ ಆಯುಕ್ತರು (ಗು & ಸ) ವಾಣಿಜ್ಯ ತೆರಿಗೆ ಅಪರ ಆಯುಕ್ತರು (ಜಾಗೃತಿ) ವಾಣಿಜ್ಯ ತೆರಿಗೆ ಜಂಟಿ ಆಯುಕ್ತರು (ಕಾ.ವ್ಯ) ವಾಣಿಜ್ಯ ತೆರಿಗೆ ಅಪರ ಆಯುಕ್ತರು (ಸರಕು ಮತ್ತು ಸೇವಾ ತೆರಿಗೆ)
2.	ಸಿಬ್ಬಂದಿ 1. ಅಧಿಕಾರಿಗಳು 2. ಸಿ & ಡಿ ದರ್ಜೆ ನೌಕರರು	ಅಧಿಸೂಚನೆ ದಿ:12-12-2011 ರ ಆದೇಶದಂತೆ	ವಾಣಿಜ್ಯ ತೆರಿಗೆ ಅಪರ ಆಯುಕ್ತರು (ಕೇಂ.ಕ)-1 ವಾಣಿಜ್ಯ ತೆರಿಗೆ ಅಪರ ಆಯುಕ್ತರು (ಕೇಂ.ಕ)-2
3.	ಕಾನೂನು ಮತ್ತು ಕಾರ್ಯನೀತಿ	ಅಧಿಸೂಚನೆ ದಿ:12-12-2011 ರ ಆದೇಶದಂತೆ	ವಾಣಿಜ್ಯ ತೆರಿಗೆ ಜಂಟಿ ಆಯುಕ್ತರು (ಕಾನೂನು ಮತ್ತು ಕಾರ್ಯನೀತಿ)
4.	ಗುಪ್ತವಾರ್ತೆ ಮತ್ತು ಸಮನ್ವಯ	ಅಧಿಸೂಚನೆ ದಿ:12-12-2011 ರ ಆದೇಶದಂತೆ	ವಾಣಿಜ್ಯ ತೆರಿಗೆ ಅಪರ ಆಯುಕ್ತರು (ಗುಪ್ತವಾರ್ತೆ ಮತ್ತು ಸಮನ್ವಯ)
5.	ಜಾಗೃತಿ	ಅಧಿಸೂಚನೆ ದಿ:12-12-2011 ರ ಆದೇಶದಂತೆ	ವಾಣಿಜ್ಯ ತೆರಿಗೆ ಅಪರ ಆಯುಕ್ತರು (ಜಾಗೃತಿ)
6.	ಕಾನೂನು ವ್ಯವಹಾರಗಳು	ಅಧಿಸೂಚನೆ ದಿ:12-12-2011 ರ ಆದೇಶದಂತೆ	ವಾಣಿಜ್ಯ ತೆರಿಗೆ ಜಂಟಿ ಆಯುಕ್ತರು (ಕಾನೂನು ವ್ಯವಹಾರಗಳು)
7.	ಸರಕು ಮತ್ತು ಸೇವಾ ತೆರಿಗೆ	ಅಧಿಸೂಚನೆ ದಿ:12-12-2011 ರ ಆದೇಶದಂತೆ	ವಾಣಿಜ್ಯ ತೆರಿಗೆ ಅಪರ ಆಯುಕ್ತರು (ಸರಕು ಮತ್ತು ಸೇವಾ ತೆರಿಗೆ)
8.	ಮಾನವ ಸಂಪನ್ಮೂಲ ಅಭಿವೃದ್ಧಿ – ತರಬೇತಿ	ಅಧಿಸೂಚನೆ ದಿ:12-12-2011 ರ ಆದೇಶದಂತೆ	ವಾಣಿಜ್ಯ ತೆರಿಗೆ ಅಪರ ಆಯುಕ್ತರು (ಕೇಂದ್ರ ಕಚೇರಿ)-1

ಕ್ರ ಸಂ	ಶಾಖೆಯ ಹೆಸರು	ಸಾರ್ವಜನಿಕ ಮಾಹಿತಿ ಅಧಿಕಾರಿ	ಮೇಲ್ಮನವಿ ಪ್ರಾಧಿಕಾರ
9.	ಆಂತರಿಕ ಲೆಕ್ಕ ಪರಿಶೋಧನೆ ಮತ್ತು ತಪಾಸಣೆ	ಅಧಿಸೂಚನೆ ದಿ:12–12–2011 ರ ಆದೇಶದಂತೆ	ವಾಣಿಜ್ಯ ತೆರಿಗೆ ಜಂಟಿ ಆಯುಕ್ತರು (ಆಂತರಿಕ ಲೆಕ್ಕ ಪರಿಶೋಧನೆ ಮತ್ತು ತಪಾಸಣೆ)
10.	ಇ–ಆಡಳಿತ	ಅಧಿಸೂಚನೆ ದಿ:12–12–2011 ರ ಆದೇಶದಂತೆ	ವಾಣಿಜ್ಯ ತೆರಿಗೆ ಜಂಟಿ ಆಯುಕ್ತರು (ಇ–ಆಡಳಿತ)
11.	ಶಿಸ್ತು ಕ್ರಮ ಅ) ಎ & ಬಿ ಅಧಿಕಾರಿಗಳು ಆ) ಸಿ & ಡಿ ನೌಕರರು	ಅಧಿಸೂಚನೆ ದಿ:12–12–2011 ರ ಆದೇಶದಂತೆ	ವಾಣಿಜ್ಯ ತೆರಿಗೆ ಅಪರ ಆಯುಕ್ತರು (ಕೇಂ.ಕ)–1 ವಾಣಿಜ್ಯ ತೆರಿಗೆ ಅಪರ ಆಯುಕ್ತರು (ಕೇಂ.ಕ)–2
12.	ಸಂಚಾಲನೆ	ಅಧಿಸೂಚನೆ ದಿ:12–12–2011 ರ ಆದೇಶದಂತೆ	ವಾಣಿಜ್ಯ ತೆರಿಗೆ ಅಪರ ಆಯುಕ್ತರು (ಕೇಂ.ಕ)–2
13.	ವೆಚ್ಚಗಳು	ಅಧಿಸೂಚನೆ ದಿ:12–12–2011 ರ ಆದೇಶದಂತೆ	ವಾಣಿಜ್ಯ ತೆರಿಗೆ ಅಪರ ಆಯುಕ್ತರು (ಕೇಂ.ಕ)–1
14.	ಮಾಹಿತಿ ಹಕ್ಕು ಕಾಯಿದೆ – ವಸೂಲಿ, ಇತರೆ	ಅಧಿಸೂಚನೆ ದಿ:12–12–2011 ರ ಆದೇಶದಂತೆ	ವಾಣಿಜ್ಯ ತೆರಿಗೆ ಅಪರ ಆಯುಕ್ತರು (ಕೇಂ.ಕ)–1
15.	ಸಾಂಖ್ಯಿಕ ಶಾಖೆ ಲೆಕ್ಕಾಧಿಕಾರಿಗಳು ಉಪ ನಿರ್ದೇಶಕರು(ಸಾಂಖ್ಯಿಕ)	ಅಧಿಸೂಚನೆ ದಿ:12–12–2011 ರ ಆದೇಶದಂತೆ	ವಾಣಿಜ್ಯ ತೆರಿಗೆ ಅಪರ ಆಯುಕ್ತರು (ಜಾಗೃತಿ) ಮತ್ತು ವಾಣಿಜ್ಯ ತೆರಿಗೆ ಅಪರ ಆಯುಕ್ತರು (ಕೇಂ.ಕ)–1 – (ಕರ್ತವ್ಯಗಳಿಗನುಗುಣವಾಗಿ) ವಾಣಿಜ್ಯ ತೆರಿಗೆ ಅಪರ ಆಯುಕ್ತರು (ಕೇಂ.ಕ)–1

ವಾಣಿಜ್ಯ ತೆರಿಗೆಗಳ ಆಯುಕ್ತರು,
(ಕರ್ನಾಟಕ), ಬೆಂಗಳೂರು.

ಪಿ.ಆರ್. 470

ಅಧಿಕೃತ ಅಧಿಕಾರಿಗಳು ಹಾಗೂ ಅಬಕಾರಿ ಉಪ ಆಯುಕ್ತರು, ಕೊಡಗು ಜಿಲ್ಲೆ, ಮಡಿಕೇರಿ ಇವರ ನ್ಯಾಯಾಲಯದಲ್ಲಿ.

ಸಂ:ಇಎಕ್ಸ್ಇ:ಸಿಆರ್ಎಂ:30:2000–01, ದಿ:27–2–2012

ಉಪಸ್ಥಿತರು: **ಹೆಚ್.ಎನ್.ಆನಂದ್**, ಅಧಿಕೃತ ಅಧಿಕಾರಿಗಳು ಹಾಗೂ ಅಬಕಾರಿ ಉಪ ಆಯುಕ್ತರು, ಕೊಡಗು ಜಿಲ್ಲೆ, ಮಡಿಕೇರಿ.

ಫಿರ್ಯಾದುದಾರರು
ಆರಕ್ಷಕ ಉಪ ನಿರೀಕ್ಷಕರು,
ಶ್ರೀಮಂಗಲ ಠಾಣೆ.

ವಿರುದ್ಧ

ಆರೋಪಿ
1) ಯು.ಟಿ.ವೇಣು ಬಿನ್ ತಮ್ಮಯ್ಯ, ಗೋಣಿಕೊಪ್ಪ
2) ಚಾರಿಮಂಡ ದೇವಯ್ಯ ಬಿನ್ ಬಿದ್ದಪ್ಪ ನಾಲೂರು ಗ್ರಾಮ, ಬಾಳೆಲೆ

ಪ್ರಕರಣದ ಮುಖ್ಯಾಂಶಗಳು:–

ದಿ:9–9–2000ರಂದು ಸಂಜೆ ಸುಮಾರು 5.00ಗಂಟೆಗೆ ವಿರಾಜಪೇಟೆ ತಾಲ್ಲೂಕು ಕುಮಟೂರು ಎಂಬಲ್ಲಿ ಜೀಪ್ ಸಂ:ಕೆಎ–12–ಎಂ–572ರಲ್ಲಿ ಆರು ಪ್ಲಾಸ್ಟಿಕ್ ಚೀಲ ಹಾಗೂ 2 ಅಂದಾಜು 35ಲೀ. ಅಳತೆಯ ಪ್ಲಾಸ್ಟಿಕ್ ಕ್ಯಾನುಗಳಲ್ಲಿ ಸಾರಾಯಿ ಪ್ಯಾಕೇಟುಗಳು ಹಾಗೂ ಮದ್ಯಸಾರವನ್ನು ಯು.ಟಿ.ವೇಣು ಹಾಗೂ ಚಾರಿಮಂಡ ದೇವಯ್ಯ ಎಂಬುವವರು ಅಕ್ರಮವಾಗಿ ಸಾಗಾಣಿಕೆ ಮಾಡುತ್ತಿದ್ದಾರೆ ಎಂಬುದಾಗಿ 2000–01ನೇ ಸಾಲಿನ ವಿರಾಜಪೇಟೆ ತಾಲ್ಲೂಕಿನ ಸಾರಾಯಿ ಗುತ್ತಿಗೆದಾರ ನೌಕರ ಕೆ.ಆರ್.ಸಂಪತ್ ರವರು ಶ್ರೀಮಂಗಲ ಠಾಣೆಯ ಆರಕ್ಷಕ ಉಪ ನಿರೀಕ್ಷಕರಿಗೆ ನೀಡಿದ ದೂರಿನ ಅನ್ವಯ ಸದರಿಯವರು ಜೀಪನ್ನು ಪರಿಶೀಲಿಸಿದಾಗ ಪ್ಲಾಸ್ಟಿಕ್ ಚೀಲಗಳಲ್ಲಿದ್ದ ಸಾರಾಯಿ ಪ್ಯಾಕೇಟುಗಳನ್ನು ಎಣಿಸಿ ನೋಡಿದಾಗ ಒಟ್ಟು 1804*100ಮಿಲಿಯ ಸಾರಾಯಿ ಪ್ಯಾಕೇಟುಗಳು ಹಾಗೂ 35ಲೀ. ಸಾಮರ್ಥ್ಯದ ಎರಡು ಪ್ಲಾಸ್ಟಿಕ್ ಕ್ಯಾನುಗಳಲ್ಲಿ ಒಟ್ಟು 60ಲೀ. ಮದ್ಯಸಾರವಿರುವುದನ್ನು ತಮ್ಮ ಸ್ವಾಧೀನಕ್ಕೆ ತೆಗೆದುಕೊಂಡು ಮೇಲ್ಕಂಡಂತೆ 1ನೇ ಆರೋಪಿ ಯು.ಟಿ.ವೇಣು ಬಿನ್ ತಮ್ಮಯ್ಯ, ಗೋಣಿಕೊಪ್ಪ ಹಾಗೂ 2ನೇ ಆರೋಪಿ ಚಾರಿಮಂಡ ದೇವಯ್ಯ ಬಿನ್ ಬಿದ್ದಪ್ಪ, ನಾಲೂರು ಗ್ರಾಮ, ಬಾಳೆಲೆ ಇವರುಗಳ ಮೇಲೆ ಕರ್ನಾಟಕ ರಾಜ್ಯ ಅಬಕಾರಿ ಕಾಯ್ದೆ 1965ರ ಕಲಂ 34, 43ರ ಪ್ರಕಾರ

ಮೊಕದ್ದಮೆ ಸಂ:76/2000-01, ದಿ:9-9-2000ರಂತೆ ಪ್ರಕರಣ ದಾಖಲು ಮಾಡಿರುತ್ತಾರೆ ಹಾಗೂ ಸದರಿ ಪ್ರಕರಣದಲ್ಲಿನ ಸ್ವೊತ್ತುಗಳು ಮತ್ತು ಕಡತವನ್ನು ಪೊನ್ನಂಪೇಟೆ ಉಪ ವಲಯ ಅಬಕಾರಿ ಉಪ ನಿರೀಕ್ಷಕರಿಗೆ ಹಸ್ತಾಂತರಿಸಿರುತ್ತಾರೆ.

ದಿ:11-9-2000ರಂದು ವಾಹನದ ಮಾಲೀಕರ ಪರವಾಗಿ ವಕೀಲರು ವಕಾಲತ್‌ನೊಂದಿಗೆ ಅರ್ಜಿಯನ್ನು ಸಲ್ಲಿಸಿ ಶ್ರೀ ಕೆ.ಟಿ.ವೆಂಕಟೇಶ್ ಇವರು ವಾಹನ ಜೀಪ್ ಸಂ:ಕೆಎ-12-ಎಂ-572ರ ಅಧಿಕೃತ ಮಾಲೀಕರಾಗಿದ್ದು, ಸದರಿ ಜೀಪನ್ನು ಬಾಡಿಗೆಗೆ ಒದಗಿಸಲಾಗುತ್ತಿದ್ದು, ದಿ:9-9-2000ರಂದು ಸದರಿ ಜೀಪನ್ನು ಕುಟ್ಟ ಕಡೆಯಿಂದ ಗೋಣಿಕೊಪ್ಪ ಕಡೆಗೆ ಬರುತ್ತಿದ್ದಾಗ ವಿರಾಜಪೇಟೆ ತಾಲ್ಲೂಕು ಸಾರಾಯಿ ಗುತ್ತಿಗೆದಾರರ ಕಡೆಯ ಕೆಲವರು ಕುಮಟೂರು ಗ್ರಾಮದ ಹೇರ್ಮಾಡು ಎಂಬಲ್ಲಿ ಸದರಿ ಜೀಪನ್ನು ತಡೆದು ನಿಲ್ಲಿಸಿ ನಂತರ ಬಲತ್ಕಾರವಾಗಿ ಪ್ಲಾಸ್ಟಿಕ್ ಚೀಲಗಳಲ್ಲಿ ಸಾರಾಯಿ ಪ್ಯಾಕೇಟುಗಳನ್ನು ತುಂಬಿಸಿ ಜೀಪಿನಲ್ಲಿರಿಸಿ ಶ್ರೀಮಂಗಲ ಆರಕ್ಷಕ ಠಾಣೆಯ ಉಪ ನಿರೀಕ್ಷಕರಿಂದ ಅಕ್ರಮ ಸಾರಾಯಿ ಪ್ಯಾಕೇಟುಗಳ ಸಾಗಾಣಿಕೆಯ ಮೇಲೆ ಮೊಕದ್ದಮೆ ದಾಖಲು ಮಾಡಿರುತ್ತಾರೆ. ಇದರ ಬಗ್ಗೆ ಮೇಲ್ಕಂಡ ಸಾರಾಯಿ ಗುತ್ತಿಗೆದಾರರ ಕಡೆಯ ಮೇಲೆ ಕ್ರಿಮಿನಲ್ ಮೊಕದ್ದಮೆಯನ್ನು ಹೂಡಲಾಗಿರುತ್ತದೆ. ಸದರಿ ವಾಹನವನ್ನು ಆಧಾರವಾಗಿಟ್ಟುಕೊಂಡು ಮದ್ರಾಸ್ ಫೈನಾನ್ಸ್‌ನಿಂದ ರೂ.40,000/-ಗಳ ಸಾಲ ಪಡೆಯಲಾಗಿರುತ್ತದೆ. ಸದರಿ ವಾಹನದ ಬಾಡಿಗೆಯಿಂದಲೇ ಮೇಲಿನ ಸಾಲ ಮತ್ತು ಬಡ್ಡಿಯನ್ನು ಕಟ್ಟಬೇಕಾಗಿರುತ್ತದೆ. ಸದರಿ ವಾಹನವನ್ನು ಇದೀಗ ತಮ್ಮ ಚಾಲನೆಯಿಲ್ಲದೆ ನಿಲ್ಲಿಸಿರುವುದರಿಂದ ವಾಹನದ ಇಂಜಿನ್ ಮತ್ತು ಇತರ ಭಾಗಗಳು ಹಾಳಾಗಿ ನಷ್ಟ ಉಂಟಾಗುತ್ತದೆ. ಆದುದರಿಂದ ಸದರಿ ವಾಹನವನ್ನು ಮಧ್ಯಂತರಿಕವಾಗಿ ಬಿಡುಗಡೆಗೊಳಿಸಿಕೊಡಬೇಕೆಂದು ಹಾಗೂ ಈ ಬಗ್ಗೆ ಪ್ರಾಧಿಕಾರವು ವಿಧಿಸುವ ಷರತ್ತುಗಳಿಗೆ ಬದ್ಧರಾಗಿರುವುದಾಗಿ ಒಪ್ಪಿ ಅರ್ಜಿಯಲ್ಲಿ ವಿವರಿಸಿರುತ್ತಾರೆ. ವಾಹನದ ಮಾಲೀಕರಾದ ಕೆ.ಟಿ.ವೆಂಕಟೇಶ್ ಇವರು ಈ ಪ್ರಾಧಿಕಾರದ ಮುಂದೆ ಸಲ್ಲಿಸಿದ ಅರ್ಜಿಯ ಬಗ್ಗೆ ಪರಿಶೀಲಿಸಿದಾಗ ಅರ್ಜಿದಾರರು ಅರ್ಜಿಯಲ್ಲಿ ಕೋರಿರುವಂತೆ ಈ ಪ್ರಕರಣದಲ್ಲಿ ವಶಪಡಿಸಿಕೊಂಡ ಜೀಪ್ ಸಂ:ಕೆಎ-12-ಎಂ-572ರ ಅಂತಿಮ ಆದೇಶ ಆಗುವವರೆಗೆ ವಾಹನವನ್ನು ಈ ಕಛೇರಿಯ ತೆರೆದ ಪ್ರದೇಶದಲ್ಲಿ ನಿಲ್ಲಿಸಿರುವುದರಿಂದ ಅದರ ಯಂತ್ರ ಹಾಗೂ ಇತರ ಭಾಗಗಳು ತುಕ್ಕು ಹಿಡಿದು ಯೋಗ್ಯವಿಲ್ಲದಂತೆ ಆಗುವುದರಿಂದ ಹಾಗೂ ಸದರಿ ವಾಹನವು ಅದರ ಮೌಲ್ಯವನ್ನು ಕಳೆದುಕೊಳ್ಳುವುದಲ್ಲದೇ ಸೂಕ್ತ ಸ್ಥಳಾವಕಾಶ ಇಲ್ಲದೇ ಇರುವುದರಿಂದ ಸದರಿ ವಾಹನವನ್ನು ಮಧ್ಯಂತರಿಕವಾಗಿ ಬಿಡುಗಡೆಗೊಳಿಸುವುದು ಸೂಕ್ತವೆಂದು ಕಂಡುಬಂದ ಕಾರಣ ಸದರಿ ವಾಹನಕ್ಕೆ ಅಂದಿನ ಮಾರ್ಕೆಟ್ ಮೌಲ್ಯವನ್ನು ನಿಗಧಿಪಡಿಸಲು ದಿ:10-11-2000ರಂದು ಪ್ರಾದೇಶಿಕ ಸಾರಿಗೆ ಅಧಿಕಾರಿಗಳಿಗೆ ಪತ್ರ ಮುಖೇನ ಕೋರಿದಾಗ ಸದರಿ ಮೋಟಾರು ವಾಹನದ ನಿರೀಕ್ಷಕರು ವಾಹನವನ್ನು ಪರಿಶೀಲಿಸಿ ವಾಹನಕ್ಕೆ ಬೆಲೆ ರೂ.32,000/- (ಮೂವತ್ತೆರಡು ಸಾವಿರ)ಗಳ ಬೆಲೆಯನ್ನು ನಿಗಧಿಪಡಿಸಿ ಮೌಲ್ಯ ದೃಢೀಕರಣ ಪತ್ರವನ್ನು ದಿ:13-11-2000ರಂದು ಈ ಕಛೇರಿಗೆ ಸಲ್ಲಿಸಿರುತ್ತಾರೆ. ಈ ಪ್ರಾಧಿಕಾರದಲ್ಲಿ ಸದರಿ ಮೌಲ್ಯವನ್ನು ರೂ.45,000/-(ನಲವತ್ತೈದು ಸಾವಿರ)ಗಳಿಗೆ ನಿಗಧಿಪಡಿಸಿ ಸದರಿ ಮೌಲ್ಯಕ್ಕೆ ಸಮನಾದ ಬ್ಯಾಂಕ್ ಗ್ಯಾರೆಂಟಿಯನ್ನು ಪಡೆದುಕೊಂಡು ಹಾಗೂ ಒಬ್ಬ ಸ್ಥಳೀಯ ಶ್ಯೂರಿಟಿಯನ್ನು ಪಡೆದು ಷರತ್ತುಬದ್ಧವಾಗಿ ದಿ:29-11-2000ದಂದು ವಾಹನ ಸಂ:ಕೆಎ-12-ಎಂ-572ರನ್ನು ಮಧ್ಯಂತರಿಕವಾಗಿ ಬಿಡುಗಡೆಗೊಳಿಸಲಾಗಿರುತ್ತದೆ.

ತದನಂತರ ದಿ:13-12-2000, 14-1-2001, 31-1-2001, 7-3-01, 2-2-01, 16-3-2002, 20-4-02, 1-2-07, 15-2-07, 22-2-07, 20-12-08, 25-6-11, 22-8-11, 12-9-11, 21-11-11, 28-11-11, 19-12-11, 27-2-12ರಂದು ವಿಚಾರಣೆಯನ್ನು ನಡೆಸಲಾಗಿ ದಿ:13-12-2000, 14-1-2001, 7-3-2001, 16-3-02, 22-2-07, 20-12-08, 25-6-11, 22-8-11, 21-11-11, 28-11-11, 27-2-12 ಗಳಲ್ಲಿ ವಾಹನದ ಮಾಲೀಕರಾಗಲೀ ಅವರ ಪರ ವಕೀಲರಾಗಲೀ ಹಾಜರಾಗಿರುವುದಿಲ್ಲ. 31-1-01, 2-2-01, 20-4-02, 1-2-07, 15-2-07, 12-9-11, 19-12-11ಗಳಲ್ಲಿ ವಾಹನದ ಮಾಲೀಕರು ಅವರ ಪರ ವಕೀಲರೊಂದಿಗೆ ಹಾಜರಾಗಿರುತ್ತಾರೆ ಹಾಗೂ 12-9-11, 19-12-11ಗಳಲ್ಲಿ ವಾಹನವನ್ನು ಹಾಜರುಪಡಿಸಿರುತ್ತಾರೆ. 22-2-07, 20-12-08, 12-9-11ಗಳಲ್ಲಿ ವಾಹನದ ಮಾಲೀಕರು ಮಾತ್ರ ಹಾಜರಿದ್ದು, ಅವರ ಪರ ವಕೀಲರು ಹಾಜರಾಗಿರುವುದಿಲ್ಲ.

ದಿ:16-3-2002ರಂದು ಪ್ರಕರಣ ದಾಖಲು ಮಾಡಿದ ಅಧಿಕಾರಿಗಳಾದ ಶ್ರೀ ಎಸ್.ಎಂ.ಅಪ್ಪಯ್ಯ, ಆರಕ್ಷಕ ಉಪ ನಿರೀಕ್ಷಕರು, ಶ್ರೀಮಂಗಲ ಠಾಣೆ ಇವರ ವಿಚಾರಣೆಯನ್ನು ಪ್ರಾರಂಭಿಸಲಾಗಿರುತ್ತದೆ.

ಮುಖ್ಯ ವಿಚಾರಣೆ ಎ.ಡಿ.ಪಿ.ಯವರಿಂದ :- 1997ನೇ ಇಸವಿ ಜನವರಿಯಿಂದ 2001ನೇ ಜನವರಿ ವರೆಗೆ ಶ್ರೀಮಂಗಲ ಪೊಲೀಸ್ ಠಾಣೆಯಲ್ಲಿ ಆರಕ್ಷಕ ಉಪ ನಿರೀಕ್ಷಕನಾಗಿ ಕರ್ತವ್ಯ ಮಾಡಿಕೊಂಡಿದ್ದೆ. ದಿ:9-9-2000ದಂದು ಠಾಣೆ ಕರ್ತವ್ಯದಲ್ಲಿದ್ದಾಗ ಸಂಜೆ 6.30ಗಂಟೆಗೆ ಫಿರ್ಯಾದಿ ಶ್ರೀ ಕೆ.ಆರ್.ಸಂಪತ್ ಎಂಬುವವರು ಠಾಣೆಗೆ ಹಾಜರಾಗಿ ಬಂದು ಲಿಖಿತ ದೂರಿನಲ್ಲಿ ಜೀಪ್ ಸಂ:ಕೆಎ-12-ಎಂ-572 ಹಾಗೂ ಅದರಲ್ಲಿ ಇರತಕ್ಕ ಆರು ಗೋಣಿ ಚೀಲದಲ್ಲಿ ಸಾರಾಯಿ ಪ್ಯಾಕೇಟುಗಳು, 2 ಪ್ಲಾಸ್ಟಿಕ್ ಕ್ಯಾನಿನಲ್ಲಿ ಮದ್ಯಸಾರ ಮತ್ತು ಆರೋಪಿ ಇಬ್ಬರನ್ನು ಹಾಜರುಪಡಿಸಿದರು. ಆರೋಪಿಗಳಾದ ಯು.ಟಿ.ವೇಣು ಬಿನ್ ತಮ್ಮಯ್ಯ ಹಾಗೂ ಚಾರಿಮಂಡ ದೇವಯ್ಯ @ ಮೋಹನ್ ಇವರುಗಳನ್ನು ಹಾಜರುಪಡಿಸಿದರು. ಅದನ್ನು ಹೊಂದಿಕೊಂಡು ಠಾಣಾ ಮೊಕದ್ದಮೆ ಸಂ:76/2000 ಕಲಂ34, 43ರ ಅಬಕಾರಿ ಕಾಯ್ದೆ ಮೇರೆ ಮೊಕದ್ದಮೆ ದಾಖಲು ಮಾಡಿಕೊಂಡು ಪ್ರ.ವ.ವರದಿಯನ್ನು ನ್ಯಾಯಾಲಯಕ್ಕೂ ಮೇಲಾಧಿಕಾರಿಗಳಿಗೂ ಸಲ್ಲಿಸಲಾಯಿತು. ನಂತರ ಪಂಚರಾದ ಅಣ್ಣೀರ ರಂಜು, ಮಲ್ಲಂಗಡ ಲಾಲ ಎಂಬುವವರ ಸಮ್ಮುಖದಲ್ಲಿ ಫಿರ್ಯಾದಿ ಸಂಪತ್ತು ರವರು ತೋರಿಸಿಕೊಟ್ಟ ಮೇರೆ ಸದರಿ ಜೀಪನ್ನು ಪರಿಶೀಲಿಸಲಾಯಿತು. ಜೀಪಿನ ಒಳಗಡೆ ಆರು ಪಾಲಿಥಿನ್ ಗೋಣಿ ಚೀಲ ಇದ್ದು, ಅವುಗಳಲ್ಲಿದ್ದ ಸಾರಾಯಿ ಪ್ಯಾಕೇಟುಗಳನ್ನು ಎಣಿಸಲಾಗಿ ಒಂದನೇ ಚೀಲದಲ್ಲಿ 427, ಎರಡನೇ ಚೀಲದಲ್ಲಿ 286, ಮೂರನೇ ಚೀಲದಲ್ಲಿ 278, 4ನೇ ಚೀಲದಲ್ಲಿ 276, 5ನೇ ಚೀಲದಲ್ಲಿ 277, ಆರನೇ ಚೀಲದಲ್ಲಿ 267 ಸಾರಾಯಿ ಪ್ಯಾಕೇಟುಗಳಿದ್ದು, ಅಲ್ಲದೇ ಎರಡು ಬಿಳಿ ಪ್ಲಾಸ್ಟಿಕ್ ಕ್ಯಾನಿನಲ್ಲಿ ತಲಾ 30ಲೀ.ನಂತೆ ಮದ್ಯಸಾರವಿದ್ದುದು ಕಂಡುಬಂತು. ಅವುಗಳನ್ನು ಮಹಜರ್ ಮೂಲಕ ಅಮಾನತುಪಡಿಸಿಕೊಂಡು ಆರು ಚೀಲಗಳಲ್ಲಿದ್ದಂತೆ ಒಂದೊಂದು

ಸಾರಾಯಿ ಪ್ಯಾಕೇಟುಗಳನ್ನು, ಮಾದರಿಯಾಗಿ ತೆಗೆದುಕೊಂಡು ಅವುಗಳಿಗೆ ಬಿಳಿ ಬಟ್ಟೆಯಿಂದ ಹೊಲಿದು ಅರಗಿನಿಂದ ಕೆ.ಬಿ.ಎಂಬ ಸೀಲು ಮಾಡಲಾಯಿತು. ಅಲ್ಲದೇ ಎರಡು ಕ್ಯಾನುಗಳಲ್ಲಿದ್ದಂತಹ ಮದ್ಯಸಾರವನ್ನು ಸಹ ಮಾದರಿಗಾಗಿ ಒಂದು ಸೀಸೆಯಲ್ಲಿ 180ಮಿಲಿಯಷ್ಟು ಶೇಖರಿಸಲಾಯಿತು. ಅವುಗಳಿಗೆ ಬಿಳಿ ಬಟ್ಟೆಯಿಂದ ಹೊಲಿದು ಅರಗಿನಿಂದ ಕೆ.ಬಿ.ಎಂಬ ಸೀಲು ಮಾಡಲಾಯಿತು. ನಂತರ ಮೇಲ್ಕಂಡ ಸ್ವತ್ತುಗಳನ್ನು ಪೊನ್ನಂಪೇಟೆ ಅಬಕಾರಿ ಇಲಾಖೆಯವರಿಗೆ ವರ್ಗಾಯಿಸಲಾಯಿತು.

ಈಗ ನಾನು ನೋಡುತ್ತಿರುವ ಕಾರ್ಬನ್ ನಕಲು ಫಿರ್ಯಾದಿಯವರು ಆಟಿಸ ನೀಡಿದ ಫಿರ್ಯಾದಿನ ನಕಲಾಗಿರುತ್ತದೆ. ಅದನ್ನು ನಿಶಾನೆ ಪಿ-1 ಎಂದು ಗುರುತಿಸಲಾಯಿತು. ಮೂಲ ಫಿರ್ಯಾದನ್ನು ಅಪರಾಧ ವಿಚಾರಣೆಯ ಸಂಬಂಧ ವಿರಾಜಪೇಟೆ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.ನ್ಯಾಯಾಲಯಕ್ಕೆ ಸಲ್ಲಿಸಲಾಗಿದೆ. ಅದರಲ್ಲಿ ಫಿರ್ಯಾದಿ ಹಾಗೂ ನನ್ನ ಸಹಿಗಳು ಇರುತ್ತದೆ. ಅಮಾನತು ಪಡಿಸಿದ ಜೀಪ್, ಮದ್ಯಸಾರ ತುಂಬಿದ ಎರಡು ಪ್ಲಾಸ್ಟಿಕ್ ಕ್ಯಾನುಗಳು, ಆರು ಪ್ಲಾಸ್ಟಿಕ್ ಗೋಣಿಚೀಲಗಳು ಹಾಗೂ ಮಾದರಿ ಸೀಸೆಗಳನ್ನು ಈಗ ನಾನು ನೋಡಿದರೆ ಗುರುತಿಸುತ್ತೇನೆ. ಅಮಾನತುಪಡಿಸಿದ ಪ್ಲಾಸ್ಟಿಕ್ ಕ್ಯಾನುಗಳನ್ನು ಹಾಗೂ ಮಾದರಿ ಸೀಸೆಗಳನ್ನು ವಿರಾಜಪೇಟೆ ನ್ಯಾಯಾಲಯಕ್ಕೆ ಸಲ್ಲಿಸಲಾಗಿದೆ. ಸಾಕ್ಷಿ ಮತ್ತೆ ಹೇಳುತ್ತಾರೆ ಅವುಗಳನ್ನು ಮುಂದಿನ ತನಿಖೆ ಬಗ್ಗೆ ಅಬಕಾರಿ ಇಲಾಖೆಗೆ ಒಪ್ಪಿಸಲಾಗಿದೆ. ಅವರು ಅದನ್ನು ವಿರಾಜಪೇಟೆ ನ್ಯಾಯಾಲಯಕ್ಕೆ ಸಲ್ಲಿಸಿರಬಹುದು. ಅಮಾನತು ಮಹಜರಿನ ನಕಲನ್ನು ಸಹ ನೋಡುತ್ತಿದ್ದು, ಅದನ್ನು ನಿಶಾನೆ ಪಿ2 ಎಂದು ಗುರುತಿಸಲಾಯಿತು. ಅದರ ಮೂಲ ಪ್ರತಿಯನ್ನು ಸಹ ಇತರೇ ಮೂಲ ದಾಖಲಾತಿಗಳೊಡನೆ ಅಂದರೆ ಮಾದರಿ ಸೀಲು ಇತ್ಯಾದಿಗಳನ್ನು ಸಹ ವಿರಾಜಪೇಟೆ ನ್ಯಾಯಾಲಯಕ್ಕೆ ಅಬಕಾರಿ ಇಲಾಖೆಯವರು ರೂಢಿಯಂತೆ ಸಲ್ಲಿಸಿರಬಹುದು.

ಪಾಟಿ ಸವಾಲು: ಅರ್ಜಿದಾರರ ಪರ ವಕೀಲರಿಂದ ಪಾಟಿ ಸವಾಲು ನಡೆದಿರುವುದಿಲ್ಲ.

ಸದರಿ ಪ್ರಕರಣದಲ್ಲಿ ಜಪ್ತುಪಡಿಸಿಕೊಂಡ ಸಾರಾಯಿ ಪ್ಯಾಕೇಟುಗಳನ್ನು ಮತ್ತು ಮದ್ಯಸಾರವನ್ನು ದಿ:4-1-03ರಂದು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ವಿಲೇವಾರಿ ಮಾಡಲಾಗಿರುತ್ತದೆ. ತದನಂತರ ವಾಹನದ ಮಾಲೀಕರು ಬ್ಯಾಂಕ್ ಗ್ಯಾರಂಟಿ ಅವಧಿಯನ್ನು ವಿಸ್ತರಿಸುತ್ತಾ ಬಂದಿರುತ್ತಾರೆ. ತದನಂತರ ಬ್ಯಾಂಕ್ ಗ್ಯಾರಂಟಿ ಹಣ ರೂ.45,000/-(ನಲವತ್ತೈದು ಸಾವಿರ)ಗಳನ್ನು ಇನ್‌ವೋಕ್ ಮಾಡಿಕೊಂಡು ದಿನಾಂಕ: 17-5-2010ರಂದು ರೆವೆನ್ಯೂ ಖಾತೆಯಲ್ಲಿಡಲಾಗಿರುತ್ತದೆ. ನಂತರ ಪ್ರಕರಣದ ವಿಚಾರಣೆಯನ್ನು ಪ್ರಾರಂಭಿಸಿ ಮಹಜರು ಸ್ವತಂತ್ರ ಸಾಕ್ಷಿದಾರರಾದ ಕೆ.ಆರ್.ಸಂಪತ್ ಬಿನ್ ರಘುನಾಥ್, ಅಣ್ಣೀರ ಎಸ್.ರಾಜು ಬಿನ್ ಸೋಮಯ್ಯ ಇವರುಗಳಿಗೆ ವಿಚಾರಣೆಗೆ ಹಾಜರಾಗಲು ಹಲವಾರು ಬಾರಿ ನೋಟಿಸ್ ನೀಡಲಾಗಿದ್ದರೂ ಸಹ ಹಾಜರಾಗಿರುವುದಿಲ್ಲ.

ವಾಹನದ ಮಾಲೀಕರಿಗೆ ವಿಚಾರಣೆಗಾಗಿ ನೋಟಿಸನ್ನು ನೀಡುತ್ತಿದ್ದರು ಸದರಿ ಪ್ರಕರಣವನ್ನು ವಿಲೇಗೊಳಿಸಲು ವಾಹನದ ಮಾಲೀಕರು ಹಾಗೂ ಅವರ ಪರ ವಕೀಲರು ಸೂಕ್ತ ರೀತಿ ಸಹಕರಿಸದೇ ಅನಾವಶ್ಯಕವಾಗಿ ಕಾಲವಿಳಂಭ ಮಾಡುತ್ತಿರುವುದು ಮತ್ತು ಈ ಪ್ರಕರಣದಲ್ಲಿ ಆಸಕ್ತಿ ತೋರಿಸದೇ ಅಸಹಕಾರವನ್ನು ನೀಡುತ್ತಿದ್ದು, ವಾಹನದ ಮಧ್ಯಂತರ ಬಿಡುಗಡೆ ಸಮಯದಲ್ಲಿ ಈ ನ್ಯಾಯಾಲಯ ವಿಧಿಸಿದ್ದ ಷರತ್ತುಗಳನ್ನು ಕೂಡ ಉಲ್ಲಂಘನೆ ಮಾಡಿರುವ ಕಾರಣದಿಂದ ವಾಹನ ಜೀಪ್ ಸಂ:ಕೆಎ-12-ಎಂ-572ರನ್ನು ಮತ್ತು ಈಗಾಗಲೇ ಆರ್.ಡಿ.ಖಾತೆಯಲ್ಲಿಡಲಾದ ಬ್ಯಾಂಕ್ ಗ್ಯಾರಂಟಿ ಹಣ ರೂ.45,000/-(ನಲವತ್ತೈದು ಸಾವಿರ)ಗಳನ್ನು ಮುಟ್ಟುಗೋಲು ಹಾಕಿಕೊಳ್ಳುವುದು ಸೂಕ್ತವೆಂದು ಪರಿಗಣಿಸಿ ಈ ಕೆಳಕಂಡಂತೆ ಆದೇಶ.

ಆದೇಶ ಸಂ:ಇಎಕ್ಸ್ ಇ:ಸಿಆರ್ಎಂ:30:2000-01, ದಿ:27-2-2012

ಹೆಚ್.ಎನ್.ಆನಂದ್, ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್, ಕೊಡಗು ಜಿಲ್ಲೆ, ಮಡಿಕೇರಿ ಆದ ನಾನು ಮೇಲೆ ವಿವರಿಸಲಾದ ಎಲ್ಲಾ ಅಂಶಗಳ ಹಿನ್ನಲೆಯಲ್ಲಿ ಕರ್ನಾಟಕ ಅಬಕಾರಿ ಕಾಯ್ದೆ 1965ರ ಕಲಂ 43ಎ ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ವಾಹನದ ಮಾಲೀಕರು ಹಾಗೂ ಅವರ ಪರ ವಕೀಲರಿಗೆ ಪ್ರಕರಣದ ಬಗ್ಗೆ ಸಂಪೂರ್ಣ ಮಾಹಿತಿಗಳು ತಿಳಿದಿದ್ದು, ಪ್ರಕರಣ ವಿಲೇಗೆ ಅಸಹಕಾರ ನೀಡುತ್ತಿರುವ ಹಿನ್ನಲೆಯನ್ನು ಪರಿಗಣಿಸಿ ಆರಕ್ಷಕ ಉಪ ನಿರೀಕ್ಷಕರು, ಶ್ರೀಮಂಗಲ ಠಾಣೆ ರವರ ಕ್ರೈ.ನಂ:76/2000-01, ದಿ:9-9-2000 ರಲ್ಲಿ ಅಕ್ರಮ ಸಾರಾಯಿ ಪ್ಯಾಕೇಟುಗಳು ಹಾಗೂ ಮದ್ಯಸಾರ ಸಾಗಾಣಿಕೆ ಸಂಬಂಧ ಜಪ್ತುಪಡಿಸಿದ ವಾಹನ ಜೀಪ್ ಸಂ:ಕೆಎ-12-ಎಂ-572ರನ್ನು ಹಾಗೂ ವಾಹನದ ಮಾಲೀಕರು ಭದ್ರತೆಯಾಗಿ ನೀಡಿರುವ ಆರ್.ಡಿ.ಖಾತೆಯಲ್ಲಿಡಲಾದ ಬ್ಯಾಂಕ್ ಗ್ಯಾರಂಟಿ ಹಣ ರೂ.45,000/-(ನಲವತ್ತೈದು ಸಾವಿರ)ಗಳನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಆದೇಶ ನೀಡಿರುತ್ತೇನೆ.

ಈ ಆದೇಶವನ್ನು ದಿ:27-2-12ರಂದು ಉಕ್ತಲೇಖನ ಕೊಟ್ಟು ಗಣಕಯಂತ್ರದಲ್ಲಿ ಬೆರಳಚ್ಚಿಸಿದ ನಂತರ ತಪ್ಪುಗಳನ್ನು ತಿದ್ದಿ ಮುಕ್ತ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಅಧಿಕೃತ ಅಧಿಕಾರಿಗಳು ಹಾಗೂ
ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್,
ಕೊಡಗು ಜಿಲ್ಲೆ, ಮಡಿಕೇರಿ.

ಪಿ.ಆರ್. 315

PROCEEDINGS OF THE COMMISSIONER OF COMMERCIAL TAXES (KARNATAKA), BANGALORE

Present: **Sri Pradeep Singh Kharola, IAS,**
Commissioner of Commercial Taxes.

Sub: KVAT Act, 2003 – Section 59(4) – Issue of clarification on rate of tax on spent grains of barley and maize-reg.

Read: Letter dated 22.12.2012 of M/s.Cooltech Enterprises, Bangalore

PREAMBLE:

M/s.Cooltech Enterprises, No.866, 'Dhairya', 3rd Cross, 7th Main, HAL 2nd Stage, Indiranagar, Bangalore -560 038 is a partnership firm registered under the KVAT Act, 2003. The firm has sought clarification on rate of tax under the KVAT Act on the sale of spent grains of barley and maize.

2. In its application, the applicant has explained that spent grains of barley and maize are the residual waste material obtained by breweries in the process of manufacture of beer. In the process of brewing barley malt and maize are subject to the processing of soaking in water, fermentation and extraction of alcohol solution therefrom. Spent grains remain as residual grains after the alcohol solution is extracted from barley malt and maize. The alcohol solution is used for manufacture of beer and spent grains which are waste materials are sold by the breweries. It is the argument of the applicant that since spent grains are sold as animal feed, the commodity falls under Sl. No.5 of the First Schedule to the KVAT Act and hence exempted from tax. Alternatively, spent grains are coarse grains of barley and maize and remain so even after the process of fermentation and extraction of alcohol therefrom. Hence they fall under Sl. No.16 of the First Schedule which relates to coarse grains and exempt from tax. The third view of the applicant is that spent grains may also be considered under Sl. No. 39 of the First Schedule which reads as "organic manure, compost manure, fish manure and poultry manure". According to the applicant, spent grains may be considered as organic manure since it is also used as such. Keeping the above understanding, the applicant has sought clarification on rate of tax on the commodity 'spent grains'.

3. Sri M.A.Maniyar, STP, duly authorized by the applicant appeared and he was heard. He re-iterated the facts and arguments made in the application. He produced sample of the goods and filed copies of the following documents:-

(a) Literature from Wikipedia relating to brewing process;

(b) Invoice dated 31.12.2011 issued by M/s.United Breweries Limited, Nelamangala for sale of spent grains;

(c) Invoice dated 26.6.2011 issued by M/s.Mysore Breweries, Bangalore for sale of cattle feed;

(d) Decision in the case of Omrao Industrial Corporation Vs Sales Tax Officer, Kanpur reported in 33 STC 343 (All);

(e) Literature on brewers grains, wet brewers grains, dried brewers grains, brewers spent grain, brewers dried yeast issued by Food and Agriculture Organization of UN;

(f) Decision of Allahabad High Court in the case of Commissioner of Trade Tax, UP, Lucknow Vs National Cereal Products Limited reported in 111 STC 241; and

(g) Decision of Division Bench of Hon'ble High Court of Karnataka in the case of M.N.Nilugal Vs District Manager, FCI reported in 142 STC 229.

4. Matter is examined. The arguments, documentary evidences and sample of goods produced are verified. It is seen that the commodity 'spent grain' is a residue obtained in the process of manufacture of beer. The process of manufacture starts with malt barley or maize as basic raw materials. It is subjected to several processes such as steeping, milling, mashing, lautering and boiling. The process basically involves adding of water to barley malt and maize and subjecting it to the process of fermentation for a certain period. During the process of fermentation, the alcohol gets released from the grains which are then separated by filtration and further process is done on alcohol by adding flavor. The residue obtained after separation of alcohol on filtration is called spent grain. Thus, spent grain is malted barley and maize which have been subjected to fermentation.

5. The residual commodity spent grain has been sold by the above said two breweries mentioning the commodity as cattle feed. The issue that arises now is whether malted barley and maize remain so even after the process or they become different commercial commodities after the process. This is examined as under.

6. Malted barley is held to be barley even after the process of malting, i.e. germination in water, by Allahabad High Court in the case of Commissioner of Trade Tax, UP Vs National cereal Products Limited. Hence, malted barley and maize fall under Sl. No.16 of the First Schedule to the KVAT Act which relates to coarse grains. By subjecting it to the process of fermentation, malted barley and maize have become spent grains. In this process, they have lost the characteristic of being fit for human consumption. But they continue to be fit for consumption as animal feed. By becoming so, malted barley and maize have not lost their characteristics of being cereal or coarse grain.

7. In the case of M.N.Nilugal Vs District Manager, Food Corporation of India, damaged wheat and rice were sold by the FCI as fit for cattle / poultry feed but not fit for human consumption. The question arose whether the damaged wheat and rice which were unfit for human consumption but fit for consumption for livestock continue to be cereal. After examining the issues, the Hon'ble High Court of Karnataka held as under:-

> *".........When a food grain is fit for consumption by both human and livestock, there can be no doubt that it is a cereal. Even where on account of decay or damage, a cereal is found to be unfit for human consumption but still fit for consumption by livestock, it will still continue to be a "cereal". If the cereal, on account of its damaged condition is wholly unfit for consumption either by human or by livestock, but is fit to be used only as a manure or at best for production of industrial starch, then it may cease to be considered as "cereal". ...."*

8. From the literature issued by Food and Agriculture Organization of U.N, it is seen that the major use of spent grain is as animal food.

9. In the present case, it is seen that malted barley and maize though become unfit for human consumption, they are fit for use as animal feed. As seen from the literature on the commodity, the major use of the goods is as animal feed only. Following the decision of Karnataka High Court in the case of M.N.Nilugal Vs District Manager, Food Corporation of India, it is seen that spent grains of barley and maize are nothing but barley and maize which are coarse grains falling under Sl. No.16 of the First Schedule to the KVAT Act, which are exempt from tax. Hence the following:

ORDER NO.CLR.CR.182/11-12 DATED 12.03.2012

It is hereby clarified that spent grains of barley and maize obtained as residue in the process of manufacture of beer fall under Sl. No.16 of the First Schedule to the KVAT Act and hence exempted from levy of tax under the KVAT Act.

PRADEEP SINGH KHAROLA,
Commissioner of Commercial Taxes
Karnataka, Bangalore.

P R 396

ಕಾರ್ಮಿಕ ಸಚಿವಾಲಯ

ಅಧಿಸೂಚನೆ

ಸಂಖ್ಯೆ : ಕಾಇ 40 ಎಲ್‌ಡಬ್ಲ್ಯೂಎ 2012, ದಿನಾಂಕ: 26-03-2012

ಸರ್ಕಾರದ ಆದೇಶ ಸಂಖ್ಯೆ : ಕಾಇ 40 ಎಲ್‌ಡಬ್ಲ್ಯೂಎ 2011, ದಿನಾಂಕ: 12-01-2012ರಲ್ಲಿ ಕರ್ನಾಟಕ ರಾಜ್ಯ ಖಾಸಗಿ ವಾಣಿಜ್ಯ ವಾಹನ ಚಾಲಕರ ಅಪಘಾತ ಪರಿಹಾರ ಯೋಜನೆಯನ್ನು ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯ ಮೂಲಕ ಜಾರಿಗೊಳಿಸಲು ಸರ್ಕಾರದ ಅನುಮೋದನೆಯನ್ನು ನೀಡಲಾಗಿದೆ. ಸದರಿ ಯೋಜನೆಗೆ ಅರ್ಹ ಫಲಾನುಭವಿಗಳನ್ನು ನೋಂದಣಿ ಮಾಡಿಕೊಳ್ಳಲು ಕಾರ್ಮಿಕ ಅಧಿಕಾರಿಗಳನ್ನು ನೋಂದಣಾಧಿಕಾರಿಗಳನ್ನಾಗಿ ಈ ಮೂಲಕ ನೇಮಿಸಲಾಗಿದೆ ಹಾಗೂ ಯೋಜನೆ ಅನುಷ್ಠಾನಕ್ಕೆ ಸಂಬಂಧಪಟ್ಟ ಇತರೆ ಕೆಲಸಗಳನ್ನು ಸಹ ನಿರ್ವಹಿಸಲು ಅನುಬಂಧದಲ್ಲಿನ ಕೋಷ್ಟಕದಲ್ಲಿ ತಿಳಿಸಿರುವಂತೆ ಅಧಿಕಾರವನ್ನು ನೀಡಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಎನ್.ಆರ್. ಪ್ರಭು,
ಸರ್ಕಾರದ ಅಧೀನ ಕಾರ್ಯದರ್ಶಿ,
ಕಾರ್ಮಿಕ ಇಲಾಖೆ

ಅನುಬಂಧ

ಕೋಷ್ಟಕ

ಕ್ರಮ ಸಂಖ್ಯೆ	ಕಾರ್ಮಿಕ ಅಧಿಕಾರಿಗಳ ವಿವರ ಹಾಗು ಅವರ ಕೇಂದ್ರಸ್ಥಾನಗಳು	ಕಾರ್ಯವ್ಯಾಪ್ತಿ
1	ಕಾರ್ಮಿಕ ಅಧಿಕಾರಿ ಉಪವಿಭಾಗ–1 ಬೆಂಗಳೂರು.	ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ ಸಂಖ್ಯೆ: 10, 14, 16 ರಿಂದ 19, 36 ರಿಂದ 38, 40 ರಿಂದ 45, 64 ರಿಂದ 74, 76, 77, 100 ರಿಂದ 102, 105 ಬೆಂಗಳೂರು ಉತ್ತರ ತಾಲ್ಲೂಕಿನ ಯಶವಂತಪುರ ಹೋಬಳಿಯ ಲಕ್ಷ್ಮೀಪುರ, ಸೋಮಶೆಟ್ಟಿಹಳ್ಳಿ, ಕೆರೆಗುಡ್ಡಹಳ್ಳಿ, ಗಾಣಿಗರಹಳ್ಳಿ, ಚಿಕ್ಕಬಾಣಾವರ, ಗ್ರಾಮ ಪ್ರದೇಶಗಳನ್ನು ಹೊರತುಪಡಿಸಿದ ಯಶವಂತಪುರ ಹೋಬಳಿ, ದಾಸನಪುರ ಹೋಬಳಿ, ತಾವರೆಕೆರೆ ಹೋಬಳಿ ಹಾಗು ನೆಲಮಂಗಲ ತಾಲ್ಲೂಕು.
2	ಕಾರ್ಮಿಕ ಅಧಿಕಾರಿ ಉಪವಿಭಾಗ–2 ಬೆಂಗಳೂರು.	ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ ಸಂಖ್ಯೆ 103, 104, 123 ರಿಂದ 137, 141, 155 ರಿಂದ 170, 177 ರಿಂದ 187, 194 ರಿಂದ 198, ಬೆಂಗಳೂರು ದಕ್ಷಿಣ ತಾಲ್ಲೂಕಿನ ಉತ್ತರಹಳ್ಳಿ ಹೋಬಳಿ ಹಾಗು ಕೆಂಗೇರಿ ಹೋಬಳಿಯ ಪ್ರದೇಶಗಳು.
3	ಕಾರ್ಮಿಕ ಅಧಿಕಾರಿ ಉಪವಿಭಾಗ–3 ಬೆಂಗಳೂರು.	ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ ಸಂಖ್ಯೆ 1,2, 5 ರಿಂದ 7, 21 ರಿಂದ 33, 47 ರಿಂದ 50, 52 ರಿಂದ 55, 60, 82 ರಿಂದ 86, 113, 149, 150, ಬೆಂಗಳೂರು ಪೂರ್ವ ತಾಲ್ಲೂಕಿನ ವರ್ತೂರು ಹಾಗು ಬಿದರಹಳ್ಳಿ ಹೋಬಳಿಗಳು, ಉತ್ತರ ತಾಲ್ಲೂಕಿನ ಜಾಲ ಹೋಬಳಿ ಪ್ರದೇಶಗಳು ಹಾಗು ದೇವನಹಳ್ಳಿ ತಾಲ್ಲೂಕು.
4	ಕಾರ್ಮಿಕ ಅಧಿಕಾರಿ ಉಪವಿಭಾಗ–4 ಬೆಂಗಳೂರು.	ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ ಸಂಖ್ಯೆ 51, 56 ರಿಂದ 59, 78 ರಿಂದ 81, 87 ರಿಂದ 92, 111, 112, 114 ರಿಂದ 117, 148, 151, 172 ರಿಂದ 175. ಹಾಗು ಹೊಸಕೋಟೆ ತಾಲ್ಲೂಕು.
5	ಕಾರ್ಮಿಕ ಅಧಿಕಾರಿ ಉಪವಿಭಾಗ–5 ಬೆಂಗಳೂರು.	ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ ಸಂಖ್ಯೆ, 3, 4 8, 9, 11 ರಿಂದ 13, 15, 20, 34, 35, 39, 46, 61 ರಿಂದ 63, 75, 93 ರಿಂದ 99, 106 ರಿಂದ 108, 109 ರಲ್ಲಿ 9ನೇ ವೃತ್ತಕ್ಕೆ ನಿಗದಿಪಡಿಸಿದ ಕಾರ್ಯವ್ಯಾಪ್ತಿಯನ್ನು ಹೊರತುಪಡಿಸಿ ಉಳಿದ ಪ್ರದೇಶಗಳು, 120 ರಿಂದ 122, ಬೆಂಗಳೂರು ಉತ್ತರ ತಾಲ್ಲೂಕಿನ ಯಶವಂತಪುರ ಹೋಬಳಿಯ ಲಕ್ಷ್ಮೀಪುರ, ಸೋಮಶೆಟ್ಟಿಹಳ್ಳಿ, ಕೆರೆಗುಡ್ಡಹಳ್ಳಿ, ಗಾಣಿಗರಹಳ್ಳಿ, ಚಿಕ್ಕಬಾಣಾವರ, ಗ್ರಾಮ ಪ್ರದೇಶಗಳು., ಯಲಹಂಕ ಹೋಬಳಿ, ಹೆಸರಘಟ್ಟ ಹೋಬಳಿ ಹಾಗು ದೊಡ್ಡಬಳ್ಳಾಪುರ ತಾಲ್ಲೂಕು
6	ಕಾರ್ಮಿಕ ಅಧಿಕಾರಿ ಉಪವಿಭಾಗ–6 ಬೆಂಗಳೂರು.	ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ ಸಂಖ್ಯೆ 109 ರಲ್ಲಿ, ಅವಿನ್ಯೂ ರಸ್ತೆಯ ಚಿಕ್ಕಪೇಟೆ ಸರ್ಕಲ್ ನಿಂದ ಕೆಂಪೇಗೌಡ ರಸ್ತೆಯವರೆಗೆ, ಕೆಂಪೇಗೌಡ ರಸ್ತೆಯಿಂದ ಬಿ.ವಿ.ಕೆ.ರಸ್ತೆಯ ಮಹಾರಾಜಾ ಕಾಂಪ್ಲೆಕ್ಸ್ ವರೆಗೆ, ಬಿ.ವಿ.ಕೆ.ರಸ್ತೆಯಿಂದ ರಂಗಸ್ವಾಮಿಗುಡಿ ರಸ್ತೆಯವರೆಗೆ, ರಂಗಸ್ವಾಮಿಗುಡಿ ರಸ್ತೆಯಿಂದ ಬಳೇಪೇಟೆ ಮುಖ್ಯರಸ್ತೆಯ ಜೆ.ಎಂ.ಲೇನ್ 3ನೇ ಅಡ್ಡರಸ್ತೆಯ ಮೂಲಕ ಓ.ಟಿ.ಸಿ.ರಸ್ತೆಯಲ್ಲಿ ಮುಂದುವರೆದು ಭಾಷ್ಯಂ ರಸ್ತೆಯವರೆಗೆ, ಭಾಷ್ಯಂ ರಸ್ತೆಯಿಂದ ಸುಲ್ತಾನ್ ಪೇಟೆ ಮುಖ್ಯರಸ್ತೆಯವರೆಗೆ, ಸುಲ್ತಾನ್ ಪೇಟೆ ಮುಖ್ಯರಸ್ತೆಯಿಂದ ಎ.ಎಸ್.ಚಾರ್ ಸ್ಟ್ರೀಟ್ ನಲ್ಲಿ ಮುಂದುವರೆದು ಬಿ.ವಿ.ಕೆ. ಅಯ್ಯಂಗಾರ್ ರಸ್ತೆಯ ವೃತ್ತದವರೆಗೆ, ಬಿ.ವಿ.ಕೆ. ಅಯ್ಯಂಗಾರ್ ರಸ್ತೆಯ ವೃತ್ತದಿಂದ ಓ. ಟಿ.ಸಿ.ರಸ್ತೆಯಲ್ಲಿ ಮುಂದುವರೆದು ಅವಿನ್ಯೂ ರಸ್ತೆಯ ಚಿಕ್ಕಪೇಟೆ ವೃತ್ತದವರೆಗೆ ಮತ್ತು ವಾರ್ಡ ಸಂಖ್ಯೆ 110, 118, 119, 138 ರಿಂದ 140, 142 ರಿಂದ 147, 152 ರಿಂದ 154, 171, 176, 188 ರಿಂದ 193, ಬೆಂಗಳೂರು ದಕ್ಷಿಣ ತಾಲ್ಲೂಕಿನ ಬೇಗೂರು ಹೋಬಳಿ ಪ್ರದೇಶಗಳು, ಆನೇಕಲ್ ತಾಲ್ಲೂಕು.

ಕ್ರಮ ಸಂಖ್ಯೆ	ಕಾರ್ಮಿಕ ಅಧಿಕಾರಿಗಳ ವಿವರ ಹಾಗು ಅವರ ಕೇಂದ್ರಸ್ಥಾನಗಳು	ಕಾರ್ಯವ್ಯಾಪ್ತಿ
7	ಕಾರ್ಮಿಕ ಅಧಿಕಾರಿ, ತುಮಕೂರು ಉಪ ವಿಭಾಗ, ತುಮಕೂರು.	ತುಮಕೂರು ಜಿಲ್ಲೆ
8	ಕಾರ್ಮಿಕ ಅಧಿಕಾರಿ, ಮೈಸೂರು ಉಪ ವಿಭಾಗ, ಮೈಸೂರು.	ಮೈಸೂರು ಜಿಲ್ಲೆ.
9	ಕಾರ್ಮಿಕ ಅಧಿಕಾರಿ, ಮಂಡ್ಯ ಉಪ ವಿಭಾಗ-1, ಮಂಡ್ಯ	ಮಂಡ್ಯ ನಗರಸಭೆ ವಾರ್ಡ್ ಸಂಖ್ಯೆ: 3 ರಿಂದ 18, 22, 23, 25, 26, 27, ಮತ್ತು ಬಸರಾಳು, ಕೆರಗೋಡು, ಕಸಬ ಹೋಬಳಿಗಳು ಹಾಗೂ ಮಳವಳ್ಳಿ, ಪಾಂಡವಪುರ ಮತ್ತು ಶ್ರೀರಂಗಪಟ್ಟಣ ತಾಲ್ಲೂಕುಗಳು.
10	ಕಾರ್ಮಿಕ ಅಧಿಕಾರಿ, ಮಂಡ್ಯ ಉಪ ವಿಭಾಗ-2, ಮಂಡ್ಯ	ಮಂಡ್ಯ ನಗರಸಭೆ ವಾರ್ಡ್ ಸಂಖ್ಯೆ: 1, 2, 19, 20, 21, 24, 28 ರಿಂದ 35 ಮತ್ತು ಕೊತ್ತತಿ ಮತ್ತು ದುದ್ದ ಹೋಬಳಿಗಳು ಹಾಗೂ ಮದ್ದೂರು, ಕೆ.ಆರ್. ಪೇಟೆ ಮತ್ತು ನಾಗಮಂಗಲ ತಾಲ್ಲೂಕುಗಳು.
11	ಕಾರ್ಮಿಕ ಅಧಿಕಾರಿ, ಕೋಲಾರ ಉಪ ವಿಭಾಗ ಕೋಲಾರ.	ಕೋಲಾರ ಜಿಲ್ಲೆ.
12	ಕಾರ್ಮಿಕ ಅಧಿಕಾರಿ, ಚಾಮರಾಜನಗರ ಉಪ ವಿಭಾಗ, ಚಾಮರಾಜನಗರ.	ಚಾಮರಾಜನಗರ ಜಿಲ್ಲೆ.
13	ಕಾರ್ಮಿಕ ಅಧಿಕಾರಿ, ಗುಲ್ಬರ್ಗ ಉಪವಿಭಾಗ, ಗುಲ್ಬರ್ಗ.	ಗುಲ್ಬರ್ಗ ಜಿಲ್ಲೆ.
14	ಕಾರ್ಮಿಕ ಅಧಿಕಾರಿ, ಬಳ್ಳಾರಿ ಉಪ ವಿಭಾಗ-1, ಬಳ್ಳಾರಿ.	ಬಳ್ಳಾರಿನಗರ ಮುನ್ಸಿಪಲ್ ಡಿವಿಜನ್ ವಾರ್ಡ್ ನಂ: 7 ರಿಂದ 18 ಮತ್ತು (ಉಳಿದ ನಗರ ಮುನ್ಸಿಪಲ್ ಪ್ರದೇಶ ಹೊರತುಪಡಿಸಿ) ಬಳ್ಳಾರಿ ತಾಲ್ಲೂಕಿನ ಪ್ರದೇಶ ಅನಂತಪುರ ರಸ್ತೆ ಮತ್ತು ಮೋಕಾ ಹೋಬಳಿ, ಹೊಸಪೇಟೆ ಮತ್ತು ಸಿರಗುಪ್ಪ ತಾಲ್ಲೂಕುಗಳು.
15	ಕಾರ್ಮಿಕ ಅಧಿಕಾರಿ, ಬಳ್ಳಾರಿ ಉಪ ವಿಭಾಗ-1, ಬಳ್ಳಾರಿ.	ಬಳ್ಳಾರಿನಗರ ಮುನ್ಸಿಪಲ್ ಡಿವಿಜನ್ ವಾರ್ಡ್ ನಂ: 1 ರಿಂದ 6 ಮತ್ತು 19 ರಿಂದ 30, ಅಲೀಪುರ ರಸ್ತೆ, ಕುಡಿತಿನಿ ಗ್ರಾಮ ಹಾಗು ಕುರುಗೋಡು ಗ್ರಾಮ, ಮತ್ತು ಹಗರಿ ಬೊಮ್ಮನಹಳ್ಳಿ, ಸಂಡೂರು, ಹೋವಿನ ಹಡಗಲಿ, ಮತ್ತು ಕೂಡ್ಲಗಿ ತಾಲ್ಲೂಕುಗಳು.
16	ಕಾರ್ಮಿಕ ಅಧಿಕಾರಿ, ಕೊಪ್ಪಳ ಉಪ ವಿಭಾಗ, ಕೊಪ್ಪಳ.	ಕೊಪ್ಪಳ ಜಿಲ್ಲೆ.
17	ಕಾರ್ಮಿಕ ಅಧಿಕಾರಿ, ಚಿತ್ರದುರ್ಗ ಉಪ ವಿಭಾಗ, ಚಿತ್ರದುರ್ಗ.	ಚಿತ್ರದುರ್ಗ ಜಿಲ್ಲೆ.
18	ಕಾರ್ಮಿಕ ಅಧಿಕಾರಿ, ದಾವಣಗೆರೆ ಉಪ ವಿಭಾಗ, ದಾವಣಗೆರೆ.	ದಾವಣಗೆರೆ ಜಿಲ್ಲೆ.
19	ಕಾರ್ಮಿಕ ಅಧಿಕಾರಿ, ರಾಯಚೂರು ಉಪ ವಿಭಾಗ ರಾಯಚೂರು.	ರಾಯಚೂರು ಜಿಲ್ಲೆ
20	ಕಾರ್ಮಿಕ ಅಧಿಕಾರಿ, ಬೀದರ್ ಉಪ ವಿಭಾಗ, ಬೀದರ್	ಬೀದರ್ ಜಿಲ್ಲೆ
21	ಕಾರ್ಮಿಕ ಅಧಿಕಾರಿ, ಬೆಳಗಾವಿ ಉಪವಿಭಾಗ-1, ಬೆಳಗಾವಿ.	ಬೆಳಗಾವಿ ನಗರ ಪಾಲಿಕೆಯ ಡಿವಿಜನ್ ಸಂಖ್ಯೆ 24 ರಿಂದ 44 ಮತ್ತು ಗೋಕಾಕ್, ಚಿಕ್ಕೋಡಿ, ಹುಕ್ಕೇರಿ, ಅಥಣಿ ಹಾಗೂ ರಾಯಬಾಗ್ ತಾಲ್ಲೂಕುಗಳು.
22	ಕಾರ್ಮಿಕ ಅಧಿಕಾರಿ, ಬೆಳಗಾವಿ ಉಪವಿಭಾಗ-2, ಬೆಳಗಾವಿ.	ಬೆಳಗಾವಿ ನಗರ ಪಾಲಿಕೆಯ ಡಿವಿಜನ್ ಸಂಖ್ಯೆ 1 ರಿಂದ 23 ಹಾಗೂ 45 ರಿಂಧ ಮತ್ತು 51ರವರೆಗೆ ಮತ್ತು ಬೆಳಗಾವಿ ತಾಲ್ಲೂಕು ಹಾಗೂ ರಾಮದುರ್ಗ, ಸವದತ್ತಿ, ಖಾನಾಪುರ, ಬೈಲಹೊಂಗಲ ತಾಲ್ಲೂಕುಗಳು.
23	ಕಾರ್ಮಿಕ ಅಧಿಕಾರಿ, ವಿಜಾಪುರ ಉಪ ವಿಭಾಗ-1, ವಿಜಾಪುರ	ಬಿಜಾಪುರ ಮುನ್ಸಿಪಲ್ ಡಿವಿಜನ್ ವಾರ್ಡ್ ನಂ.2, 3, 4, 6 ಮತ್ತು 8 ಹಾಗೂ ಸಿಂದಗಿ ಮತ್ತು ಇಂಡಿ ತಾಲ್ಲೂಕುಗಳು.

ಕ್ರಮ ಸಂಖ್ಯೆ	ಕಾರ್ಮಿಕ ಅಧಿಕಾರಿಗಳ ವಿವರ ಹಾಗು ಅವರ ಕೇಂದ್ರಸ್ಥಾನಗಳು	ಕಾರ್ಯವ್ಯಾಪ್ತಿ
24	ಕಾರ್ಮಿಕ ಅಧಿಕಾರಿ, ವಿಜಾಪುರ ಉಪ ವಿಭಾಗ-2, ವಿಜಾಪುರ	ಬಿಜಾಪುರ ಮುನ್ಸಿಪಲ್ ಡಿವಿಜನ್ ವಾರ್ಡ್ ನಂ.1, 5, 7, 9 ಮತ್ತು 10 ಹಾಗೂ ಬಿಜಾಪುರ ತಾಲ್ಲೂಕಿನ ಉಳಿದ ಪ್ರದೇಶ ಮತ್ತು ಮುದ್ದೇಬಿಹಾಳ ಹಾಗೂ ಬಸವನ ಬಾಗೇವಾಡಿ ತಾಲ್ಲೂಕುಗಳು.
25	ಕಾರ್ಮಿಕ ಅಧಿಕಾರಿ, ಹುಬ್ಬಳ್ಳಿ ಉಪ ವಿಭಾಗ-1, ಹುಬ್ಬಳ್ಳಿ.	ಹುಬ್ಬಳ್ಳಿ ಧಾರವಾಡ ನಗರ ಪಾಲಿಕೆಯ ಡಿವಿಜನ್ ಸಂಖ್ಯೆ: 22 ರಿಂದ 31, 37 ರಿಂದ 42, 45, 46, 50, 53 ಮತ್ತು ಹುಬ್ಬಳ್ಳಿಯ ಅಗಸೆಯಿಂದ ಪ್ರಾರಂಭಿಸಿ ಶಿವಾಜಿ ರಸ್ತೆ, ಗಾಂಧಿ ಚೌಕ, ಸುಭಾಸ್ ರಸ್ತೆ, ಆಜಾದ್ ಪಾರ್ಕ ರಸ್ತೆ, ಸಪ್ತಾಪುರ ರಸ್ತೆ, ಯೂನಿವರ್ಸಿಟಿ ರಸ್ತೆ ಮಾರ್ಗವಾಗಿ ಹಳಿಯಾಳ ರಸ್ತೆಯನ್ನು ಸೇರುವ ಹುಬ್ಬಳ್ಳಿ-ಧಾರವಾಡ ನಗರ ಪಾಲಿಕೆಯ ಎಲ್ಲೆಯನ್ನು ಮುಟ್ಟುವವರೆಗೆ ಇರುವ ವಿಭಾಗ ಮಾಡುವ ರಸ್ತೆಯ ಉತ್ತರಕ್ಕೆ ಇರುವ ಎಲ್ಲಾ ಪ್ರದೇಶಗಳು ಮತ್ತು ಧಾರವಾಡ ತಾಲ್ಲೂಕು ಹಾಗು ಕುಂದಗೋಳ ತಾಲ್ಲೂಕುಗಳು.
26	ಕಾರ್ಮಿಕ ಅಧಿಕಾರಿ, ಹುಬ್ಬಳ್ಳಿ ಉಪ ವಿಭಾಗ-2, ಹುಬ್ಬಳ್ಳಿ.	ಹುಬ್ಬಳ್ಳಿ ಧಾರವಾಡ ನಗರ ಪಾಲಿಕೆಯ ಡಿವಿಜನ್ ಸಂಖ್ಯೆ: 19 ರಿಂದ 21, 32 ರಿಂದ 36, 43, 44, 47 ರಿಂದ 49, 51, 52, 54 ರಿಂದ 57 ಮತ್ತು ಹುಬ್ಬಳ್ಳಿಯ ಅಗಸೆಯಿಂದ ಪ್ರಾರಂಭಿಸಿ, ಶಿವಾಜಿ ರಸ್ತೆ, ಗಾಂಧಿ ಚೌಕ, ಸುಭಾಸ್ ರಸ್ತೆ, ಆಜಾದ್ ಪಾರ್ಕ ರಸ್ತೆ, ಕರ್ನಾಟಕ ಕಾಲೇಜು ರಸ್ತೆ, ಸಪ್ತಾಪುರ ರಸ್ತೆ, ಯೂನಿವರ್ಸಿಟಿ ಮಾರ್ಗವಾಗಿ ಹಳಿಯಾಳ ರಸ್ತೆಯನ್ನು ಸೇರುವ ಹುಬ್ಬಳ್ಳಿ ಧಾರವಾಡ ನಗರ ಪಾಲಿಕೆಯ ಎಲ್ಲೆಯನ್ನು ಮುಟ್ಟುವವರೆಗೆ ಇರುವ ವಿಭಾಗ ಮಾಡುವ ರಸ್ತೆಯ ದಕ್ಷಿಣಕ್ಕೆ ಇರುವ ಪ್ರದೇಶಗಳು, ಮತ್ತು ನವಲಗುಂದ ಹಾಗೂ ಕಲಘಟಗಿ ತಾಲ್ಲೂಕುಗಳು.
27	ಕಾರ್ಮಿಕ ಅಧಿಕಾರಿ, ಬಾಗಲಕೋಟೆ ಉಪ ವಿಭಾಗ, ಬಾಗಲಕೋಟೆ.	ಬಾಗಲಕೋಟೆ ಜಿಲ್ಲೆ.
28	ಕಾರ್ಮಿಕ ಅಧಿಕಾರಿ, ಗದಗ ಉಪ ವಿಭಾಗ, ಗದಗ,	ಗದಗ ಜಿಲ್ಲೆ.
29	ಕಾರ್ಮಿಕ ಅಧಿಕಾರಿ, ಹಾವೇರಿ ಉಪ ವಿಭಾಗ, ಹಾವೇರಿ.	ಹಾವೇರಿ ಜಿಲ್ಲೆ.
30	ಕಾರ್ಮಿಕ ಅಧಿಕಾರಿ, ಕಾರವಾರ ಉಪ ವಿಭಾಗ, ಕಾರವಾರ	ಕಾರವಾರ ಜಿಲ್ಲೆ
31	ಕಾರ್ಮಿಕ ಅಧಿಕಾರಿ, ಹಾಸನ ಉಪ ವಿಭಾಗ, ಹಾಸನ.	ಹಾಸನ ಜಿಲ್ಲೆ.
32	ಕಾರ್ಮಿಕ ಅಧಿಕಾರಿ, ಕೊಡಗು ಉಪ ವಿಭಾಗ, ಮಡಿಕೇರಿ.	ಮಡಿಕೇರಿ ಜಿಲ್ಲೆ.
33	ಕಾರ್ಮಿಕ ಅಧಿಕಾರಿ, ಶಿವಮೊಗ್ಗ ಉಪ ವಿಭಾಗ, ಶಿವಮೊಗ್ಗ.	ಶಿವಮೊಗ್ಗ ಜಿಲ್ಲೆ.
34	ಕಾರ್ಮಿಕ ಅಧಿಕಾರಿ, ಉಡುಪಿ ಉಪ ವಿಭಾಗ, ಉಡುಪಿ.	ಉಡುಪಿ ಜಿಲ್ಲೆ
35	ಕಾರ್ಮಿಕ ಅಧಿಕಾರಿ, ಚಿಕ್ಕಮಗಳೂರು ಉಪ ವಿಭಾಗ-1, ಚಿಕ್ಕಮಗಳೂರು.	ಚಿಕ್ಕಮಗಳೂರು ನಗರದ ಮುನ್ಸಿಪಲ್ ಡಿವಿಜನ್ ಸಂಖ್ಯೆ: 1 ರಿಂದ 3 ಮತ್ತು ಚಿಕ್ಕಮಗಳೂರು ತಾಲ್ಲೂಕಿನ ವಸ್ತಾರೆ, ಆಲ್ದೂರು, ಕಾಂಡ್ಯ ಮತ್ತು ಅಂಬಳೆ ಹೋಬಳಿಗಳು ಹಾಗೂ ಕೊಪ್ಪ, ಶೃಂಗೇರಿ, ನರಸಿಂಹರಾಜಪುರ ಮತ್ತು ತರೀಕೆರೆ ತಾಲ್ಲೂಕುಗಳು.
36	ಕಾರ್ಮಿಕ ಅಧಿಕಾರಿ, ಚಿಕ್ಕಮಗಳೂರು ಉಪ ವಿಭಾಗ-2 ಚಿಕ್ಕಮಗಳೂರು.	ಚಿಕ್ಕಮಗಳೂರು ನಗರದ ಮುನ್ಸಿಪಲ್ ಡಿವಿಜನ್ ಸಂಖ್ಯೆ: 4 ರಿಂದ 7 ಮತ್ತು ಚಿಕ್ಕಮಗಳೂರು ತಾಲ್ಲೂಕಿನ ಕಸಬಾ, ಲಕ್ಯ, ಆವತಿ ಮತ್ತು ಜಾಗರ ಹೋಬಳಿಗಳು ಹಾಗೂ ಮೂಡಿಗೆರೆ ಮತ್ತು ಕಡೂರು ತಾಲ್ಲೂಕುಗಳು.
37	ಕಾರ್ಮಿಕ ಅಧಿಕಾರಿ, ದಕ್ಷಿಣ ಕನ್ನಡ ಉಪ ವಿಭಾಗ-1, ಮಂಗಳೂರು.	ಮಂಗಳೂರು ನಗರ ಪಾಲಿಕೆಯ ವಾರ್ಡ್ ಸಂಖ್ಯೆ: 14 ರಿಂದ 17, 22 ರಿಂದ 25 ಹಾಗೂ ಮಂಗಳೂರು ತಾಲ್ಲೂಕಿನ ಎಲ್ಲಾ ಪ್ರದೇಶಗಳು ಮತ್ತು ಬೆಳ್ತಂಗಡಿ ತಾಲ್ಲೂಕು.
38	ಕಾರ್ಮಿಕ ಅಧಿಕಾರಿ, ದಕ್ಷಿಣ ಕನ್ನಡ ಉಪ ವಿಭಾಗ-2, ಮಂಗಳೂರು.	ಮಂಗಳೂರು ನಗರ ಪಾಲಿಕೆಯ ವಾರ್ಡ್ ಸಂಖ್ಯೆ: 1 ರಿಂದ 13 ಮತ್ತು 18 ರಿಂದ 21, ಬಂಟ್ವಾಳ, ಪುತ್ತೂರು ಮತ್ತು ಸುಳ್ಯ ತಾಲ್ಲೂಕುಗಳು.

ಕ್ರಮ ಸಂಖ್ಯೆ	ಕಾರ್ಮಿಕ ಅಧಿಕಾರಿಗಳ ವಿವರ ಹಾಗು ಅವರ ಕೇಂದ್ರಸ್ಥಾನಗಳು	ಕಾರ್ಯವ್ಯಾಪ್ತಿ
39	ಕಾರ್ಮಿಕ ಅಧಿಕಾರಿ, ರಾಮನಗರ.	ರಾಮನಗರ ಜಿಲ್ಲೆ.
40	ಕಾರ್ಮಿಕ ಅಧಿಕಾರಿ, ಚಿಕ್ಕಬಳ್ಳಾಪುರ	ಚಿಕ್ಕಬಳ್ಳಾಪುರ ಜಿಲ್ಲೆ.
41	ಕಾರ್ಮಿಕ ಅಧಿಕಾರಿ, ಯಾದಗಿರಿ.	ಯಾದಗಿರಿ ಜಿಲ್ಲೆ.

ಎನ್.ಆರ್. ಪ್ರಭು,
ಸರ್ಕಾರದ ಅಧೀನ ಕಾರ್ಯದರ್ಶಿ,
ಕಾರ್ಮಿಕ ಇಲಾಖೆ

ಪಿ.ಆರ್. 472

ಕಂದಾಯ ಸಚಿವಾಲಯ

ಅಧಿಸೂಚನೆ-1

ಸಂಖ್ಯೆ:ಕಂಇ 135 ಮುನೋಮು 2011, ದಿನಾಂಕ: 14.03.2012.

ಸರ್ಕಾರದ ಆದೇಶ ಸಂಖ್ಯೆ: ಎಹೆಚ್‌ಡಿ 172 ಎಎಫ್‌ಟಿ 2010, ದಿನಾಂಕ: 05-03-2011 ರಂತೆ, ಸಮಗ್ರ ಕರ್ನಾಟಕ ಕೃಷಿ-ವಾಣಿಜ್ಯ ಅಭಿವೃದ್ಧಿ ನೀತಿ 2011 ನ್ನು ಜಾರಿಗೊಳಿಸಿದ್ದು, ಈ ನೀತಿಯನ್ವಯ ಅತಿ ಸಣ್ಣ, ಸಣ್ಣ ಮತ್ತು ಮಧ್ಯಮ ದರ್ಜೆಯ, ದೊಡ್ಡ ಮತ್ತು ಬೃಹತ್ ಕೃಷಿ ಆದಾರಿತ ಉದ್ದಿಮೆಗಳಿಗೆ ಹಾಗೂ ಕೃಷಿ ಮೂಲಭೂತ ಸೌಕರ್ಯಗಳ ಉದ್ದಿಮೆಗಳಿಗೆ ಉತ್ತೇಜನ ನೀಡುವ ದೃಷ್ಟಿಯಿಂದ ಕರ್ನಾಟಕ ಮುದ್ರಾಂಕ ಕಾಯಿದೆ, 1957 (1957ರ 34ನೇ ಕರ್ನಾಟಕ ಕಾಯಿದೆ) ಕಲಂ 9(1)(ಎ) ರಲ್ಲಿ ಹಾಗೂ ನೋಂದಣಿ ಕಾಯ್ದೆ 1908 (ಕೇಂದ್ರೀಯ ಕಾಯ್ದೆ 1908 16ನೇ ಕಾಯ್ದೆ) ಕಲಂ 78ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಸಮಗ್ರ ಕರ್ನಾಟಕ ಕೃಷಿ ವಾಣಿಜ್ಯ ಅಭಿವೃದ್ಧಿ ನೀತಿ 2011 ರಲ್ಲಿ ನಿರ್ದಿಷ್ಟಪಡಿಸಿದಂತೆ, ಸ್ಥಾಪಿಸಲಾಗುವ ಉದ್ದಿಮೆಗಳಿಗೆ ಈ ಕೆಳಕಂಡ ಮುದ್ರಾಂಕ ಶುಲ್ಕದಲ್ಲಿ ವಿನಾಯಿತಿ ಮತ್ತು ನೋಂದಣಿ ಶುಲ್ಕದಲ್ಲಿ ರಿಯಾಯಿತಿ ನೀಡಿ ಆದೇಶಿಸಿದೆ.

ಅ) ರಾಜ್ಯ ಸರ್ಕಾರ ಮತ್ತು ಅಥವಾ ರಾಜ್ಯ ಹಣಕಾಸು ಸಂಸ್ಥೆ, ರಾಜ್ಯ ಕೈಗಾರಿಕಾ ಬಂಡವಾಳ ಹೂಡಿಕೆ ಮತ್ತು ಅಭಿವೃದ್ಧಿ ನಿಗಮ, ರಾಷ್ಟ್ರ ಮಟ್ಟದ ಹಣಕಾಸು ಸಂಸ್ಥೆಗಳು, ವಾಣಿಜ್ಯ ಬ್ಯಾಂಕುಗಳು, ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳು, ಸಹಕಾರಿ ಬ್ಯಾಂಕುಗಳು, ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ, ಖಾದಿ ಮತ್ತು ಗ್ರಾಮೋದ್ಯೋಗ ಕಮೀಷನ್, ಕರ್ನಾಟಕ ಪರಿಶಿಷ್ಟ ಜಾತಿ/ಪಂಗಡಗಳ ಅಭಿವೃದ್ಧಿ ನಿಗಮ, ಕರ್ನಾಟಕ ರಾಜ್ಯದ ಅಲ್ಪ ಸಂಖ್ಯಾತರ ಅಭಿವೃದ್ಧಿ ನಿಗಮ ಮತ್ತು ಸರ್ಕಾರದಿಂದ ಕಾಲಕಾಲಕ್ಕೆ ಅಧಿಸೂಚನೆ ಮೂಲಕ ನಿಗಧಿಪಡಿಸುವ ಸಂಸ್ಥೆಗಳಿಂದ ಅವಧಿ ಸಾಲ ಪಡೆಯಲು ಮಾಡಿಕೊಡುವ ಸಾಲ ಕರಾರು, ಕ್ರೆಡಿಟ್ ಡೀಡ್, ಅಡಮಾನ ಪತ್ರಗಳಿಗೆ ಮತ್ತು

ಆ) ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ, ಕರ್ನಾಟಕ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ, ಕರ್ನಾಟಕ ವಿದ್ಯುನ್ಮಾನ ಅಭಿವೃದ್ಧಿ ನಿಗಮ, ಕರ್ನಾಟಕ ಕೈಗಾರಿಕಾ ಬಂಡವಾಳ ಹೂಡಿಕೆ ಮತ್ತು ಅಭಿವೃದ್ಧಿ ನಿಗಮ, ಕೈಗಾರಿಕಾ ವಸಾಹತುಗಳ ಜೊತೆ ಕೈಗಾರಿಕಾ ನಿವೇಶನ, ಷೆಡ್ಡುಗಳು, ಕೈಗಾರಿಕಾ ಕಟ್ಟಡವನ್ನು ಪಡೆಯಲು ಉದ್ಯಮಗಳು ಮಾಡಿಕೊಡುವ ಗುತ್ತಿಗೆ ಪತ್ರ, ಗುತ್ತಿಗೆ ಹಾಗೂ ಕ್ರಯಪತ್ರ, ಶುದ್ಧಕ್ರಯಪತ್ರ ದಸ್ತಾವೇಜುಗಳಿಗೆ ಮತ್ತು

ಇ) ಕರ್ನಾಟಕ ಭೂ ಸುಧಾರಣೆ ಕಾಯಿದೆ, 1961 ರ ಸೆಕ್ಷನ್ 109 ರ ನಿಯಮದ ಪ್ರಕಾರ ಖರೀದಿಸುವ ಜಮೀನಿಗೆ ಮತ್ತು **SHLCC/SLSWCC/DLSWCC** ಗಳಿಂದ ಅನುಮೋದಿತವಾದ ಯೋಜನೆಗಳಿಗೆ ಕೈಗಾರಿಕೋದ್ದೇಶಗಳಿಗೆ ಪರಿವರ್ತಿತವಾದ ಜಮೀನನ್ನು ಖರೀದಿಸಲು ಮತ್ತು ಭೂ ಮಾಲೀಕರಿಗೆ ಭೂ ಸ್ವಾಧೀನ ಪಡಿಸಿಕೊಂಡಿದ್ದಕ್ಕೆ ಪರಿಹಾರವಾಗಿ ಕೆ.ಐ.ಎ.ಡಿ.ಬಿ ಯಿಂದ ಜಮೀನು ವರ್ಗಾಯಿಸುವ ಪತ್ರಗಳಿಗೆ **ಮುದ್ರಾಂಕ ಶುಲ್ಕದಲ್ಲಿ ಶೇ. 50 ರಷ್ಟು ವಿನಾಯಿತಿ ನೀಡಿದೆ.**

ಈ) **ನೋಂದಣಿ ಶುಲ್ಕದಲ್ಲಿ ರಿಯಾಯಿತಿ:** - ಮೇಲ್ಕಂಡ (ಅ) ರಿಂದ (ಇ) ರವರೆಗಿನ ಎಲ್ಲಾ ದಸ್ತಾವೇಜುಗಳಿಗೆ ಪ್ರತಿ 1,000/- ರೂ.ಗಳ ಮೌಲ್ಯಕ್ಕೆ ಒಂದು ರೂಪಾಯಿಯಂತೆ ನೋಂದಣಿ ಶುಲ್ಕ ವಿಧಿಸುವುದು.

2. ಮುದ್ರಾಂಕ ಮತ್ತು ನೋಂದಣಿ ಶುಲ್ಕ ವಿನಾಯಿತಿ/ರಿಯಾಯಿತಿ ಪಡೆಯಲು ಅನುಬಂಧ-1 ಹಾಗೂ 2 ರಲ್ಲಿ ನಿಗಧಿಪಡಿಸಿರುವಂತೆ **ಕೃಷಿ ಇಲಾಖೆಯ ಅಧಿಕಾರಿಗಳಿಂದ ದೃಢೀಕರಿಸಲ್ಪಟ್ಟ** ಪ್ರಪತ್ರವನ್ನು ದಸ್ತಾವೇಜು ನೋಂದಣಿ ಸಮಯದಲ್ಲಿ ಒದಗಿಸುವುದು. ಈ ಪ್ರಪತ್ರದಲ್ಲಿ ಪ್ರಮಾಣೀಕರಿಸಿದ ಮಾಹಿತಿಯ ಆಧಾರದ ಮೇಲೆ ಮಾತ್ರ ಮುದ್ರಾಂಕ ಶುಲ್ಕ/ನೋಂದಣಿ ಶುಲ್ಕ ರಿಯಾಯಿತಿ ನೀಡುವ ಬಗ್ಗೆ ಪರಿಶೀಲಿಸಿ ದಸ್ತಾವೇಜುಗಳನ್ನು ನೋಂದಣಿ ಮಾಡತಕ್ಕದ್ದು.

3. ಕೈಗಾರಿಕಾ ನಿವೇಶನ, ಷೆಡ್ಡುಗಳು, ಕೈಗಾರಿಕಾ ಕಟ್ಟಡಗಳು ಮೊದಲಾದವುಗಳ ಲೀಸ್-ಕಂ-ಸೇಲ್ ಕರಾರಿನ ಅವಧಿ ಮುಗಿದ ಬಳಿಕ ಮಾಡಿಕೊಳ್ಳಲಾಗುವ ಅಂತಿಮ ಕ್ರಯಪತ್ರಕ್ಕೆ ಈ ಹಿಂದೆ ಲೀಸ್ ಕಂ ಸೇಲ್ ಡೀಡ್ ಮಾಡಿಕೊಂಡಾಗ ಚಾಲ್ತಿಯಲ್ಲಿದ್ದ ಕೈಗಾರಿಕಾ ನೀತಿಯ ಪ್ರಕಾರ ನಿಗಧಿಪಡಿಸಿದ್ದ ದರದಂತೆ ಮುದ್ರಾಂಕ ಶುಲ್ಕ ವಿನಾಯಿತಿ ಮತ್ತು ನೋಂದಣಿ ಶುಲ್ಕದ ರಿಯಾಯಿತಿ ನೀಡತಕ್ಕದ್ದು.

4. ಈ ಮೇಲೆ ನೀಡಲಾಗುವ ಮುದ್ರಾಂಕ ಶುಲ್ಕ ವಿನಾಯಿತಿ ಮತ್ತು ನೋಂದಣಿ ಶುಲ್ಕದಲ್ಲಿನ ಕಡಿತವು ಹೊಸ ಕೈಗಾರಿಕಾ ನೀತಿ 2009–14 ರನ್ವಯ ನಿಗಧಿಪಡಿಸಿದ ವಲಯ 4 ಕ್ಕೆ ಸೇರಿದ ತಾಲ್ಲೂಕುಗಳಾದ ಆನೇಕಲ್, ಬೆಂಗಳೂರು ಉತ್ತರ, ಬೆಂಗಳೂರು (ದಕ್ಷಿಣ), ಬೆಂಗಳೂರು (ಪೂರ್ವ), ದೇವನಹಳ್ಳಿ, ದೊಡ್ಡಬಳ್ಳಾಪುರ, ಹೊಸಕೋಟೆ, ನೆಲಮಂಗಲ, ರಾಮನಗರ, ಚನ್ನಪಟ್ಟಣ, ಮಂಗಳೂರು (ಕಾರ್ಪೋರೇಷನ್ ಪರಿಮಿತಿ) ಮತ್ತು ಮೈಸೂರು (ಕಾರ್ಪೋರೇಷನ್ ಪರಿಮಿತಿ)–ಇವುಗಳಲ್ಲಿ ಸ್ಥಾಪಿಸುವ ಕೃಷಿ–ವಾಣಿಜ್ಯ ಉದ್ದಿಮೆಗಳಿಗೆ ಅನ್ವಯಿಸುವುದಿಲ್ಲ.

5. ಈ ವಿನಾಯಿತಿ/ರಿಯಾಯಿತಿಯು ಅಧಿಸೂಚನೆಯ ದಿನಾಂಕದಿಂದ **04–03–2016** ರವರೆಗೆ ಅಥವಾ ಮುಂದಿನ ಆದೇಶದವರೆಗೆ ಜಾರಿಯಲ್ಲಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಟಿ.ಕೆ. ರಾಮಚಂದ್ರ,
ಸರ್ಕಾರದ ಅಧೀನ ಕಾರ್ಯದರ್ಶಿ,
ಕಂದಾಯ ಇಲಾಖೆ, (ನೋಂದಣಿ ಮತ್ತು ಮುದ್ರಾಂಕ)

ಅನುಬಂಧ–1

ಕರ್ನಾಟಕ ಕೃಷಿ–ವಾಣಿಜ್ಯ ಅಭಿವೃದ್ಧಿ ನೀತಿ 2011 ರನ್ವಯ ಸಾಲದ ಪತ್ರಗಳ ಬಗ್ಗೆ ನೋಂದಣಿ ಶುಲ್ಕ ಮತ್ತು ಮುದ್ರಾಂಕ ಶುಲ್ಕ ರಿಯಾಯಿತಿ ದೃಢೀಕರಣ ಪತ್ರದ ನಮೂನೆ

ಪ್ರಮಾಣ ಪತ್ರ

ವಿಷಯ: .... ರವರಿಗೆ ಮುದ್ರಾಂಕ ಶುಲ್ಕ ಮತ್ತು ನೋಂದಣಿ ಶುಲ್ಕ ರಿಯಾಯಿತಿ ದೃಢೀಕರಣ ಪತ್ರ ನೀಡುವ ಬಗ್ಗೆ.

ಉಲ್ಲೇಖ: 1. ಸರ್ಕಾರಿ ಆದೇಶ ಸಂಖ್ಯೆ: ಎಹೆಚ್‌ಡಿ 172 ಎಎಫ್‌ಟಿ 2010, ಬೆಂಗಳೂರು, ದಿನಾಂಕ: 05–03–2011.

2. ಕಂದಾಯ ಇಲಾಖೆ ಅಧಿಸೂಚನೆ ಸಂಖ್ಯೆ: ಕಂಇ/______/ಮುನೋಮು/______, ದಿನಾಂಕ: ______________

3. ಮೆ: ....ರವರ ಪತ್ರ ಸಂಖ್ಯೆ: ...., ದಿನಾಂಕ: ....

****

(i) ಮೆ: ....ನ ಮಾಲೀಕರಾದ/ಪಾಲುದಾರರಾದ/ವ್ಯವಸ್ಥಾಪಕ ನಿರ್ದೇಶಕರಾದ/ ನಿರ್ದೇಶಕರಾದ ಶ್ರೀ .... ರವರು ಪ್ರತಿನಿಧಿಸುತ್ತಿದ್ದು, ಈ ಘಟಕವು ಕೃಷಿ–ವಾಣಿಜ್ಯ ಉದ್ದಿಮೆಯಾಗಿದ್ದು, ವಿಸ್ತರಣೆ/ನವೀಕರಣ/ವೈವಿದ್ಧೀಕರಣ ಕೈಗೊಂಡಿದ್ದು, ಕರ್ನಾಟಕ ಕೃಷಿ ಇಲಾಖೆಯ /ಭಾರತ ಸರ್ಕಾರದ ಪತ್ರ ಸಂಖ್ಯೆ: .... ದಿನಾಂಕ: .... ರನ್ವಯ...... ಅನುಮತಿ/ಪರವಾನಗಿ ಪಡೆದಿರುತ್ತದೆ.

(ii) ಈ ಘಟಕವು ಸರ್ಕಾರದ ಆದೇಶ ಸಂಖ್ಯೆ: ಎಹೆಚ್‌ಡಿ 172 ಎಎಫ್‌ಟಿ 2010, ಬೆಂಗಳೂರು ದಿನಾಂಕ: 05–03–2011 ರನ್ವಯ ಕೃಷಿ–ವಾಣಿಜ್ಯ ಉದ್ದಿಮೆಗಳಿಗೆ ನೀಡಲಾಗುವ ಉತ್ತೇಜನಗಳು ಮತ್ತು ರಿಯಾಯಿತಿಗಳಂತೆ ವಲಯ .... ರಲ್ಲಿ ಸ್ಥಾಪಿತಗೊಂಡಿದ್ದು, ಮೆಗಾ ಯೋಜನೆ/ದೊಡ್ಡ/ಮಧ್ಯಮ/ಸಣ್ಣ/ಸೂಕ್ಷ್ಮ ಉದ್ಯಮ ಎಂದು ಧೃಢೀಕರಿಸಿದೆ.

(iii) ಈ ಉದ್ದಿಮೆಗೆ ....(ಸಾಲ ನೀಡುವ ಬ್ಯಾಂಕ್)/ ಸಂಸ್ಥೆ ವಿವರ ನೀಡುವುದು) ರವರು ರೂ. .... ಅವಧಿ ಸಾಲವನ್ನು ರೂ. .... ಯೋಜನಾ ವೆಚ್ಚದಲ್ಲಿ ....ಮಂಜೂರು ಮಾಡಿರುತ್ತದೆ.

(iv) ಈ ಘಟಕದ ಪ್ರಸ್ತಾಪಿತ ಯೋಜನೆಯನ್ನು **DLSWCC/SLSWCC/SHLCC** ರವರು ದಿ: .... ರಂದು ನಡೆದ......................ಸಭೆಯಲ್ಲಿ ಅನುಮೋದಿಸಿದ್ದಾರೆ.

(v) ಈ ಉದ್ದಿಮೆಯು ಅವಧಿ ಸಾಲ ಪಡೆಯುವ ಹಿನ್ನಲೆಯಲ್ಲಿ ಸಾಲ ಕರಾರು/ಕ್ರೆಡಿಟ್ ಡೀಡ್/ಅಡಮಾನ/ಬಾಡಿಗೆ ಪತ್ರಗಳ ಮುದ್ರಾಂಕ ಶುಲ್ಕದಲ್ಲಿ ಶೇ. 100/75 ರಷ್ಟು ರಿಯಾಯಿತಿ ಪಡೆಯಲು ಹಾಗೂ ನೋಂದಣಿ ಶುಲ್ಕದಲ್ಲಿ ದಸ್ತಾವೇಜು ಮೌಲ್ಯದ ಪ್ರತಿ ರೂ. 1000/– ಕ್ಕೆ ರೂ. 1/– ನ್ನು ಮಾತ್ರ ಪಾವತಿಸಲು ಅರ್ಹರಿರುವುದಾಗಿ ದೃಢೀಕರಿಸಿದೆ.

.... ಅಧಿಕಾರಿ

ಕರ್ನಾಟಕ ಕೃಷಿ ಇಲಾಖೆ ______________

ಅನುಬಂಧ–2

ಕರ್ನಾಟಕ ಕೃಷಿ–ವಾಣಿಜ್ಯ ನೀತಿ 2011 ರನ್ವಯ ಗುತ್ತಿಗೆ, ಗುತ್ತಿಗೆ ಹಾಗೂ ಕ್ರಯ, ಕ್ರಯಪತ್ರಗಳ ಬಗ್ಗೆ ನೋಂದಣಿ ಶುಲ್ಕ ಮತ್ತು ಮುದ್ರಾಂಕ ಶುಲ್ಕ ರಿಯಾಯಿತಿ ದೃಢೀಕರಣ ಪತ್ರದ ನಮೂನೆ

ಪ್ರಮಾಣ ಪತ್ರ

ವಿಷಯ: .... ರವರಿಗೆ ಮುದ್ರಾಂಕ ಶುಲ್ಕ ಮತ್ತು ನೋಂದಣಿ ಶುಲ್ಕ ರಿಯಾಯಿತಿ ದೃಢೀಕರಣ ಪತ್ರ ನೀಡುವ ಬಗ್ಗೆ.

ಉಲ್ಲೇಖ: 1. ಸರ್ಕಾರಿ ಆದೇಶ ಸಂಖ್ಯೆ: ಎಹೆಚ್‌ಡಿ 172 ಎಎಫ್‌ಟಿ 2010, ಬೆಂಗಳೂರು, ದಿನಾಂಕ: 05–03–2011

2. ಕಂದಾಯ ಇಲಾಖೆ ಅಧಿಸೂಚನೆ ಸಂಖ್ಯೆ: ಕಂಇ/______/ಮುನೋಮು/______. ದಿನಾಂಕ: ______________

3. ಮೆ: ....ರವರ ಪತ್ರ ಸಂಖ್ಯೆ: ...., ದಿನಾಂಕ: ....

4. .... ರವರು ಸದರಿ ಘಟಕಕ್ಕೆ ನೀಡಿರುವ ಅಲಾಟ್‌ಮೆಂಟ್ ಪತ್ರ ಸಂಖ್ಯೆ: ....
ದಿನಾಂಕ: ....

****

(i) ಮೆ: ....ನ ಮಾಲೀಕರಾದ/ಪಾಲುದಾರರಾದ/ವ್ಯವಸ್ಥಾಪಕ ನಿರ್ದೇಶಕರಾದ/ನಿರ್ದೇಶಕರಾದ ಶ್ರೀ .... ರವರು ಪ್ರತಿನಿಧಿಸುತ್ತಿದ್ದು, ಈ ಘಟಕವು ಕೃಷಿ–ವಾಣಿಜ್ಯ ಉದ್ದಿಮೆಯಾಗಿದ್ದು, ವಿಸ್ತರಣೆ/ನವೀಕರಣ/ವೈವಿಧ್ಯೀಕರಣ ಕೈಗೊಂಡಿದ್ದು, ಕರ್ನಾಟಕ ಕೃಷಿ ಇಲಾಖೆಯ/ಭಾರತ ಸರ್ಕಾರದ ಪತ್ರ ಸಂಖ್ಯೆ: .... ದಿನಾಂಕ: .... ರನ್ವಯ...... ಅನುಮತಿ/ಪರವಾನಗಿ ಪಡೆದಿರುತ್ತದೆ.

(ii) ಈ ಘಟಕವು ಸರ್ಕಾರಿ ಆದೇಶ ಸಂಖ್ಯೆ: ಎಹೆಚ್‌ಡಿ 172 ಎಎಫ್‌ಟಿ 2010, ಬೆಂಗಳೂರು ದಿನಾಂಕ: 05–03–2011 ರನ್ವಯ ಕೃಷಿ–ವಾಣಿಜ್ಯ ಉದ್ದಿಮೆಗಳಿಗೆ ನೀಡಲಾಗುವ ಉತ್ತೇಜನಗಳು ಮತ್ತು ರಿಯಾಯಿತಿಗಳಂತೆ ವಲಯ .... ರಲ್ಲಿ ಸ್ಥಾಪಿತಗೊಂಡಿದ್ದು, ಮೆಗಾ ಯೋಜನೆ/ದೊಡ್ಡ/ಮಧ್ಯಮ/ಸಣ್ಣ/ಸೂಕ್ಷ್ಮ ಉದ್ಯಮ ಎಂದು ದೃಢೀಕರಿಸಿದೆ.

(iii) ಈ ಉದ್ದಿಮೆಗೆ ಕೆಐಎಡಿಬಿ/ಕೆಎಸ್‌ಎಸ್‌ಐಡಿಸಿ/ಕಿಯೋನಿಕ್ಸ್/ಕೆಎಸ್‌ಐಐಡಿಸಿ/ಇಂಡಸ್ಟ್ರಿಯಲ್ ಕೋ ಆಪರೇಟೀವ್ ಸೊಸೈಟಿ/ಅನುಮೋದಿತ ಕೈಗಾರಿಕಾ ಪ್ರದೇಶದವರಿಂದ ....ಚ.ಮೀ//........................ ಎಕರೆ ಮಳಿಗೆ/ನಿವೇಶನ/ಟೆನಮೆಂಟನ್ನು .... ಹಂಚಿಕೆ ಮಾಡಿರುತ್ತದೆ ಅಥವಾ ಘಟಕವು ಕೆಎಲ್‌ಆರ್ ಕಾಯ್ದೆ ನಿಯಮ 109 ರಡಿ .... ಎಕರೆ ಜಮೀನು ಖರೀದಿಸಿರುತ್ತದೆ ಅಥವಾ .... ರಿಂದ .... ಎಕರೆ ಪರಿವರ್ತಿತ ಭೂಮಿಯನ್ನು **DLSWCC/SLSWCC/SHLCC** ಅನುಮೋದನೆಯಂತೆ ಖರೀದಿಸಿರುತ್ತದೆ.

(iv) ಈ ಘಟಕದ ಪ್ರಸ್ತಾಪಿತ ಯೋಜನೆಯನ್ನು **DLSWCC/SLSWCC/SHLCC** ರವರು ದಿ: .... ರಂದು ನಡೆದ ....ಸಭೆಯಲ್ಲಿ ಅನುಮೋದಿಸಿದ್ದಾರೆ.

(v) ಈ ಮೇಲ್ಕಂಡ ಕ್ರಸಂ. (3) ರಂತೆ ಈ ಉದ್ದಿಮೆಗೆ ನಿವೇಶನ/ಮಳಿಗೆ/ಟೆನಮೆಂಟ್‌ನ ಲೀಸ್–ಡೀಡ್/ಲೀಸ್ ಕಂ ಸೇಲ್ ಡೀಡ್/ಶುದ್ಧಕ್ರಯ ಪತ್ರ ಪಡೆಯುವ ಹಿನ್ನಲೆಯಲ್ಲಿ ಮುದ್ರಾಂಕ ಶುಲ್ಕದಲ್ಲಿ ಶೇ. 100/75 ರಷ್ಟು ರಿಯಾಯಿತಿ ಪಡೆಯಲು ಹಾಗೂ ನೋಂದಣಿ ಶುಲ್ಕದಲ್ಲಿ ದಸ್ತಾವೇಜು ಮೌಲ್ಯದ ಪ್ರತಿ ರೂ. 1000/– ಕ್ಕೆ ರೂ. 1/– ನ್ನು ಮಾತ್ರ ಪಾವತಿಸಲು ಅರ್ಹರಿರುವುದಾಗಿ ದೃಢೀಕರಿಸಿದೆ.

.... ಅಧಿಕಾರಿ

ಕರ್ನಾಟಕ ಕೃಷಿ ಇಲಾಖೆ ______________

ಕಂದಾಯ ಸಚಿವಾಲಯ

ಅಧಿಸೂಚನೆ-2

ಸಂಖ್ಯೆ:ಕಂಇ 135 ಮುನೋಮು 2011, ದಿನಾಂಕ: 14.03.2012.

ಸರ್ಕಾರದ ಆದೇಶ ಸಂಖ್ಯೆ: ಐಟಿಡಿ 10 ಪಿಆರ್‌ಎಂ 2008, ಬೆಂಗಳೂರು ದಿನಾಂಕ: 25/02/2010 ರಲ್ಲಿ ಜಾರಿಯಲ್ಲಿರುವಂತೆ, ಕರ್ನಾಟಕ ರಾಜ್ಯದ ಸೆಮಿ ಕಂಡಕ್ಟರ್ ನೀತಿ 2010 ಪ್ರಕಟಿಸಲಾಗಿದ್ದು, ಈ ನೀತಿಯನ್ವಯ ಅರ್ಹವುಳ್ಳ ಅತಿ ಸಣ್ಣ, ಸಣ್ಣ ಮತ್ತು ಮಧ್ಯಮ ದರ್ಜೆಯ, ದೊಡ್ಡ ಮತ್ತು ಬೃಹತ್ ಸೆಮಿ ಕಂಡಕ್ಟರ್ ಉದ್ದಿಮೆಗಳಿಗೆ ಉತ್ತೇಜನ ನೀಡುವ ದೃಷ್ಟಿಯಿಂದ ಕರ್ನಾಟಕ ಮುದ್ರಾಂಕ ಕಾಯ್ದೆ 1957 ರ (34ನೇ ಕರ್ನಾಟಕ ಕಾಯ್ದೆ) ಕಲಂ 9(1)(ಎ) ರಲ್ಲಿ ಹಾಗೂ ನೋಂದಣಿ ಕಾಯ್ದೆ 1908 ರ (ಕೇಂದ್ರೀಯ ಕಾಯ್ದೆ 16) ಕಲಂ 78 ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಸೆಮಿ ಕಂಡಕ್ಟರ್ ನೀತಿ 2011 ರಲ್ಲಿ ನಿರ್ಧಿಷ್ಟಪಡಿಸಿದಂತೆ ಅನುಬಂಧ-1 ರಲ್ಲಿರುವ ವಲಯ-1, 2 ಮತ್ತು 3 ರಲ್ಲಿ ಸ್ಥಾಪಿಸಲಾಗುವ ಉದ್ದಿಮೆಗಳಿಗೆ ಈ ಕೆಳಕಂಡ ಮುದ್ರಾಂಕ ಶುಲ್ಕದಲ್ಲಿ ವಿನಾಯಿತಿ ಮತ್ತು ನೋಂದಣಿ ಶುಲ್ಕದಲ್ಲಿ ರಿಯಾಯಿತಿ ನೀಡಿ ಆದೇಶಿಸಿದೆ.

ಅ) ರಾಜ್ಯ ಸರ್ಕಾರ ಅಥವಾ ರಾಜ್ಯ ಆರ್ಥಿಕ ನಿಗಮಗಳು, ಕೈಗಾರಿಕೆ ಹಣ ಹೂಡಿಕೆ ಅಭಿವೃದ್ಧಿ ನಿಗಮ, ರಾಷ್ಟ್ರ ಮಟ್ಟದ ಆರ್ಥಿಕ ಸಂಸ್ಥೆಗಳು, ವಾಣಿಜ್ಯ ಬ್ಯಾಂಕುಗಳು, ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳು, ಸಹಕಾರಿ ಬ್ಯಾಂಕುಗಳು, ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ, ಖಾದಿ ಮತ್ತು ಗ್ರಾಮೋದ್ಯೋಗ ಕಮೀಷನ್, ಕರ್ನಾಟಕ ಪರಿಶಿಷ್ಟ ಜಾತಿ/ಪಂಗಡಗಳ ಅಭಿವೃದ್ಧಿ ನಿಗಮ, ಕರ್ನಾಟಕ ರಾಜ್ಯದ ಅಲ್ಪ ಸಂಖ್ಯಾತರ ಅಭಿವೃದ್ಧಿ ನಿಗಮ ಮತ್ತು ಸರ್ಕಾರದಿಂದ ಕಾಲಕಾಲಕ್ಕೆ ಅಧಿಸೂಚನೆ ಮೂಲಕ ನಿಗಧಿಪಡಿಸುವ ಸಂಸ್ಥೆಗಳಿಂದ ಅವಧಿ ಸಾಲ ಪಡೆಯಲು ಮಾಡಿಕೊಡುವ ಸಾಲ ಕರಾರು, ಕ್ರೆಡಿಟ್ ಡೀಡ್, ಅಡಮಾನ ಪತ್ರಗಳಿಗೆ ಮತ್ತು

ಆ) ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ, ಕರ್ನಾಟಕ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ, ಕರ್ನಾಟಕ ವಿದ್ಯುನ್ಮಾನ ಅಭಿವೃದ್ಧಿ ನಿಗಮ, ಕರ್ನಾಟಕ ಕೈಗಾರಿಕಾ ಬಂಡವಾಳ ಹೂಡಿಕೆ ಮತ್ತು ಅಭಿವೃದ್ಧಿ ನಿಗಮ, ಕೈಗಾರಿಕಾ ವಸಾಹತುಗಳ ಜೊತೆ ಕೈಗಾರಿಕಾ ನಿವೇಶನ, ಷೆಡ್ಡುಗಳು, ಕೈಗಾರಿಕಾ ಕಟ್ಟಡವನ್ನು ಪಡೆಯಲು ಉದ್ದಿಮೆಗಳು ಮಾಡಿಕೊಡುವ ಗುತ್ತಿಗೆ ಪತ್ರ, ಗುತ್ತಿಗೆ ಹಾಗೂ ಕ್ರಯಪತ್ರ, ಶುದ್ಧಕ್ರಯಪತ್ರ ದಸ್ತಾವೇಜುಗಳಿಗೆ ಮತ್ತು

ಇ) ಕರ್ನಾಟಕ ಭೂ ಸುಧಾರಣೆ ಕಾಯಿದೆ, 1961 ರ ಸೆಕ್ಷನ್ 109 ರ ನಿಯಮದ ಪ್ರಕಾರ ಖರೀದಿಸುವ ಜಮೀನಿಗೆ ಮತ್ತು **SHLCC/SLSWCC/DLSWCC** ಗಳಿಂದ ಅನುಮೋದಿತವಾದ ಯೋಜನೆಗಳಿಗೆ ಕೈಗಾರಿಕೋದ್ದೇಶಗಳಿಗೆ ಪರಿವರ್ತಿತವಾದ ಜಮೀನನ್ನು ಖರೀದಿಸಲು ಮತ್ತು ಭೂ ಮಾಲೀಕರಿಗೆ ಭೂ ಸ್ವಾಧೀನ ಪಡಿಸಿಕೊಂಡಿದ್ದಕ್ಕೆ ಪರಿಹಾರವಾಗಿ ಕೆ.ಐ.ಎ.ಡಿ.ಬಿ ಯಿಂದ ಜಮೀನು ವರ್ಗಾಯಿಸುವ ಪತ್ರಗಳಿಗೆ

ವಲಯ	ಮುದ್ರಾಂಕ ಶುಲ್ಕದಲ್ಲಿ ವಿನಾಯಿತಿ	ನೋಂದಣಿ ಶುಲ್ಕದಲ್ಲಿ ರಿಯಾಯಿತಿ
1 ಮತ್ತು 2	ಶೇ. 100 ರಷ್ಟು	ಪ್ರತಿ ರೂ. 1000/- ಮೌಲ್ಯಕ್ಕೆ ರೂ. 1 ರಂತೆ ಶುಲ್ಕ ವಿಧಿಸುವುದು
3	ಶೇ. 75 ರಷ್ಟು	ಪ್ರತಿ ರೂ. 1000/- ಮೌಲ್ಯಕ್ಕೆ ರೂ. 1 ರಂತೆ ಶುಲ್ಕ ವಿಧಿಸುವುದು
4	ಯಾವುದೇ ವಿನಾಯ್ತಿ ಇಲ್ಲ	ಯಾವುದೇ ರಿಯಾಯ್ತಿ ಇಲ್ಲ

2. ಮುದ್ರಾಂಕ ಮತ್ತು ನೋಂದಣಿ ಶುಲ್ಕ ವಿನಾಯಿತಿ/ರಿಯಾಯಿತಿ ಪಡೆಯಲು ಅನುಬಂಧ-2 ಹಾಗೂ 3ರಲ್ಲಿ ನಿಗಧಿಪಡಿಸಿರುವಂತೆ ಮಾಹಿತಿ ತಂತ್ರಜ್ಞಾನ ಇಲಾಖೆಯ ಮತ್ತು ಕರ್ನಾಟಕ ಜೈವಿಕ ತಂತ್ರಜ್ಞಾನ ಅಧಿಕಾರಿಗಳಿಂದ ದೃಢೀಕರಿಸಲ್ಪಟ್ಟ ಪ್ರಪತ್ರವನ್ನು ದಸ್ತಾವೇಜು ನೋಂದಣಿ ಸಮಯದಲ್ಲಿ ಒದಗಿಸುವುದು. ಈ ಪ್ರಪತ್ರದಲ್ಲಿ ಪ್ರಮಾಣೀಕರಿಸಿದ ಮಾಹಿತಿಯ ಆಧಾರದ ಮೇಲೆ ಮಾತ್ರ ಮುದ್ರಾಂಕ ಶುಲ್ಕ/ನೋಂದಣಿ ಶುಲ್ಕ ರಿಯಾಯಿತಿ ನೀಡುವ ಬಗ್ಗೆ ಪರಿಶೀಲಿಸಿ ದಸ್ತಾವೇಜುಗಳನ್ನು ನೋಂದಣಿ ಮಾಡತಕ್ಕದ್ದು.

3. ಕೈಗಾರಿಕಾ ನಿವೇಶನ, ಷೆಡ್ಡುಗಳು, ಕೈಗಾರಿಕಾ ಕಟ್ಟಡಗಳು ಮೊದಲಾದವುಗಳ ಲೀಸ್-ಕಂ-ಸೇಲ್ ಕರಾರಿನ ಅವಧಿ ಮುಗಿದ ಬಳಿಕ ಮಾಡಿಕೊಳ್ಳಲಾಗುವ ಅಂತಿಮ ಕ್ರಯಪತ್ರಕ್ಕೆ ಈ ಹಿಂದೆ ಲೀಸ್ ಕಂ ಸೇಲ್ ಡೀಡ್ ಮಾಡಿಕೊಂಡಾಗ ಚಾಲ್ತಿಯಲ್ಲಿದ್ದ ಕೈಗಾರಿಕಾ ನೀತಿಯ ಪ್ರಕಾರ ನಿಗಧಿಪಡಿಸಿದ್ದ ದರದಂತೆ ಮುದ್ರಾಂಕ ಶುಲ್ಕ ವಿನಾಯಿತಿ ಮತ್ತು ನೋಂದಣಿ ಶುಲ್ಕದ ರಿಯಾಯಿತಿ ನೀಡತಕ್ಕದ್ದು.

4. ಈ ವಿನಾಯಿತಿ/ರಿಯಾಯಿತಿಯು ಅಧಿಸೂಚನೆಯ ದಿನಾಂಕದಿಂದ 24-02-2015 ರವರೆಗೆ ಅಥವಾ ಮುಂದಿನ ಆದೇಶದವರೆಗೆ ಜಾರಿಯಲ್ಲಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಟಿ.ಕೆ. ರಾಮಚಂದ್ರ,
ಸರ್ಕಾರದ ಅಧೀನ ಕಾರ್ಯದರ್ಶಿ,
ಕಂದಾಯ ಇಲಾಖೆ, (ನೋಂದಣಿ ಮತ್ತು ಮುದ್ರಾಂಕ)

ಅನುಬಂಧ-2

ಕರ್ನಾಟಕ ಸೆಮಿ ಕಂಡಕ್ಟರ್ 2010 ರ ನೀತಿಯನ್ವಯ ಸಾಲದ ಪತ್ರಗಳ ಬಗ್ಗೆ ನೋಂದಣಿ ಶುಲ್ಕ ಮತ್ತು ಮುದ್ರಾಂಕ ಶುಲ್ಕ ರಿಯಾಯಿತಿ ದೃಢೀಕರಣ ಪತ್ರದ ನಮೂನೆ

ಪ್ರಮಾಣ ಪತ್ರ

ವಿಷಯ: .... ರವರಿಗೆ ಮುದ್ರಾಂಕ ಶುಲ್ಕ ಮತ್ತು ನೋಂದಣಿ ಶುಲ್ಕ ರಿಯಾಯಿತಿ ದೃಢೀಕರಣ ಪತ್ರ ನೀಡುವ ಬಗ್ಗೆ.

ಉಲ್ಲೇಖ: 1. ಸರ್ಕಾರಿ ಆದೇಶ ಸಂಖ್ಯೆ: ಐಟಿಡಿ 10 ಪಿಆರ್‌ಎಂ 2008, ಬೆಂಗಳೂರು, ದಿನಾಂಕ: 25/02/2010

2. ಕಂದಾಯ ಇಲಾಖೆ ಅಧಿಸೂಚನೆ ಸಂಖ್ಯೆ: ಕಂಇ/______/ಮುನೋಮು/______, ದಿನಾಂಕ: ______________

3. ಮೆ: ....ರವರ ಪತ್ರ ಸಂಖ್ಯೆ: .... ದಿನಾಂಕ: ....

****

(i) ಮೆ: ....ನ ಮಾಲೀಕರಾದ/ಪಾಲುದಾರರಾದ/ವ್ಯವಸ್ಥಾಪಕ ನಿರ್ದೇಶಕರಾದ/ನಿರ್ದೇಶಕರಾದ ಶ್ರೀ .... ರವರು ಪ್ರತಿನಿಧಿಸುತ್ತಿದ್ದು, ಈ ಘಟಕವು ಸೆಮಿ ಕಂಡಕ್ಟರ್ ಉದ್ದಿಮೆಯಾಗಿದ್ದು/ವಿಸ್ತರಣೆ/ನವೀಕರಣ/ವೈವಿಧ್ಯೀಕರಣ ಕೈಗೊಂಡಿದ್ದು, ಕರ್ನಾಟಕ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಇಲಾಖೆಯ /ಭಾರತ ಸರ್ಕಾರದ ಪತ್ರ ಸಂಖ್ಯೆ: .... ದಿನಾಂಕ: .... ರನ್ವಯ...... ಅನುಮತಿ/ಪರವಾನಗಿ ಪಡೆದಿರುತ್ತದೆ.

(ii) ಈ ಘಟಕವು ಸರ್ಕಾರದ ಆದೇಶ ಸಂಖ್ಯೆ: ಐಟಿಡಿ 10 ಪಿಆರ್‌ಎಂ 2008, ಬೆಂಗಳೂರು ದಿನಾಂಕ: 25/02/2010ರ ಪ್ರಕಾರ ಸೆಮಿ ಕಂಡಕ್ಟರ್ ಉದ್ದಿಮೆಗಳಿಗೆ ನೀಡಲಾಗುವ ಉತ್ತೇಜನಗಳು ಮತ್ತು ರಿಯಾಯಿತಿಗಳಂತೆ ವಲಯ .... ರಲ್ಲಿ ಸ್ಥಾಪಿತಗೊಂಡಿದ್ದು, ಮೆಗಾ ಯೋಜನೆ /ದೊಡ್ಡ/ಮಧ್ಯಮ/ಸಣ್ಣ/ಸೂಕ್ಷ್ಮ ಉದ್ಯಮ ಎಂದು ದೃಢೀಕರಿಸಿದೆ.

(iii) ಈ ಉದ್ದಿಮೆಗೆ ....(ಸಾಲ ನೀಡುವ ಬ್ಯಾಂಕ್)/ ಸಂಸ್ಥೆ ವಿವರ ನೀಡುವುದು) ರವರು ರೂ. .... ಅವಧಿ ಸಾಲವನ್ನು ರೂ. .... ಯೋಜನಾ ವೆಚ್ಚದಲ್ಲಿ .... ಮಂಜೂರು ಮಾಡಿರುತ್ತದೆ.

(iv) ಈ ಘಟಕದ ಪ್ರಸ್ತಾಪಿತ ಯೋಜನೆಯನ್ನು **DLSWCC/SLSWCC/SHLCC** ರವರು ದಿ: .... ರಂದು ನಡೆದ ಇವರ ....ಸಭೆಯಲ್ಲಿ ಅನುಮೋದಿಸಿದ್ದಾರೆ.

(v) ಈ ಉದ್ದಿಮೆಯು ಅವಧಿ ಸಾಲ ಪಡೆಯುವ ಹಿನ್ನಲೆಯಲ್ಲಿ ಸಾಲ ಕರಾರು/ಕ್ರೆಡಿಟ್ ಡೀಡ್/ಅಡಮಾನ/ಬಾಡಿಗೆ ಪತ್ರಗಳ ಮುದ್ರಾಂಕ ಶುಲ್ಕದಲ್ಲಿ ಶೇ. 100/75 ರಷ್ಟು ರಿಯಾಯಿತಿ ಪಡೆಯಲು ಹಾಗೂ ನೋಂದಣಿ ಶುಲ್ಕದಲ್ಲಿ ದಸ್ತಾವೇಜು ಮೌಲ್ಯದ ಪ್ರತಿ ರೂ. 1000/- ಕ್ಕೆ ರೂ. 1/- ನ್ನು ಮಾತ್ರ ಪಾವತಿಸಲು ಅರ್ಹರಿರುವುದಾಗಿ ದೃಢೀಕರಿಸಿದೆ.

.... **ಅಧಿಕಾರಿ**

ಕರ್ನಾಟಕ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಇಲಾಖೆ ______________

ಅನುಬಂಧ-3

ಕರ್ನಾಟಕ ಸೆಮಿ ಕಂಡಕ್ಟರ್ 2010 ರ ನೀತಿಯನ್ವಯ ಗುತ್ತಿಗೆ, ಗುತ್ತಿಗೆ ಹಾಗೂ ಕ್ರಯ, ಕ್ರಯಪತ್ರಗಳ ಬಗ್ಗೆ ನೋಂದಣಿ ಶುಲ್ಕ ಮತ್ತು ಮುದ್ರಾಂಕ ಶುಲ್ಕ ರಿಯಾಯಿತಿ ದೃಢೀಕರಣ ಪತ್ರದ ನಮೂನೆ

ಪ್ರಮಾಣ ಪತ್ರ

ವಿಷಯ: .... ರವರಿಗೆ ಮುದ್ರಾಂಕ ಶುಲ್ಕ ಮತ್ತು ನೋಂದಣಿ ಶುಲ್ಕ ರಿಯಾಯಿತಿ ದೃಢೀಕರಣ ಪತ್ರ ನೀಡುವ ಬಗ್ಗೆ.

ಉಲ್ಲೇಖ: 1. ಸರ್ಕಾರಿ ಆದೇಶ ಸಂಖ್ಯೆ: ಐಟಿಡಿ 10 ಪಿಆರ್ಎಂ 2008, ಬೆಂಗಳೂರು, ದಿನಾಂಕ: 25/02/2010

2. ಕಂದಾಯ ಇಲಾಖೆ ಅಧಿಸೂಚನೆ ಸಂಖ್ಯೆ: ಕಂಇ/______/ಮುನೋಮು/______, ದಿನಾಂಕ: ______________

3. ಮೆ: ....ರವರ ಪತ್ರ ಸಂಖ್ಯೆ: ...., ದಿನಾಂಕ: ....

4. .... ರವರು ಸದರಿ ಘಟಕಕ್ಕೆ ನೀಡಿರುವ ಅಲಾಟ್‌ಮೆಂಟ್ ಪತ್ರ ಸಂಖ್ಯೆ: .... ದಿನಾಂಕ: ....

****

(i) ಮೆ: ....ನ ಮಾಲೀಕರಾದ/ಪಾಲುದಾರರಾದ/ವ್ಯವಸ್ಥಾಪಕ ನಿರ್ದೇಶಕರಾದ/ನಿರ್ದೇಶಕರಾದ ಶ್ರೀ .... ರವರು ಪ್ರತಿನಿಧಿಸುತ್ತಿದ್ದು, ಈ ಘಟಕವು ಸೆಮಿ ಕಂಡಕ್ಟರ್ ಘಟಕವಾಗಿದ್ದು, ವಿಸ್ತರಣೆ/ನವೀಕರಣ/ವೈವಿದ್ದೀಕರಣ ಕೈಗೊಂಡಿದ್ದು, ಕರ್ನಾಟಕ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಇಲಾಖೆಯ/ಭಾರತ ಸರ್ಕಾರದ ಪತ್ರ ಸಂಖ್ಯೆ: .... ದಿನಾಂಕ: .... ರನ್ವಯ...... ಅನುಮತಿ/ಪರವಾನಗಿ ಪಡೆದಿರುತ್ತದೆ.

(ii) ಈ ಘಟಕವು ಸರ್ಕಾರಿ ಆದೇಶ ಸಂಖ್ಯೆ: ಐಟಿಡಿ 10 ಪಿಆರ್ಎಂ 2008, ಬೆಂಗಳೂರು ದಿನಾಂಕ: 25/02/2010 ರನ್ವಯ ಸೆಮಿ ಕಂಡಕ್ಟರ್ ಉದ್ದಿಮೆಗಳಿಗೆ ನೀಡಲಾಗುವ ಉತ್ತೇಜನಗಳು ಮತ್ತು ರಿಯಾಯಿತಿಗಳಂತೆ ವಲಯ .... ರಲ್ಲಿ ಸ್ಥಾಪಿತಗೊಂಡಿದ್ದು, ಮೆಗಾ ಯೋಜನೆ/ದೊಡ್ಡ/ಮಧ್ಯಮ/ಸಣ್ಣ/ಸೂಕ್ಷ್ಮ ಉದ್ಯಮ ಎಂದು ದೃಢೀಕರಿಸಿದೆ.

(iii) ಈ ಉದ್ದಿಮೆಗೆ ಕೆಐಎಡಿಬಿ/ಕೆಎಸ್ಎಸ್ಐಡಿಸಿ/ಕಿಯೋನಿಕ್ಸ್/ಕೆಎಸ್ಐಐಡಿಸಿ/ಇಂಡಸ್ಟ್ರಿಯಲ್ ಕೋ ಆಪರೇಟೀವ್ ಸೊಸೈಟಿ/ಅನುಮೋದಿತ ಕೈಗಾರಿಕಾ ಪ್ರದೇಶದವರಿಂದ ....ಚ.ಮೀ//......................... ಎಕರೆ ಮಳಿಗೆ/ನಿವೇಶನ/ಟೆನಮೆಂಟನ್ನು .... ಹಂಚಿಕೆ ಮಾಡಿರುತ್ತದೆ ಅಥವಾ ಘಟಕವು ಕೆಎಲ್ಆರ್ ಕಾಯ್ದೆ ನಿಯಮ 109 ರಡಿ .... ಎಕರೆ ಜಮೀನು ಖರೀದಿಸಿರುತ್ತದೆ ಅಥವಾ ....ರಿಂದ .... ಎಕರೆ ಕೈಗಾರಿಕೋದ್ದೇಶಗಳಿಗೆ ಪರಿವರ್ತಿತ ಭೂಮಿಯನ್ನು **DLSWCC/SLSWCC/SHLCC** ಅನುಮೋದನೆಯಂತೆ ಖರೀದಿಸಿರುತ್ತದೆ.

(iv) ಈ ಉದ್ದಿಮೆಯ ಪ್ರಸ್ತಾಪಿತ ಯೋಜನೆಯನ್ನು **DLSWCC/SLSWCC/SHLCC** ರವರು ದಿ: .... ರಂದು ನಡೆದ......................ಸಭೆಯಲ್ಲಿ ಅನುಮೋದಿಸಿದ್ದಾರೆ.

(v) ಈ ಮೇಲ್ಕಂಡ ಕ್ರ.ಸಂ. (3) ರಂತೆ ಈ ಉದ್ದಿಮೆಗೆ ನಿವೇಶನ/ಮಳಿಗೆ/ಟೆನಮೆಂಟ್‌ನ ಲೀಸ್-ಡೀಡ್/ಲೀಸ್ ಕಂ ಸೇಲ್ ಡೀಡ್/ಶುದ್ಧಕ್ರಯ ಪತ್ರ ಪಡೆಯುವ ಓನ್ನಲೆಯಲ್ಲಿ ಮುದ್ರಾಂಕ ಶುಲ್ಕದಲ್ಲಿ ಶೇ. 100/75 ರಷ್ಟು ರಿಯಾಯಿತಿ ಪಡೆಯಲು ಹಾಗೂ ನೋಂದಣಿ ಶುಲ್ಕದಲ್ಲಿ ದಸ್ತಾವೇಜು ಮೌಲ್ಯದ ಪ್ರತಿ ರೂ. 1000/- ಕ್ಕೆ ರೂ. 1/- ನ್ನು ಮಾತ್ರ ಪಾವತಿಸಲು ಅರ್ಹರಿರುವುದಾಗಿ ದೃಢೀಕರಿಸಿದೆ.

.... ಅಧಿಕಾರಿ
ಕರ್ನಾಟಕ ಮಾಹಿತಿ ತಂತ್ರಜ್ಞಾನ ಮತ್ತು
ಜೈವಿಕ ತಂತ್ರಜ್ಞಾನ ಇಲಾಖೆ ______________

ಕಂದಾಯ ಸಚಿವಾಲಯ

ಅಧಿಸೂಚನೆ-3

ಸಂಖ್ಯೆ:ಕಂಇ 135 ಮುನೋಮು 2011, ದಿನಾಂಕ: 14.03.2012.

ಸರ್ಕಾರದ ಆದೇಶ ಸಂಖ್ಯೆ: ಐಟಿಡಿ 11 ಪಿಆರ್‌ಎಂ 2008, ಬೆಂಗಳೂರು ದಿನಾಂಕ: 02/02/2011 ರಲ್ಲಿ ಜಾರಿಯಲ್ಲಿರುವಂತೆ, ಮಾಹಿತಿ ಮತ್ತು ಸಂಪರ್ಕ ತಂತ್ರಜ್ಞಾನ ನೀತಿ 2011 **(ICT Policy)** ಪ್ರಕಟಿಸಲಾಗಿದ್ದು, ಈ ನೀತಿಯನ್ವಯ ಅರ್ಹವುಳ್ಳ ಅತಿ ಸಣ್ಣ, ಸಣ್ಣ ಮತ್ತು ಮಧ್ಯಮ ದರ್ಜೆಯ, ದೊಡ್ಡ ಮತ್ತು ಬೃಹತ್ ಐಸಿಟಿ ಉದ್ದಿಮೆಗಳಿಗೆ ಉತ್ತೇಜನ ನೀಡುವ ದೃಷ್ಟಿಯಿಂದ, ಈಗಾಗಲೇ ಹೊರಡಿಸಿರುವ ಅಧಿಸೂಚನೆ ಸಂಖ್ಯೆ: ಕಂಇ 145 ಮುನೋಮು 2011, ದಿನಾಂಕ: 27-08-2011 ನ್ನು ತಕ್ಷಣದಿಂದ ಜಾರಿಗೆ ಬರುವಂತೆ ಹಿಂತೆಗೆದುಕೊಂಡು, ಕರ್ನಾಟಕ ಮುದ್ರಾಂಕ ಕಾಯ್ದೆ 1957 ರ (34ನೇ ಕರ್ನಾಟಕ ಕಾಯ್ದೆ) ಕಲಂ 9(1)(ಎ) ರಲ್ಲಿ ಹಾಗೂ ನೋಂದಣಿ ಕಾಯ್ದೆ 1908 ರ (ಕೇಂದ್ರೀಯ ಕಾಯ್ದೆ 16) ಕಲಂ 78 ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಮಾಹಿತಿ ಮತ್ತು ಸಂಪರ್ಕ ತಂತ್ರಜ್ಞಾನ ನೀತಿ 2011 **(ICT Policy)** ಯಲ್ಲಿ ನಿರ್ದಿಷ್ಟಪಡಿಸಿದಂತೆ ಅನುಬಂಧ-1 ರಲ್ಲಿರುವ ವಲಯ-1, 2 ಮತ್ತು 3 ರಲ್ಲಿ ಸ್ಥಾಪಿಸಲಾಗುವ ಉದ್ದಿಮೆಗಳಿಗೆ, ಈ ಕೆಳಕಂಡ ಮುದ್ರಾಂಕ ಶುಲ್ಕದಲ್ಲಿ ವಿನಾಯಿತಿ ಮತ್ತು ನೋಂದಣಿ ಶುಲ್ಕದಲ್ಲಿ ರಿಯಾಯಿತಿ ನೀಡಿ ಆದೇಶಿಸಿದೆ.

ಅ) ರಾಜ್ಯ ಸರ್ಕಾರ ಅಥವಾ ರಾಜ್ಯ ಆರ್ಥಿಕ ನಿಗಮಗಳು, ಕೈಗಾರಿಕೆ ಹಣ ಹೂಡಿಕೆ ಅಭಿವೃದ್ಧಿ ನಿಗಮ, ರಾಷ್ಟ್ರ ಮಟ್ಟದ ಆರ್ಥಿಕ ಸಂಸ್ಥೆಗಳು, ವಾಣಿಜ್ಯ ಬ್ಯಾಂಕುಗಳು, ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳು, ಸಹಕಾರಿ ಬ್ಯಾಂಕುಗಳು, ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ, ಖಾದಿ ಮತ್ತು ಗ್ರಾಮೋದ್ಯೋಗ ಕಮೀಷನ್, ಕರ್ನಾಟಕ ಪರಿಶಿಷ್ಟ ಜಾತಿ/ಪಂಗಡಗಳ ಅಭಿವೃದ್ಧಿ ನಿಗಮ, ಕರ್ನಾಟಕ ರಾಜ್ಯದ ಅಲ್ಪ ಸಂಖ್ಯಾತರ ಅಭಿವೃದ್ಧಿ ನಿಗಮ ಮತ್ತು ಸರ್ಕಾರದಿಂದ ಕಾಲಕಾಲಕ್ಕೆ ಅಧಿಸೂಚನೆ ಮೂಲಕ ನಿಗಧಿಪಡಿಸುವ ಸಂಸ್ಥೆಗಳಿಂದ ಅವಧಿ ಸಾಲ ಪಡೆಯಲು ಮಾಡಿಕೊಡುವ ಸಾಲ ಕರಾರು, ಕ್ರೆಡಿಟ್ ಡೀಡ್, ಅಡಮಾನ ಪತ್ರಗಳಿಗೆ ಮತ್ತು

ಆ) ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ, ಕರ್ನಾಟಕ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ, ಕರ್ನಾಟಕ ವಿದ್ಯುನ್ಮಾನ ಅಭಿವೃದ್ಧಿ ನಿಗಮ, ಕರ್ನಾಟಕ ಕೈಗಾರಿಕಾ ಬಂಡವಾಳ ಹೂಡಿಕೆ ಮತ್ತು ಅಭಿವೃದ್ಧಿ ನಿಗಮ, ಕೈಗಾರಿಕಾ ವಸಾಹತುಗಳ ಜೊತೆ ಕೈಗಾರಿಕಾ ನಿವೇಶನ, ಷೆಡ್ಡುಗಳು, ಕೈಗಾರಿಕಾ ಕಟ್ಟಡವನ್ನು ಪಡೆಯಲು ಉದ್ದಿಮೆಗಳು ಮಾಡಿಕೊಡುವ ಗುತ್ತಿಗೆ ಪತ್ರ, ಗುತ್ತಿಗೆ ಹಾಗೂ ಕ್ರಯಪತ್ರ, ಶುದ್ಧಕ್ರಯಪತ್ರ ದಸ್ತಾವೇಜುಗಳಿಗೆ ಮತ್ತು

ಇ) ಕರ್ನಾಟಕ ಭೂ ಸುಧಾರಣೆ ಕಾಯಿದೆ, 1961 ರ ಸೆಕ್ಷನ್ 109 ರ ನಿಯಮದ ಪ್ರಕಾರ ಖರೀದಿಸುವ ಜಮೀನಿಗೆ ಮತ್ತು SHLCC/SLSWCC/DLSWCC ಗಳಿಂದ ಅನುಮೋದಿತವಾದ ಯೋಜನೆಗಳಿಗೆ ಕೈಗಾರಿಕೋದ್ದೇಶಗಳಿಗೆ ಪರಿವರ್ತಿತವಾದ ಜಮೀನನ್ನು ಖರೀದಿಸಲು ಮತ್ತು ಭೂ ಮಾಲೀಕರಿಗೆ ಭೂ ಸ್ವಾಧೀನ ಪಡಿಸಿಕೊಂಡಿದ್ದಕ್ಕೆ ಪರಿಹಾರವಾಗಿ ಕೆ.ಐ.ಎ.ಡಿ.ಬಿ ಯಿಂದ ಜಮೀನು ವರ್ಗಾಯಿಸುವ ಪತ್ರಗಳಿಗೆ

ವಲಯ	ಮುದ್ರಾಂಕ ಶುಲ್ಕದಲ್ಲಿ ವಿನಾಯಿತಿ	ನೋಂದಣಿ ಶುಲ್ಕದಲ್ಲಿ ರಿಯಾಯಿತಿ
1. ಮತ್ತು 2.	ಶೇ. 100 ರಷ್ಟು	ಪ್ರತಿ ರೂ. 1000/- ಮೌಲ್ಯಕ್ಕೆ ರೂ. 1 ರಂತೆ ಶುಲ್ಕ ವಿಧಿಸುವುದು
3.	ಶೇ. 75 ರಷ್ಟು	ಪ್ರತಿ ರೂ. 1000/- ಮೌಲ್ಯಕ್ಕೆ ರೂ. 1 ರಂತೆ ಶುಲ್ಕ ವಿಧಿಸುವುದು
4	ಯಾವುದೇ ವಿನಾಯ್ತಿ ಇಲ್ಲ	ಯಾವುದೇ ರಿಯಾಯ್ತಿ ಇಲ್ಲ

2. ಮುದ್ರಾಂಕ ಮತ್ತು ನೋಂದಣಿ ಶುಲ್ಕ ವಿನಾಯಿತಿ/ರಿಯಾಯಿತಿ ಪಡೆಯಲು ಅನುಬಂಧ-2 ಹಾಗೂ 3ರಲ್ಲಿ ನಿಗಧಿಪಡಿಸಿರುವಂತೆ **ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ನಿರ್ದೇಶನಾಲಯದ ಅಧಿಕಾರಿಗಳಿಂದ** ದೃಢೀಕರಿಸಲ್ಪಟ್ಟ ಪ್ರಪತ್ರವನ್ನು ದಸ್ತಾವೇಜು ನೋಂದಣಿ ಸಮಯದಲ್ಲಿ ಒದಗಿಸುವುದು. ಈ ಪ್ರಪತ್ರದಲ್ಲಿ ಪ್ರಮಾಣೀಕರಿಸಿದ ಮಾಹಿತಿಯ ಆಧಾರದ ಮೇಲೆ ಮಾತ್ರ ಮುದ್ರಾಂಕ ಶುಲ್ಕ/ನೋಂದಣಿ ಶುಲ್ಕ ರಿಯಾಯಿತಿ ನೀಡುವ ಬಗ್ಗೆ ಪರಿಶೀಲಿಸಿ ದಸ್ತಾವೇಜುಗಳನ್ನು ನೋಂದಣಿ ಮಾಡತಕ್ಕದ್ದು.

3. ಕೈಗಾರಿಕಾ ನಿವೇಶನ, ಷೆಡ್ಡುಗಳು, ಕೈಗಾರಿಕಾ ಕಟ್ಟಡಗಳು ಮೊದಲಾದವುಗಳ ಲೀಸ್-ಕಂ-ಸೇಲ್ ಕರಾರಿನ ಅವಧಿ ಮುಗಿದ ಬಳಿಕ ಮಾಡಿಕೊಳ್ಳಲಾಗುವ ಅಂತಿಮ ಕ್ರಯಪತ್ರಕ್ಕೆ ಈ ಹಿಂದೆ ಲೀಸ್ ಕಂ ಸೇಲ್ ಡೀಡ್ ಮಾಡಿಕೊಂಡಾಗ ಚಾಲ್ತಿಯಲ್ಲಿದ್ದ ಕೈಗಾರಿಕಾ ನೀತಿಯ ಪ್ರಕಾರ ನಿಗಧಿಪಡಿಸಿದ್ದ ದರದಂತೆ ಮುದ್ರಾಂಕ ಶುಲ್ಕ ವಿನಾಯಿತಿ ಮತ್ತು ನೋಂದಣಿ ಶುಲ್ಕದ ರಿಯಾಯಿತಿ ನೀಡತಕ್ಕದ್ದು.

4. ಈ ವಿನಾಯಿತಿ/ರಿಯಾಯಿತಿಯು ಅಧಿಸೂಚನೆಯ ದಿನಾಂಕದಿಂದ **01–02–2016** ರವರೆಗೆ ಅಥವಾ ಮುಂದಿನ ಆದೇಶದವರೆಗೆ ಜಾರಿಯಲ್ಲಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಟಿ.ಕೆ. ರಾಮಚಂದ್ರ,
ಸರ್ಕಾರದ ಅಧೀನ ಕಾರ್ಯದರ್ಶಿ,
ಕಂದಾಯ ಇಲಾಖೆ, (ನೋಂದಣಿ ಮತ್ತು ಮುದ್ರಾಂಕ)

ಅನುಬಂಧ–2

ಕರ್ನಾಟಕ ಮಾಹಿತಿ ಮತ್ತು ಸಂಪರ್ಕ ತಂತ್ರಜ್ಞಾನ ನೀತಿ 2011 (ICT Policy) ರನ್ವಯ ಸಾಲದ ಪತ್ರಗಳ ಬಗ್ಗೆ ನೋಂದಣಿ ಶುಲ್ಕ ಮತ್ತು ಮುದ್ರಾಂಕ ಶುಲ್ಕ ರಿಯಾಯಿತಿ ದೃಢೀಕರಣ ಪತ್ರದ ನಮೂನೆ

ಪ್ರಮಾಣ ಪತ್ರ

ವಿಷಯ: .... ರವರಿಗೆ ಮುದ್ರಾಂಕ ಶುಲ್ಕ ಮತ್ತು ನೋಂದಣಿ ಶುಲ್ಕ ರಿಯಾಯಿತಿ ದೃಢೀಕರಣ ಪತ್ರ ನೀಡುವ ಬಗ್ಗೆ.

ಉಲ್ಲೇಖ: 1. ಸರ್ಕಾರಿ ಆದೇಶ ಸಂಖ್ಯೆ: ಐಟಿಡಿ 11 ಪಿಆರ್‌ಎಂ 2008, ಬೆಂಗಳೂರು, ದಿನಾಂಕ: 02/02/2011

2. ಕಂದಾಯ ಇಲಾಖೆ ಅಧಿಸೂಚನೆ ಸಂಖ್ಯೆ: ಕಂಇ/______/ಮುನೋಮು/______, ದಿನಾಂಕ: ______________

3. ಮೆ: ....ರವರ ಪತ್ರ ಸಂಖ್ಯೆ: .... ದಿನಾಂಕ: ....

****

(i) ಮೆ: ....ನ ಮಾಲೀಕರಾದ/ಪಾಲುದಾರರಾದ/ವ್ಯವಸ್ಥಾಪಕ ನಿರ್ದೇಶಕರಾದ/ನಿರ್ದೇಶಕರಾದ ಶ್ರೀ .... ರವರು ಪ್ರತಿನಿಧಿಸುತ್ತಿದ್ದು, ಈ ಘಟಕವು ಮಾಹಿತಿ ಮತ್ತು ಸಂಪರ್ಕ ತಂತ್ರಜ್ಞಾನ ಉದ್ದಿಮೆಯಾಗಿದ್ದು, ವಿಸ್ತರಣೆ/ನವೀಕರಣ/ವೈವಿದ್ಧೀಕರಣ ಕೈಗೊಂಡಿದ್ದು, ಕರ್ನಾಟಕ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಇಲಾಖೆಯ /ಭಾರತ ಸರ್ಕಾರದ ಪತ್ರ ಸಂಖ್ಯೆ: .... ದಿನಾಂಕ: .... ರನ್ವಯ...... ಅನುಮತಿ/ಪರವಾನಗಿ ಪಡೆದಿರುತ್ತದೆ.

(ii) ಈ ಘಟಕವು ಸರ್ಕಾರದ ಆದೇಶ ಸಂಖ್ಯೆ: ಐಟಿಡಿ 11 ಪಿಆರ್‌ಎಂ 2008, ಬೆಂಗಳೂರು ದಿನಾಂಕ: 02/02/2011 ರನ್ವಯ ಮಾಹಿತಿ ಮತ್ತು ಸಂಪರ್ಕ ತಂತ್ರಜ್ಞಾನ ಉದ್ದಿಮೆಗಳಿಗೆ ನೀಡಲಾಗುವ ಉತ್ತೇಜನಗಳು ಮತ್ತು ರಿಯಾಯಿತಿಗಳಂತೆ ವಲಯ .... ರಲ್ಲಿ ಸ್ಥಾಪಿತಗೊಂಡಿದ್ದು, ಮೆಗಾ ಯೋಜನೆ /ದೊಡ್ಡ/ಮಧ್ಯಮ/ಸಣ್ಣ/ಸೂಕ್ಷ್ಮ ಉದ್ಯಮ ಎಂದು ದೃಢೀಕರಿಸಿದೆ.

(iii) ಈ ಉದ್ದಿಮೆಗೆ...............................(ಸಾಲ ನೀಡುವ ಬ್ಯಾಂಕ್)/ ಸಂಸ್ಥೆ ವಿವರ ನೀಡುವುದು) ರವರು ರೂ. .... ಅವಧಿ ಸಾಲವನ್ನು ರೂ. .... ಯೋಜನಾ ವೆಚ್ಚದಲ್ಲಿ .... ಮಂಜೂರು ಮಾಡಿರುತ್ತದೆ.

(iv) ಈ ಘಟಕದ ಪ್ರಸ್ತಾಪಿತ ಯೋಜನೆಯನ್ನು **DLSWCC/SLSWCC/SHLCC** ರವರು ದಿ: .... ರಂದು ನಡೆದ ....ಸಭೆಯಲ್ಲಿ ಅನುಮೋದಿಸಿದ್ದಾರೆ.

(v) ಈ ಮೇಲ್ಕಂಡ ಕ್ರಸಂ. (3) ರಂತೆ ಈ ಉದ್ದಿಮೆಗೆ ನಿವೇಶನ/ಮಳಿಗೆ/ಟೆನೆಮೆಂಟ್‌ನ ಲೀಸ್–ಡೀಡ್/ಲೀಸ್ ಕಂ ಸೇಲ್ ಡೀಡ್/ಶುದ್ಧಕ್ರಯ ಪತ್ರ ಪಡೆಯುವ ಹಿನ್ನಲೆಯಲ್ಲಿ ಮುದ್ರಾಂಕ ಶುಲ್ಕದಲ್ಲಿ ಶೇ. 100/75 ರಷ್ಟು ರಿಯಾಯಿತಿ ಪಡೆಯಲು ಹಾಗೂ ನೋಂದಣಿ ಶುಲ್ಕದಲ್ಲಿ ದಸ್ತಾವೇಜು ಮೌಲ್ಯದ ಪ್ರತಿ ರೂ. 1000/– ಕ್ಕೆ ರೂ. 1/– ನ್ನು ಮಾತ್ರ ಪಾವತಿಸಲು ಅರ್ಹರಿರುವುದಾಗಿ ದೃಢೀಕರಿಸಿದೆ.

.... **ಅಧಿಕಾರಿ**
ಕರ್ನಾಟಕ ಮಾಹಿತಿ ತಂತ್ರಜ್ಞಾನ ಮತ್ತು
ಜೈವಿಕ ತಂತ್ರಜ್ಞಾನ ಇಲಾಖೆ _______________

ಅನುಬಂಧ-3

ಕರ್ನಾಟಕ ಮಾಹಿತಿ ಮತ್ತು ಸಂಪರ್ಕ ತಂತ್ರಜ್ಞಾನ ನೀತಿ 2011 (ICT Policy) ರನ್ವಯ ಗುತ್ತಿಗೆ, ಗುತ್ತಿಗೆ ಹಾಗೂ ಕ್ರಯ, ಕ್ರಯಪತ್ರಗಳ ಬಗ್ಗೆ ನೋಂದಣಿ ಶುಲ್ಕ ಮತ್ತು ಮುದ್ರಾಂಕ ಶುಲ್ಕ ರಿಯಾಯಿತಿ ದೃಢೀಕರಣ ಪತ್ರದ ನಮೂನೆ

ಪ್ರಮಾಣ ಪತ್ರ

ವಿಷಯ: .... ರವರಿಗೆ ಮುದ್ರಾಂಕ ಶುಲ್ಕ ಮತ್ತು ನೋಂದಣಿ ಶುಲ್ಕ ರಿಯಾಯಿತಿ ದೃಢೀಕರಣ ಪತ್ರ ನೀಡುವ ಬಗ್ಗೆ.

ಉಲ್ಲೇಖ: 1. ಸರ್ಕಾರಿ ಆದೇಶ ಸಂಖ್ಯೆ: ಐಟಿಡಿ 11 ಪಿಆರ್ಎಂ 2008, ಬೆಂಗಳೂರು ದಿನಾಂಕ: 02/02/2011

2. ಕಂದಾಯ ಇಲಾಖೆ ಅಧಿಸೂಚನೆ ಸಂಖ್ಯೆ: ಕಂಇ/______/ಮುನೋಮು/______, ದಿನಾಂಕ: ________________

3. ಮೆ: ....ರವರ ಪತ್ರ ಸಂಖ್ಯೆ: ...., ದಿನಾಂಕ: ....

4. .... ರವರು ಸದರಿ ಘಟಕಕ್ಕೆ ನೀಡಿರುವ ಅಲಾಟ್‌ಮೆಂಟ್ ಪತ್ರ ಸಂಖ್ಯೆ: .... ದಿನಾಂಕ: ....

****

(i) ಮೆ: ....ನ ಮಾಲೀಕರಾದ/ಪಾಲುದಾರರಾದ/ವ್ಯವಸ್ಥಾಪಕ ನಿರ್ದೇಶಕರಾದ/ನಿರ್ದೇಶಕರಾದ ಶ್ರೀ .... ರವರು ಪ್ರತಿನಿಧಿಸುತ್ತಿದ್ದು, ಈ ಘಟಕವು ಮಾಹಿತಿ ಮತ್ತು ತಂತ್ರಜ್ಞಾನ ಘಟಕವಾಗಿದ್ದು, ವಿಸ್ತರಣೆ/ನವೀಕರಣ/ವೈವಿಧ್ಯೀಕರಣ ಕೈಗೊಂಡಿದ್ದು, ಕರ್ನಾಟಕ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಇಲಾಖೆಯ/ಭಾರತ ಸರ್ಕಾರದ ಪತ್ರ ಸಂಖ್ಯೆ: .... ದಿನಾಂಕ: .... ರನ್ವಯ...... ಅನುಮತಿ/ಪರವಾನಗಿ ಪಡೆದಿರುತ್ತದೆ.

(ii) ಈ ಘಟಕವು ಸರ್ಕಾರಿ ಆದೇಶ ಸಂಖ್ಯೆ: ಐಟಿಡಿ 11 ಪಿಆರ್ಎಂ 2008, ಬೆಂಗಳೂರು ದಿನಾಂಕ: 02/02/2011 ರನ್ವಯ ಮಾಹಿತಿ ಮತ್ತು ತಂತ್ರಜ್ಞಾನ ಉದ್ದಿಮೆಗಳಿಗೆ ನೀಡಲಾಗುವ ಉತ್ತೇಜನಗಳು ಮತ್ತು ರಿಯಾಯಿತಿಗಳಂತೆ ವಲಯ .... ರಲ್ಲಿ ಸ್ಥಾಪಿತಗೊಂಡಿದ್ದು, ಮೆಗಾ ಯೋಜನೆ/ದೊಡ್ಡ/ಮಧ್ಯಮ/ಸಣ್ಣ/ಸೂಕ್ಷ್ಮ ಉದ್ಯಮ ಎಂದು ದೃಢೀಕರಿಸಿದೆ.

(iii) ಈ ಉದ್ದಿಮೆಗೆ ಕೆಐಎಡಿಬಿ/ಕೆಎಸ್ಎಸ್ಐಡಿಸಿ/ಕಿಯೋನಿಕ್ಸ್/ಕೆಎಸ್ಐಐಡಿಸಿ/ಇಂಡಸ್ಟ್ರಿಯಲ್ ಕೋ ಆಪರೇಟೀವ್ ಸೊಸೈಟಿ/ಅನುಮೋದಿತ ಕೈಗಾರಿಕಾ ಪ್ರದೇಶದವರಿಂದ ....ಚ.ಮೀ//......................... ಎಕರೆ ಮಳಿಗೆ/ನಿವೇಶನ/ಟೆನಮೆಂಟನ್ನು .... ಹಂಚಿಕೆ ಮಾಡಿರುತ್ತದೆ ಅಥವಾ ಘಟಕವು ಕೆಎಲ್ಆರ್ ಕಾಯ್ದೆ ನಿಯಮ 109 ರಡಿ .... ಎಕರೆ ಜಮೀನು ಖರೀದಿಸಿರುತ್ತದೆ ಅಥವಾ .... ರಿಂದ .... ಎಕರೆ ಪರಿವರ್ತಿತ ಭೂಮಿಯನ್ನು **DLSWCC/SLSWCC/SHLCC** ಅನುಮೋದನೆಯಂತೆ ಖರೀದಿಸಿರುತ್ತದೆ.

(iv) ಈ ಘಟಕದ ಪ್ರಸ್ತಾಪಿತ ಯೋಜನೆಯನ್ನು **DLSWCC/SLSWCC/SHLCC** ರವರು ದಿ: .... ರಂದು ನಡೆದ ....ಸಭೆಯಲ್ಲಿ ಅನುಮೋದಿಸಿದ್ದಾರೆ.

(v) ಈ ಮೇಲ್ಕಂಡ ಕ್ರ.ಸಂ. (3) ರಂತೆ ಈ ಉದ್ದಿಮೆಗೆ ನಿವೇಶನ/ಮಳಿಗೆ/ಟೆನಮೆಂಟ್‌ನ ಲೀಸ್-ಡೀಡ್/ಲೀಸ್ ಕಂ ಸೇಲ್ ಡೀಡ್/ಶುದ್ಧಕ್ರಯ ಪತ್ರ ಪಡೆಯುವ ಹಿನ್ನಲೆಯಲ್ಲಿ ಮುದ್ರಾಂಕ ಶುಲ್ಕದಲ್ಲಿ ಶೇ. 100/75 ರಷ್ಟು ರಿಯಾಯಿತಿ ಪಡೆಯಲು ಹಾಗೂ ನೋಂದಣಿ ಶುಲ್ಕದಲ್ಲಿ ದಸ್ತಾವೇಜು ಮೌಲ್ಯದ ಪ್ರತಿ ರೂ. 1000/- ಕ್ಕೆ ರೂ. 1/- ನ್ನು ಮಾತ್ರ ಪಾವತಿಸಲು ಅರ್ಹರಿರುವುದಾಗಿ ದೃಢೀಕರಿಸಿದೆ.

.... ಅಧಿಕಾರಿ

ಕರ್ನಾಟಕ ಮಾಹಿತಿ ತಂತ್ರಜ್ಞಾನ ಮತ್ತು

ಜೈವಿಕ ತಂತ್ರಜ್ಞಾನ ಇಲಾಖೆ ______________

ಕಂದಾಯ ಸಚಿವಾಲಯ

ಅಧಿಸೂಚನೆ-4

ಸಂಖ್ಯೆ:ಕಂಇ 135 ಮುನೋಮು 2011, ದಿನಾಂಕ: 14.03.2012.

ಸರ್ಕಾರದ ಆದೇಶ ಸಂಖ್ಯೆ: ಐಟಿಡಿ 09 ಪಿಆರ್ಎಂ 2008, ಬೆಂಗಳೂರು ದಿನಾಂಕ: 29/01/2011 ರಲ್ಲಿ ಜಾರಿಯಲ್ಲಿರುವಂತೆ, ಕರ್ನಾಟಕ ರಾಜ್ಯದ ಎಲೆಕ್ಟ್ರಾನಿಕ್ಸ್ ಹಾರ್ಡ್‌ವೇರ್ ನೀತಿ 2011 ಪ್ರಕಟಿಸಲಾಗಿದ್ದು, ಈ ನೀತಿಯನ್ವಯ ಅರ್ಹವುಳ್ಳ ಅತಿ ಸಣ್ಣ, ಸಣ್ಣ ಮತ್ತು ಮಧ್ಯಮ ದರ್ಜೆಯ, ದೊಡ್ಡ ಮತ್ತು ಬೃಹತ್ ಎಲೆಕ್ಟ್ರಾನಿಕ್ಸ್ ಹಾರ್ಡ್‌ವೇರ್ ಉದ್ದಿಮೆಗಳಿಗೆ ಉತ್ತೇಜನ ನೀಡುವ ದೃಷ್ಟಿಯಿಂದ ಕರ್ನಾಟಕ ಮುದ್ರಾಂಕ ಕಾಯ್ದೆ 1957 ರ (34ನೇ ಕರ್ನಾಟಕ ಕಾಯ್ದೆ) ಕಲಂ 9(1)(ಎ) ರಲ್ಲಿ ಹಾಗೂ ನೋಂದಣಿ ಕಾಯ್ದೆ 1908 ರ (ಕೇಂದ್ರೀಯ ಕಾಯ್ದೆ 16) ಕಲಂ 78 ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಎಲೆಕ್ಟ್ರಾನಿಕ್ಸ್ ಹಾರ್ಡ್‌ವೇರ್ ನೀತಿ 2011 ರಲ್ಲಿ ನಿರ್ಧಿಷ್ಟಪಡಿಸಿದಂತೆ ಅನುಬಂಧ-1 ರಲ್ಲಿರುವ ವಲಯ-1, 2 ಮತ್ತು 3 ರಲ್ಲಿ ಸ್ಥಾಪಿಸಲಾಗುವ ಉದ್ದಿಮೆಗಳಿಗೆ ಈ ಕೆಳಕಂಡ ಮುದ್ರಾಂಕ ಶುಲ್ಕದಲ್ಲಿ ವಿನಾಯಿತಿ ಮತ್ತು ನೋಂದಣಿ ಶುಲ್ಕದಲ್ಲಿ ರಿಯಾಯಿತಿ ನೀಡಿ ಆದೇಶಿಸಿದೆ.

ಅ) ರಾಜ್ಯ ಸರ್ಕಾರ ಅಥವಾ ರಾಜ್ಯ ಆರ್ಥಿಕ ನಿಗಮಗಳು, ಕೈಗಾರಿಕೆ ಹಣ ಹೂಡಿಕೆ ಅಭಿವೃದ್ಧಿ ನಿಗಮ, ರಾಷ್ಟ್ರ ಮಟ್ಟದ ಆರ್ಥಿಕ ಸಂಸ್ಥೆಗಳು, ವಾಣಿಜ್ಯ ಬ್ಯಾಂಕುಗಳು, ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳು, ಸಹಕಾರಿ ಬ್ಯಾಂಕುಗಳು, ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ, ಖಾದಿ ಮತ್ತು ಗ್ರಾಮೋದ್ಯೋಗ ಕಮೀಷನ್, ಕರ್ನಾಟಕ ಪರಿಶಿಷ್ಟ ಜಾತಿ/ಪಂಗಡಗಳ ಅಭಿವೃದ್ಧಿ ನಿಗಮ, ಕರ್ನಾಟಕ ರಾಜ್ಯದ ಅಲ್ಪ ಸಂಖ್ಯಾತರ ಅಭಿವೃದ್ಧಿ ನಿಗಮ ಮತ್ತು ಸರ್ಕಾರದಿಂದ ಕಾಲಕಾಲಕ್ಕೆ ಅಧಿಸೂಚನೆ ಮೂಲಕ ನಿಗಧಿಪಡಿಸುವ ಸಂಸ್ಥೆಗಳಿಂದ ಅವಧಿ ಸಾಲ ಪಡೆಯಲು ಮಾಡಿಕೊಡುವ ಸಾಲ ಕರಾರು, ಕ್ರೆಡಿಟ್ ಡೀಡ್, ಅಡಮಾನ ಪತ್ರಗಳಿಗೆ ಮತ್ತು

ಆ) ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ, ಕರ್ನಾಟಕ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ, ಕರ್ನಾಟಕ ವಿದ್ಯುನ್ಮಾನ ಅಭಿವೃದ್ಧಿ ನಿಗಮ, ಕರ್ನಾಟಕ ಕೈಗಾರಿಕಾ ಬಂಡವಾಳ ಹೂಡಿಕೆ ಮತ್ತು ಅಭಿವೃದ್ಧಿ ನಿಗಮ, ಕೈಗಾರಿಕಾ ವಸಾಹತುಗಳ ಜೊತೆ ಕೈಗಾರಿಕಾ ನಿವೇಶನ, ಷೆಡ್ಡುಗಳು, ಕೈಗಾರಿಕಾ ಕಟ್ಟಡವನ್ನು ಪಡೆಯಲು ಉದ್ದಿಮೆಗಳು ಮಾಡಿಕೊಡುವ ಗುತ್ತಿಗೆ ಪತ್ರ, ಗುತ್ತಿಗೆ ಹಾಗೂ ಕ್ರಯಪತ್ರ, ಶುದ್ಧಕ್ರಯಪತ್ರ ದಸ್ತಾವೇಜುಗಳಿಗೆ ಮತ್ತು

ಇ) ಕರ್ನಾಟಕ ಭೂ ಸುಧಾರಣೆ ಕಾಯಿದೆ, 1961 ರ ಸೆಕ್ಷನ್ 109 ರ ನಿಯಮದ ಪ್ರಕಾರ ಖರೀದಿಸುವ ಜಮೀನಿಗೆ ಮತ್ತು **SHLCC/SLSWCC/DLSWCC** ಗಳಿಂದ ಅನುಮೋದಿತವಾದ ಯೋಜನೆಗಳಿಗೆ ಕೈಗಾರಿಕೋದ್ದೇಶಗಳಿಗೆ ಪರಿವರ್ತಿತವಾದ ಜಮೀನನ್ನು ಖರೀದಿಸಲು ಮತ್ತು ಭೂ ಮಾಲೀಕರಿಗೆ ಭೂ ಸ್ವಾಧೀನ ಪಡಿಸಿಕೊಂಡಿದ್ದಕ್ಕೆ ಪರಿಹಾರವಾಗಿ ಕೆ.ಐ.ಎ.ಡಿ.ಬಿ ಯಿಂದ ಜಮೀನು ವರ್ಗಾಯಿಸುವ ಪತ್ರಗಳಿಗೆ

ವಲಯ	ಮುದ್ರಾಂಕ ಶುಲ್ಕದಲ್ಲಿ ವಿನಾಯಿತಿ	ನೋಂದಣಿ ಶುಲ್ಕದಲ್ಲಿ ರಿಯಾಯಿತಿ
1 ಮತ್ತು 2	ಶೇ. 100 ರಷ್ಟು	ಪ್ರತಿ ರೂ. 1000/- ಮೌಲ್ಯಕ್ಕೆ ರೂ. 1 ರಂತೆ ಶುಲ್ಕ ವಿಧಿಸುವುದು
3	ಶೇ. 75 ರಷ್ಟು	ಪ್ರತಿ ರೂ. 1000/- ಮೌಲ್ಯಕ್ಕೆ ರೂ. 1 ರಂತೆ ಶುಲ್ಕ ವಿಧಿಸುವುದು
4	ಯಾವುದೇ ವಿನಾಯ್ತಿ ಇಲ್ಲ	ಯಾವುದೇ ರಿಯಾಯ್ತಿ ಇಲ್ಲ

2. ಮುದ್ರಾಂಕ ಮತ್ತು ನೋಂದಣಿ ಶುಲ್ಕ ವಿನಾಯಿತಿ/ರಿಯಾಯಿತಿ ಪಡೆಯಲು ಅನುಬಂಧ-2 ಹಾಗೂ 3ರಲ್ಲಿ ನಿಗಧಿಪಡಿಸಿರುವಂತೆ **ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ನಿರ್ದೇಶನಾಲಯದ ಅಧಿಕಾರಿಗಳಿಂದ** ದೃಢೀಕರಿಸಲ್ಪಟ್ಟ ಪ್ರಪತ್ರವನ್ನು ದಸ್ತಾವೇಜು ನೋಂದಣಿ ಸಮಯದಲ್ಲಿ ಒದಗಿಸುವುದು. ಈ ಪ್ರಪತ್ರದಲ್ಲಿ ಪ್ರಮಾಣೀಕರಿಸಿದ ಮಾಹಿತಿಯ ಆಧಾರದ ಮೇಲೆ ಮಾತ್ರ ಮುದ್ರಾಂಕ ಶುಲ್ಕ/ನೋಂದಣಿ ಶುಲ್ಕ ರಿಯಾಯಿತಿ ನೀಡುವ ಬಗ್ಗೆ ಪರಿಶೀಲಿಸಿ ದಸ್ತಾವೇಜುಗಳನ್ನು ನೋಂದಣಿ ಮಾಡತಕ್ಕದ್ದು.

3. ಕೈಗಾರಿಕಾ ನಿವೇಶನ, ಷೆಡ್ಡುಗಳು, ಕೈಗಾರಿಕಾ ಕಟ್ಟಡಗಳು ಮೊದಲಾದವುಗಳ ಲೀಸ್-ಕಂ-ಸೇಲ್ ಕರಾರಿನ ಅವಧಿ ಮುಗಿದ ಬಳಿಕ ಮಾಡಿಕೊಳ್ಳಲಾಗುವ ಅಂತಿಮ ಕ್ರಯಪತ್ರಕ್ಕೆ ಈ ಹಿಂದೆ ಲೀಸ್ ಕಂ ಸೇಲ್ ಡೀಡ್ ಮಾಡಿಕೊಂಡಾಗ ಚಾಲ್ತಿಯಲ್ಲಿದ್ದ ಕೈಗಾರಿಕಾ ನೀತಿಯ ಪ್ರಕಾರ ನಿಗಧಿಪಡಿಸಿದ್ದ ದರದಂತೆ ಮುದ್ರಾಂಕ ಶುಲ್ಕ ವಿನಾಯಿತಿ ಮತ್ತು ನೋಂದಣಿ ಶುಲ್ಕದ ರಿಯಾಯಿತಿ ನೀಡತಕ್ಕದ್ದು.

4. ಈ ವಿನಾಯಿತಿ/ರಿಯಾಯಿತಿಯು ಅಧಿಸೂಚನೆಯ ದಿನಾಂಕದಿಂದ **28-01-2016** ರವರೆಗೆ ಅಥವಾ ಮುಂದಿನ ಆದೇಶದವರೆಗೆ ಜಾರಿಯಲ್ಲಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಟಿ.ಕೆ. ರಾಮಚಂದ್ರ,
ಸರ್ಕಾರದ ಅಧೀನ ಕಾರ್ಯದರ್ಶಿ,
ಕಂದಾಯ ಇಲಾಖೆ, (ನೋಂದಣಿ ಮತ್ತು ಮುದ್ರಾಂಕ)

ಅನುಬಂಧ-2

ಕರ್ನಾಟಕ ಸೆಮಿ ಕಂಡಕ್ಟರ್ 2010 ರ ನೀತಿಯನ್ವಯ ಸಾಲದ ಪತ್ರಗಳ ಬಗ್ಗೆ ನೋಂದಣಿ ಶುಲ್ಕ ಮತ್ತು ಮುದ್ರಾಂಕ ಶುಲ್ಕ ರಿಯಾಯಿತಿ ದೃಢೀಕರಣ ಪತ್ರದ ನಮೂನೆ

ಪ್ರಮಾಣ ಪತ್ರ

ವಿಷಯ: .... ರವರಿಗೆ ಮುದ್ರಾಂಕ ಶುಲ್ಕ ಮತ್ತು ನೋಂದಣಿ ಶುಲ್ಕ ರಿಯಾಯಿತಿ ದೃಢೀಕರಣ ಪತ್ರ ನೀಡುವ ಬಗ್ಗೆ.

ಉಲ್ಲೇಖ: 1. ಸರ್ಕಾರಿ ಆದೇಶ ಸಂಖ್ಯೆ: ಐಟಿಡಿ 10 ಪಿಆರ್ಎಂ 2008, ಬೆಂಗಳೂರು, ದಿನಾಂಕ: 25/02/2010

2. ಕಂದಾಯ ಇಲಾಖೆ ಅಧಿಸೂಚನೆ ಸಂಖ್ಯೆ: ಕಂಇ/______/ಮುನೋಮು/______, ದಿನಾಂಕ: ______________

3. ಮೆ: ....ರವರ ಪತ್ರ ಸಂಖ್ಯೆ: .... ದಿನಾಂಕ: ....

****

(vi) ಮೆ: ....ನ ಮಾಲೀಕರಾದ/ಪಾಲುದಾರರಾದ/ವ್ಯವಸ್ಥಾಪಕ ನಿರ್ದೇಶಕರಾದ/ನಿರ್ದೇಶಕರಾದ ಶ್ರೀ .... ರವರು ಪ್ರತಿನಿಧಿಸುತ್ತಿದ್ದು, ಈ ಘಟಕವು ಸೆಮಿ ಕಂಡಕ್ಟರ್ ಉದ್ದಿಮೆಯಾಗಿದ್ದು/ವಿಸ್ತರಣೆ/ನವೀಕರಣ/ವೈವಿದ್ಧೀಕರಣ ಕೈಗೊಂಡಿದ್ದು, ಕರ್ನಾಟಕ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಇಲಾಖೆಯ /ಭಾರತ ಸರ್ಕಾರದ ಪತ್ರ ಸಂಖ್ಯೆ: .... ದಿನಾಂಕ: .... ರನ್ವಯ...... ಅನುಮತಿ/ಪರವಾನಗಿ ಪಡೆದಿರುತ್ತದೆ.

(vii) ಈ ಘಟಕವು ಸರ್ಕಾರದ ಆದೇಶ ಸಂಖ್ಯೆ: ಐಟಿಡಿ 10 ಪಿಆರ್ಎಂ 2008, ಬೆಂಗಳೂರು ದಿನಾಂಕ: 25/02/2010ರ ಪ್ರಕಾರ ಸೆಮಿ ಕಂಡಕ್ಟರ್ ಉದ್ದಿಮೆಗಳಿಗೆ ನೀಡಲಾಗುವ ಉತ್ತೇಜನಗಳು ಮತ್ತು ರಿಯಾಯಿತಿಗಳಂತೆ ವಲಯ .... ರಲ್ಲಿ ಸ್ಥಾಪಿತಗೊಂಡಿದ್ದು, ಮೆಗಾ ಯೋಜನೆ /ದೊಡ್ಡ/ಮಧ್ಯಮ/ಸಣ್ಣ/ಸೂಕ್ಷ್ಮ ಉದ್ಯಮ ಎಂದು ದೃಢೀಕರಿಸಿದೆ.

(viii) ಈ ಉದ್ದಿಮೆಗೆ ....(ಸಾಲ ನೀಡುವ ಬ್ಯಾಂಕ್)/ ಸಂಸ್ಥೆ ವಿವರ ನೀಡುವುದು) ರವರು ರೂ. .... ಅವಧಿ ಸಾಲವನ್ನು ರೂ. .... ಯೋಜನಾ ವೆಚ್ಚದಲ್ಲಿ .... ಮಂಜೂರು ಮಾಡಿರುತ್ತದೆ.

(ix) ಈ ಘಟಕದ ಪ್ರಸ್ತಾಪಿತ ಯೋಜನೆಯನ್ನು **DLSWCC/SLSWCC/SHLCC** ರವರು ದಿ: .... ರಂದು ನಡೆದ ಇವರ ....ಸಭೆಯಲ್ಲಿ ಅನುಮೋದಿಸಿದ್ದಾರೆ.

(x) ಈ ಉದ್ದಿಮೆಯು ಅವಧಿ ಸಾಲ ಪಡೆಯುವ ಹಿನ್ನಲೆಯಲ್ಲಿ ಸಾಲ ಕರಾರು/ಕ್ರೆಡಿಟ್ ಡೀಡ್/ಅಡಮಾನ/ಬಾಡಿಗೆ ಪತ್ರಗಳ ಮುದ್ರಾಂಕ ಶುಲ್ಕದಲ್ಲಿ ಶೇ. 100/75 ರಷ್ಟು ರಿಯಾಯಿತಿ ಪಡೆಯಲು ಹಾಗೂ ನೋಂದಣಿ ಶುಲ್ಕದಲ್ಲಿ ದಸ್ತಾವೇಜು ಮೌಲ್ಯದ ಪ್ರತಿ ರೂ. 1000/- ಕ್ಕೆ ರೂ. 1/- ನ್ನು ಮಾತ್ರ ಪಾವತಿಸಲು ಅರ್ಹರಿರುವುದಾಗಿ ದೃಢೀಕರಿಸಿದೆ.

.... **ಅಧಿಕಾರಿ**

ಕರ್ನಾಟಕ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಇಲಾಖೆ ______________

ಅನುಬಂಧ-3

ಕರ್ನಾಟಕ ಸೆಮಿ ಕಂಡಕ್ಟರ್ 2010 ರ ನೀತಿಯನ್ವಯ ಗುತ್ತಿಗೆ, ಗುತ್ತಿಗೆ ಹಾಗೂ ಕ್ರಯ, ಕ್ರಯಪತ್ರಗಳ ಬಗ್ಗೆ ನೋಂದಣಿ ಶುಲ್ಕ ಮತ್ತು ಮುದ್ರಾಂಕ ಶುಲ್ಕ ರಿಯಾಯಿತಿ ದೃಢೀಕರಣ ಪತ್ರದ ನಮೂನೆ

ಪ್ರಮಾಣ ಪತ್ರ

ವಿಷಯ: .... ರವರಿಗೆ ಮುದ್ರಾಂಕ ಶುಲ್ಕ ಮತ್ತು ನೋಂದಣಿ ಶುಲ್ಕ ರಿಯಾಯಿತಿ ದೃಢೀಕರಣ ಪತ್ರ ನೀಡುವ ಬಗ್ಗೆ.

ಉಲ್ಲೇಖ: 1. ಸರ್ಕಾರಿ ಆದೇಶ ಸಂಖ್ಯೆ: ಐಟಿಡಿ 10 ಪಿಆರ್ಎಂ 2008, ಬೆಂಗಳೂರು, ದಿನಾಂಕ: 25/02/2010

2. ಕಂದಾಯ ಇಲಾಖೆ ಅಧಿಸೂಚನೆ ಸಂಖ್ಯೆ: ಕಂಇ/_____/ಮುನೋಮು/_____, ದಿನಾಂಕ: __________

3. ಮೆ: ....ರವರ ಪತ್ರ ಸಂಖ್ಯೆ: ...., ದಿನಾಂಕ: ....

4. .... ರವರು ಸದರಿ ಘಟಕಕ್ಕೆ ನೀಡಿರುವ ಅಲಾಟ್‌ಮೆಂಟ್ ಪತ್ರ ಸಂಖ್ಯೆ: .... ದಿನಾಂಕ: ....

****

(vi) ಮೆ: ....ನ ಮಾಲೀಕರಾದ/ಪಾಲುದಾರರಾದ/ವ್ಯವಸ್ಥಾಪಕ ನಿರ್ದೇಶಕರಾದ/ನಿರ್ದೇಶಕರಾದ ಶ್ರೀ .... ರವರು ಪ್ರತಿನಿಧಿಸುತ್ತಿದ್ದು, ಈ ಘಟಕವು ಸೆಮಿ ಕಂಡಕ್ಟರ್ ಘಟಕವಾಗಿದ್ದು, ವಿಸ್ತರಣೆ/ನವೀಕರಣ/ವೈವಿದ್ದೀಕರಣ ಕೈಗೊಂಡಿದ್ದು, ಕರ್ನಾಟಕ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಇಲಾಖೆಯ/ಭಾರತ ಸರ್ಕಾರದ ಪತ್ರ ಸಂಖ್ಯೆ: .... ದಿನಾಂಕ: .... ರನ್ವಯ...... ಅನುಮತಿ/ಪರವಾನಗಿ ಪಡೆದಿರುತ್ತದೆ.

(vii) ಈ ಘಟಕವು ಸರ್ಕಾರಿ ಆದೇಶ ಸಂಖ್ಯೆ: ಐಟಿಡಿ 10 ಪಿಆರ್ಎಂ 2008, ಬೆಂಗಳೂರು ದಿನಾಂಕ: 25/02/2010 ರನ್ವಯ ಸೆಮಿ ಕಂಡಕ್ಟರ್ ಉದ್ದಿಮೆಗಳಿಗೆ ನೀಡಲಾಗುವ ಉತ್ತೇಜನಗಳು ಮತ್ತು ರಿಯಾಯಿತಿಗಳಂತೆ ವಲಯ .... ರಲ್ಲಿ ಸ್ಥಾಪಿತಗೊಂಡಿದ್ದು, ಮೆಗಾ ಯೋಜನೆ/ದೊಡ್ಡ/ಮಧ್ಯಮ/ಸಣ್ಣ/ಸೂಕ್ಷ್ಮ ಉದ್ಯಮ ಎಂದು ದೃಢೀಕರಿಸಿದೆ.

(viii) ಈ ಉದ್ದಿಮೆಗೆ ಕೆಐಎಡಿಬಿ/ಕೆಎಸ್ಎಸ್ಐಡಿಸಿ/ಕಿಯೋನಿಕ್ಸ್/ಕೆಎಸ್ಐಐಡಿಸಿ/ಇಂಡಸ್ಟ್ರಿಯಲ್ ಕೋ ಆಪರೇಟೀವ್ ಸೊಸೈಟಿ/ಅನುಮೋದಿತ ಕೈಗಾರಿಕಾ ಪ್ರದೇಶದವರಿಂದ ....ಚ.ಮೀ//........................ ಎಕರೆ ಮಳಿಗೆ/ನಿವೇಶನ/ಟೆನಮೆಂಟನ್ನು .... ಹಂಚಿಕೆ ಮಾಡಿರುತ್ತದೆ ಅಥವಾ ಘಟಕವು ಕೆಎಲ್ಆರ್ ಕಾಯ್ದೆ ನಿಯಮ 109 ರಡಿ .... ಎಕರೆ ಜಮೀನು ಖರೀದಿಸಿರುತ್ತದೆ ಅಥವಾ .... ರಿಂದ .... ಎಕರೆ ಕೈಗಾರಿಕೋದ್ದೇಶಗಳಿಗೆ ಪರಿವರ್ತಿತ ಭೂಮಿಯನ್ನು **DLSWCC/SLSWCC/SHLCC** ಅನುಮೋದನೆಯಂತೆ ಖರೀದಿಸಿರುತ್ತದೆ.

(ix) ಈ ಉದ್ದಿಮೆಯ ಪ್ರಸ್ತಾಪಿತ ಯೋಜನೆಯನ್ನು **DLSWCC/SLSWCC/SHLCC** ರವರು ದಿ: .... ರಂದು ನಡೆದ......................ಸಭೆಯಲ್ಲಿ ಅನುಮೋದಿಸಿದ್ದಾರೆ.

(x) ಈ ಮೇಲ್ಕಂಡ ಕ್ರ.ಸಂ. (3) ರಂತೆ ಈ ಉದ್ದಿಮೆಗೆ ನಿವೇಶನ/ಮಳಿಗೆ/ಟೆನಮೆಂಟ್‌ನ ಲೀಸ್-ಡೀಡ್/ಲೀಸ್ ಕಂ ಸೇಲ್ ಡೀಡ್/ಶುದ್ಧಕ್ರಯ ಪತ್ರ ಪಡೆಯುವ ಹಿನ್ನಲೆಯಲ್ಲಿ ಮುದ್ರಾಂಕ ಶುಲ್ಕದಲ್ಲಿ ಶೇ. 100/75 ರಷ್ಟು ರಿಯಾಯಿತಿ ಪಡೆಯಲು ಹಾಗೂ ನೋಂದಣಿ ಶುಲ್ಕದಲ್ಲಿ ದಸ್ತಾವೇಜು ಮೌಲ್ಯದ ಪ್ರತಿ ರೂ. 1000/- ಕ್ಕೆ ರೂ. 1/- ನ್ನು ಮಾತ್ರ ಪಾವತಿಸಲು ಅರ್ಹರಿರುವುದಾಗಿ ದೃಢೀಕರಿಸಿದೆ.

.... ಅಧಿಕಾರಿ

ಕರ್ನಾಟಕ ಮಾಹಿತಿ ತಂತ್ರಜ್ಞಾನ ಮತ್ತು

ಜೈವಿಕ ತಂತ್ರಜ್ಞಾನ ಇಲಾಖೆ __________

ಪಿ.ಆರ್. 461

ಸಹಕಾರ ಇಲಾಖೆ

ಸಹಕಾರ ಸಂಘಗಳ ಉಪನಿಬಂಧಕರ ಕಚೇರಿ ತುಮಕೂರು ಜಿಲ್ಲೆ ತುಮಕೂರು ಜಿಲ್ಲೆ ತುಮಕೂರು 2 ನೇ ಮಹಡಿ ಮಿನಿ ವಿಧಾನ ಸೌಧ ತುಮಕೂರು ಇವರ ಕಾರ್ಯಲಯಾದ ನಡವಳಿಕೆಗಳು

ವಿಷಯ : ಸ್ಥಗಿತಗೊಂಡಿರುವ ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘ (ನಿ) ಸಂಕಾಪುರ ಮಧುಗಿರಿ ತಾಲ್ಲೂಕು ಈ ಸಂಘವನ್ನು ಋಣಸಮಾಪನೆಗೊಳಿಸುವ ಬಗ್ಗೆ.

ಉಲ್ಲೇಖ : ಸಹಕಾರ ಸಂಘಗಳ ಸಹಾಯಕ ನಿಬಂಧಕರು ಮಧುಗಿರಿ ಉಪವಿಭಾಗ ಮಧುಗಿರಿ ಇವರ ಪತ್ರದ ಸಂಖ್ಯೆ ಸನಿ33/ಎಂ.ಕೆ.ಟಿ/ಸ್ಥಗಿತ /130/2011-12 ದಿನಾಂಕ: 23-2-2012.

ಪ್ರಸ್ತಾವನೆ :~

ಸ್ಥಗಿತಗೊಂಡಿರುವ ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘ (ನಿ)ಸಂಕಾಪುರ ಮಧುಗಿರಿ ತಾಲ್ಲೂಕು ಈ ಸಹಕಾರ ಸಂಘದ ಕಾರ್ಯವ್ಯಾಪ್ತಿಯು ತಾಲ್ಲೂಕು ಮಟ್ಟಕ್ಕಿಂತ ಕಡಿಮೆ ಇದ್ದು ಸಹಾಯಕ ನಿಬಂಧಕರು ಮದುಗಿರಿ ಉಪವಿಭಾಗ ಮಧುಗಿರಿ ಇವರ ಕಚೇರಿಯಲ್ಲಿ ನೊಂದಣಿಯಾಗಿದ್ದು ಸನಿ33/ಎಂ.ಕೆ.ಟಿ/ನೊಂದಾಣಿ/ ಜೆ.ಓ.ಕ್ಯೂ/38217/ 2009-10 ದಿನಾಂಕ:30-9-2009 ರಲ್ಲಿ ನೊಂದಯಿಸಲ್ಪಟ್ಟಿದ್ದು ಕಾರ್ಯಸ್ಥಗಿತವಾಗಿ ಮುಂದುವರಿಯುತ್ತಿದ್ದು ಸಂಘದ ಯಾವೊಬ್ಬ ಸದಸ್ಯರು ಸಂಘದ ಕಾರ್ಯರಂಭ ಮಾಡಲು ಆಸಕ್ತಿ ತೋರದಿರುವುದರಿಂದ ಹಾಗೂ ಆಡಳಿತ ಮಂಡಳಿ ಚುನಾವಣೆ ನಡೆದು ಆಡಳಿತ ಮಂಡಳಿ ರಚನೆಯಾಗಿ ಸಂಘದ ಉಪನಿಯಮದ ರೀತ್ಯಾ ಕಾರ್ಯಚಟುವಟಿಕೆಗಳನ್ನು ಪ್ರಾರಂಭಿಸಿರುವುದಿಲ್ಲ ಇದು ಕೇವಲ ನಾಮ ಮಾತ್ರ ಸಹಕಾರ ಸಂಘವಾಗಿರುವುದರಿಂದ ಇದನ್ನು ಋಣಸಮಾಪಗೊಳಿಸಿ ಸಮಾಪನಾಧಿಕಾರಿಯನ್ನು ನೇಮಿಸಿ ಆದೇಶಿಸಬೇಕೆಂದು ಉಲ್ಲೇಖಿತ ಪತ್ರದಲ್ಲಿ ಸಹಾಯಕ ನಿಬಂಧಕರು ಮಧುಗಿರಿ ಉಪವಿಭಾಗ ಮಧುಗಿರಿ ಇವರು ಕೋರಿರುವ ಹಿನ್ನೆಲೆಯಲ್ಲಿ ಈ ಕೆಳಕಂಡಂತೆ ಆದೇಶ ನೀಡಿದೆ.

: ಆದೇಶ :

ನಂ ಡಿಆರ್‌ಟಿ/ಎಲ್ ಕ್ಯೂಡಿ/ಸಿಆರ್130/2011-12, ದಿನಾಂಕ: 29-2-2012

ಆರ್ ಲೋಕೇಶ್ ಕೆ.ಸಿಎಸ್ ಸಹಕಾರ ಸಂಘಗಳ ಉಪನಿಬಂಧಕರು ತುಮಕೂರು ಜಿಲ್ಲೆ ತುಮಕೂರು ಆದ ನಾನು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ರ ಕಲಂ 72 (2)(ಬಿ) ಹಾಗೂ ಕರ್ನಾಟಕ ಸರ್ಕಾರದ ಅದಿಸೂಚನೆ ಸಂಖ್ಯೆ ಸಿ.ಓ/139/ಸಿ ಎಲ್.ಎಂ/ 2010 ದಿನಾಂಕ: 17-2-2011 ರಲ್ಲಿ ದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘ (ನಿ) ಸಂಕಾಪುರ ಮಧುಗಿರಿ ತಾಲ್ಲೂಕು ತುಮಕೂರು ಜಿಲ್ಲೆ ಇದನ್ನು ಸಮಾಪನೆಗೊಳಿಸಿ ಮಾರಾಟಾಧಿಕಾರಿಗಳು ಸಹಕಾರ ಸಂಘಗಳ ಸಹಾಯಕ ನಿಬಂಧಕರ ಕಛೇರಿ ಮದುಗಿರಿ ಇವರನ್ನು ಋಣಸಮಾಪನಾಧಿಕಾರಿಯನ್ನಾಗಿ ನೇಮಿಸಿ ಆದೇಶಿಸಿರುತ್ತೇನೆ.

ಋಣಸಮಾಪನಾಧಿಕಾರಿಗಳು ಸಂಘದ ಪೂರ್ಣ ಪ್ರಭಾರವನ್ನು ಸಂಬಂಧಪಟ್ಟವರಿಂದ ವಹಿಸಿಕೊಂಡು ಪ್ರಭಾರ ಪಟ್ಟಿಯನ್ನು ಈ ಕಛೇರಿಗೆ ಸಲ್ಲಿಸಲು ತಿಳಿಸಿದೆ. ಹಾಗೂ ಸಂಘದ ಆಸ್ತಿ ಜವಾಬ್ದಾರಿಯನ್ನು ವಿಲೇವಾರಿ ಮಾಡಲು ಆದ್ಯತಾ ಪಟ್ಟಿಯ ಮೂರು ಪ್ರತಿಗಳನ್ನು ಈ ಕಛೇರಿಗೆ ಅನುಮೋದನೆಗೆ ಸಲ್ಲಿಸಿ ಅನುಮೋದನೆ ಪಡೆದು ಆದ್ಯತಾ ಮೇರೆಗೆ ವಿಲೇವಾರಿಮಾಡಿ ಸಂಘದ ನೊಂದಣಿ ರದ್ದತಿಗೆ ಪ್ರಸ್ತಾವೆಯನ್ನು ಸಲ್ಲಿಸುವಂತೆ ಆದೇಶಿಸಿದೆ.

ಈ ಆದೇಶವನ್ನ ನನ್ನ ಸ್ವಸಹಿ ಹಾಗೂ ಕಛೇರಿಯ ಮುದ್ರೆಯೊಂದಿಗೆ ದಿನಾಂಕ: 29-2-2012 ರಂದು ನೀಡಿರುತ್ತೇನೆ.

ಸಹಕಾರ ಸಂಘಗಳ ಉಪ ನಿಬಂಧಕರು
ತುಮಕೂರು ಜಿಲ್ಲೆ ತುಮಕೂರು

ಪಿ.ಆರ್. 394

ಸಹಕಾರ ಇಲಾಖೆ

ಸಹಕಾರ ಸಂಘಗಳ ಉಪನಿಬಂಧಕರ ಕಚೇರಿ ತುಮಕೂರು ಜಿಲ್ಲೆ ತುಮಕೂರು ಜಿಲ್ಲೆ ತುಮಕೂರು 2 ನೇ ಮಹಡಿ ಮಿನಿ ವಿಧಾನ ಸೌಧ ತುಮಕೂರು ಇವರ ಕಾರ್ಯಲಯಾದ ನಡವಳಿಕೆಗಳು

ವಿಷಯ : ಸ್ಥಗಿತಗೊಂಡಿರುವ ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘ (ನಿ) ಸೋಗೇನಹಳ್ಳಿ ಮಧುಗಿರಿ ತಾಲ್ಲೂಕು ಈ ಸಂಘವನ್ನು ಋಣಸಮಾಪನೆಗೊಳಿಸುವ ಬಗ್ಗೆ.

ಉಲ್ಲೇಖ : ಸಹಕಾರ ಸಂಘಗಳ ಸಹಾಯಕ ನಿಬಂಧಕರು ಮಧುಗಿರಿ ಉಪವಿಭಾಗ ಮಧುಗಿರಿ ಇವರ ಪತ್ರದ ಸಂಖ್ಯೆ ಸನಿ33/ಎಂ.ಕೆ.ಟಿ/ಸ್ಥಗಿತ /138/2011-12 ದಿನಾಂಕ: 23-2-2012.

ಪ್ರಸ್ತಾವನೆ :~

ಸ್ಥಗಿತಗೊಂಡಿರುವ ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘ (ನಿ) ಸೋಗೇನಹಳ್ಳಿ ಮಧುಗಿರಿ ತಾಲ್ಲೂಕು ಈ ಸಹಕಾರ ಸಂಘದ ಕಾರ್ಯವ್ಯಾಪ್ತಿಯು ತಾಲ್ಲೂಕು ಮಟ್ಟಕ್ಕಿಂತ ಕಡಿಮೆ ಇದ್ದು ಸಹಾಯಕ ನಿಬಂಧಕರು ಮದುಗಿರಿ ಇವರ ಕಚೇರಿಯಲ್ಲಿ ನೊಂದಣಿ ಸಂಖ್ಯೆ ಸನಿ33/ಎಂ.ಕೆ.ಟಿ/ ಜೆ.ಓ.ಕ್ಯೂ/ 37031/ 2008-09 ದಿನಾಂಕ:31-5-2008 ರಲ್ಲಿ ನೊಂದಯಿಸಲ್ಪಟ್ಟಿದ್ದು ಕಾರ್ಯಸ್ಥಗಿತವಾಗಿ ಮುಂದುವರಿಯುತ್ತಿದ್ದು ಸಂಘದ ಯಾವೊಬ್ಬ ಸದಸ್ಯರು ಸಂಘದ ಕಾರ್ಯರಂಭ ಮಾಡಲು ಆಸಕ್ತಿ ತೋರದಿರುವುದರಿಂದ ಹಾಗೂ ಆಡಳಿತ ಮಂಡಳಿ ಚುನಾವಣೆ ನಡೆದು ಆಡಳಿತ ಮಂಡಳಿ ರಚನೆಯಾಗಿ ಸಂಘದ ಉಪನಿಯಮದ ರೀತ್ಯಾ ಕಾರ್ಯಚಟುವಟಿಕೆಗಳನ್ನು ಪ್ರಾರಂಭಿಸಿರುವುದಿಲ್ಲ ಇದು ಕೇವಲ ನಾಮ ಮಾತ್ರ ಸಹಕಾರ ಸಂಘವಾಗಿದ್ದು ಇದನ್ನು ಋಣಸಮಾಪಗೊಳಿಸಿ ಸಮಾಪನಾಧಿಕಾರಿಯನ್ನು ನೇಮಿಸಿ ಆದೇಶಿಸಬೇಕೆಂದು ಉಲ್ಲೇಖಿತ ಪತ್ರದಲ್ಲಿ ಸಹಾಯಕ ನಿಬಂಧಕರು ಮಧುಗಿರಿ ಉಪವಿಭಾಗ ಮಧುಗಿರಿ ಇವರು ಕೋರಿರುವ ಹಿನ್ನೆಲೆಯಲ್ಲಿ ಈ ಕೆಳಕಂಡಂತೆ ಆದೇಶ ನೀಡಿದೆ.

: ಆದೇಶ :

ನಂ ಡಿಆರ್‌ಟಿ/ಎಲ್ ಕ್ಯೂಡಿ/ಸಿಆರ್138/2011-12, ದಿನಾಂಕ: 29-2-2012

ಆರ್ ಲೋಕೇಶ್ ಕೆ.ಸಿ.ಎಸ್ ಸಹಕಾರ ಸಂಘಗಳ ಉಪನಿಬಂಧಕರು ತುಮಕೂರು ಜಿಲ್ಲೆ ತುಮಕೂರು ಆದ ನಾನು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ರ ಕಲಂ 72 (2)(ಬಿ) ಹಾಗೂ ಕರ್ನಾಟಕ ಸರ್ಕಾರದ ಅದಿಸೂಚನೆ ಸಂಖ್ಯೆ ಸಿ.ಓ/139/ಸಿ ಎಲ್.ಎಂ/ 2010 ದಿನಾಂಕ: 17-2-2011 ರಲ್ಲಿ ದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘ (ನಿ) ಸೋಗೇನಹಳ್ಳಿ ಮಧುಗಿರಿ ತಾಲ್ಲೂಕು ತುಮಕೂರು ಜಿಲ್ಲೆ ಇದನ್ನು ಸಮಾಪನೆಗೊಳಿಸಿ ಮಾರಾಟಾಧಿಕಾರಿ ಸಹಾಯಕ ನಿಬಂಧಕರ ಕಛೇರಿ ಮದುಗಿರಿ ಋಣಸಮಾಪನಾಧಿಕಾರಿಯನ್ನಾಗಿ ನೇಮಿಸಿ ಆದೇಶಿಸಿರುತ್ತೇನೆ.

ಋಣಸಮಾಪನಾಧಿಕಾರಿಗಳು ಸಂಘದ ಪೂರ್ಣ ಪ್ರಭಾರವನ್ನು ಸಂಬಂಧಪಟ್ಟವರಿಂದ ವಹಿಸಿಕೊಂಡು ಪ್ರಭಾರ ಪಟ್ಟಿಯನ್ನು ಈ ಕಛೇರಿಗೆ ಸಲ್ಲಿಸಲು ತಿಳಿಸಿದೆ. ಹಾಗೂ ಸಂಘದ ಆಸ್ತಿ ಜವಾಬ್ದಾರಿಯನ್ನು ವಿಲೇವಾರಿ ಮಾಡಲು ಆದ್ಯತಾ ಪಟ್ಟಿಯ ಮೂರು ಪ್ರತಿಗಳನ್ನು ಈ ಕಛೇರಿಗೆ ಅನುಮೋದನೆಗೆ ಸಲ್ಲಿಸಿ ಅನುಮೋದನೆ ಪಡೆದು ಆದ್ಯತಾ ಮೇರೆಗೆ ವಿಲೇವಾರಿಮಾಡಿ ಸಂಘದ ನೊಂದಣಿ ರದ್ದತಿಗೆ ಪ್ರಸ್ತಾವೆಯನ್ನು ಸಲ್ಲಿಸುವಂತೆ ಆದೇಶಿಸಿದೆ.

ಈ ಆದೇಶವನ್ನ ನನ್ನ ಸ್ವಸಹಿ ಹಾಗೂ ಕಛೇರಿಯ ಮುದ್ರೆಯೊಂದಿಗೆ ದಿನಾಂಕ: 29-2-2012 ನೀಡಿರುತ್ತೇನೆ.

ಸಹಕಾರ ಸಂಘಗಳ ಉಪ ನಿಬಂಧಕರು
ತುಮಕೂರು ಜಿಲ್ಲೆ ತುಮಕೂರು

ಪಿ.ಆರ್. 393

ಸಹಕಾರ ಇಲಾಖೆ

ಸಹಕಾರ ಸಂಘಗಳ ಉಪನಿಬಂಧಕರು ಮಿನಿ ವಿಧಾನ ಸೌಧ ತುಮಕೂರು ಜಿಲ್ಲೆ ತುಮಕೂರು ಇವರ ಕಾರ್ಯಲಯದ ನಡವಳಿಕೆಗಳು

ವಿಷಯ : ಸಮಾಪನೆಯಲ್ಲಿರುವ ಹಾಲು ಉತ್ಪಾದಕರ ಸಹಕಾರ ಸಂಘ(ನಿ) ನೇರಲಗುಡ್ಡ ಶಿರಾ ತಾಲ್ಲೂಕು ಇದರ ನೊಂದಣಿರದ್ದು ಪಡಿಸುವ ಬಗ್ಗೆ.

ಉಲ್ಲೇಖ : 1) ಸಹಕಾರ ಸಂಘಗಳ ಸಹಾಯಕ ನಿಬಂಧಕರು ಮಧುಗಿರಿ ಉಪವಿಭಾಗ ಮಧುಗಿರಿ ಇವರ ಪತ್ರ ಸಂಖ್ಯೆ ಸನಿಉ33/ಸಮಾಪನೆ ನೊಂ.ರ/137/2011-12, ದಿನಾಂಕ:29-2-2012

2) ಈ ಕಚೇರಿ ಆದೇಶ ಸಂಖ್ಯೆ ಡಿಆರ್‌ಟಿ/ಎಲ್‌ಕ್ಯೂಡಿ/2011-12 ದಿನಾಂಕ: 9-8-2011

3) ಸಂಘದ ಋಣಸಮಾಪನಾಧಿಕಾರಿಗಳು ಹಾಗೂ ಸಹಕಾರ ಅಬಿವೃದ್ದಿ ಅಧಿಕಾರಿ ಶಿರಾರವರ ಪತ್ರ ಸಂಖ್ಯೆ ಸ.ಅ.ಅ.ಶಿರಾ/ನೊಂ.ರ 2011-12 ದಿನಾಂಕ: 28-2-2012.

ಪ್ರಸ್ತಾವನೆ:~

ಹಾಲು ಉತ್ಪಾದಕರ ಸಹಕಾರ ಸಂಘ (ನಿ) ನೇರಲಗುಡ್ಡ ಶಿರಾ ತಾಲ್ಲೂಕು ಈ ಸಂಘವು ಸ್ಥಗಿತಗೊಂಡ ಕಾರಣ ಸಂಘವನ್ನು ಸಮಾಪನೆಗೊಳಿಸುವಂತೆ ಮಧುಗಿರಿ ಉಪ ವಿಭಾಗದ ಸಹಾಯಕ ನಿಬಂಧಕರು ಈ ಕಛೇರಿಗೆ ಪ್ರಸ್ತಾವೆ ಸಲ್ಲಿಸಲಾಗಿದ್ದ ಹಿನ್ನೆಲೆಯಲ್ಲಿ ಉಲ್ಲೇಖ (2) ರ ಈ ಕಛೇರಿ ಆದೇಶ ರೀತ್ಯಾ ಸಂಘವನ್ನು ಸಮಾಪನೆಗೊಳಿಸಿ ಸಹಕಾರ ಅಭಿವೃದ್ಧಿ ಅಧಿಕಾರಿ ಶಿರಾ ಇವರನ್ನು ಸಮಾಪನೆಗೊಳಿಸಲಾಗಿತ್ತು ಅಲ್ಲದೆ ಸಂಘದ ಆಸ್ತಿ ಜವಾಬ್ದಾರಿ ವಿಲೇವಾರಿಗೆ ಆದ್ಯತಾ ಪಟ್ಟಿ ಅನುಮೋದನೆ ಪಡೆದುಕೊಂಡು ಆಸ್ತಿ ಜವಾಬ್ದಾರಿ ತೀರುವಳಿ ಮಾಡಿ ನೊಂದಣಿ ರದ್ದತಿಗೆ ಪ್ರಸ್ತಾವೆ ಸಲ್ಲಿಸುವಂತೆ ಆದೇಶಿಸಲಾಗಿತ್ತು.

ಋಣ ಸಮಾಪನಾಧಿಕಾರಿಗಳು ಆಸ್ತಿ ಜವಾಬ್ದಾರಿ ವಿಲೇವಾರಿ ಮಾಡಿ ನೊಂದಣಿ ರದ್ದತಿಗೆ ಪ್ರಸ್ತಾವೆಯನ್ನು ಸಹಾಯಕ ನಿಬಂಧಕರು ಮಧುಗಿರಿ ಉಪವಿಭಾಗ ಮಧುಗಿರಿ ಇವರಿಗೆ ಸಲ್ಲಿಸಿದ್ದು ಉಲ್ಲೇಖ (1) ರಂತೆ ಸಹಕಾರ ಸಂಘಗಳ ಸಹಾಯಕ ನಿಬಂಧಕರು ಮಧುಗಿರಿ ಉಪವಿಭಾಗ ಮಧುಗಿರಿ ರವರು ಶಿಫಾರಸ್ಸು ಮಾಡಿರುವ ಪ್ರಯುಕ್ತ ಈ ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ.

~:ಆದೇಶ:~

ಸಂಖ್ಯೆ ಡಿಆರ್‌ಟಿ//ಎಲ್‌ಕ್ಯೂಡಿ/2011-12, ದಿನಾಂಕ: 9-3-2012

ಶ್ರೀ ಆರ್.ಲೋಕೇಶ್ ಸಹಕಾರ ಸಂಘಗಳ ಉಪನಿಬಂಧಕರು ತುಮಕೂರು ಜಿಲ್ಲೆ ತುಮಕೂರು ಆದ ನಾನು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ರ ಕಲಂ 75 ಹಾಗೂ ಸರ್ಕಾರದ ಅದಿಸೂಚನೆ ಸಂಖ್ಯೆ ಸಿ.ಓ/139/ಸಿ.ಎಂ.ಎಮ್2010 ದಿನಾಂಕ:17-2-2011 ರಲ್ಲಿ ದತ್ತವಾಗಿರುವ ಅದಿಕಾರವನ್ನು ಚಲಾಯಿಸಿ ಹಾಲು ಉತ್ಪಾದಕರ ಸಹಕಾರ ಸಂಘ (ನಿ) ನೇರಲಗುಡ್ಡ ಶಿರಾ ತಾಲ್ಲೂಕು ಇದರ ನೊಂದಣಿ ಸಂಖ್ಯೆ ಎಆರ್‌ಎಂ.ಆರ್.ಜಿ.ಡಿ/9744/8485 ದಿನಾಂಕ: 30-3-1985 ನ್ನು ರದ್ದು ಪಡಿಸಿದೆ ಸಂಘವು ಅಸ್ಥಿತ್ವದಲ್ಲಿರುವುದಿಲ್ಲ.ಮತ್ತು ವಿಸರ್ಜನೆಗೊಂಡಿರುತ್ತದೆ.

ಈ ಆದೇಶವನ್ನು ನನ್ನ ಸ್ವಸಹಿ ಮತ್ತು ಕಛೇರಿ ಮುದ್ರೆಯೊಂದಿಗೆ ದಿನಾಂಕ: 9-3-2012 ರಂದು ನೀಡಿರುತ್ತೇನೆ.

ಸಹಕಾರ ಸಂಘಗಳ ಉಪ ನಿಬಂಧಕರು
ತುಮಕೂರು ಜಿಲ್ಲೆ ತುಮಕೂರು

ಪಿ.ಆರ್. 436

ಸಹಕಾರ ಸಂಘಗಳ ಉಪನಿಬಂಧಕರು, ಶಿವಮೊಗ್ಗ ಜಿಲ್ಲೆ, ಶಿವಮೊಗ್ಗ ಇವರ ನ್ಯಾಯಾಲಯದಲ್ಲಿ

ದಾವಾ ಸಂಖ್ಯೆ: ಡಿಆರ್‌ಎಸ್/ಡಿಡಿಎಸ್/ಎಂಐಎಸ್‌ಸಿ/01/2011-12

ಅರ್ಜಿದಾರರು:
ಶಿಕಾರಿಪುರ ತಾಲ್ಲೂಕು ಪ್ರಾಥಮಿಕ ಶಾಲಾ
ಶಿಕ್ಷಕರ ಪತ್ತು ಬೆಳೆಸುವ ಸಹಕಾರ ಸಂಘ ನಿ.,
ಶಿಕಾರಿಪುರ.
ಶಿಕಾರಿಪುರ ತಾ॥, ಶಿವಮೊಗ್ಗ ಜಿಲ್ಲೆ.
ದರ ಪರವಾಗಿ ಕಾರ್ಯದರ್ಶಿ.

ವಿರುದ್ಧ

ಎದುರು ಅರ್ಜಿದಾರರು:
ಹೆಚ್.ಡಿ. ದೇವಾನಂದ (ಪೌತಿ),
ಮೃತ ಕಾರ್ಯದರ್ಶಿ,
ಶಿಕಾರಿಪುರ ತಾಲ್ಲೂಕು ಪ್ರಾಥಮಿಕ
ಶಾಲಾ ಶಿಕ್ಷಕರ ಪತ್ತು ಬೆಳೆಸುವ
ಸಹಕಾರ ಸಂಘ ನಿ.,ಶಿಕಾರಿಪುರ.

ಪೌತಿ ವಾರಸುದಾರರು:

1) ಶ್ರೀಮತಿ ಶೈಲಜಾ(ಪತ್ನಿ), ಕೋಂ. ದಿ॥ ಹೆಚ್.ಡಿ. ದೇವಾನಂದ, ಬನಶಂಕರಿ ಬೀದಿ, ಈಸೂರು, ಶಿಕಾರಿಪುರ ತಾಲ್ಲೂಕು.

2) ಕುಮಾರ ರಾಕೇಶ್ ಹೆಚ್.ಡಿ.(ಮೈನರ್) ಬಿನ್ ಹೆಚ್.ಡಿ.ದೇವಾನಂದ, ವಯಸ್ಸು ಸುಮಾರು 15 ವರ್ಷಗಳು

3) ಕುಮಾರ ಹಿತೇಶ ಹೆಚ್.ಡಿ.(ಮೈನರ್) ಬಿನ್ ಹೆಚ್.ಡಿ.ದೇವಾನಂದ, ವಯಸ್ಸು ಸುಮಾರು 13 ವರ್ಷಗಳು

ಮೈನರ್ ಗಾರ್ಡಿಯನ್

ಶ್ರೀಮತಿ ಶೈಲಜಾ, ಕೋಂ. ದಿ:ಹೆಚ್.ಡಿ.ದೇವಾನಂದ,
ಬನಶಂಕರಿ ಬೀದಿ, ಈಸೂರು, ಶಿಕಾರಿಪುರ ತಾಲ್ಲೂಕು.

-: ನೋಟೀಸ್ :-

(ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಕಲಂ 103ರ ಮೇರೆಗೆ ತೀರ್ಪು ಪೂರ್ವ ಜಪ್ತು ಆದೇಶ)

ಪ್ರಸ್ತಾವನೆ :-

ಅರ್ಜಿದಾರ ಸಂಘ ಈ ನ್ಯಾಯಾಲಯದಲ್ಲಿ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 70 ರಡಿಯಲ್ಲಿ ಎದುರುಅರ್ಜಿದಾರರು, ಅರ್ಜಿದಾರ ಸಂಘದಲ್ಲಿ ದುರುಪಯೋಗಪಡಿಸಿಕೊಂಡಿರುವ ಮೊಬಲಗು ರೂ.12,57,583-00 ಗಳನ್ನು ಸಾಲಿಯಾನ ಶೇ.18ರ ಬಡ್ಡಿಯೊಂದಿಗೆ ವಸೂಲಾತಿಗಾಗಿ ಎದುರಿಯ ವಿರುದ್ಧ ದಾವಾ ಅರ್ಜಿಯನ್ನು ದಾಖಲು ಮಾಡಿರುತ್ತಾರೆ. ಈ ದಾವಾ ಅರ್ಜಿಯನ್ನು ವಿಚಾರಣೆಗೆ ಕೈಗೆತ್ತಿಕೊಂಡು, ದಾವಾ ಅರ್ಜಿ ಸಂಖ್ಯೆ: ಡಿಆರ್‌ಎಸ್/ಡಿಡಿಎಸ್/ಎಂಐಎಸ್‌ಸಿ/01/2011-12 ಎಂದು ನಂಬರ್ ನೀಡಲಾಗಿದೆ. ಈ ದಾವಾ ಅರ್ಜಿಯೊಂದಿಗೆ ಅರ್ಜಿದಾರರು ಮಧ್ಯಂತರ ಅರ್ಜಿ ಸಲ್ಲಿಸಿ, ಕಲಂ 103ರನ್ವಯ ಅರ್ಜಿದಾರ ಸಂಘ, ಎದುರುದಾರರ ವಿರುದ್ಧ ವಸೂಲಾತಿಗಾಗಿ ಕಾಯ್ದೆ ಕಲಂ 70 ರಡಿಯಲ್ಲಿ ಅರ್ಜಿದಾರ ಸಂಘದ ಪರವಾಗಿ ಡಿಕ್ರಿ ಕೋರಿ ಪ್ರಕರಣ ದಾಖಲಿಸಿದ್ದು, ಸದರೀ ಹಣವು ವಸೂಲಾತಿ ಆಗದಿರುವಂತಹ ಪರಿಸ್ಥಿತಿ ಇರುವ ಪ್ರಯುಕ್ತ ಮೇಲ್ಕಂಡ ದಾವಾ

ಅರ್ಜಿಯಲ್ಲಿನ ಎದುರುದಾರರ ಸ್ಥಿರಾಸ್ತಿಯನ್ನು ದಾವಾ ಅರ್ಜಿಯಲ್ಲಿ ನೀಡಬಹುದಾದ ಡಿಕ್ರಿಯನ್ನು ನಿರರ್ಥಕಗೊಳಿಸುವ ಉದ್ದೇಶದಿಂದ ಬೇರೆಯವರಿಗೆ ಪರಬಾರೆ ಅಥವಾ ಮಾರಾಟ ಮಾಡುವ ಕ್ರಮವನ್ನು ಪ್ರತಿಬಂಧಿಸಲು ಸಹಕಾರ ಸಂಘಗಳ ಕಾಯ್ದೆ ಕಲಂ 103 ರಡಿಯಲ್ಲಿ ತೀರ್ಪು ಪೂರ್ವ ಜಪ್ತಿ ಕ್ರಮವನ್ನು ಕೋರಿದ್ದಾರೆ, ಈ ಕೋರಿಕೆ ಯುಕ್ತವಾಗಿದೆಯೆಂದು ಸ್ವತಃ ಈ ನ್ಯಾಯಾಲಯಕ್ಕೆ ಮನವರಿಕೆಯಾಗಿದ್ದು, ಈ ಕೆಳಕಂಡ ತೀರ್ಪು ಪೂರ್ವ ಷರತ್ತುಬದ್ಧ ಜಪ್ತು ಆದೇಶದ ನೋಟಿಸನ್ನು ಹೊರಡಿಸಲಾಗಿದೆ.

ಸಂ:ಡಿಆರ್‌ಎಸ್/ಎಬಿಎನ್/ಕಲಂ-103/2011-12, 1764, ದಿನಾಂಕ:18-02-2012

: ಆ ದೇ ಶ :

ಪ್ರಸ್ತಾವನೆಯಲ್ಲಿ ವಿವರಿಸಿದ ಕಾರಣಗಳಿಗಾಗಿ ಅಶೋಕ.ವೆಂ.ಮೊರಬ, ಸಹಕಾರ ಸಂಘಗಳ ಉಪನಿಬಂಧಕರು, ಶಿವಮೊಗ್ಗ ಜಿಲ್ಲೆ, ಶಿವಮೊಗ್ಗ ಆದ ನಾನು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 103 ರನ್ವಯ ಮತ್ತು ಕರ್ನಾಟಕ ಸರ್ಕಾರದ ಅಧಿಸೂಚನೆ ಸಂ.ಸಿಓ/139/ಸಿಎಲ್ಎಂ/2010 ಬೆಂಗಳೂರು ದಿನಾಂಕ:17-02-2011ರನ್ವಯ ದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ, ಈ ಆದೇಶದೊಂದಿಗೆ ಇರುವ ಅನುಸೂಚಿಯಲ್ಲಿ ಕಾಣಿಸಿರುವ ಸ್ಥಿರಾಸ್ತಿಗಳನ್ನು ಮೇಲ್ಕಾಣಿಸಿದ ದಾವಾ ಅರ್ಜಿಯ ತೀರ್ಪು ಪೂರ್ವದಲ್ಲಿ ಷರತ್ತು ಪೂರ್ವಕ ಜಪ್ತುಗೊಳಿಸಲಾಗಿದೆಯೆಂದು ಆದೇಶಿಸಿದೆ.

ಅಲ್ಲದೇ, ಎದುರು ಅರ್ಜಿದಾರರು ತಮ್ಮ ಸ್ಥಿರಾಸ್ತಿಯನ್ನು ಷರತ್ತು ಪೂರ್ವ ಜಪ್ತು ಆಜ್ಞೆಯ ವ್ಯಾಪ್ತಿಯಿಂದ ಹೊರತರಲು ಇಚ್ಛಿಸಿದಲ್ಲಿ ಜಪ್ತುಗೊಳಿಸಲ್ಪಟ್ಟ ಆಸ್ತಿಯ ಮೌಲ್ಯಕ್ಕೆ ಮತ್ತು ನ್ಯಾಯಾಲಯ ಸರಿಯೆಂದು ಭಾವಿಸುವ ನಗದು ಭದ್ರತೆಯನ್ನು ಸಹಕಾರ ಸಂಘಗಳ ಉಪನಿಬಂಧಕರು, ಶಿವಮೊಗ್ಗ ಜಿಲ್ಲೆ, ಶಿವಮೊಗ್ಗ ಇವರ ಹೆಸರಿನಲ್ಲಿ ಶಿವಮೊಗ್ಗ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ನಿ, ಮುಖ್ಯ ಶಾಖೆ, ಶಿವಮೊಗ್ಗ ಇಲ್ಲಿ ಅಮಾನತ್ ಖಾತೆಯಲ್ಲಿ ತೊಡಗಿಸಿ, ಈ ಬಗ್ಗೆ ರಶೀದಿ ಅಥವಾ ಬ್ಯಾಂಕ್‌ನ ಚಲನ್ನಿನ ಪ್ರತಿಯನ್ನು ದಿನಾಂಕ:19-03-2012 ರ ಒಳಗೆ ಕೆಳಸಹಿದಾರರಿಗೆ ಹಾಜರುಪಡಿಸುವ ಮೂಲಕ ಜಪ್ತು ಆಜ್ಞೆಯಿಂದ ಹೊರಗುಳಿಯಬಹುದೆಂದು ಸಹ ಸಂಬಂಧಿಸಿದವರಿಗೆ ಈ ನೋಟೀಸ್ ನೀಡಲಾಗಿದೆ. ಭದ್ರತೆಯನ್ನು ಒದಗಿಸುವ ಮತ್ತು ಷರತ್ತು ಪೂರೈಸುವುದಕ್ಕೆ ವಿಫಲರಾದಲ್ಲಿ ಈ ಷರತ್ತು ಪೂರ್ವಕ ಜಪ್ತು ಆಜ್ಞೆಯನ್ನು ಸ್ಥಿರೀಕರಿಸಲಾಗುವುದೆಂದು ತಿಳಿಯತಕ್ಕದ್ದು.

ಈ ಆದೇಶದ ಅನುಸೂಚಿಯಲ್ಲಿರುವ ಸ್ವತ್ತುಗಳನ್ನು ಪಡೆಯುವ ಅಥವಾ ಖರೀದಿಸುವ ವ್ಯಕ್ತಿ ಅಥವಾ ಸಂಸ್ಥೆಗಳು ಸಹ ಷರತ್ತು ಪೂರ್ವಕ ಜಪ್ತು ಆಜ್ಞೆಗೆ ಒಳಪಡುವರು ಎಂದು ಸಹ ಆದೇಶಿಸಿದೆ.

ಷರತ್ತು ಪೂರ್ವಕ ಜಪ್ತು ಆದೇಶಕ್ಕೆ ಒಳಗಾದ ಸ್ವತ್ತುಗಳ ಅನುಸೂಚಿ

ಕ್ರ ಸಂ.	ಖಾತೆದಾರರ ಹೆಸರು	ಸ್ಥಿರಾಸ್ತಿ ಇರುವ ಸ್ಥಳ	ಅಸೆಸ್‌ಮೆಂಟ್ ನಂ.	ವಿಸ್ತೀರ್ಣ	ತರಹೆ
1	ಶ್ರೀ ಹೆಚ್.ಡಿ.ದೇವಾನಂದ, ಬಿನ್ ಬೆನಕಪ್ಪ,	ಶಿಕಾರಿಪುರ ತಾಲ್ಲೂಕಿನ ಈಸೂರು ಗ್ರಾಮ	414/415	15 ಅಡಿ X 138 ಅಡಿ ನಿವೇಶನದಲ್ಲಿ ಇರುವ ಆರ್‌ಸಿಸಿ ವಾಸದ ಮನೆ	ಆರ್‌ಸಿಸಿ ವಾಸದ ಮನೆ

ಈ ಆದೇಶವನ್ನು ನ್ಯಾಯಾಲಯದ ಮೊಹರು ಮತ್ತು ಸ್ವಸಹಿಯೊಂದಿಗೆ ದಿನಾಂಕ:18-02-2012 ರಂದು ತೆರೆದ ನ್ಯಾಯಾಲಯದಲ್ಲಿ ನೀಡಿದೆ.

ಅಶೋಕ.ವೆಂ.ಮೊರಬ,
ಸಹಕಾರ ಸಂಘಗಳ ಉಪನಿಬಂಧಕರು,
ಶಿವಮೊಗ ಜಿಲ್ಲೆ, ಶಿವಮೊಗ್ಗ.

ಪಿ.ಆರ್. 241

ಸಹಕಾರ ಸಂಘಗಳ ಉಪನಿಬಂಧಕರು, ಶಿವಮೊಗ್ಗ ಜಿಲ್ಲೆ, ಶಿವಮೊಗ್ಗ ಇವರ ನ್ಯಾಯಾಲಯದಲ್ಲಿ

ದಾವಾ ಸಂಖ್ಯೆ: ಡಿಆರ್‌ಎಸ್/ಡಿಎಸ್/ಎಂಬಿಎಸ್‌ಸಿ/01/2011-12/23

ಅರ್ಜಿದಾರರು:
ಶಿಕಾರಿಪುರ ತಾಲ್ಲೂಕು ಪ್ರಾಥಮಿಕ ಶಾಲಾ
ಶಿಕ್ಷಕರ ಪತ್ತು ಬೆಳೆಸುವ ಸಹಕಾರ ಸಂಘ ನಿ.,
ಶಿಕಾರಿಪುರ
ಶಿಕಾರಿಪುರ ತಾ. ಶಿವಮೊಗ್ಗ ಜಿಲ್ಲೆ
ಇದರ ಪರವಾಗಿ ಕಾರ್ಯದರ್ಶಿ

ವಿರುದ್ಧ

ಎದುರು ಅರ್ಜಿದಾರರು:
ಹೆಚ್.ಡಿ. ದೇವಾನಂದ (ಪೌತಿ),
ಮೃತ ಕಾರ್ಯದರ್ಶಿ,
ಶಿಕಾರಿಪುರ ತಾಲ್ಲೂಕು ಪ್ರಾಥಮಿಕ
ಶಾಲಾ ಶಿಕ್ಷಕರ ಪತ್ತು ಬೆಳೆಸುವ
ಸಹಕಾರ ಸಂಘ ನಿ.,ಶಿಕಾರಿಪುರ.

ಪೌತಿ ವಾರಸುದಾರರು

1) ಶ್ರೀಮತಿ ಶೈಲಜಾ(ಪತ್ನಿ), ಕೋಂ. ದಿ॥ ಹೆಚ್.ಡಿ. ದೇವಾನಂದ, ಬನಶಂಕರಿ ಬೀದಿ, ಈಸೂರು, ಶಿಕಾರಿಪುರ ತಾಲ್ಲೂಕು.

2) ಕುಮಾರ ರಾಕೇಶ್ ಹೆಚ್.ಡಿ.(ಮೈನರ್) ಬಿನ್ ಹೆಚ್.ಡಿ.ದೇವಾನಂದ, ವಯಸ್ಸು ಸುಮಾರು 15 ವರ್ಷಗಳು

3) ಕುಮಾರ ಹಿತೇಶ ಹೆಚ್.ಡಿ.(ಮೈನರ್) ಬಿನ್ ಹೆಚ್.ಡಿ.ದೇವಾನಂದ, ವಯಸ್ಸು ಸುಮಾರು 13 ವರ್ಷಗಳು

ಮೈನರ್ ಗಾರ್ಡಿಯನ್

ಶ್ರೀಮತಿ ಶೈಲಜಾ, ಕೋಂ. ದಿ:ಹೆಚ್.ಡಿ.ದೇವಾನಂದ, ಬನಶಂಕರಿ ಬೀದಿ, ಈಸೂರು, ಶಿಕಾರಿಪುರ ತಾಲ್ಲೂಕು.

–: ಆದೇಶ :–

(ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಕಲಂ 103ರ ಮೇರೆಗೆ ತೀರ್ಪು ಪೂರ್ವ ಜಪ್ತು ಆದೇಶ)

ಪ್ರಸ್ತಾವನೆ :–

ಅರ್ಜಿದಾರ ಸಂಘ ಈ ನ್ಯಾಯಾಲಯದಲ್ಲಿ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 70 ರಡಿಯಲ್ಲಿ ಎದುರುಅರ್ಜಿದಾರರು, ಅರ್ಜಿದಾರ ಸಂಘದಲ್ಲಿ ದುರುಪಯೋಗಪಡಿಸಿಕೊಂಡಿರುವ ಮೊಬಲಗು ರೂ.12,57,583–00 ಗಳನ್ನು ಸಾಲಿಯಾನ ಶೇ.18ರ ಬಡ್ಡಿಯೊಂದಿಗೆ ವಸೂಲಾತಿಗಾಗಿ ಎದುರಿಯ ವಿರುದ್ದ ದಾವಾ ಅರ್ಜಿಯನ್ನು ದಾಖಲು ಮಾಡಿರುತ್ತಾರೆ. ಈ ದಾವಾ ಅರ್ಜಿಯನ್ನು ವಿಚಾರಣೆಗೆ ಕೈಗೆತ್ತಿಕೊಂಡು, ದಾವಾ ಅರ್ಜಿ ಸಂಖ್ಯೆ: ಡಿಆರ್‌ಎಸ್/ಡಿಡಿಎಸ್/ಎಂಐಎಸ್‌ಸಿ/01/2011–12 ಎಂದು ನಂಬರ್ ನೀಡಲಾಗಿದೆ. ಈ ದಾವಾ ಅರ್ಜಿಯೊಂದಿಗೆ ಅರ್ಜಿದಾರರು ಮಧ್ಯಂತರ ಅರ್ಜಿ ಸಲ್ಲಿಸಿ, ಕಲಂ 103ರನ್ವಯ ಅರ್ಜಿದಾರ ಸಂಘ, ಎದುರುದಾರರ ವಿರುದ್ದ ವಸೂಲಾತಿಗಾಗಿ ಕಾಯ್ದೆ ಕಲಂ 70 ರಡಿಯಲ್ಲಿ ಅರ್ಜಿದಾರ ಸಂಘದ ಪರವಾಗಿ ಡಿಕ್ರಿ ಕೋರಿ ಪ್ರಕರಣ ದಾಖಲಿಸಿದ್ದು, ಸದರೀ ಹಣವು ವಸೂಲಾತಿ ಆಗದಿರುವಂತಹ ಪರಿಸ್ಥಿತಿ ಇರುವ ಪ್ರಯುಕ್ತ ಮೇಲ್ಕಂಡ ದಾವಾ ಅರ್ಜಿಯಲ್ಲಿನ ಎದುರುದಾರರ ಸ್ಥಿರಾಸ್ತಿಯನ್ನು ದಾವಾ ಅರ್ಜಿಯಲ್ಲಿ ನೀಡಬಹುದಾದ ಡಿಕ್ರಿಯನ್ನು ನಿರರ್ಥಕಗೊಳಿಸುವ ಉದ್ದೇಶದಿಂದ ಬೇರೆಯವರಿಗೆ ಪರಬಾರೆ ಅಥವಾ ಮಾರಾಟ ಮಾಡುವ ಕ್ರಮವನ್ನು ಪ್ರತಿಬಂಧಿಸಲು ಸಹಕಾರ ಸಂಘಗಳ ಕಾಯ್ದೆ ಕಲಂ 103 ರಡಿಯಲ್ಲಿ ತೀರ್ಪು ಪೂರ್ವ ಜಪ್ತಿ ಕ್ರಮವನ್ನು ಕೋರಿದ್ದರು, ಅದರಂತೆ, ತೀರ್ಪು ಪೂರ್ವ ಷರತ್ತುಬದ್ಧ ಜಪ್ತು ಆದೇಶದ ನೋಟಿಸನ್ನು ದಿನಾಂಕ:18–02–2012 ರಂದು ಹೊರಡಿಸಿದ್ದು, ಸದರಿ ನೋಟೀಸನ್ನು ಎದುರು ಅರ್ಜಿದಾರರುಗಳು ಪಡೆದಿರುತ್ತಾರೆ. ಈ ಬಗ್ಗೆ ಸ್ವೀಕೃತಿ ಲಭ್ಯವಿರುತ್ತದೆ. ಆದರೂ ಸಹ ಸದರಿ ನೋಟೀಸಿನಲ್ಲಿನ ಷರತ್ತುಗಳನ್ನು ಪೂರೈಸಲು ಎದುರುಅರ್ಜಿದಾರರು ವಿಫಲರಾಗಿರುವುದರಿಂದ ದಿ:18–02–2012ರಂದು ಹೊರಡಿಸಿದ ಷರತ್ತು ಪೂರ್ವ ಜಪ್ತು ಆಜ್ಞೆಯನ್ನು ಸ್ಥಿರೀಕರಣಗೊಳಿಸಲು ತೀರ್ಮಾನಿಸಿ(ಖಾಯಂಗೊಳಿಸಿ) ಈ ಕೆಳಕಂಡಂತೆ ಆದೇಶಿಸಿದೆ.

ಸಂ:ಡಿಆರ್‌ಎಸ್/ಎಬಿಎನ್/ಕಲಂ–103/2011–12, ದಿನಾಂಕ:30–03–2012

: ಆ ದೇ ಶ :

ಪ್ರಸ್ತಾವನೆಯಲ್ಲಿ ವಿವರಿಸಿದ ಕಾರಣಗಳಿಗಾಗಿ ಅಶೋಕ.ವೆಂ.ಮೊರಬ, ಸಹಕಾರ ಸಂಘಗಳ ಉಪನಿಬಂಧಕರು, ಶಿವಮೊಗ್ಗ ಜಿಲ್ಲೆ, ಶಿವಮೊಗ್ಗ ಆದ ನಾನು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 103 ರನ್ವಯ ಮತ್ತು ಕರ್ನಾಟಕ ಸರ್ಕಾರದ ಅಧಿಸೂಚನೆ ಸಂ.ಸಿಓ/139/ಸಿಎಲ್‌ಎಂ/2010 ಬೆಂಗಳೂರು ದಿನಾಂಕ:17–02–2011ರನ್ವಯ ದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ, ಈ ಆದೇಶದೊಂದಿಗೆ ಇರುವ ಅನುಸೂಚಿಯಲ್ಲಿ ಕಾಣಿಸಿರುವ ಎದುರುಅರ್ಜಿದಾರರ ಸ್ಥಿರಾಸ್ತಿಯನ್ನು ಮೇಲ್ಕಂಡ ದಾವಾ ಅರ್ಜಿಯ ತೀರ್ಪನ್ನು ಕಾಯ್ದಿರಿಸಿ, ದಿನಾಂಕ:18–02–2012ರ ಷರತ್ತು ಪೂರ್ವಕ ಜಪ್ತು ಆಜ್ಞೆಯನ್ನು ಸ್ಥಿರೀಕರಿಸಿ, ಆದೇಶಿಸಿದೆ.

ಈ ಆದೇಶದ ಅನುಸೂಚಿಯಲ್ಲಿರುವ ಸ್ವತ್ತುಗಳನ್ನು ಪಡೆಯುವ ಅಥವಾ ಖರೀದಿಸುವ ವ್ಯಕ್ತಿ ಅಥವಾ ಸಂಸ್ಥೆಗಳು ಸಹ ತೀರ್ಪು ಪೂರ್ವ ಜಪ್ತು ಆಜ್ಞೆಗೆ ಒಳಪಡುವರು ಎಂದು ಸಹ ಆದೇಶಿಸಿದೆ.

ಷರತ್ತು ಪೂರ್ವಕ ಜಪ್ತು ಆದೇಶಕ್ಕೆ ಒಳಗಾದ ಸ್ವತ್ತುಗಳ ಅನುಸೂಚಿ

ಕ್ರ. ಸಂ.	ಖಾತೆದಾರರ ಹೆಸರು	ಸ್ಥಿರಾಸ್ತಿ ಇರುವ ಸ್ಥಳ	ಅಸೆಸ್‌ಮೆಂಟ್ ನಂ.	ವಿಸ್ತೀರ್ಣ	ತರಹೆ
1	ಶ್ರೀ ಹೆಚ್.ಡಿ.ದೇವಾನಂದ, ಬಿನ್ ಬೆನಕಪ್ಪ,	ಶಿಕಾರಿಪುರ ತಾಲ್ಲೂಕಿನ ಈಸೂರು ಗ್ರಾಮ	414/415	15 ಅಡಿ x 138 ಅಡಿ ನಿವೇಶನದಲ್ಲಿ ಇರುವ ಆರ್‌ಸಿಸಿ ವಾಸದ ಮನೆ	ಆರ್‌ಸಿಸಿ ವಾಸವ ಮನೆ

ಈ ಆದೇಶವನ್ನು ನ್ಯಾಯಾಲಯದ ಮೊಹರು ಮತ್ತು ಸ್ವಸಹಿಯೊಂದಿಗೆ ದಿನಾಂಕ:30–03–2012 ರಂದು ತೆರೆದ ನ್ಯಾಯಾಲಯದಲ್ಲಿ ನೀಡಿದೆ.

ಅಶೋಕ.ವೆಂ.ಮೊರಬ,
ಸಹಕಾರ ಸಂಘಗಳ ಉಪನಿಬಂಧಕರು,
ಶಿವಮೊಗ ಜಿಲ್ಲೆ, ಶಿವಮೊಗ್ಗ.

ಪಿ.ಆರ್. 504

ನಿರ್ದೇಶಕರ ಕಛೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, ಸಂಪಿಗೆ ರಸ್ತೆ, 18ನೇ ಕ್ರಾಸ್, ಮಲ್ಲೇಶ್ವರಂ, ಬೆಂಗಳೂರು-12

ಪದವಿ ಪೂರ್ವ ಶಿಕ್ಷಣ ಇಲಾಖಾ ನಿರ್ದೇಶಕರ ನಡವಳಿಗಳು

ವಿಷಯ : ಶ್ರೀಮತಿ ಸಯಿದ ನಯೀಮುನ್ನೀಸ, ಅರ್ಥಶಾಸ್ತ್ರ ಉಪನ್ಯಾಸಕರು, ಇವರ ದೀರ್ಘಕಾಲದ ಅನಧಿಕೃತ ಗೈರುಹಾಜರಿಯ ಕುರಿತು ಕ್ರಮ ಜರುಗಿಸುವ ಬಗ್ಗೆ.

ಉಲ್ಲೇಖ:

1. ಪ್ರಾಚಾರ್ಯರು, ಸರ್ಕಾರಿ ಪದವಿ ಪೂರ್ವ ಕಾಲೇಜು, ರಿಪ್ಪನ್‌ಪೇಟೆ, ಹೊಸನಗರ ತಾಲ್ಲೂಕ್, ಶಿವಮೊಗ್ಗ ಜಿಲ್ಲೆ ಇವರ ಪತ್ರ ದಿನಾಂಕ: 11-11-2009.
2. ಶಿವಮೊಗ್ಗ ಜಿಲ್ಲೆಯ ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರವರ ವರದಿ ಸಂಖ್ಯೆ:ಪಪೂಶಿಇ/ಉನಿಕಶಿ/ಎ1/ಅಗೈಹಾ/09-10 ದಿನಾಂಕ:14-12-2009.
3. ಈ ಕಛೇರಿಯ ಸಮಸಂಖ್ಯೆಯ ಪತ್ರ ದಿನಾಂಕ:26-03-2010.
4. ಶಿವಮೊಗ್ಗ ಜಿಲ್ಲೆಯ ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರವರ ವರದಿ ಸಂಖ್ಯೆ:ಪಪೂಶಿಇ/ಉನಿಕಶಿ/ಎ1/ಅಗೈಹಾ/09-10 ದಿನಾಂಕ:15-04-2010.
5. ಈ ಕಛೇರಿ ಜ್ಞಾಪನ ಸಂಖ್ಯೆ:ಪಪೂಶಿಇ/ಟಿಟಿ035/ಗೈಹಾ/2009-10, ದಿನಾಂಕ:17-08-2010.
6. ಈ ಕಛೇರಿ ಅರೆಸರ್ಕಾರಿ ಪತ್ರ ಸಂಖ್ಯೆ:ಪಪೂಶಿಇ/ಟಿಟಿ035/ಗೈಹಾ/2009-10 ದಿನಾಂಕ:07-09-2010.
7. ಶ್ರೀಮತಿ ಸಯಿದ ನಯೀಮುನ್ನೀಸ, ಅರ್ಥಶಾಸ್ತ್ರ ಉಪನ್ಯಾಸಕರು ಇವರು ದಿನಾಂಕ:30-08-2010 ರಂದು ಪ್ರಾಚಾರ್ಯರಿಗೆ ಸಲ್ಲಿಸಿರುವ ಮನವಿ.
8. ಪ್ರಾಚಾರ್ಯರು, ಸರ್ಕಾರಿ ಪದವಿ ಪೂರ್ವ ಕಾಲೇಜು, ಮುಲ್ಕಿ, ದ ಕ ಜಿಲ್ಲೆ ಇವರ ಪತ್ರ ಸಂಖ್ಯೆ:1/ಸಪಪೂಕಾ/ಮುಲ್ಕಿ/ಕರ್ತವ್ಯಕ್ಕೆ ಸೇರ್ಪಡೆಗೊಳ್ಳದಿರುವ ಬಗ್ಗೆ/2010-11 ದಿನಾಂಕ:22-09-2010.
9. ಶಿವಮೊಗ್ಗ ಜಿಲ್ಲೆಯ ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರವರ ಪತ್ರ ಸಂಖ್ಯೆ:ಪಪೂಶಿಇ/ಉನಿಕಶಿ/ಎ1/ಅಗೈಹಾ/2009-10 ದಿನಾಂಕ:18-09-2010.
10. ಪ್ರಾಚಾರ್ಯರು, ಸರ್ಕಾರಿ ಪದವಿ ಪೂರ್ವ ಕಾಲೇಜು, ಮುಲ್ಕಿ, ದ ಕ ಜಿಲ್ಲೆ, ಇವರ ಪತ್ರ ಸಂಖ್ಯೆ:2/ಸಪಪೂಕಾ/ಮುಲ್ಕಿ/ಕರ್ತವ್ಯಕ್ಕೆ ಸೇರ್ಪಡೆಗೊಳ್ಳದಿರುವ ಬಗ್ಗೆ/2010-11 ದಿನಾಂಕ:03-01-2011.
11. ದಿನಾಂಕ:26-03-2011ರ ಈ ಕಛೇರಿಯ ಪತ್ರ.
12. ಶ್ರೀಮತಿ ಸಯಿದ ನಯೀಮುನ್ನೀಸ, ಅರ್ಥಶಾಸ್ತ್ರ ಉಪನ್ಯಾಸಕರು, ಇವರ ಮೇಲಿನ ಆರೋಪಗಳ ಕುರಿತು ಇಲಾಖಾ ವಿಚಾರಣೆಯನ್ನು ನಡೆಸಲು ಆರೋಪಣಾ ಪಟ್ಟಿಯನ್ನು ಜಾರಿಗೊಳಿಸುವ ಕುರಿತು ಜಿಲ್ಲಾ ಉಪ ನಿರ್ದೇಶಕರವರಿಗೆ ಈ ಕಛೇರಿಯಿಂದ ಬರೆದ ಪತ್ರ ದಿನಾಂಕ: 30-03-2011.
13. ಪ್ರಾಚಾರ್ಯರು, ಸರ್ಕಾರಿ ಪದವಿ ಪೂರ್ವ ಕಾಲೇಜು, ಮುಲ್ಕಿ, ದ ಕ ಜಿಲ್ಲೆ, ಇವರ ಪತ್ರ ದಿನಾಂಕ:22-03-2011.
14. ಉಪ ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಶಿವಮೊಗ್ಗ ಜಿಲ್ಲೆ, ಶಿವಮೊಗ್ಗ ಇವರ ವರದಿ ಸಂಖ್ಯೆ:ಪಪೂಶಿಇ/ಉನಿಕಶಿ/ಎ1/ಅಗೈಹಾ/2009-10 ದಿನಾಂಕ:11-04-2011.
15. ಅಂಚೆ ಕಛೇರಿಯಿಂದ ಹಿಂದಿರುಗಿ ಬಂದ ಲಕೋಟೆ ದಿನಾಂಕ:21-04-2011.
16. ಪ್ರಾಚಾರ್ಯರು, ಸರ್ಕಾರಿ ಪದವಿ ಪೂರ್ವ ಕಾಲೇಜು, ಮುಲ್ಕಿ, ದ ಕ ಜಿಲ್ಲೆ ಇವರ ಪತ್ರ ದಿನಾಂಕ:07-06-2011.
17. ದಿನಾಂಕ:19-07-2011ರ ದಿ ನ್ಯೂ ಇಂಡಿಯನ್ ಎಕ್ಸ್‌ಪ್ರೆಸ್ ಹಾಗೂ ಸಂಯುಕ್ತ ಕರ್ನಾಟಕ ದಿನಪತ್ರಿಕೆಗಳು.
18. ದಿನಾಂಕ:24-07-2011ರ ದಿ ನ್ಯೂಇಂಡಿಯನ್ ಎಕ್ಸ್‌ಪ್ರೆಸ್ ಹಾಗೂ ಸಂಯುಕ್ತ ಕರ್ನಾಟಕ ದಿನಪತ್ರಿಕೆಗಳು.
19. ಈ ಕಛೇರಿಯ ಅಂತಿಮ ತಿಳುವಳಿಕೆ ನೋಟೀಸ್ ದಿನಾಂಕ:03-08-2011.
20. ಪ್ರಾಚಾರ್ಯರು, ಸರ್ಕಾರಿ ಪದವಿ ಪೂರ್ವ ಕಾಲೇಜು, ಮುಲ್ಕಿ, ದ ಕ ಜಿಲ್ಲೆ ಇವರ ಪತ್ರ ದಿನಾಂಕ:06-08-2011.
21. ಶಿವಮೊಗ್ಗ ಜಿಲ್ಲೆಯ ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರವರ ವರದಿ ಸಂಖ್ಯೆ:ಪಪೂಶಿ/ಉನಿ-ಟಿಟಿ/ಎ1ಅಗೈಹಾ/2009-10 ದಿನಾಂಕ: 04-08-2011.
22. ಉಪ ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಶಿವಮೊಗ್ಗ ಜಿಲ್ಲೆ, ಶಿವಮೊಗ್ಗ ಇವರ ಪತ್ರ ದಿನಾಂಕ:02-09-2011.
23. ಅಂಚೆ ಕಛೇರಿಯಿಂದ ಹಿಂದರುಗಿ ಬಂದ ಲಕೋಟೆ ದಿನಾಂಕ:19-08-2011.
24. ಶಿವಮೊಗ್ಗ ಜಿಲ್ಲೆಯ ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರವರ ವರದಿ ಸಂಖ್ಯೆ:ಪಪೂಶಿ/ಉನಿಕಶಿ/ಎ1/ಆಗೈಹಾ/09-10 ದಿನಾಂಕ: 16-09-2011.
25. ಶ್ರೀಮತಿ ಸಯಿದ ನಯೀಮುನ್ನೀಸ, ಅರ್ಥಶಾಸ್ತ್ರ ಉಪನ್ಯಾಸಕರು ಇವರ ಮನವಿ ಪತ್ರ ದಿನಾಂಕ:05-09-2011.

ಪ್ರಾಚಾರ್ಯರು, ಸರ್ಕಾರಿ ಪದವಿ ಪೂರ್ವ ಕಾಲೇಜು, ರಿಪ್ಪನ್‌ಪೇಟೆ, ಹೊಸನಗರ ತಾಲ್ಲೂಕ್, ಶಿವಮೊಗ್ಗ ಜಿಲ್ಲೆ ಇವರು ಉಲ್ಲೇಖ-1 ರಲ್ಲಿರುಸಿದ ಪತ್ರದಲ್ಲಿ ಶ್ರೀಮತಿ ಸಯಿದ ನಯೀಮುನ್ನೀಸ, ಅರ್ಥಶಾಸ್ತ್ರ ಉಪನ್ಯಾಸಕರು, ದಿನಾಂಕ:29-12-2003 ರಿಂದ ಕರ್ತವ್ಯ ನಿರ್ವಹಿಸುತ್ತಿದ್ದು,

ಸದರಿಯವರ ಸೇವಾಪುಸ್ತಕವನ್ನು ಪರಿಶೀಲಿಸಲಾಗಿ ನವೆಂಬರ್-2007 ರಿಂದ ಆಗಿಂದ್ದಾಗ್ಗೆ ವೈದ್ಯಕೀಯ ರಜೆ, ವೇತನರಹಿತ ರಜೆ ಮೇಲೆ ತೆರಳುತ್ತಿರುವುದರಿಂದ, ವಿದ್ಯಾರ್ಥಿಗಳ ಪಾಠ ಪ್ರವಚನಗಳಿಗೆ ತೊಂದರೆಯಾಗುತ್ತಿದ್ದು, ಸದರಿಯವರು ಕರ್ತವ್ಯಕ್ಕೆ ಹಾಜರಾಗುವವರೆಗೆ ಬದಲಿ ವ್ಯವಸ್ಥೆಯನ್ನು ಮಾಡುವಂತೆ ಕೋರಿರುತ್ತಾರೆ. ಪ್ರಾಚಾರ್ಯರ ಪತ್ರವನ್ನು ಮುಂದಿನ ಕ್ರಮಕ್ಕಾಗಿ ಜಿಲ್ಲಾ ಉಪ ನಿರ್ದೇಶಕರವರು ಉಲ್ಲೇಖ-2 ರಲ್ಲಿರಿಸಿದ ಪತ್ರದಲ್ಲಿ ಈ ಕಛೇರಿಗೆ ಸಲ್ಲಿಸಿರುತ್ತಾರೆ. ಉಲ್ಲೇಖ-3 ರಲ್ಲಿರಿಸಿದ ಈ ಕಛೇರಿಯ ಪತ್ರದಲ್ಲಿ ಶ್ರೀಮತಿ ಸಯಿದ ನಯೀಮುನ್ನೀಸ, ಅರ್ಥಶಾಸ್ತ್ರ ಉಪನ್ಯಾಸಕರು ಇವರ ಅನಧಿಕೃತ ಗೈರುಹಾಜರಿಯ ಕುರಿತಂತೆ ಕೆಲವು ಮಾಹಿತಿಗಳನ್ನು ಸದರಿ ಕಾಲೇಜದ ಪ್ರಾಚಾರ್ಯರಿಂದ ಪಡೆದು ಪೂರಕ ದಾಖಲೆಗಳೊಂದಿಗೆ ಅಭಿಪ್ರಾಯ ನೀಡಿ, ವರದಿ ಸಲ್ಲಿಸಲು ಜಿಲ್ಲಾ ಉಪ ನಿರ್ದೇಶಕರವರಿಗೆ ತಿಳಿಸಲಾಗಿತ್ತು.

ಉಲ್ಲೇಖ-4 ರಲ್ಲಿರಿಸಿದ ಪತ್ರದಲ್ಲಿ ಶಿವಮೊಗ್ಗ ಜಿಲ್ಲೆಯ ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರವರು ವರದಿಯನ್ನು ನೀಡಿರುತ್ತಾರೆ. ಶ್ರೀಮತಿ ಸಯಿದ ನಯೀಮುನ್ನೀಸ ಇವರಿಗೆ ದಿನಾಂಕಃ 03-07-2009 ರಿಂದ 03-10-2009 ರವರೆಗೆ 3 ತಿಂಗಳು ವೇತನ ರಹಿತ ರಜೆಯನ್ನು ದೈಹಿಕ ಸಾಮರ್ಥ್ಯ ಕಾಯ್ದಿರಿಸಿ ಮಂಜೂರು ಮಾಡಲಾಗಿದೆಯೆಂದು ದಿನಾಂಕಃ01-01-2010 ರಿಂದ ಇಲ್ಲಿಯವರೆಗೂ ರಜಾ ಮಂಜೂರು ಮಾಡಿಲ್ಲವೆಂದು, ದಿನಾಂಕಃ04-10-2009 ರಿಂದ 30-12-2009 ರವರೆಗೆ ಅನಧಿಕೃತ ಗೈರುಹಾಜರಾಗಿರುತ್ತಾರೆಂದು, ಸದರಿ ಉಪನ್ಯಾಸಕರು, ದಿನಾಂಕಃ30-12-2009ರ ಮನವಿಯ ಮೂಲಕ ವೈದ್ಯಕೀಯ ರಜೆ ಮಂಜೂರು ಮಾಡಲು ಕೋರಿದ್ದು, ಮನವಿಯ ಜೊತೆ ಯಾವುದೇ ವೈದ್ಯರ ಪತ್ರ ಇರದಿದ್ದರಿಂದ ರಜೆ ಮಂಜೂರಾತಿಯನ್ನು ಕಾಯ್ದಿರಿಸಿರುತ್ತಾರೆಂದು ಪ್ರಾಂಶುಪಾಲರು ತಿಳಿಸಿರುತ್ತಾರೆ. ಸದರಿ ಉಪನ್ಯಾಸಕರು ಪದೇ ಪದೇ ವೈದ್ಯಕೀಯ ಕಾರಣಗಳ ಮೇಲೆ ರಜೆ ಹಾಕುವುದರಿಂದ ಅವರು ದೈಹಿಕವಾಗಿ ಸಧೃಡವಾಗಿಲ್ಲದ ಕಾರಣ ಶಿಸ್ತು ಕ್ರಮ ಜರುಗಿಸುವುದು ಸೂಕ್ತವೆಂದು ಉಪ ನಿರ್ದೇಶಕರವರು ವರದಿ ನೀಡಿರುತ್ತಾರೆ.

ಶ್ರೀಮತಿ ಸಯಿದ ನಯೀಮುನ್ನೀಸ, ಅರ್ಥಶಾಸ್ತ್ರ ಉಪನ್ಯಾಸಕರು, ಸರ್ಕಾರಿ ಪದವಿ ಪೂರ್ವ ಕಾಲೇಜು, ರಿಪ್ಪನ್‌ಪೇಟೆ, ಹೊಸನಗರ ತಾಲ್ಲೂಕ್, ಶಿವಮೊಗ್ಗ ಜಿಲ್ಲೆ ಇವರು ದಿನಾಂಕಃ04-10-2009 ರಿಂದ ಅನಧಿಕೃತವಾಗಿ ಗೈರುಹಾಜರಾಗಿ ಕರ್ತವ್ಯಲೋಪ ಎಸಗಿದ್ದು, ಸದರಿಯವರ ವಿರುದ್ಧ ಶಿಸ್ತುಕ್ರಮ ಜರುಗಿಸಲು ಉದ್ದೇಶಿಸಿ, ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳು (ಶಿಕ್ಷಕರ ವರ್ಗಾವಣೆ ನಿಯಂತ್ರಣ) ನಿಯಮಗಳು 2007ರ ನಿಯಮ 4(2) ಮತ್ತು ಸರ್ಕಾರದ ಆದೇಶ ಸಂಖ್ಯೆಃಡಿಪಿಎಆರ್4 ಎಸ್‌ಟಿಆರ್ 2001 ದಿನಾಂಕಃ22-11-2001ರ ಕಂಡಿಕೆ 7.1 (ಎಫ್)ರ ಪ್ರಕಾರ ಶ್ರೀಮತಿ ಸಯಿದ ನಯೀಮುನ್ನೀಸ, ಅರ್ಥಶಾಸ್ತ್ರ ಉಪನ್ಯಾಸಕರು ಇವರನ್ನು ಸರ್ಕಾರಿ ಪದವಿ ಪೂರ್ವ ಕಾಲೇಜು, ಮುಲ್ಕಿ, ದಕ್ಷಿಣ ಕನ್ನಡ ಜಿಲ್ಲೆ ಇಲ್ಲಿಗೆ ವರ್ಗಾಯಿಸಿ ಉಲ್ಲೇಖ-5 ರಲ್ಲಿರಿಸಿದ ಈ ಕಛೇರಿಯ ಜ್ಞಾಪನ ದಿನಾಂಕಃ17-08-2010 ರಲ್ಲಿ ಆದೇಶಿಸಲಾಗಿದೆ.

ಉಲ್ಲೇಖ-6 ರಲ್ಲಿರಿಸಿದ ಈ ಕಛೇರಿಯ ಅರೆಸರ್ಕಾರಿ ಪತ್ರದಲ್ಲಿ ಶ್ರೀಮತಿ ಸಯಿದ ನಯೀಮುನ್ನೀಸ, ಅರ್ಥಶಾಸ್ತ್ರ ಉಪನ್ಯಾಸಕರು ಇವರು ದಿನಾಂಕಃ04-10-2009 ರಿಂದ ಅನಧಿಕೃತ ಗೈರುಹಾಜರಾಗಿ ಕರ್ತವ್ಯಲೋಪ ಎಸಗಿದ್ದು, ಸದರಿಯವರ ವಿರುದ್ಧ ಶಿಸ್ತು ಕ್ರಮ ಜರುಗಿಸಲು ಕರಡು ಆರೋಪಣಾ ಪಟ್ಟಿಯನ್ನು ಸಿದ್ಧಪಡಿಸಿ, ಆರೋಪಣಾ ಪಟ್ಟಿ ಹಾಗೂ ಆರೋಪಣಾ ಪಟ್ಟಿಗೆ ಸಂಬಂಧಿಸಿದಂತಿರುವ ಪೂರಕ ದಾಖಲೆಗಳನ್ನು ಸಲ್ಲಿಸುವಂತೆ ಶಿವಮೊಗ್ಗ ಜಿಲ್ಲೆಯ ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರವರಿಗೆ ತಿಳಿಸಲಾಗಿದೆ. ಹಾಗೂ ರಿಪ್ಪನ್‌ಪೇಟೆಯ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಅರ್ಥಶಾಸ್ತ್ರ ಉಪನ್ಯಾಸಕರ ಹುದ್ದೆಗೆ ನಿಯೋಜನೆ ಆಧಾರದ ಮೇರಗೆ ಸ್ಥಳೀಯವಾಗಿ ವ್ಯವಸ್ಥೆ ಮಾಡಲು ತಿಳಿಸಲಾಗಿದೆ.

ಶ್ರೀಮತಿ ಸಯಿದ ನಯೀಮುನ್ನೀಸ, ಅರ್ಥಶಾಸ್ತ್ರ ಉಪನ್ಯಾಸಕರು ಇವರು ಉಲ್ಲೇಖ-7 ರಲ್ಲಿರಿಸಿದ ಪತ್ರದಲ್ಲಿ ಸದರಿ ಕಾಲೇಜಿನ ಪ್ರಾಚಾರ್ಯರಿಗೆ ಮನವಿ ಸಲ್ಲಿಸಿ, ದಿನಾಂಕಃ03-07-2009 ರಿಂದ ವೈದ್ಯಕೀಯ ರಜೆ ಮೇಲೆ ಇದ್ದು, ಪುನಃ 03-10-2009 ರಂದು ವೈದ್ಯಕೀಯ ಪ್ರಮಾಣ ಪತ್ರದೊಂದಿಗೆ ರಜೆಯನ್ನು ಮುಂದುವರೆಸಿದ್ದು ಸರಿಯಷ್ಟೆ. ಆದರೆ ನನ್ನ ಆರೋಗ್ಯ ಸ್ಥಿತಿ ಸುಧಾರಿಸಿರುವುದಿಲ್ಲದಿರುವುದರಿಂದ ವೈದ್ಯರನ್ನು ಸಂಪರ್ಕಿಸಲಾಗಿ, ಅವರ ಸಲಹೆ ಮೇರೆಗೆ ಆರೋಗ್ಯ ಸುಧಾರಿಸುವವರೆಗೆ ರಜೆ ಮುಂದುವರೆಸಲು ತಿಳಿಸಿದ್ದು, ಪ್ರಯುಕ್ತ ಅವರಿಗೆ ಸರಿಹೊಂದುವವರೆಗೆ ರಜೆಯನ್ನು ಕೊಡಬೇಕೆಂದು ತಿಳಿಸಿರುತ್ತಾರೆ.

ಉಲ್ಲೇಖ-8 ರಲ್ಲಿರಿಸಿದ ಪತ್ರದಲ್ಲಿ ಸರ್ಕಾರಿ ಪದವಿ ಪೂರ್ವ ಕಾಲೇಜು, ಮುಲ್ಕಿ, ಈ ಕಾಲೇಜಿನ ಪ್ರಾಚಾರ್ಯರು, ಶ್ರೀಮತಿ ಸಯಿದ ನಯೀಮುನ್ನೀಸ, ಅರ್ಥಶಾಸ್ತ್ರ ಉಪನ್ಯಾಸಕರು, ಇವರನ್ನು ಈ ಕಾಲೇಜಿಗೆ ವರ್ಗಾಯಿಸಿದ್ದು ಸದರಿಯವರನ್ನು ರಿಪ್ಪನ್‌ಪೇಟೆಯ ಸರ್ಕಾರಿ ಪದವಿ ಪೂರ್ವ ಕಾಲೇಜಿನಿಂದ ದಿನಾಂಕಃ 25-08-2010ರ ಅಪರಾಹ್ನದಿಂದ ಜಾರಿಗೆ ಬರುವಂತೆ ಬಿಡುಗಡೆಗೊಳಿಸಲಾಗಿದ್ದು, ಈವರೆಗೆ ಸದರಿಯವರು ಅವರ ಕಾಲೇಜಿಗೆ ಬಂದು ಸೇರ್ಪಡೆಗೊಂಡಿರುವುದಿಲ್ಲವೆಂದು ತಿಳಿಸಿರುತ್ತಾರೆ.

ಶಿವಮೊಗ್ಗ ಜಿಲ್ಲೆಯ ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರವರು ಉಲ್ಲೇಖ-9 ರಲ್ಲಿರಿಸಿದ ವರದಿಯಲ್ಲಿ ಶ್ರೀಮತಿ ಸಯಿದ ನಯೀಮುನ್ನೀಸ, ಅರ್ಥಶಾಸ್ತ್ರ ಉಪನ್ಯಾಸಕರು ಇವರ ವಿರುದ್ಧ ಶಿಸ್ತು ಕ್ರಮ ಜರುಗಿಸಲು ಕರಡು ಆರೋಪಣಾ ಪಟ್ಟಿಯನ್ನು ಸಿದ್ಧಪಡಿಸಿ, ಆರೋಪಣಾ ಪಟ್ಟಿಗೆ ಸಂಬಂಧಿಸಿದಂತಿರುವ ಪೂರಕ ದಾಖಲೆಗಳನ್ನು ಲಗತ್ತಿಸಿ ಸಲ್ಲಿಸಿರುತ್ತಾರೆ.

ಪ್ರಾಚಾರ್ಯರು, ಸರ್ಕಾರಿ ಪದವಿ ಪೂರ್ವ ಕಾಲೇಜು, ಮುಲ್ಕಿ, ದಕ್ಷಿಣ ಕನ್ನಡ ಜಿಲ್ಲೆ ಇವರು ಉಲ್ಲೇಖ-10 ರಲ್ಲಿರಿಸಿದ ಪತ್ರದಲ್ಲಿ, ಶ್ರೀಮತಿ ಸಯಿದ ನಯೀಮುನ್ನೀಸ, ಅರ್ಥಶಾಸ್ತ್ರ ಉಪನ್ಯಾಸಕರು ಈ ಕಾಲೇಜಿನಲ್ಲಿ ಇದೂವರೆಗೂ ಕರ್ತವ್ಯಕ್ಕೆ ಹಾಜರಾಗಿರುವುದಿಲ್ಲವೆಂದು, ಪತ್ರ ಮುಖೇನವೇ ರಜೆ ಮಂಜೂರಾತಿಗಾಗಿ ಮನವಿಯನ್ನು ಸಲ್ಲಿಸಿರುತ್ತಾರೆಂದು ತಿಳಿಸಿರುತ್ತಾರೆ.

ಉಲ್ಲೇಖ-11 ರಲ್ಲಿರಿಸಿದ ಪತ್ರದಲ್ಲಿ ಶ್ರೀಮತಿ ಸಯಿದ ನಯೀಮುನ್ನೀಸ, ಅರ್ಥಶಾಸ್ತ್ರ ಉಪನ್ಯಾಸಕರು ಇವರಿಗೆ ಅನುಬಂಧ- I ರಿಂದ IV ರಲ್ಲಿ ಆರೋಪಣಾ ಪಟ್ಟಿಯನ್ನು ಜಾರಿಗೊಳಿಸಲಾಗಿದೆ.

ಉಲ್ಲೇಖ-12 ರಲ್ಲಿರಿಸಿದ ಪತ್ರದಲ್ಲಿ ಶ್ರೀಮತಿ ಸಯಿದ ನಯೀಮುನ್ನೀಸ, ಅರ್ಥಶಾಸ್ತ್ರ ಉಪನ್ಯಾಸಕರು ಇವರಿಗೆ ಆರೋಪಣಾ ಪಟ್ಟಿಯನ್ನು ಖುದ್ದು ತಲುಪಿಸುವಂತೆ ಜಿಲ್ಲಾ ಉಪ ನಿರ್ದೇಶಕರವರಿಗೆ ತಿಳಿಸಲಾಗಿದೆ.

ಪ್ರಾಚಾರ್ಯರು, ಸರ್ಕಾರಿ ಪದವಿ ಪೂರ್ವ ಕಾಲೇಜು, ಮುಲ್ಕಿ, ದಕ್ಷಿಣ ಕನ್ನಡ ಜಿಲ್ಲೆ ಇವರು ಉಲ್ಲೇಖ-13 ರಲ್ಲಿರಿಸಿದ ಪತ್ರದಲ್ಲಿ, ಶ್ರೀಮತಿ ಸಯೀದ ನಯೀಮುನ್ನೀಸ, ಅರ್ಥಶಾಸ್ತ್ರ ಉಪನ್ಯಾಸಕರು ಇವರು ಇದೂವರೆಗೂ ಸದರಿ ಕಾಲೇಜಿಗೆ ಸೇರ್ಪಡೆಗೊಂಡಿರುವುದಿಲ್ಲವೆಂದು, ವೈದ್ಯಕೀಯ ರಜೆಯನ್ನು ಮುಂದುವರೆಸುವಂತೆ ಪತ್ರ ಮುಖೇನವೇ ವ್ಯವಹರಿಸಿದ್ದಾರೆಂದು ತಿಳಿಸಿರುತ್ತಾರೆ.

ಉಲ್ಲೇಖ-14 ರಲ್ಲಿರಿಸಿದ ಪತ್ರದಲ್ಲಿ ಶಿವಮೊಗ್ಗ ಜಿಲ್ಲೆಯ ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರವರು ಶ್ರೀಮತಿ ಸಯಿದ ನಯೀಮುನ್ನೀಸ, ಅರ್ಥಶಾಸ್ತ್ರ ಉಪನ್ಯಾಸಕರು ಇವರ ಮೇಲಿನ ಆರೋಪಗಳ ಕುರಿತು ವಿಚಾರಣೆ ನಡೆಸಲು, ಕಳುಹಿಸಿರುವ ಆರೋಪಣಾ ಪಟ್ಟಿಯನ್ನು ಜಾರಿಗೊಳಿಸಲು ದಿನಾಂಕ:08-04-2011 ರಂದು ಅವರ ನೀಡಿರುವ ವಿಳಾಸಕ್ಕೆ ಖುದ್ದಾಗಿ ಭೇಟಿ ನೀಡಿದಾಗ, ಸದರಿಯವರು ಆ ವಿಳಾಸದಲ್ಲಿ ವಾಸವಿರುವುದಿಲ್ಲವೆಂದು ತಿಳಿಸಿ, ಆರೋಪಣಾ ಪಟ್ಟಿಯನ್ನು ಹಿಂದಿರುಗಿಸಿರುತ್ತಾರೆ.

ಶ್ರೀಮತಿ ಸಯಿದ ನಯೀಮುನ್ನೀಸ, ಅರ್ಥಶಾಸ್ತ್ರ ಉಪನ್ಯಾಸಕರು ಇವರಿಗೆ ಆರೋಪಣಾ ಪಟ್ಟಿಯನ್ನು ಜಾರಿಗೊಳಿಸುವ ಕುರಿತು ಅವರ ವಿಳಾಸಕ್ಕೆ ನೊಂದಾಯಿತ ಅಂಚೆ ಮೂಲಕ ಕಳುಹಿಸಿದ್ದು, ಉಲ್ಲೇಖ-15 ರಲ್ಲಿರಿಸಿದ ಲಕೋಟೆಯ ಮೇಲೆ ಅಂಚೆ ಇಲಾಖೆಯವರು Absent ಎಂದು ನಮೂದಿಸಿ ಲಕೋಟೆಯನ್ನು ಹಿಂದಿರುಗಿಸಿರುತ್ತಾರೆ.

ಪ್ರಾಚಾರ್ಯರು, ಸರ್ಕಾರಿ ಪದವಿ ಪೂರ್ವ ಕಾಲೇಜು, ಮುಲ್ಕಿ, ದಕ್ಷಿಣ ಕನ್ನಡ ಜಿಲ್ಲೆ ಇವರು ಉಲ್ಲೇಖ-16 ರಲ್ಲಿರಿಸಿದ ಪತ್ರದಲ್ಲಿ ಶ್ರೀಮತಿ ಸಯಿದ ನಯೀಮುನ್ನೀಸ ಇವರು ಸದರಿ ಕಾಲೇಜಿಗೆ ಈವರೆಗೂ ಸೇರ್ಪಡೆಗೊಂಡಿರುವುದಿಲ್ಲವೆಂದು, ಈ ಕಾಲೇಜಿನಲ್ಲಿ ಪೂರ್ಣಕಾಲಿಕ ಸೇವೆಯಲ್ಲಿ ಅರ್ಥಶಾಸ್ತ್ರ ಬೋಧಿಸಲು ಉಪನ್ಯಾಸಕರು ಇಲ್ಲದಿರುವುದರಿಂದ ವಿದ್ಯಾರ್ಥಿಗಳ ಕಲಿಕೆಗೆ ತೊಂದರೆಯಾಗಿದ್ದು, ಗ್ರಾಮೀಣ ವಲಯದ ಬಡ ವಿದ್ಯಾರ್ಥಿಗಳ ಈ ಸಮಸ್ಯೆಗೆ ಪರಿಹಾರ ಒದಗಿಸುವಂತೆ ವಿನಂತಿಸಿರುತ್ತಾರೆ.

ಉಲ್ಲೇಖ-17 ರಲ್ಲಿರಿಸಿದ ದಿನಾಂಕ:19-07-2011ರ ದಿ ನ್ಯೂ ಇಂಡಿಯನ್ ಎಕ್ಸ್‌ಪ್ರೆಸ್ ಹಾಗೂ ಸಂಯುಕ್ತ ಕರ್ನಾಟಕ ದಿನಪತ್ರಿಕೆಗಳಲ್ಲಿ ಶ್ರೀಮತಿ ಸಯಿದ ನಯೀಮುನ್ನೀಸ, ಅರ್ಥಶಾಸ್ತ್ರ ಉಪನ್ಯಾಸಕರು ಇವರಿಗೆ ಕರ್ತವ್ಯದ ಮೇಲೆ ಹಾಜರಾಗಲು ಇಚ್ಛಿಸಿದಲ್ಲಿ, ಸಕ್ಷಮ ಪ್ರಾಧಿಕಾರದ ಮುಂದೆ ಹಾಜರಾಗುವಂತೆ ತಿಳಿಸಿ, 10 ದಿನಗಳ ಅಂತಿಮ ಕಾಲವಕಾಶ ನೀಡಿ ಪತ್ರಿಕಾ ಪ್ರಕಟಣೆಯನ್ನು ನೀಡಲಾಗಿತ್ತು. ಉಲ್ಲೇಖ-18 ರಲ್ಲಿರಿಸಿದ ದಿನಾಂಕ: 24-07-2011ರ ಸಂಯುಕ್ತ ಕರ್ನಾಟಕ ಹಾಗೂ ದಿ ನ್ಯೂ ಇಂಡಿಯನ್ ಎಕ್ಸ್‌ಪ್ರೆಸ್ ದಿನಪತ್ರಿಕೆಗಳಲ್ಲಿ ದಿನಾಂಕ:19-07-2011ರ ಪತ್ರಿಕಾ ಪ್ರಕಟಣೆಯ ಸಂಖ್ಯೆಪಪೂಶಿ/ಟಿಟಿ035/ಗೈಹಾ/2009-10 ದಿನಾಂಕ:18-07-2011ರ ಬದಲು 15-07-2011 ಎಂದು ನಮೂದಿಸಿದ್ದು, ಸದರಿ ದಿನಾಂಕವನ್ನು 18-07-2011 ಎಂದು ತಿದ್ದುಪಡಿ ಪ್ರಕಟಣೆಯನ್ನು ಹೊರಡಿಸಲಾಗಿದೆ.

ಸದರಿ ಪತ್ರಿಕಾ ಪ್ರಕಟಣೆಗೊಂಡ 10 ದಿನಗಳೊಳಗಾಗಿ ಶ್ರೀಮತಿ ಸಯಿದ ನಯೀಮುನ್ನೀಸ ಇವರಿಗೆ ಸಕ್ಷಮ ಪ್ರಾಧಿಕಾರದ ಮುಂದೆ ಕರ್ತವ್ಯಕ್ಕೆ ಹಾಜರಾಗಲು ತಿಳಿಸಲಾಗಿದ್ದು, 10 ದಿನಗಳು ಮೀರಿದ ನಂತರವೂ ಸದರಿಯವರು ಸಕ್ಷಮ ಪ್ರಾಧಿಕಾರದ ಮುಂದೆ ಹಾಜರಾಗಿರುವುದಿಲ್ಲ. ಶ್ರೀಮತಿ ಸಯಿದ ನಯೀಮುನ್ನೀಸ, ಅರ್ಥಶಾಸ್ತ್ರ ಉಪನ್ಯಾಸಕರು ಇವರಿಗೆ ಕರ್ತವ್ಯಕ್ಕೆ ಹಾಜರಾಗಲು ಅಂತಿಮ ಕಾಲವಕಾಶ ನೀಡುವ ಉದ್ದೇಶದಿಂದ ಉಲ್ಲೇಖ-19 ರಲ್ಲಿರಿಸಿದ ಈ ಕಛೇರಿಯ ಪತ್ರದಲ್ಲಿ ಅಂತಿಮ ತಿಳುವಳಿಕೆ ನೋಟಿಸನ್ನು ಜಾರಿಗೊಳಿಸಲಾಯಿತು.

ಪ್ರಾಚಾರ್ಯರು, ಸರ್ಕಾರಿ ಪದವಿ ಪೂರ್ವ ಕಾಲೇಜು, ಮುಲ್ಕಿ, ದಕ್ಷಿಣ ಕನ್ನಡ ಜಿಲ್ಲೆ ಇವರು ಉಲ್ಲೇಖ-20 ರಲ್ಲಿರಿಸಿದ ಪತ್ರದಲ್ಲಿ ಶ್ರೀಮತಿ ಸಯಿದ ನಯೀಮುನ್ನೀಸ, ಅರ್ಥಶಾಸ್ತ್ರ ಉಪನ್ಯಾಸಕರು, ಸರ್ಕಾರಿ ಪದವಿ ಪೂರ್ವ ಕಾಲೇಜು, ರಿಪ್ಪನ್‌ಪೇಟೆ, ಹೊಸನಗರ ತಾಲ್ಲೂಕ್, ಶಿವಮೊಗ್ಗ ಜಿಲ್ಲೆ ಇವರನ್ನು ಈ ಕಾಲೇಜಿಗೆ ವರ್ಗಾವಣೆ ಮಾಡಲಾಗಿದ್ದು, ಸದರಿಯವರನ್ನು ಆ ಕಾಲೇಜಿನ ಕರ್ತವ್ಯದಿಂದ ದಿನಾಂಕ:25-08-2010 ಅಪರಾಹ್ನದಿಂದ ಕರ್ತವ್ಯದಿಂದ ಬಿಡುಗಡೆ ಮಾಡಲಾಗಿದ್ದು, ಸದರಿಯವರು ಈವರೆಗೂ ಕರ್ತವ್ಯಕ್ಕೆ ಹಾಜರಾಗಿರುವುದಿಲ್ಲವೆಂದು ತಿಳಿಸಿರುತ್ತಾರೆ.

ಶ್ರೀಮತಿ ಸಯಿದ ನಯೀಮುನ್ನೀಸ, ಅರ್ಥಶಾಸ್ತ್ರ ಉಪನ್ಯಾಸಕರು ಇವರನ್ನು ಸರ್ಕಾರಿ ಪದವಿ ಪೂರ್ವ ಕಾಲೇಜು, ಮುಲ್ಕಿ, ದಕ್ಷಿಣ ಕನ್ನಡ ಜಿಲ್ಲೆ ಇಲ್ಲಿಗೆ ವರ್ಗಾಯಿಸಿದ್ದರಿಂದ ದಿನಾಂಕ:25-08-2010 ರಂದು ಸರ್ಕಾರಿ ಪದವಿ ಪೂರ್ವ ಕಾಲೇಜು, ರಿಪ್ಪನ್‌ಪೇಟೆ, ಹೊಸನಗರ ತಾಲ್ಲೂಕ್, ಶಿವಮೊಗ್ಗ ಜಿಲ್ಲೆ ಈ ಕಾಲೇಜಿನ ಉಪನ್ಯಾಸಕರ ಹುದ್ದೆಯ ಕರ್ತವ್ಯದಿಂದ ಬಿಡುಗಡೆಗೊಳಿಸಿರುವುದಾಗಿಯು, ಆನಂತರ ಸದರಿ ಉಪನ್ಯಾಸಕರು ಖುದ್ದಾಗಿಯಾಗಲೀ, ಪತ್ರದ ಮುಖಾಂತರವಾಗಲೀ ಅಥವಾ ದೂರವಾಣಿ ಮುಖಾಂತರವಾಗಲಿ ಸಂಪರ್ಕಿಸಿಲ್ಲವೆಂದು ರಿಪ್ಪನ್‌ಪೇಟೆಯ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಪ್ರಾಚಾರ್ಯರು ತಿಳಿಸಿರುತ್ತಾರೆಂದು, ಶಿವಮೊಗ್ಗ ಜಿಲ್ಲೆಯ ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರವರು ಉಲ್ಲೇಖ-21 ರಲ್ಲಿರಿಸಿದ ಪತ್ರದಲ್ಲಿ ಪ್ರಸ್ತಾಪಿಸಿರುತ್ತಾರೆ. ಅದೇ ರೀತಿ ಅವರ ಕಛೇರಿಗೂ ಸಂಪರ್ಕ ಮಾಡಿರುವುದಿಲ್ಲವೆಂದು ವರದಿ ಮಾಡಿರುತ್ತಾರೆ.

ಶಿವಮೊಗ್ಗ ಜಿಲ್ಲೆಯ ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರವರು ಉಲ್ಲೇಖ-22 ರಲ್ಲಿರಿಸಿದ ಪತ್ರದಲ್ಲಿ ಶ್ರೀಮತಿ ಸಯಿದ ನಯೀಮುನ್ನೀಸ, ಅರ್ಥಶಾಸ್ತ್ರ ಉಪನ್ಯಾಸಕರು ಇವರು ಅನಧಿಕೃತ ಗೈರುಹಾಜರಾಗಿರುವುದರ ಬಗ್ಗೆ ಅಂತಿಮ ತಿಳುವಳಿಕೆ ನೋಟೀಸನ್ನು ಸದರಿಯವರಿಗೆ ಖುದ್ದು ವಿತರಿಸಲು ದಿನಾಂಕ:29-08-2011 ರಂದು ಭೇಟಿ ನೀಡಿದಾಗ, ಸದರಿಯವರು ಅವರು ನೀಡಿರುವ ವಿಳಾಸದಲ್ಲಿ ವಾಸವಿರುವುದಿಲ್ಲವೆಂದು ವರದಿ ಮಾಡಿರುತ್ತಾರೆ.

ಶ್ರೀಮತಿ ಸಯಿದ ನಯೀಮುನ್ನೀಸ, ಅರ್ಥಶಾಸ್ತ್ರ ಉಪನ್ಯಾಸಕರು, ಇವರಿಗೆ ಕರ್ತವ್ಯಕ್ಕೆ ಹಾಜರಾಗುವಂತೆ ತಿಳಿಸಿ ಅಂತಿಮ ತಿಳುವಳಿಕೆ ನೋಟಿಸನ್ನು ಈ ಕಛೇರಿಯಿಂದ ನೊಂದಾಯಿತ ಅಂಚೆ ಮೂಲಕ ಕಳುಹಿಸಿದ ಅಂಚೆ ಲಕೋಟೆಯ ಮೇಲೆ Not claim ಎಂದು ನಮೂದಿಸಿ, ಅಂಚೆ ಇಲಾಖೆಯವರು ಲಕೋಟೆಯನ್ನು ಉಲ್ಲೇಖ-23 ರಂತೆ ಹಿಂದಿರುಗಿಸಿರುತ್ತಾರೆ.

ಶ್ರೀಮತಿ ಸಯಿದ ನಯೀಮುನ್ನೀಸ ಇವರು ದಿನಾಂಕ:05-09-2011 ರಂದು ಮನವಿಯನ್ನು ಸಲ್ಲಿಸಿ, ಅವರ ಆರೋಗ್ಯ ಸುಧಾರಿಸದೇ ಇರುವುದರಿಂದ, ಇನ್ನೂ ಕೆಲವು ದಿನಗಳ ಕಾಲ ಬೆಡ್‌ರೆಸ್ಟ್ ಪಡೆಯಲು ವೈದ್ಯರು ಸಲಹೆ ನೀಡಿರುತ್ತಾರೆಂದು, ಅವರಿಗೆ 02 ಚಿಕ್ಕಮಕ್ಕಳಿದ್ದು ಆ ಮಕ್ಕಳ ಜವಾಬ್ದಾರಿಯು ಅವರ ಮೇಲೆ ಇರುವುದರಿಂದ ಕರ್ತವ್ಯಕ್ಕೆ ಹಾಜರಾಗಲು ಆಗಿರುವುದಿಲ್ಲವೆಂದು, 2012-ಮೇ ರವರಗೆ ವೈದ್ಯಕೀಯ ನೆಲೆಯಲ್ಲಿ

ವೈದ್ಯಕೀಯ ರಜೆಯನ್ನು ಮಂಜೂರು ಮಾಡಲು ಕೋರಿರುವುದಾಗಿ ತಿಳಿಸಿರುತ್ತಾರೆಂದು, ಉಲ್ಲೇಖ–24 ರಲ್ಲಿರಿಸಿದ ಪತ್ರದಲ್ಲಿ ಜಿಲ್ಲಾ ಉಪ ನಿರ್ದೇಶಕರವರು ವರದಿ ಮಾಡಿರುತ್ತಾರೆ. ಹಾಗೂ ಶ್ರೀಮತಿ ಸಯಿದ ನಯೀಮುನ್ನೀಸ, ಅರ್ಥಶಾಸ್ತ್ರ ಉಪನ್ಯಾಸಕರು ಇವರು ರಜೆ ಮನವಿಯೊಂದಿಗೆ ನಿಗಧಿತ ರಜಾ ಅರ್ಜಿ ನಮೂನೆ ಮತ್ತು ವೈದ್ಯಕೀಯ ಪ್ರಮಾಣ ಪತ್ರವನ್ನು ಲಗತ್ತಿಸಿರುವುದಿಲ್ಲ ಹಾಗೂ ಈ ಹಿಂದೆ ಕರ್ತವ್ಯ ನಿರ್ವಹಿಸುತ್ತಿದ್ದ ಕಾಲೇಜಿನ ವಿಳಾಸವನ್ನು ನಮೂದಿಸಿರುತ್ತಾರೆಂದು, ಆದರೆ ಅವರ ವಾಸಸ್ಥಳದ ವಿಳಾಸ ನಮೂದಿಸಿರುವುದಿಲ್ಲವೆಂದು ತಿಳಿಸಿರುತ್ತಾರೆ.

ಶ್ರೀಮತಿ ಸಯಿದ ನಯೀಮುನ್ನೀಸ, ಅರ್ಥಶಾಸ್ತ್ರ ಉಪನ್ಯಾಸಕರು ಇವರು ಉಲ್ಲೇಖ–25 ರಲ್ಲಿರಿಸಿದ ಮನವಿಯಲ್ಲಿ ದಿನಾಂಕ:03–07–2009 ರಿಂದ ಕಾಲೇಜಿನ ಕರ್ತವ್ಯಕ್ಕೆ ಹಾಜರಾಗಿರುವುದಿಲ್ಲವೆಂದು, ಆರೋಗ್ಯ ಇನ್ನೂ ಸುಧಾರಣೆ ಆಗದೇ ಇದ್ದು, ಇನ್ನು ಕೆಲವು ದಿನಗಳ ಕಾಲ ಬೆಡ್‌ರೆಸ್ಟ್ ಪಡೆಯಲು ವೈದ್ಯರು ಸಲಹೆ ನೀಡಿರುತ್ತಾರೆಂದು ಹಾಗೂ 2 ಚಿಕ್ಕಮಕ್ಕಳು ಇದ್ದು, ಅವರನ್ನು ನೋಡಿಕೊಳ್ಳಲು ಯಾರು ಇಲ್ಲದೆ ಇದ್ದು, ಅವರ ಸಂಪೂರ್ಣ ಜವಾಬ್ದಾರಿಯು ಅವರ ಮೇಲಿರುತ್ತದೆಂದು, ಅದ್ದರಿಂದ ಕರ್ತವ್ಯಕ್ಕೆ ಹಾಜರಾಗಲು ಆಗದೇ ಇರುವುದರಿಂದ ಮುಂದುವರೆದ 2012–ಮೇ ವರಗೆ ವೈದ್ಯಕೀಯ ನೆಲೆಯಲ್ಲಿ ವೇತನ ರಹಿತ ರಜೆಯನ್ನು ಮಂಜೂರು ಮಾಡಲು ಕೋರುತ್ತಾ, 2012–ಮೇ ನಂತರ ಕರ್ತವ್ಯಕ್ಕೆ ಹಾಜರಾಗಲು ಅನುವು ಮಾಡಿಕೊಡುವಂತೆ ಕೋರಿರುತ್ತಾರೆ. ಆದರೆ ಇದಕ್ಕೆ ಪೂರಕವಾಗಿ ನಿಗಧಿತ ರಜಾ ಅರ್ಜಿಯಾಗಲೀ, ವೈದ್ಯಕೀಯ ಪ್ರಮಾಣ ಪತ್ರವನ್ನಾಗಲೀ ಲಗತ್ತಿಸಿರುವುದಿಲ್ಲ. ಈ ಮೇಲ್ಕಂಡ ಎಲ್ಲಾ ಅಂಶಗಳ ಹಿನ್ನಲೆಯಲ್ಲಿ ಶ್ರೀಮತಿ ಸಯೀದ ನಯೀಮುನ್ನೀಸ, ಅರ್ಥಶಾಸ್ತ್ರ ಉಪನ್ಯಾಸಕರು ದಿನಾಂಕ:04–10–2009 ರಿಂದ ಅನಧಿಕೃತ ಗೈರುಹಾಜರಾಗಿ ಕರ್ತವ್ಯಕ್ಕೆ ಈವರೆಗೂ ಹಾಜರಾಗಲು ವಿಫಲರಾಗಿರುವುದರಿಂದ, ಸದರಿಯವರಿಗೆ ಸರ್ಕಾರದ ಸೇವೆಯಲ್ಲಿ ಮುಂದುವರೆಯಲು ಆಸಕ್ತಿ ಇಲ್ಲವೆಂದು ಮೇಲ್ನೋಟಕ್ಕೆ ಸಾಬೀತಾಗಿರುವುದರಿಂದ, ಕರ್ನಾಟಕ ಸರ್ಕಾರಿ ಸೇವಾ (ನಡತೆ) 1966 ನಿಯಮ 3 (i)(ii)(iii) ಗಳನ್ನು ಉಲ್ಲಂಘಿಸಿರುವುದರಿಂದ, ಸದರಿಯವರು ದುರ್ನಡತೆ ಎಸಗಿದ್ದಾರೆಂದು ತೀರ್ಮಾನಿಸಿ, ಸೂಕ್ತ ದಂಡನೆಯನ್ನು ವಿಧಿಸಲು ನಿರ್ಣಯಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಆದೇಶ ಸಂಖ್ಯೆ:ಪಪೂಶಿ/ಟಿಟಿ035/ಗೈಹಾ/2009–10 ದಿನಾಂಕ:31–12–2011.

ಪ್ರಸ್ತಾವನೆಯಲ್ಲಿ ವಿವರಿಸಲಾದ ಅಂಶಗಳ ಹಿನ್ನಲೆಯಲ್ಲಿ ಶ್ರೀಮತಿ ಸಯಿದ ನಯೀಮುನ್ನೀಸ, ಅರ್ಥಶಾಸ್ತ್ರ ಉಪನ್ಯಾಸಕರು, ಸರ್ಕಾರಿ ಪದವಿ ಪೂರ್ವ ಕಾಲೇಜು, ಮುಲ್ಕಿ, ದಕ್ಷಿಣ ಕನ್ನಡ ಜಿಲ್ಲೆ ಇವರನ್ನು ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳು 1957ರ ನಿಯಮ–108 ಹಾಗೂ ಕರ್ನಾಟಕ ನಾಗರೀಕ ಸೇವಾ (ವಗೀಕರಣ ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957ರ ನಿಯಮ8 (viii) ರಂತೆ ತಕ್ಷಣದಿಂದ ಜಾರಿಗೆ ಬರುವಂತೆ "**ಸೇವೆಯಿಂದ ವಜಾಗೊಳಿಸುವ**" ದಂಢನೆಯನ್ನು ವಿಧಿಸಿ ಆದೇಶಿಸಿದೆ.

ಶಿಸ್ತುಪ್ರಾಧಿಕಾರ ಮತ್ತು ನಿರ್ದೇಶಕರು,
ಪದವಿ ಪೂರ್ವ ಶಿಕ್ಷಣ ಇಲಾಖೆ.

ಪಿ.ಆರ್. 594

ಪ್ರಾಧಿಕೃತ ಅಧಿಕಾರಿಗಳು ಹಾಗೂ ಅಬಕಾರಿ ಉಪ ಆಯುಕ್ತರು, ಚಿಕ್ಕಬಳ್ಳಾಪುರ ಜಿಲ್ಲೆ, ಚಿಕ್ಕಬಳ್ಳಾಪುರ.

ಸಂಖ್ಯೆ:ಇಎಕ್ಸ್ಇ/ಚಿಪುರ/ವಾ.ಮು./04/2012–13, ದಿ:02/05/2012.

ಸಾರ್ವಜನಿಕರ ಗಮನಕ್ಕೆ

ವಿಷಯ:– ಅಬಕಾರಿ ವಸ್ತುಗಳನ್ನು ಅಕ್ರಮವಾಗಿ ಹೊಂದಿ ಸಾಗಾಣಿಕೆ ಮಾಡುವ ಸಮಯದಲ್ಲಿ ಜಪ್ತುಪಡಿಸಿರುವ ವಾಹನಗಳನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳುವ ಬಗ್ಗೆ.

ಚಿಕ್ಕಬಳ್ಳಾಪುರ ಜಿಲ್ಲಾ ವ್ಯಾಪ್ತಿಯಲ್ಲಿ ಅಬಕಾರಿ ವಸ್ತುಗಳನ್ನು ಅಕ್ರಮವಾಗಿ ಹೊಂದಿ ಸಾಗಾಣಿಕೆ ಮಾಡುವ ಸಮಯದಲ್ಲಿ ಅಬಕಾರಿ / ಪೊಲೀಸ್ ಇಲಾಖೆಯವರು ಈ ಕೆಳಗೆ ನಮೂದಿಸಿದ ಹಲವು ಮೊಕದ್ದಮೆಗಳಲ್ಲಿ ಜಪ್ತುಪಡಿಸಿರುವ ವಿವಿಧ ನಮೂನೆಯ ವಾಹನಗಳ ಮಾಲೀಕತ್ವ ಹೊಂದಿರುವವರು ವಾಹನದ ಮೂಲ ದಾಖಲಾತಿಗಳೊಂದಿಗೆ ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ ದಿನಾಂಕ:21/05/2012 ರೊಳಗೆ ಈ ಕೆಳ ಸಹಿ ಮಾಡಿರುವವರ ಮುಂದೆ ಖುದ್ದು ಹಾಜರಾಗತಕ್ಕದ್ದು. ತಪ್ಪಿದ್ದಲ್ಲಿ ಈ ಕೆಳಕಂಡ ಕೋಷ್ಟಕದಲ್ಲಿ ನಮೂದಿಸಿರುವ ವಾಹನಗಳಿಗೆ ವಾರಸ್ಸುದರರಿಲ್ಲವೆಂದು ಪರಿಗಣಿಸಿ ಅಬಕಾರಿ ಕಾಯ್ದೆ 1965 ರ ಕಲಂ 43(ಸಿ) ಅಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳುವ ಬಗ್ಗೆ ಕ್ರಮ ಕೈಗೊಳ್ಳಲಾಗುವುದೆಂದು ತಿಳಿಯಪಡಿಸಿದೆ.

ಕ್ರ. ಸಂ.	ಪ್ರ.ಮಾ.ವರದಿ ಸಂಖ್ಯೆ & ದಿನಾಂಕ	ಮೊಕದ್ದಮೆ ದಾಖಲಿಸಿದ ಅಧಿಕಾರಿಗಳ ಹೆಸರು/ ಪದನಾಮ	ವಾಹನ ವಿವರ	ನೊಂದಣಿ ಸಂಖ್ಯೆ	ಷರಾ
01	ಆ.ಉ.ನಿ., ಗುಡಿಬಂಡೆ ಪೊಲೀಸ್ ಠಾಣೆ ಮೊ.ಸಂ:93/2011, ದಿನಾಂಕ:07/07/2011	ರಾಮಾಂಜಿನಪ್ಪ, ಆರಕ್ಷಕ ಉಪ ನಿರೀಕ್ಷಕರು	ಬಜಾಜ್ ಸಿಟಿ–100	ಕೆಎ–43 ಇ–570	ಆರೋಪಿಗೆ ಕಾರಣ ಕೇಳಿ ನೋಟೀಸ್ ಆರ್.ಪಿ.ಎ.ಡಿ. ಮೂಲಕ ರವಾನಿಸಿದ್ದು, ನೋಟೀಸ್ ಜಾರಿಯಾಗದೇ ವಾಪಸ್ಸು ಬಂದಿರುತ್ತದೆ. ಮಾಲೀಕರು ವಾಹನ ಬಿಡುಗಡೆಗೆ ಮನವಿ ಸಲ್ಲಿಸಿರುವುದಿಲ್ಲ.

ಕ್ರ ಸಂ.	ಪ್ರ.ಮಾ.ವರದಿ ಸಂಖ್ಯೆ & ದಿನಾಂಕ	ಮೊಕದ್ದಮೆ ದಾಖಲಿಸಿದ ಅಧಿಕಾರಿಗಳ ಹೆಸರು/ ಪದನಾಮ	ವಾಹನ ವಿವರ	ನೊಂದಣಿ ಸಂಖ್ಯೆ	ಷರಾ
02	ಆ.ಉ.ನಿ., ಗ್ರಾಮಾಂತರ ಪೊಲೀಸ್ ಠಾಣೆ, ಚಿಂತಾಮಣಿ ಇವರ ಮೊ.ಸಂ:236/11, ದಿನಾಂಕ:01/09/2011	ಡಿ.ಸಿ. ಮಂಜು, ಆರಕ್ಷಕ ಉಪ ನಿರೀಕ್ಷಕರು	ಬಜಾಜ್ ಡಿಸ್ಕವರಿ	ಕೆಎ–53 ಇ–8045	ಆರೋಪಿಗಳಿಗೆ ಕಾರಣ ಕೇಳಿ ನೊಟೀಸ್ ಆರ್.ಪಿ.ಎ.ಡಿ. ಮೂಲಕ ರವಾನಿಸಿದ್ದು, ನೊಟೀಸ್ ಜಾರಿಯಾಗಿರುತ್ತದೆ. ಮಾಲೀಕರು ವಾಹನ ಬಿಡುಗಡೆಗೆ ಮನವಿ ಸಲ್ಲಿಸಿರುವುದಿಲ್ಲ.
03	ಅ.ನಿ., ಚಿಕ್ಕಬಳ್ಳಾಪುರ ವಲಯ ಇವರ ಮೊ.ಸಂ:03/2010–11, ದಿನಾಂಕ:20/12/2010	ಎ.ಸಿ. ಕಾನಡೆ, ಅಬಕಾರಿ ನಿರೀಕ್ಷಕರು	ಹಿರೋ ಹೊಂಡಾ ಸ್ಪ್ಲೆಂಡರ್	ಕೆಎ–40 ಜೆ–5725	ಆರೋಪಿಗೆ ನೊಟೀಸ್ ಜಾರಿಯಾಗಿರುತ್ತದೆ. ಮಾಲೀಕರಿಗೆ ರವಾನಿಸಿದ ನೊಟೀಸ್ ಜಾರಿಯಾಗದೇ ಈ ಪ್ರಾಧಿಕಾರಕ್ಕೆ ವಾಪಸ್ಸು ಬಂದಿರುತ್ತದೆ.
04	ಆ.ನಿ., ಅಲಾನಿದಳ, ಚಿಕ್ಕಬಳ್ಳಾಪುರ ಇವರ ಮೊ.ಸಂ:91/2011, ದಿನಾಂಕ:01/11/2011	ನಂಜಪ್ಪ, ಆರಕ್ಷಕ ನಿರೀಕ್ಷಕರು	ಟಿವಿಎಸ್ ಮ್ಯಾಕ್ಸ್ 4ಆರ್	ಎಪಿ–02 ಎಹೆಚ್–3226	ಆರೋಪಿಗೆ ನೊಟೀಸ್ ಜಾರಿಯಾಗಿರುತ್ತದೆ. ಮಾಲೀಕರ ವಿವರ ಸಾರಿಗೆ ಅಧಿಕಾರಿಗಳಿಂದ ಸ್ವೀಕೃತವಾಗಿರುವುದಿಲ್ಲ.
05	ಆ.ಉ.ನಿ., ಶಿಡ್ಲಘಟ್ಟ ಗ್ರಾಮಾಂತರ ಪೊಲೀಸ್ ಠಾಣೆ ಮೊ.ಸಂ:290/11, ದಿನಾಂಕ:27/12/2011	ಈರಪ್ಪ, ಎ.ಎಸ್.ಐ.	ಬಜಾಜ್ ಚೇತಕ್ ಸ್ಕೂಟರ್	ಕೆಎ–40 ಇ–7940	ಆರೋಪಿ ಮತ್ತು ವಾಹನ ಮಾಲೀಕರಿಗೆ ನೊಟೀಸ್ ಜಾರಿಯಾಗಿರುತ್ತದೆ. ಇಲ್ಲಿಯವರೆವಿಗೂ ವಾಹನ ಮಾಲೀಕತ್ವದ ಮೂಲ ದಾಖಲಾತಿಗಳೊಂದಿಗೆ ವಾಹನ ಬಿಡುಗಡೆಗೆ ಮನವಿ ಸಲ್ಲಿಸಿರುವುದಿಲ್ಲ.
06	ಆ.ಉ.ನಿ., ಚಿಂತಾಮಣಿ ಗ್ರಾಮಾಂತರ ಪೊಲೀಸ್ ಠಾಣೆ ಮೊ.ಸಂ:314/10, ದಿನಾಂಕ:24/12/2010.	ಕೆ.ಜಿ. ಸತೀಶ್, ಆರಕ್ಷಕ ಉಪ ನಿರೀಕ್ಷಕರು	ಆಟೋ	ಕೆಎ–05 ಎ–1048	ಆರೋಪಿಗಳಿಗೆ ನೊಟೀಸ್ ಜಾರಿಯಾಗಿರುತ್ತದೆ. ಮಾಲೀಕರು ಯಾರೂ ಎಂಬುದು ತಿಳಿದು ಬಂದಿರುವುದಿಲ್ಲ
07	ಆ.ಉ.ನಿ., ಮಂಚೇನಹಳ್ಳಿ ಪೊಲೀಸ್ ಠಾಣೆ ಇವರ ಮೊ.ಸಂ:06/2012, ದಿನಾಂಕ:17/01/2012	ಸುಂದರ, ಆರಕ್ಷಕ ಉಪ ನಿರೀಕ್ಷಕರು	ಟಿವಿಎಸ್ ಸ್ಟಾರ್ ಸಿಟಿ	ಕೆಎ–50 ಸಿ–4186	ಆರೋಪಿಗಳಿಗೆ ನೊಟೀಸ್ ಜಾರಿಯಾಗಿರುತ್ತದೆ. ಮಾಲೀಕರಿಗೆ ನೀಡಿದ ನೊಟೀಸ್ ಜಾರಿಯಾಗದೇ ಪ್ರಾಧಿಕಾರಕ್ಕೆ ವಾಪಸ್ಸು ಬಂದಿರುತ್ತದೆ.
08	ಆ.ಉ.ನಿ., ಮಂಚೇನಹಳ್ಳಿ ಪೊಲೀಸ್ ಠಾಣೆ ಇವರ ಮೊ.ಸಂ:14/2012, ದಿನಾಂಕ:28/01/2012	ಸುಂದರ, ಆರಕ್ಷಕ ಉಪ ನಿರೀಕ್ಷಕರು	ಹಿರೋ ಹೊಂಡಾ ಸ್ಪ್ಲೆಂಡರ್+	ಕೆಎ–40 ಎಲ್–2198	ಆರೋಪಿ / ಮಾಲೀಕರಿಗೆ ನೊಟೀಸ್ ಜಾರಿಯಾಗಿರುತ್ತದೆ. ವಾಹನ ಬಿಡುಗಡೆಗೆ ಮನವಿ ಸಲ್ಲಿಸಿರುವುದಿಲ್ಲ.
09	ಆ.ಉ.ನಿ. ಅಲಾನಿದಳ, ಚಿಕ್ಕಬಳ್ಳಾಪುರ ಇವರ ಮೊ.ಸಂ:19/2012, ದಿನಾಂಕ:05/02/2012	ಅಶ್ವತ್ಥನಾರಾಯಣ ಎಂ.ಎನ್. ಆರಕ್ಷಕ ಉಪ ನಿರೀಕ್ಷಕರು.	ಟಿವಿಎಸ್ ಎಕ್ಸ್ಎಲ್ ಹೆವಿಡ್ಯುಟಿ	ಕೆಎ–04 ಇಎನ್–7174	ಆರೋಪಿಗೆ ನೊಟೀಸ್ ಜಾರಿಯಾಗಿರುತ್ತದೆ. ಮಾಲೀಕರಿಗೆ ಪ್ರಾಧಿಕಾರದಿಂದ ರವಾನಿಸಿದ ನೊಟೀಸ್ ಜಾರಿಯಾಗದೇ ವಾಪಸ್ಸು ಬಂದಿರುತ್ತದೆ.
10	ಅ.ನಿ., ಚಿಕ್ಕಬಳ್ಳಾಪುರ ಉಪ ವಿಭಾಗ ರವರ ಮೊ.ಸಂ:36/2012, ದಿನಾಂಕ:16/02/2012	ಎಂ.ಎಸ್. ಉಷಾ, ಅಬಕಾರಿ ನಿರೀಕ್ಷಕರು	ಟಿವಿಎಸ್ ಸ್ಪೋರ್ಟ್ಸ್+	ಕೆಎ–01 ಇಯು–6119	ಆರೋಪಿಗೆ ನೊಟೀಸ್ ಜಾರಿಯಾಗಿರುತ್ತದೆ. ಮಾಲೀಕರಿಗೆ ಪ್ರಾಧಿಕಾರದಿಂದ ರವಾನಿಸಿದ ನೊಟೀಸ್ ಜಾರಿಯಾಗದೇ ವಾಪಸ್ಸು ಬಂದಿರುತ್ತದೆ.

ಕ್ರ ಸಂ.	ಪ್ರ.ಮಾ.ವರದಿ ಸಂಖ್ಯೆ & ದಿನಾಂಕ	ಮೊಕದ್ದಮೆ ದಾಖಲಿಸಿದ ಅಧಿಕಾರಿಗಳ ಹೆಸರು/ ಪದನಾಮ	ವಾಹನ ವಿವರ	ನೊಂದಣಿ ಸಂಖ್ಯೆ	ಷರಾ
11	ಅ.ಉ.ನಿ.-2, ಗೌರಿಬಿದನೂರು ವಲಯ ರವರ ಮೊ.ಸಂ:8/2012, ದಿನಾಂಕ:21/02/2012	ಎನ್. ನಾರಾಯಣಪ್ಪ, ಅಬಕಾರಿ ಉಪ ನಿರೀಕ್ಷಕರು	ಟಿವಿಎಸ್ ಸೂಪರ್ ಎಕ್ಸ್‌ಎಲ್ ಹೆವಿಡ್ಯುಟಿ	ಕೆಎ-40 ಕ್ಯೂ-9513	ಆರೋಪಿಗಳಿಗೆ / ಮಾಲೀಕರಿಗೆ ನೋಟೀಸ್ ಜಾರಿಯಾಗಿರುತ್ತದೆ. ಮಾಲೀಕರು ವಾಹನ ಬಿಡುಗಡೆಗೆ ಮೂಲ ದಾಖಲಾತಿಗಳೊಂದಿಗೆ ಮನವಿ ಸಲ್ಲಿಸಿರುವುದಿಲ್ಲ.

ಪಿ.ಆರ್. 623

ಪ್ರಾಧಿಕೃತ ಅಧಿಕಾರಿಗಳು ಹಾಗೂ
ಅಬಕಾರಿ ಉಪ ಆಯುಕ್ತರು, ಚಿಕ್ಕಬಳ್ಳಾಪುರ ಜಿಲ್ಲೆ, ಚಿಕ್ಕಬಳ್ಳಾಪುರ.

ಪ್ರಾಧಿಕೃತ ಅಧಿಕಾರಿಗಳು ಹಾಗೂ ಅಬಕಾರಿ ಉಪ ಆಯುಕ್ತರು, ಚಿಕ್ಕಬಳ್ಳಾಪುರ ಜಿಲ್ಲೆ, ಚಿಕ್ಕಬಳ್ಳಾಪುರ. ಇವರ ನ್ಯಾಯಾಲಯದಲ್ಲಿ

ಪ್ರಕರಣ ಸಂ: ಇಎಕ್ಸ್‌ಇ/ಚಿಪುರ/ಡಿಟಿಸಿಆರ್/287/2010-11, ದಿನಾಂಕ: 27/04/2012

ಉಪಸ್ಥಿತರು:- ಎನ್. ಚಂದ್ರಶೇಖರ, ಪ್ರಾಧಿಕೃತ ಅಧಿಕಾರಿಗಳು ಹಾಗೂ ಅಬಕಾರಿ ಉಪ ಆಯುಕ್ತರು, ಚಿಕ್ಕಬಳ್ಳಾಪುರ ಜಿಲ್ಲೆ.

ಪಿರ್ಯಾದುದಾರರು:-
ಆರಕ್ಷಕ ಉಪ ನಿರೀಕ್ಷಕರು,
ಬಾಗೇಪಲ್ಲಿ ಪೊಲೀಸ್ ಠಾಣೆ,
ಬಾಗೇಪಲ್ಲಿ.

ಆರೋಪಿ/ ಅರ್ಜಿದಾರರು:-
ಮಂಜುನಾಥ ಎಂ. ಬಿನ್ ಮುದ್ದನ್ನ,
ಬೂರಗಮಡಗು, ಮಿಟ್ಟೇಮರಿ ಹೋಬಳಿ,
ಬಾಗೇಪಲ್ಲಿ ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆ

ಪ್ರಕರಣದ ಮುಖ್ಯಾಂಶಗಳು:-

ದಿನಾಂಕ:29/03/2011 ರಂದು ಆರಕ್ಷಕ ಉಪ ನಿರೀಕ್ಷಕರು ರವರು ತಮ್ಮ ಠಾಣೆಯ ಮೊಕದ್ದಮೆ ಸಂ:55/2011 ರ ಕಲಂ 32, 34 ಕರ್ನಾಟಕ ಅಬಕಾರಿ ಕಾಯ್ದೆ ಮೊಕದ್ದೆಯಲ್ಲಿ ಠಾಣೆಯ ಎ.ಎಸ್.ಐ. ಜಿ.ಎಂ. ತಾಹೇಶ್ ರವರು ಇದೇ ದಿನ ಸಂಜೆ 5-45 ಗಂಟೆಯ ಸಮಯದಲ್ಲಿ ಬಾಗೇಪಲ್ಲಿ ತಾಲ್ಲೂಕು ಚಿಗರೇಗುಂಡ್ಲಪಲ್ಲಿ ಗ್ರಾಮದ ಬಳಿ ರಸ್ತೆಯಲ್ಲಿ ಯಾರೋ ಒಬ್ಬ ಆಸಾಮಿ ತನ್ನ ಬಾಬತ್ತು ಕೆಎ-40-ಕೆ-9581 ಸೂಪರ್ ಸ್ಪ್ಲೆಂಡರ್ ದ್ವಿಚಕ್ರ ವಾಹನದಲ್ಲಿ ಕಾಟನ್ ಬಾಕ್ಸ್‌ಗಳನ್ನು ಇಟ್ಟುಕೊಂಡು ಚಾಲನೆ ಮಾಡಿಕೊಂಡು ಬರುತ್ತಿದ್ದ ಆಸಾಮಿ ಮೇಲೆ ಅನುಮಾನ ಬಂದು ಆತನನ್ನು ನಿಲ್ಲಿಸಿ ಪರಿಶೀಲಿಸಿದಾಗ ಅಕ್ರಮವಾಗಿ ಹಾಗೂ ಯಾವುದೇ ಪರವಾನಿಗೆ ಇಲ್ಲದೆ ಮದ್ಯವನ್ನು ಸಾಗಿಸುತ್ತಿದ್ದವನನ್ನು ಮುಂದಿನ ಕ್ರಮ ಜರುಗಿಸಲು ಠಾಣೆಗೆ ಮಾಲು ಸಮೇತ ಆರೋಪಿಯನ್ನು ಠಾಣೆಗೆ ಕರೆ ತಂದು ನಂತರ ಈ ಮೊಕದ್ದಮೆಯಲ್ಲಿನ ಮಾಲು ಮತ್ತು ವಾಹನವನ್ನು ಅಮಾನತ್ತುಪಡಿಸಿಕೊಳ್ಳಲು ಅಲ್ಲಿದ್ದ ವ್ಯಕ್ತಿಗಳನ್ನು ಪಂಚರನ್ನಾಗಿ ಬರಮಾಡಿಕೊಂಡು ಅವರ ಸಮಕ್ಷಮದಲ್ಲಿ ಅಧಿಕಾರಿಗಳು ಮೂರು ಕಾಟನ್ ಬಾಕ್ಸ್‌ಗಳನ್ನು ಪರಿಶೀಲಿಸಲಾಗಿ ಅವುಗಳಲ್ಲಿ 180 ಎಂ.ಎಲ್. ನ ತಲಾ ಒಂದೊಂದು ಕಾಟನ್ ಬಾಕ್ಸ್‌ಗಳಲ್ಲಿ 48 ಬಾಟಲುಗಳಂತೆ ಒಟ್ಟು 144 ಬಾಟಲುಗಳ ರಾಜಾ ವಿಸ್ಕಿ, ಎರಡು ಬಾಕ್ಸ್‌ಗಳಲ್ಲಿ ಹೈವಾರ್ಡ್ಸ್ ವಿಸ್ಕಿ 180 ಎಂ.ಎಲ್.ನ 96 ಟೆಟ್ರಾ ಪ್ಯಾಕ್‌ಗಳು ಮತ್ತು ಎರಡು ಕಾಟನ್ ಬಾಕ್ಸ್‌ಗಳಲ್ಲಿ ನಾಕೌಟ್ ಸ್ಟ್ರಾಂಗ್ ಬಿಯರ್ 330 ಎಂ.ಎಲ್.ನ 48 ಬಾಟಲುಗಳಿರುತ್ತವೆ. ಈ ಮೂರು ಕಾಟನ್ ಕಾಟನ್ ಬಾಕ್ಸ್‌ಗಳಲ್ಲಿ ತಲಾ ಒಂದು ಬಾಟಲನ್ನು ರಾಸಾಯನಿಕ ಪರೀಕ್ಷೆ ಮಾದರಿಗಾಗಿ ತೆಗೆದು ಬಾಟಲುಗಳಿಗೆ ಬಿಳಿ ಬಟ್ಟೆಯಿಂದ ಸುತ್ತಿ ಅದರ ಮೇಲೆ 'ಆರ್' ಎಂಬ ಅಕ್ಷರದಿಂದ ಸೀಲು ಮಾಡಲಾಯಿತು. ನಂತರ ವಾಹನವನ್ನು ಪರಿಶೀಲಿಸಲಾಗಿ ಕಪ್ಪುಬಣ್ಣದ ಹೀರೋ ಹೊಂಡಾ ಸೋಪರ್ ಸ್ಪ್ಲೆಂಡರ್ ದ್ವಿಚಕ್ರವಾಹನವಾಗಿದ್ದು, ವಾಹನದ ಮುಂದಿನ ಮತ್ತು ಹಿಂದಿನ ನಾಮಫಲಕದ ಮೇಲೆ ಕೆಎ-40 ಕೆ-9581 ಎಂದು ಇಂಗ್ಲೀಷ್ ಅಕ್ಷರದಲ್ಲಿ ಬರೆಯಲಾಗಿದ್ದು, ವಾಹನ ಮತ್ತು ಮಾಲನ್ನು ಪೊಲೀಸ್ ಅಧಿಕಾರಿಗಳು ಮುಂದಿನ ಕ್ರಮದ ಬಗ್ಗೆ ಅಮಾನತ್ತುಪಡಿಸಿಕೊಂಡು ನಂತರ ಆಸಾಮಿಯನ್ನು ದಸ್ತಗಿರಿ ಮಾಡಿ ಮುದ್ದೆಮಾಲು ಹಾಗೂ ವಾಹನವನ್ನು ಇಲಾಖಾ ವಶಕ್ಕೆ ತೆಗೆದುಕೊಂಡು ಈ ಕೃತ್ಯಕ್ಕಾಗಿ ತಕ್ಸೀರು ಸಂ:55/2011, ದಿನಾಂಕ:29/03/2011 ರಲ್ಲಿ ಮೊಕದ್ದಮೆಯನ್ನು ದಾಖಲಿಸಿ ಆರೋಪಿಯನ್ನು ಪ್ರ.ಮಾ.ವರದಿಯೊಂದಿಗೆ ಘನ ನ್ಯಾಯಾಲಯದ ಮುಂದೆ ಹಾಜರುಪಡಿಸಿದ್ದು, ಪ್ರ.ಮಾ.ವ. ನಂತರ ಪಿ.ಎಫ್.ನ್ನು ಈ ಪ್ರಾಧಿಕಾರಕ್ಕೆ ಸಲ್ಲಿಸಿ ವಾಹನ ಮತ್ತು ಮದ್ಯವನ್ನು ಅಬಕಾರಿ ನಿರೀಕ್ಷಕರು, ಬಾಗೇಪಲ್ಲಿ ವಲಯ ಇವರಿಗೆ ಹಸ್ತಾಂತರಿಸಲು ಅನುಮತಿ ನೀಡಬೇಕೆಂದು ಕೋರಿರುತ್ತಾರೆ.

ವಶಪಡಿಸಿಕೊಂಡ ಪದಾರ್ಥಗಳ ಪಟ್ಟಿ ಸಂ:47/2011 ರಲ್ಲಿ ವಾಹನ ಮತ್ತು ಮದ್ಯ ಹಾಗೂ ಬೀರ್‌ನ್ನು ಅಬಕಾರಿ ನಿರೀಕ್ಷಕರು, ಬಾಗೇಪಲ್ಲಿ ವಲಯ ಇವರ ವಶದಲ್ಲಿಡಲು ಪ್ರಾಧಿಕಾರದಿಂದ ಅನುಮತಿಯನ್ನು ನೀಡಲಾಗಿತ್ತು.

ತನಿಖಾಧಿಕಾರಿಗಳು ತನಿಖೆಯನ್ನು ಮುಂದುವರೆಸಿ ಜಪ್ತುಪಡಿಸಿದ ಮದ್ಯ ಮತ್ತು ಬೀರ್‌ನಿಂದ ತೆಗೆಯಲಾದ ಮಾದರಿಯನ್ನು ವಿಧಿ ವಿಜ್ಞಾನ ಪ್ರಯೋಗಾಲಯ, ಬೆಂಗಳೂರು ಇವರಿಗೆ ಸಲ್ಲಿಸಿದ್ದು, ತಜ್ಞರ ವರದಿ ಸಂ:ಎಫ್‌ಎಸ್‌ಎಲ್(ಪಿಎ)1639/2011, ದಿನಾಂಕ:30/04/2011 ರ ಪತ್ರದಂತೆ ರಾಸಾಯನಿಕ ವಿಶ್ಲೇಷಣೆಗೆ ಕಳುಹಿಸಲಾದ ಮದ್ಯದ ಮಾದರಿಯಲ್ಲಿ ಮದ್ಯಸಾರದ ಅಂಶ 42% ವಿ.ವಿ. @ 25^0 ಯು.ಪಿ. ಮತ್ತು ಬೀರ್ ಮಾದರಿಯಲ್ಲಿ 7.59% ವಿ.ವಿ. @ 25^0 ಇರುವುದಾಗಿ ತಜ್ಞರು ಅಭಿಪ್ರಾಯ ನೀಡಿದ್ದು, ತಜ್ಞರ ವರದಿಯ ಪ್ರತಿಯನ್ನು ಅಬಕಾರಿ ನಿರೀಕ್ಷಕರು, ಬಾಗೇಪಲ್ಲಿ ವಲಯ ರವರ ಪತ್ರ ದಿನಾಂಕ:21/05/2011 ರೊಂದಿಗೆ ಲಗತ್ತಿಸಿ ಈ ಮೊಕದ್ದಮೆಯಲ್ಲಿ ಜಪ್ತುಪಡಿಸಲಾದ 43.200 ಲೀ. ಮದ್ಯ ಮತ್ತು 15.840 ಲೀ. ಬೀರ್‌ನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ತನಿಖಾಧಿಕಾರಿಗಳು ವರದಿ ಸಲ್ಲಿಸಿದ್ದು, ಅದರಂತೆ ಹೀರೋ ಹೊಂಡಾ ಸ್ಪ್ಲೆಂಡರ್ ನೊಂದಣಿ ಸಂ:ಕೆಎ-40 ಕೆ-9581 ರ ವಾಹನ ಹೊರತುಪಡಿಸಿ ಪ್ರಕರಣ ತನಿಖೆ ಕಾಯ್ದರಿಸಿ 43.200 ಲೀ. ಮದ್ಯ ಮತ್ತು 15.840 ಲೀ. ಬೀರ್‌ನ್ನು ದಿನಾಂಕ;15/06/2011 ರಂದು

ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಮಾದರಿ ಹೊರತುಪಡಿಸಿ ಉಳಿದ ಮದ್ಯ ಮತ್ತು ಬೀರ್‌ನ್ನು ನಿಯಮಾನುಸಾರ ನಾಶಪಡಿಸಲು ಪ್ರಾಧಿಕಾರದಿಂದ ಆದೇಶಿಸಲಾಗಿರುತ್ತದೆ.

ಮಂಜುನಾಥ ಎಂ. ಬಿನ್ ಮುದ್ದನ್ನ, ಬುರಗಮಡಗು, ಮಿಟ್ಟೇಮರಿ ಹೋಬಳಿ, ಬಾಗೇಪಲ್ಲಿ ತಾಲ್ಲೂಕು ಇವರು ದಿನಾಂಕ:11/04/2011 ರಂದು ವಕೀಲರ ವಕಾಲತ್ತಿನೊಂದಿಗೆ ಈ ಪ್ರಾಧಿಕಾರಕ್ಕೆ ಮನವಿ ಸಲ್ಲಿಸಿದ್ದು, ಸಲ್ಲಿಸಿರುವ ದಾಖಲಾತಿಗಳ ಪೈಕಿ ವಾಹನ ನೊಂದಣಿ ಪ್ರತಿಯ ಪ್ರಕಾರ ಸದರಿಯವರೆ ಮಾಲೀಕರು ಆಗಿರುತ್ತಾರೆ. ಸದರಿ ಮನವಿಯಲ್ಲಿ ಈ ವಾಹನವು ತಮ್ಮ ಕುಟುಂಬಕ್ಕೆ ಆಧಾರವಾಗಿರುವುದರಿಂದ ಪ್ರಾಧಿಕಾರವು ವಿಧಿಸುವ ಷರತ್ತುಗಳಿಗೆ ಬದ್ಧರಾಗಿರುವುದಾಗಿ ತಿಳಿಸಿ ಈ ವಾಹನವನ್ನು ತಾತ್ಕಾಲಿಕ (ಮಧ್ಯಂತರ) ವಾಗಿ ಬಿಡುಗಡೆ ಮಾಡಲು ಕೋರಿರುತ್ತಾರೆ.

ತತ್ಸಂಬಂಧವಾಗಿ ಸದರಿ ಮೊಕದ್ದಮೆಯಲ್ಲಿನ ಆರೋಪಿ ಮತ್ತು ವಾಹನ ಮಾಲೀಕರು ಒಬ್ಬರೇ ಆಗಿದ್ದು, ಅದರಂತೆ ಇವರಿಗೆ ಕಲಂ 43(ಬಿ) ರಡಿಯಲ್ಲಿ ಕಾರಣ ಕೇಳಿ ನೊಟೀಸ್ ದಿನಾಂಕ:19/04/2011 ರಲ್ಲಿ ನೀಡಲಾಗಿರುತ್ತದೆ. ನೊಟೀಸ್ ಜಾರಿಯಾದ ಬಗ್ಗೆ ಈ ಪ್ರಾಧಿಕಾರಕ್ಕೆ ಸ್ವೀಕೃತಿ ಬಂದಿರುತ್ತದೆ.

ಈ ಪ್ರಾಧಿಕಾರದಲ್ಲಿ ಹಲವು ದಿನಾಂಕಗಳಲ್ಲಿ ಈ ಪ್ರಕರಣವನ್ನು ವಿಚಾರಣೆಗೆ ತೆಗೆದುಕೊಳ್ಳಲಾಗಿ ಅರ್ಜಿದಾರರು ಮತ್ತು ಅರ್ಜಿದಾರರ ಪರವಕೀಲರು ಪ್ರಾಧಿಕಾರದ ಮುಂದೆ ವಿಚಾರಣೆಗೆ ಹಾಜರಾಗದೇ ಗೈರು ಹಾಜರಾಗಿದ್ದು, ವಾಹನ ಮಾಲೀಕರಾದ ಮಂಜುನಾಥ ಎಂ. ಬಿನ್ ಮುದ್ದನ್ನ, ಬುರಗಮಡಗು, ಮಿಟ್ಟೇಮರಿ ಹೋಬಳಿ, ಬಾಗೇಪಲ್ಲಿ ತಾಲ್ಲೂಕು ಇವರು ಸದರಿ ವಾಹನವನ್ನು ತಾತ್ಕಾಲಿಕವಾಗಿ ಬಿಡುಗಡೆ ಮಾಡಿಕೊಳ್ಳಲು ಸಾಧ್ಯವಾಗುವುದಿಲ್ಲವಾದ್ದರಿಂದ ಕಾನೂನು ರೀತ್ಯಾ ಈ ವಾಹನವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ತನ್ನದೇನು ಅಭ್ಯಂತರವಿಲ್ಲವೆಂದು ಲಿಖಿತ ಹೇಳಿಕೆಗೆ ಸ್ವತಃ ಸಹಿ ಮಾಡಿ ಅಬಕಾರಿ ನಿರೀಕ್ಷಕರು, ಬಾಗೇಪಲ್ಲಿ ವಲಯ ರವರ ಮುಖಾಂತರ ಈ ಪ್ರಾಧಿಕಾರಕ್ಕೆ ಸಲ್ಲಿಸಿರುತ್ತಾರೆ.

ಈ ಪ್ರಕರಣವನ್ನು ದಿನಾಂಕ:27/04/2012 ರಂದು ಪ್ರಾಧಿಕಾರದಲ್ಲಿ ಅಂತಿಮ ವಿಚಾರಣೆಗೆ ತೆಗೆದುಕೊಳ್ಳಲಾಗಿ ಆರಕ್ಷಕ ಉಪ ನಿರೀಕ್ಷಕರು, ಬಾಗೇಪಲ್ಲಿ ಪೊಲೀಸ್ ಠಾಣೆ ಇವರು ದಿನಾಂಕ:29/03/2011 ರಂದು ಬಾಗೇಪಲ್ಲಿ ತಾಲ್ಲೂಕು ಚಿಗರೇಗುಂಡ್ಲಪಲ್ಲಿ ಗ್ರಾಮದ ಬಳಿ ರಸ್ತೆಯಲ್ಲಿ ರಸ್ತೆಗಸ್ತು ನಡೆಸುತ್ತಿರುವಾಗ ಹೀರೋ ಹೊಂಡಾ ಸ್ಪ್ಲೆಂಡರ್ ನೊಂದಣಿ ಸಂ:ಕೆಎ-40 ಕೆ-9581 ರ ವಾಹನದಲ್ಲಿ 43.200 ಲೀ. ಮದ್ಯ ಮತ್ತು 15.840 ಲೀ. ಬೀರ್‌ನ್ನು ಹೊಂದಿ ಸಾಗಣಿಕೆ ಮಾಡುವ ಸಮಯದಲ್ಲಿ ಜಪ್ತು ಪಡಿಸಿರುವುದು ಪ್ರಥಮ ಮಾಹಿತಿ ವರದಿ, ಮಹಜರ್ ಮತ್ತು ಜಪ್ತುಪಡಿಸಿದ ವಸ್ತುಗಳ ಪಟ್ಟಿ ಈ ಎಲ್ಲಾ ದಾಖಲೆಗಳಿಂದ ಹಾಗೂ ವಿಧಿ ವಿಜ್ಞಾನ ಪ್ರಯೋಗಾಲಯ, ಬೆಂಗಳೂರು ಇವರ ವರದಿಯ ಪ್ರಕಾರ ಮಾದರಿಯ ಮದ್ಯ ಮತ್ತು ಬೀರ್‌ನಲ್ಲಿ ಈಥೈಲ್ ಆಲ್ಕೋಹಾಲ್ ಅಂಶ ಕಂಡುಬಂದಿರುವುದರಿಂದ ಈ ವಾಹನವನ್ನು ಅಬಕಾರಿ ವಸ್ತುಗಳ ಅಕ್ರಮ ಸಾಗಾಣಿಕೆಗೆ ಉಪಯೋಗಿಸಿರುವುದು ಸಾಬೀತಾಗಿರುತ್ತದೆ. ವಾಹನದ ಮಾಲೀಕರು ಸದರಿ ವಾಹನವನ್ನು ತಾತ್ಕಾಲಿಕವಾಗಿ ಬಿಡುಗಡೆ ಮಾಡಿಕೊಳ್ಳಲು ತನ್ನಿಂದ ಸಾಧ್ಯವಾಗುವುದಿಲ್ಲವಾದ್ದರಿಂದ ಕಾನೂನು ರೀತ್ಯಾ ಈ ವಾಹನವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ತನ್ನದೇನು ಅಭ್ಯಂತರವಿಲ್ಲವೆಂದು ಲಿಖಿತ ಹೇಳಿಕೆ ಸಲ್ಲಿಸಿರುತ್ತಾರೆ. ಆದುದರಿಂದ ಈ ಕೆಳಕಂಡ ಆದೇಶ.

ಆದೇಶ

ಎನ್. ಚಂದ್ರಶೇಖರ, ಪ್ರಾಧಿಕೃತ ಅಧಿಕಾರಿಗಳು ಹಾಗೂ ಅಬಕಾರಿ ಉಪ ಆಯುಕ್ತರು, ಚಿಕ್ಕಬಳ್ಳಾಪುರ ಜಿಲ್ಲೆ ಆದ ನಾನು ಕರ್ನಾಟಕ ಅಬಕಾರಿ ಕಾಯ್ದೆ 1965 ರ ಕಲಂ 43(ಎ) ಅಡಿಯಲ್ಲಿ ದತ್ತವಾದ ಅಧಿಕಾರವನ್ನು ಚಲಾಯಿಸಿ ಕಲಂ 43(ಬಿ) ಅಡಿ ಕ್ರಮ ಜರುಗಿಸಲಾಗಿದ್ದು, ಆರಕ್ಷಕ ಉಪ ನಿರೀಕ್ಷಕರು, ಬಾಗೇಪಲ್ಲಿ ಪೊಲೀಸ್ ಠಾಣೆರವರ ದಿನಾಂಕ:29/03/2011 ರ ಪ್ರ.ಮಾ.ವ.ಸಂಖ್ಯೆ:55/2011 ರಲ್ಲಿ ಜಪ್ತುಪಡಿಸಿರುವ ಹೀರೋ ಹೊಂಡಾ ಸ್ಪ್ಲೆಂಡರ್ ನೊಂದಣಿ ಸಂ:ಕೆಎ-40 ಕೆ-9581 ರ ಇಂಜಿನ್ ನಂ:09441, ಚಾಸೀಸ್ ನಂ:09625 ರ ದ್ವಿಚಕ್ರ ವಾಹನವನ್ನು ಕರ್ನಾಟಕ ಅಬಕಾರಿ ಕಾಯ್ದೆ 1965 ರ ಕಲಂ 43 (ಸಿ) ಅಡಿಯಲ್ಲಿ ಕರ್ನಾಟಕ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಆದೇಶ ನೀಡಿರುತ್ತೇನೆ.

ವಾಹನಕ್ಕೆ ಸಂಬಂಧಿಸಿದಂತೆ ಈ ಆದೇಶದ ವಿರುದ್ಧ ಮೇಲ್ಮನವಿ ಸಲ್ಲಿಸುವುದಾದಲ್ಲಿ ಈ ಆದೇಶ ಹೊರಡಿಸಿದ ದಿನಾಂಕದಿಂದ 30 ದಿವಸಗಳೊಳಗೆ ಸಲ್ಲಿಸಬಹುದಾಗಿದೆ. ತಪ್ಪಿದ್ದಲ್ಲಿ ಇದೇ ಅಂತಿಮ ಆದೇಶವಾಗಿ ಊರ್ಜಿತಗೊಳ್ಳುತ್ತದೆ.

ಈ ಆದೇಶವನ್ನು ದಿನಾಂಕ:27/04/2012 ರಂದು ತೆರೆದ ಪ್ರಾಧಿಕಾರದಲ್ಲಿ ಓದಿ ಈ ಪ್ರಾಧಿಕಾರದ ಮೊಹರಿನೊಂದಿಗೆ ಹೊರಡಿಸಿರುತ್ತೇನೆ. ಮೇಲ್ಮನವಿ ಅವಧಿ ಮುಗಿದ ನಂತರ ಕಾನೂನು ರೀತ್ಯಾ ಮೇಲ್ಕಂಡ ವಾಹನವನ್ನು ವಿಲೇವಾರಿ ಮಾಡಲು ಆದೇಶಿಸಿದೆ.

ಎನ್. ಚಂದ್ರಶೇಖರ,
ಪ್ರಾಧಿಕೃತ ಅಧಿಕಾರಿಗಳು ಹಾಗೂ ಬಕಾರಿ ಉಪಆಯುಕ್ತರು,
ಚಿಕ್ಕಬಳ್ಳಾಪುರ ಜಿಲ್ಲೆ, ಚಿಕ್ಕಬಳ್ಳಾಪುರ.

ಆಪಿ.ಆರ್. 657

ಪ್ರಾಧಿಕೃತ ಅಧಿಕಾರಿಗಳು ಹಾಗೂ ಅಬಕಾರಿ ಉಪ ಆಯುಕ್ತರು, ಚಿಕ್ಕಬಳ್ಳಾಪುರ ಜಿಲ್ಲೆ, ಚಿಕ್ಕಬಳ್ಳಾಪುರ. ಇವರ ನ್ಯಾಯಾಲಯದಲ್ಲಿ

ಪ್ರಕರಣ ಸಂ: ಇಎಕ್ಸ್ಇ/ಚಿಪುರ/ಡಿಟಿಸಿಆರ್/137/2011-12, ದಿನಾಂಕ: 27/04/2012

ಉಪಸ್ಥಿತರು:- ಎನ್. ಚಂದ್ರಶೇಖರ, ಪ್ರಾಧಿಕೃತ ಅಧಿಕಾರಿಗಳು ಹಾಗೂ ಅಬಕಾರಿ ಉಪ ಆಯುಕ್ತರು, ಚಿಕ್ಕಬಳ್ಳಾಪುರ ಜಿಲ್ಲೆ.

ಪಿರ್ಯಾದುದಾರರು:-	-ವಿರುದ್ಧ-	ಆರೋಪಿ:-
ಆರಕ್ಷಕ ಉಪ ನಿರೀಕ್ಷಕರು (ಕಾ.ಸು.),		ರಘು ಬಿನ್ ನಾರಾಯಣಸ್ವಾಮಿ,
ಬಾಗೇಪಲ್ಲಿ ಪೊಲೀಸ್ ಠಾಣೆ, ಬಾಗೇಪಲ್ಲಿ.		ಕುಂಬಾರಪೇಟೆ, ಬಾಗೇಪಲ್ಲಿ ಟೌನ್.

ಪ್ರಕರಣದ ಮುಖ್ಯಾಂಶಗಳು:-

ದಿನಾಂಕ:17/09/2011 ರಂದು ಆರಕ್ಷಕ ಉಪ ನಿರೀಕ್ಷಕರು ಬಾಗೇಪಲ್ಲಿ ಪೊಲೀಸ್ ಠಾಣೆ ಇವರಿಗೆ ಬಂದ ಖಚಿತ ವರ್ತಮಾನದ ಮೇರೆಗೆ ಬಾಗೇಪಲ್ಲಿ ತಾಲ್ಲೂಕು ಕಸಬಾ ಹೋಬಳಿ ಬಾಲರೆಡ್ಡಿಹಳ್ಳಿ ರಸ್ತೆಯಲ್ಲಿರುವ ಕಮ್ಮವಾರಪಲ್ಲಿ ಕ್ರಾಸ್‌ನಲ್ಲಿ ಪಂಚರ ಸಮೇತ ಪೊಲೀಸ್ ಸಿಬ್ಬಂದಿಯೊಂದಿಗೆ ಸರ್ಕಾರಿ ವಾಹನ ನೊಂದಣಿ ಸಂ: ಕೆಎ-07 ಜಿ-201 ರ ವಾಹನದಲ್ಲಿ ಮೇಲ್ಕಂಡ ಸ್ಥಳದಲ್ಲಿ ರಸ್ತೆಕಾವಲು ಮಾಡುವ ಸಮಯದಲ್ಲಿ ಬಾಗೇಪಲ್ಲಿ ಪಟ್ಟಣದ ಕಡೆಯಿಂದ ಒಂದು ದ್ವಿಚಕ್ರ ವಾಹನ ಬರುತ್ತಿದ್ದು, ಸದರಿ ದ್ವಿಚಕ್ರ ವಾಹನವನ್ನು ನಿಲ್ಲಿಸಿ, ಪರಿಶೀಲಿಸಲಾಗಿ ಅದರಲ್ಲಿ 04 ಬಾಕ್ಸ್‌ಗಳಲ್ಲಿ 180 ಮಿಲಿಯ ಒಟ್ಟು 168 ರಾಜಾ ವಿಸ್ಕಿ ಬಾಟಲುಗಳು ಮತ್ತೊಂದು ಬಾಕ್ಸ್‌ನಲ್ಲಿ 180 ಎಂಎಲ್‌ನ 48 ಬಾಟಲುಗಳು ಹೈವಾರ್ಡ್ಸ್ ವಿಸ್ಕಿ, ಮತ್ತೊಂದು ಸಣ್ಣ ಬಾಕ್ಸ್‌ನಲ್ಲಿ 180 ಎಂ.ಎಲ್. ನ 19 ಓಟಿ ವಿಸ್ಕಿಯ ಟೆಟ್ರಾ ಪ್ಯಾಕೇಟ್‌ಗಳು ಇದ್ದು, ನಂತರ ವಾಹನವನ್ನು ಪರಿಶೀಲಿಸಲಾಗಿ ಅದು ಹೀರೋ ಹೊಂಡಾ ಸ್ಪ್ಲೆಂಡರ್ ಆಗಿದ್ದು, ಇದರ ನೊಂದಣಿ ಸಂ:ಕೆಎ-40 ಹೆಚ್-4948 ಆಗಿರುತ್ತದೆ. ಆಸಾಮಿಯ ಹೆಸರು ವಿಳಾಸ ಕೇಳಲಾಗಿ ರಘು ಬಿನ್ ನಾರಾಯಣಸ್ವಾಮಿ, ಕುಂಬಾರಪೇಟೆ, ಬಾಗೇಪಲ್ಲಿ ಟೌನ್ ಎಂದು ತಿಳಿಸಿದ್ದು, ಮದ್ಯ ಸಾಗಾಣಿಕೆ ಬಗ್ಗೆ ಪರವಾನಿಗೆ ತೋರಿಸುವಂತೆ ಕೇಳಲಾಗಿ ಯಾವುದೇ ದಾಖಲಾತಿಗಳು ಇಲ್ಲ ಎಂದು ಆರೋಪಿ ತಿಳಿಸಿದ್ದು, ಜಪ್ತುಪಡಿಸಿದ ಮದ್ಯದ ಬ್ರಾಂಡ್‌ಗಳಿಂದ ತಲಾ ಒಂದೊಂದು ಬಾಟಲುಗಳನ್ನು ತೆಗೆದು ಅವುಗಳನ್ನು ಎಸ್.ಎಫ್.ಎಲ್. ಗೆ ರವಾನಿಸಲು ಬಿಳಿ ಬಟ್ಟೆ ಸುತ್ತಿ ಅರಗಿನಿಂದ "ಪಿ" ಎಂಬ ಅಕ್ಷರದಿಂದ ಮೊಹರು ಮಾಡಿ ತದನಂತರ ಮದ್ಯ ಮತ್ತು ವಾಹನವನ್ನು ಅಮಾನತ್ತುಪಡಿಸಿಕೊಂಡು, ಆಸಾಮಿಯನ್ನು ತಮ್ಮ ವಶಕ್ಕೆ ತೆಗೆದುಕೊಂಡಿರುತ್ತಾರೆ. ಸದರಿ ಆರೋಪಿಯು ಕರ್ನಾಟಕ ಅಬಕಾರಿ ಕಾಯ್ದೆ 1965 ರ ಕಲಂ 32,34 ರಡಿಯಲ್ಲಿ ಅಪರಾಧ ಮಾಡಿದ್ದು, ಈ ಬಗ್ಗೆ ತನಿಖಾಧಿಕಾರಿಗಳು ತಕ್ಷೀರು ಸಂ:190/2011, ದಿನಾಂಕ:17/09/2011 ರಲ್ಲಿ ಮೊಕದ್ದಮೆ ದಾಖಲಿಸಿಕೊಂಡು ನಂತರ ಪ್ರಮಾವರದಿಯೊಂದಿಗೆ ಆರೋಪಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತಾರೆ. ತದನಂತರ ಪ್ರ.ಮಾ.ವ. ಮಹಜರ್ ಹಾಗೂ ಪಿ.ಎಫ್‌ನ್ನು ಪ್ರಾಧಿಕಾರಕ್ಕೆ ಸಲ್ಲಿಸಿ ವಾಹನ ಮತ್ತು ಮದ್ಯವನ್ನು ಅಬಕಾರಿ ನಿರೀಕ್ಷಕರು, ಬಾಗೇಪಲ್ಲಿ ವಲಯ ಇವರಿಗೆ ಹಸ್ತಾಂತರಿಸಲು ಅನುಮತಿ ನೀಡಬೇಕೆಂದು ಕೋರಿರುತ್ತಾರೆ.

ವಶಪಡಿಸಿಕೊಂಡಿರುವ ವಸ್ತುಗಳ ಪಟ್ಟಿ ನಂ:167/2011 ರಲ್ಲಿ ವಾಹನವನ್ನು ಅಬಕಾರಿ ನಿರೀಕ್ಷಕರು, ಬಾಗೇಪಲ್ಲಿ ವಲಯ ಇವರಿಗೆ ಹಸ್ತಾಂತರ ಮಾಡಲು ಪ್ರಾಧಿಕಾರದಿಂದ ಅನುಮತಿ ನೀಡಲಾಗಿದೆ.

ತನಿಖಾಧಿಕಾರಿಗಳು (ಫಿರ್ಯಾದುದಾರರು) ತನಿಖೆಯನ್ನು ಮುಂದುವರೆಸಿ ಜಪ್ತುಪಡಿಸಿದ ಮದ್ಯದಿಂದ ತೆಗೆಯಲಾದ ಮಾದರಿಯನ್ನು ರಾಸಾಯನಿಕ ವಿಶ್ಲೇಷಣೆಗಾಗಿ ವಿಧಿ ವಿಜ್ಞಾನ ಪ್ರಯೋಗಾಲಯ, ಬೆಂಗಳೂರು ಇವರಿಗೆ ಸಲ್ಲಿಸಿದ್ದು, ತಜ್ಞರ ವರದಿ ಸಂ:ಎಫ್‌ಎಸ್‌ಎಲ್(ಬಿಎ)4745/2011, ದಿನಾಂಕ:28/11/2011 ರ ಪತ್ರದಂತೆ ರಾಸಾಯನಿಕ ವಿಶ್ಲೇಷಣೆಗೆ ಕಳುಹಿಸಲಾದ ಮಾದರಿಯಲ್ಲಿ ಮದ್ಯಸಾರದ ಅಂಶ 42% ವಿ.ವಿ. @ 250 ಯು.ಪಿ. ಇರುವುದಾಗಿ ತಜ್ಞರು ಅಭಿಪ್ರಾಯ ನೀಡಿದ್ದು, ತಜ್ಞರ ವರದಿಯ ಪ್ರತಿಯನ್ನು ಅಬಕಾರಿ ನಿರೀಕ್ಷಕರು, ಬಾಗೇಪಲ್ಲಿ ವಲಯ ರವರ ಪತ್ರ ದಿನಾಂಕ:19/04/2012 ರೊಂದಿಗೆ ಲಗತ್ತಿಸಿ ಈ ಮೊಕದ್ದಮೆಯಲ್ಲಿ ಜಪ್ತುಪಡಿಸಲಾದ 42.300 ಲೀ. ಮದ್ಯವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ವರದಿ ಸಲ್ಲಿಸಿದ್ದು, ಅದರಂತೆ ಹೀರೋ ಹೊಂಡಾ ಸ್ಪ್ಲೆಂಡರ್ ನೊಂದಣಿ ಸಂ:ಕೆಎ-40 ಹೆಚ್-4948 ರ ವಾಹನ ಹೊರತುಪಡಿಸಿ ಪ್ರಕರಣ ತನಿಖೆ ಕಾಯ್ದಿರಿಸಿ 41.760 ಲೀ. ಮದ್ಯವನ್ನು ದಿನಾಂಕ;26/04/2012 ರಂದು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಮಾದರಿ ಹೊರತುಪಡಿಸಿ ಉಳಿದ ಮದ್ಯವನ್ನು ನಿಯಮಾನುಸಾರ ನಾಶಪಡಿಸಲು ಈ ಪ್ರಾಧಿಕಾರದಿಂದ ಆದೇಶಿಸಲಾಗಿರುತ್ತದೆ. ಈ ಪ್ರಾಧಿಕಾರದಿಂದ ಕರ್ನಾಟಕ ಅಬಕಾರಿ ಕಾಯ್ದೆ 1965 ರ ಕಲಂ 43(ಬಿ) ರೀತ್ಯಾ ಕಾರಣ ಕೇಳಿ ನೋಟೀಸ್‌ನ್ನು ದಿನಾಂಕ:18/11/2011 ಆರೋಪಿಗೆ ಮತ್ತು ವಾಹನ ಮಾಲೀಕರಿಗೆ ದಿನಾಂಕ:19/01/2012 ರಂದು ಆರ್.ಪಿ.ಎ.ಡಿ. ಮೂಲಕ ರವಾನಿಸಿದ್ದು, ನೋಟೀಸ್ ಜಾರಿಯಾದ ಬಗ್ಗೆ ಈ ಪ್ರಾಧಿಕಾರಕ್ಕೆ ಸ್ವೀಕೃತಿ ಬಂದಿರುತ್ತದೆ. ಸದರಿ ನೋಟೀಸ್‌ನ್ನು ಆರೋಪಿಗೆ ಮತ್ತು ವಾಹನ ಮಾಲೀಕರಿಗೆ ಜಾರಿ ಮಾಡಲು ಬಾಗೇಪಲ್ಲಿ ವಲಯ ನಿರೀಕ್ಷಕರಿಗೆ ನಿರ್ದೇಶನ ನೀಡಿದ್ದು, ಅದರಂತೆ ವಲಯ ನಿರೀಕ್ಷಕರು ದಿನಾಂಕ:01/12/2011 ರಂದು ಆರೋಪಿಗೆ ಮತ್ತು ದಿನಾಂಕ:30/01/2012 ರಂದು ಮಾಲೀಕರಿಗೆ ಖುದ್ದಾಗಿ ನೋಟೀಸ್‌ನ್ನು ಜಾರಿ ಮಾಡಿ ಸ್ವೀಕೃತಿಯನ್ನು ಪಡೆದು ಈ ಪ್ರಾಧಿಕಾರಕ್ಕೆ ಸಲ್ಲಿಸಿರುತ್ತಾರೆ.

ತದನಂತರ ಅಬಕಾರಿ ನಿರೀಕ್ಷಕರು, ಬಾಗೇಪಲ್ಲಿ ವಲಯ ರವರ ದಿನಾಂಕ:03/02/2012 ರ ಪತ್ರದಲ್ಲಿ ವಾಹನ ಮಾಲೀಕರು ವಲಯ ಕಛೇರಿಗೆ ಖುದ್ದು ಭೇಟಿ ನೀಡಿ ಮೊಕದ್ದಮೆಯಲ್ಲಿ ಜಪ್ತುಪಡಿಸಿರುವ ಹೀರೋ ಹೊಂಡಾ ಸ್ಪ್ಲೆಂಡರ್ ನೊಂದಣಿ ಸಂ:ಕೆಎ-40 ಹೆಚ್-4948 ರ ವಾಹನವು ತನ್ನ ಹೆಸರಿನಲ್ಲಿದ್ದು, ಈ ವಾಹನವನ್ನು ಸುಮಾರು 8 ವರ್ಷಗಳ ಹಿಂದೆ ಬೇರೆಯವರಿಗೆ ಮಾರಾಟ ಮಾಡಿರುತ್ತೇನೆ. ವಾಹನ ಮಾಲೀಕತ್ವ ಬದಲಾವಣೆ ಮಾಡಿಕೊಳ್ಳಲು ಸಾರಿಗೆ ಇಲಾಖೆಯ ನಿಗಧಿತ ನಮೂನೆ 29 ಗೆ ಸಹಿ ಹಾಕಿಕೊಟ್ಟಿರುತ್ತೇನೆ. ಆದ್ದರಿಂದ ಈ ವಾಹನಕ್ಕೂ ನನಗೂ ಯಾವುದೇ ಸಂಬಂಧವಿರುವುದಿಲ್ಲ ಹಾಗೂ ಈ ವಾಹನವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಯಾವುದೇ ವಿಧವಾಗಿ ನನ್ನಿಂದ ಅಭ್ಯಂತರವಿಲ್ಲವೆಂದು ಲಿಖಿತ ಮನವಿಯನ್ನು ಸಲ್ಲಿಸಿದ್ದು, ಇದರ ಪ್ರತಿಯನ್ನು ಅಬಕಾರಿ ನಿರೀಕ್ಷಕರು ಈ ಪ್ರಾಧಿಕಾರಕ್ಕೆ ದಿನಾಂಕ:08/02/2012 ರಂದು ಸಲ್ಲಿಸಿರುತ್ತಾರೆ. ಅಲ್ಲದೇ ವಾಹನ ಜಪ್ತಾಗಿ ಸುಮಾರು 7 ತಿಂಗಳು ಕಳೆದರೂ ವಲಯ ಕಛೇರಿಗೆ ವಾಹನದ ಬಗ್ಗೆ ಹಕ್ಕು ಚಲಾಯಿಸಿ ಮೂಲ ದಾಖಲಾತಿಗಳೊಂದಿಗೆ ಯಾರೂ ಹಾಜರಾಗಿರುವುದಿಲ್ಲ. ಆದಕಾರಣ ವಾಹನವನ್ನು ಹೀಗೆ ಉಳಿಸಿಕೊಂಡಲ್ಲಿ ಅದರ ಮೌಲ್ಯ ಕಡಿಮೆಯಾಗಿ ಸರ್ಕಾರದ ರಾಜಸ್ವಕ್ಕೆ ದಕ್ಕೆಯಾಗುತ್ತದೆ. ಆದಕಾರಣ ವಾರಸುದಾರರು ಬಾರದೇ ಇರುವುದರಿಂದ ಸದರಿ ಹೀರೋ ಹೊಂಡಾ ಸ್ಪ್ಲೆಂಡರ್ ನೊಂದಣಿ ಸಂ:ಕೆಎ-40 ಹೆಚ್-4948 ರ ದ್ವಿಚಕ್ರ ವಾಹನವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಶಿಫಾರಸ್ಸು ಮಾಡಿರುತ್ತಾರೆ.

ದಿನಾಂಕ:27/04/2012 ರಂದು ಪ್ರಕರಣವನ್ನು ಪ್ರಾಧಿಕಾರದಲ್ಲಿ ವಿಚಾರಣೆಗೆ ತೆಗೆದುಕೊಳ್ಳಲಾಗಿ ವಾಹನ ಮಾಲೀಕತ್ವ ಹೊಂದಿರುವವರು ಈ ಪ್ರಾಧಿಕಾರದ ಮುಂದೆ ಇಲ್ಲಿಯತನಕ ಯಾರೂ ಹಾಜರಾಗಿರುವುದಿಲ್ಲ. ದಾಖಲೆಗಳು, ಪ್ರ.ಮಾ.ವ. ಮಹಜರ್‌ನ್ನು ಪರಿಶೀಲಿಸಲಾಗಿ ಆರಕ್ಷಕ ಉಪ ನಿರೀಕ್ಷಕರು, ಕಾನೂನು ಸುವ್ಯವಸ್ಥೆ, ಬಾಗೇಪಲ್ಲಿ ಪೊಲೀಸ್ ಠಾಣೆ ಇವರು ಇವರು ದಿನಾಂಕ:17/09/2011 ರಂದು ಬಾಗೇಪಲ್ಲಿ ತಾಲ್ಲೂಕು ಕಸಬಾ ಹೋಬಳಿ ಬಾಲರೆಡ್ಡಿಹಳ್ಳಿ ರಸ್ತೆಯಲ್ಲಿರುವ ಕಮ್ಮವಾರಪಲ್ಲಿ ಕ್ರಾಸ್‌ನಲ್ಲಿ ರಸ್ತೆಕಾವಲು ಮಾಡುತ್ತಿದ್ದಾಗ ಹೀರೋ ಹೊಂಡಾ ಸ್ಪ್ಲೆಂಡರ್ ನೊಂದಣಿ ಸಂ:ಕೆಎ-40 ಹೆಚ್-4948 ರ ದ್ವಿಚಕ್ರ ವಾಹನದಲ್ಲಿ 42.300 ಲೀ. ಮದ್ಯವನ್ನು ಹೊಂದಿ ಸಾಗಾಣಿಕೆ ಮಾಡುವ ಸಮಯದಲ್ಲಿ ಜಪ್ತುಪಡಿಸಿರುವುದು ಸಾಬೀತಾಗಿರುತ್ತದೆ. ಅಲ್ಲದೆ ರಾಸಾಯನಿಕ ತಜ್ಞರ ವರದಿಯನ್ವಯ ಜಪ್ತುಪಡಿಸಿರುವ ಮದ್ಯದಲ್ಲಿ ಈಥೈಲ್ ಆಲ್ಕೋಹಾಲ್ ಅಂಶ ಕಂಡು ಬಂದಿರುವುದರಿಂದ ಈ ವಾಹನವನ್ನು ಅಬಕಾರಿ ವಸ್ತುಗಳ ಅಕ್ರಮ ಸಾಗಾಣಿಕೆಗೆ ಉಪಯೋಗಿಸಿರುವುದು ಸಾಬೀತಾಗಿರುತ್ತದೆ ಹಾಗೂ ವಾಹನ ಮಾಲೀಕರು ವಾಹನವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಯಾವುದೇ ಅಭ್ಯಂತರವಿಲ್ಲವೆಂದು ಲಿಖಿತ ಮನವಿಯನ್ನು ಸಲ್ಲಿಸಿರುತ್ತಾರೆ. ಆದುದರಿಂದ ಈ ಕೆಳಗಿನಂತೆ ಆದೇಶ.

ಆದೇಶ

ಎನ್. ಚಂದ್ರಶೇಖರ, ಪ್ರಾಧಿಕೃತ ಅಧಿಕಾರಿಗಳು ಹಾಗೂ ಅಬಕಾರಿ ಉಪ ಆಯುಕ್ತರು, ಚಿಕ್ಕಬಳ್ಳಾಪುರ ಜಿಲ್ಲೆ ಆದ ನಾನು ಕರ್ನಾಟಕ ಅಬಕಾರಿ ಕಾಯ್ದೆ 1965 ರ ಕಲಂ 43(ಎ) ಅಡಿಯಲ್ಲಿ ದತ್ತವಾದ ಅಧಿಕಾರವನ್ನು ಚಲಾಯಿಸಿ ಕಲಂ 43(ಬಿ) ಅಡಿ ಕ್ರಮ ಜರುಗಿಸಲಾಗಿದ್ದು, ಆರಕ್ಷಕ ಆರಕ್ಷಕ ಉಪ ನಿರೀಕ್ಷಕರು, ಕಾನೂನು ಸುವ್ಯವಸ್ಥೆ, ಬಾಗೇಪಲ್ಲಿ ಪೊಲೀಸ್ ಠಾಣೆ ರವರ ದಿನಾಂಕ:17/09/2011 ರ ಪ್ರ.ಮಾ.ವ.ಸಂಖ್ಯೆ:190/2011 ರಲ್ಲಿ ಜಪ್ತುಪಡಿಸಿರುವ ಹೀರೋ ಹೊಂಡಾ ಸ್ಪ್ಲೆಂಡರ್ ನೊಂದಣಿ ಸಂ:ಕೆಎ-40 ಹೆಚ್-4948 ರ ಇಂಜಿನ್ ನಂ:03ಜೆ18ಎಂ-03375, ಚಾಸೀಸ್ ನಂ:03ಜೆ2ಒಸಿ-00342 ರ ದ್ವಿಚಕ್ರ ವಾಹನವನ್ನು ವಾರಸ್ಸುದಾರರಿಲ್ಲದ ವಾಹನವೆಂದು ಪರಿಗಣಿಸಿ ಕರ್ನಾಟಕ ಅಬಕಾರಿ ಕಾಯ್ದೆ 1965 ರ ಕಲಂ 43 (ಸಿ) ಅಡಿಯಲ್ಲಿ ಕರ್ನಾಟಕ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಆದೇಶ ನೀಡಿರುತ್ತೇನೆ.

ವಾಹನಕ್ಕೆ ಸಂಬಂಧಿಸಿದಂತೆ ಈ ಆದೇಶದ ವಿರುದ್ಧ ಮೇಲ್ಮನವಿ ಸಲ್ಲಿಸುವುದಾದಲ್ಲಿ ಈ ಆದೇಶ ಹೊರಡಿಸಿದ ದಿನಾಂಕದಿಂದ 30 ದಿವಸಗಳೊಳಗೆ ಸಲ್ಲಿಸಬಹುದಾಗಿದೆ. ತಪ್ಪಿದ್ದಲ್ಲಿ ಇದೇ ಅಂತಿಮ ಆದೇಶವಾಗಿ ಊರ್ಜಿತಗೊಳ್ಳುತ್ತದೆ.

ಈ ಆದೇಶವನ್ನು ದಿನಾಂಕ:27/04/2012 ರಂದು ಈ ಪ್ರಾಧಿಕಾರದ ಮೊಹರಿನೊಂದಿಗೆ ಹೊರಡಿಸಿರುತ್ತೇನೆ. ಮೇಲ್ಮನವಿ ಅವಧಿ ಮುಗಿದ ನಂತರ ಕಾನೂನು ರೀತ್ಯಾ ಮೇಲ್ಕಂಡ ವಾಹನವನ್ನು ವಿಲೇವಾರಿ ಮಾಡಲು ಆದೇಶಿಸಿದೆ.

ಎನ್. ಚಂದ್ರಶೇಖರ,
ಪ್ರಾಧಿಕೃತ ಅಧಿಕಾರಿಗಳು ಹಾಗೂ ಅಬಕಾರಿ ಉಪಆಯುಕ್ತರು,
ಚಿಕ್ಕಬಳ್ಳಾಪುರ ಜಿಲ್ಲೆ, ಚಿಕ್ಕಬಳ್ಳಾಪುರ.

ಪಿ.ಆರ್. 658

FORM NO. 155

[Members' Voluntary Winding-up]

